₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 18.11.2025 ಸಂಪುಟ: 10 ಸಂಚಿಕೆ: 307 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸ್ಮರಣ್ ರವಿಚಂದ್ರನ್ ಅವರ ಸೊಗಸಾದ ದ್ವಿಶತಕದ (227 ರನ್) ನೆರವಿನಿಂದ ಕರ್ನಾಟಕವು ರಣಜಿ ಟ್ರೋಫಿಯಲ್ಲಿ ಚಂಡೀಗಢ ವಿರುದ್ಧ ಸೋಮವಾರ ಪ್ರಥಮ ಇನ್ನಿಂಗ್ಸ್‌ನಲ್ಲಿ 8 ವಿಕೆಟ್ ನಷ್ಟಕ್ಕೆ 547 ರನ್ ಗಳಿಸಿ ಡಿಕ್ಲೇರ್ ಮಾಡಿತು. ಈ ಋತುವಿನಲ್ಲಿ ಸ್ಮರಣ್ ಬಾರಿಸಿದ 2ನೇ ದ್ವಿಶತಕ ಇದಾಗಿದೆ.

ಸಿಎಂ ಸಿದ್ದು, ಡಿಸಿಎಂ ಡಿಕೆಶಿ ದೆಹಲಿಯಲ್ಲಿದ್ದರೂ ಮೂಡದ ಒಮ್ಮತ ವಿಸ್ತರಣೆಗೂ ಮುಂದೆ ನೋಡೋಣವೆಂದ ಕಾಂಗ್ರೆಸ್ ಕಮಾಂಡ್

ಸಂಪುಟ ಸರ್ಜರಿ ಸದ್ಯಕ್ಕಿಲ್ಲ

ದೆಹಲಿ/ಬೆಂಗಳೂರು: ರಾಜ್ಯ ರಾಜಕಾರಣ ದಲ್ಲಿ ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿರುವ ಬೆನ್ನಲ್ಲೇ ದೆಹಲಿ ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಕಾಂಗ್ರೆಸ್ ಹೈಕಮಾಂಡ್‌ನ ಎಲ್ಲರ ಭೇಟಿಯಾಗಿಲ್ಲ. ಇದು ಕುತೂಹಲ ಮೂಡಿಸಿದೆ. ಈ ಮಧ್ಯೆ ಸಂಪುಟ ಪುನಾರಚನೆ ಸಂಬಂಧ ಒಮ್ಮತಕ್ಕೆ ಬಂದಿಲ್ಲವಾದ್ದರಿಂದ, ಪುನಾರಚನೆ ಸದ್ಯಕ್ಕಿಲ್ಲ ಎಂದು ಮೂಲಗಳು ಹೇಳಿವೆ. ಇದಕ್ಕೆ ಸರಿಯಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಪುನಾರಚನೆ ಸದ್ಯಕ್ಕಿಲ್ಲ ಎಂಬರ್ಥದಲ್ಲಿ ಮಾತನಾಡಿ ಅಚ್ಚರಿ ಮೂಡಿ ಸಿದ್ದಾರೆ. ಈ ನಡುವೆ ಸಚಿವ ಸಂಪುಟ ವಿಸ್ತರ ಣೆಯ ಬಗ್ಗೆಯೂ ಮುಂದೆ ನೋಡೋಣ ಎಂದು ಕಾಂಗ್ರೆಸ್ ಹೈಕಮಾಂಡ್ ಹೇಳಿದ್ದು, ಬೆಳಗಾವಿ ಅಧಿವೇಶನ ಮುಗಿದ ನಂತರ ಈ ಚರ್ಚೆ ಮುನ್ನಲೆಗೆ ಬರುವ ಸಾಧ್ಯತೆ ಇದೆ.

ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವ ಸಿಎಂ ಸಿದ್ದರಾಮಯ್ಯ, ಸಂಪುಟ ಪುನಾರಚನೆ ಕುರಿತು ಮಹತ್ವದ ಮಹತ್ವದ ಮಾತುಕತೆ ನಡೆಸಿದ್ದಾರೆ. ಈ ವೇಳೆ ಕೆ.ಎನ್.ರಾಜಣ್ಣ ಹಾಗೂ ನಾಗೇಂದ್ರ ಅವರ ರಾಜೀನಾಮೆಯಿಂದ ತೆರವಾಗಿರುವ 2 ಸ್ಥಾನ ಭರ್ತಿ ಮಾಡುವ ಬಗ್ಗೆಯೂ ಚರ್ಚೆ ನಡೆಸಲಾಗಿದ್ದರೂ, ಮುಂದೆ ನೋಡೋಣವೆಂದು ಎಐಸಿಸಿ ಅಧ್ಯಕ್ಷರು ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಯಾವುದೇ ವಿಚಾರದ ಬಗ್ಗೆಯೂ ಸ್ಪಷ್ಟತೆ ಸಿಕ್ಕಿಲ್ಲ ಎನ್ನಲಾಗಿದೆ.

ಇದರೊಂದಿಗೆ ಪ್ರತ್ಯೇಕವಾಗಿ ಸೋಮವಾರ ಬೆಳಗ್ಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕೂಡ ಎಐಸಿಸಿ ಅಧ್ಯಕ್ಷರೊಂದಿಗೆ ಮಾತುಕತೆ ನಡೆಸಿದ್ದರೂ, ರಾಹುಲ್ ಗಾಂಧಿಯ ಭೇಟಿ ಸಾಧ್ಯವಾಗಿಲ್ಲ, ಹೀಗಾಗಿ ಮುಂದಿನ ದಿನಗಳಲ್ಲಿ ಭೇಟಿಗೆ ಸಮಯಾವಕಾಶ ಕೋರಿದ್ದಾರೆ ಎನ್ನಲಾಗಿದೆ. ಸಂಪುಟ ವಿಸ್ತರಣೆ ಕುರಿತು ಕಳೆದ ವಾರ ದೆಹಲಿಗೆ ತೆರಳಿದ್ದ ಸಿದ್ದರಾಮಯ್ಯ, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಂಪುಟ ಪುನಾರಚನೆ ಕುರಿತಂತೆ ಮಾತುಕತೆ ನಡೆಸಲಾಗಿದೆ ಎನ್ನಲಾಗಿತ್ತು. ಈ ಹಿನ್ನೆಲೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯಲ್ಲಿ ಸೋಮವಾರ ಭೇಟಿ ಮಾಡಿ ಮಾತುಕತೆ ನಡೆಸಿದರು. ಇದರ ಜೊತೆಗೆ ಇತ್ತೀಚಿನ ರಾಜಕೀಯ ಬೆಳವಣಿಗೆ, ಪಕ್ಷ ಸಂಘಟನೆ, ಮುಂಬರುವ ದಿನಗಳಲ್ಲಿ ಕೈಗೊಳ್ಳಲಿರುವ ಅಭಿವೃದ್ಧಿ ಯೋಜನೆಗಳ ಕುರಿತು ಸಿದ್ದರಾಮಯ್ಯ ಖರ್ಗೆಗೆ ಮಾಹಿತಿ ನೀಡಿದರು ಎನ್ನಲಾಗಿದೆ.

ಸಂಪುಟ ಪುನಾರಚನೆ ರಚನೆ ಸಂಬಂಧ ದೆಹಲಿಯಲ್ಲಿ ಖರ್ಗೆ ಅವರನ್ನು ಮುಖ್ಯಮಂತ್ರಿ ಭೇಟಿ ಮಾಡಿ ಚರ್ಚೆ ನಡೆಸಿದ್ದ ಬೆನ್ನಲ್ಲೇ ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿ ಭರ್ಜರಿ ಪೈಪೋಟಿ ಶುರುವಾಗಿತ್ತು. ಅಲ್ಲದೆ, ಮಂತ್ರಿ ಸ್ಥಾನ ಗಿಟ್ಟಿಸಲು ದೆಹಲಿಯಲ್ಲಿ ಹಲವರು ಬಿರುಸಿನ ಲಾಬಿಯನ್ನೂ ಕೂಡ ನಡೆಸಿದ್ದರು.

ಸಂಪುಟ ಪುನಾರಚನೆ ಸಂಬಂಧ ಸಿಎಂ, ಡಿಸಿಎಂ ಪ್ರತ್ಯೇಕವಾಗಿ ಹೈಕಮಾಂಡ್ ನಾಯಕರನ್ನು ಭೇಟಿಯಾಗಿ, ರಾಜಕೀಯ ಚಟುವಟಿಕೆಯಲ್ಲಿ ಮುಳುಗಿದ್ದರೂ, ಸೋಮವಾರ ದೆಹಲಿಯ ಕರ್ನಾಟಕ ಭವನದಲ್ಲಿ ಮಧ್ಯಾಹ್ನ ಶಾಸಕರ ಜೊತೆಗೆ ಸೇರಿ ಒಟ್ಟಿಗೆ ಊಟ ಮಾಡಿದ್ದಾರೆ.

ಪುನಾರಚನೆ ಸಾಧ್ಯತೆ ತಳ್ಳಿಹಾಕಿದ ಡಿಕೆಶಿ

ಯಾವ ರಾಜಕೀಯ ಚಟುವಟಿಕೆಗಳೂ ಗರಿಗೆದರಿಲ್ಲ ಎಂದು ಹೇಳುವ ಮೂಲಕ ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಸಚಿವ ಸಂಪುಟ ಪುನಾರಚನೆ ರಚನೆಯ ಸಾಧ್ಯತೆಗಳನ್ನು ತಳ್ಳಿ ಹಾಕಿದ್ದಾರೆ. ದೆಹಲಿಯಲ್ಲಿ ಸೋಮವಾರ ಬೆಳಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ರಾಷ್ಟ್ರಾಧ್ಯಕ್ಷರು ಮತ್ತು ರಾಜ್ಯಾಧ್ಯಕ್ಷರು ಭೇಟಿ ಮಾಡುವುದು ಸಹಜ. ಪಕ್ಷದ ನಾನಾ ವಿಚಾರಗಳ ಕುರಿತು ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚೆ ಮಾಡಿದ್ದೇನೆ ಎಂದರು. ರಾತ್ರಿ ವೇಳೆ ಬೆಂಗಳೂರಿಗೆ ಬಂದಿಳಿದ ಡಿಸಿಎಂ ಮಾತನಾಡಿ, ಶಾಸ್ತ್ರದವರನ್ನು ಇಲ್ಲವೇ ಗಿಳಿ ಶಾಸ್ತ್ರದವರನ್ನು ಕೇಳಿ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ಆಕಾಂಕ್ಷಿಗಳಿಗೆ ತಣ್ಣೀರು

ಸಚಿವ ಸಂಪುಟ ಪುನಾರಚನೆಯಾಗಲಿದೆ ಎಂಬ ಸುಳಿವು ದೊರೆಯುತ್ತಿದ್ದಂತೆ ಆಕಾಂಕ್ಷಿಗಳ ದಂಡು ದೆಹಲಿಯತ್ತ ಮುಖ ಮಾಡಿತ್ತು. ಆದರೆ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಉತ್ಸಾಹಿಗಳಿಗೆ ತಣ್ಣೀರು ಎರಚಿದಂತಾಗಿದೆ. ಸಿದ್ದರಾಮಯ್ಯ ಎಐಸಿಸಿ ಅಧ್ಯಕ್ಷರನ್ನು ಭೇಟಿಯಾಗಿ ಚರ್ಚಿಸಿದ್ದರೂ ಸ್ಪಷ್ಟತೆ ಸಿಕ್ಕಿಲ್ಲ.

ಬಾಂಗ್ಲಾ ಇತಿಹಾಸದಲ್ಲೇ ಮಾಜಿ ನಾಯಕರೊಬ್ಬರ ವಿರುದ್ಧ ಕಠಿಣ ತೀರ್ಪು ಮಾಜಿ ಪ್ರಧಾನಿಯನ್ನು ಗಡಿಪಾರು ಮಾಡಿ: ಭಾರತಕ್ಕೆ ಯೂನುಸ್ ಸರಕಾರ

ಹಸೀನಾಗೆ ಮರಣದಂಡನೆ

ಢಾಕಾ: 2024-25ರಲ್ಲಿ ಬಾಂಗ್ಲಾದಲ್ಲಿ ಸಂಭವಿಸಿದ ಭಾರೀ ದಂಗೆಯ ನಂತರ, ತನ್ನ ದೇಶವನ್ನು ತೊರೆದು ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾಗೆ, ಬಾಂಗ್ಲಾ ಅಂತಾರಾಷ್ಟ್ರೀಯ ಅಪರಾಧ ನ್ಯಾಯಾಧಿಕರಣ (ಐಸಿಟಿ-ಬಿಡಿ) ಮರಣದಂಡನೆ ಶಿಕ್ಷೆ ವಿಧಿಸಿದೆ. ಇದು ಬಾಂಗ್ಲಾದ ಇತಿಹಾಸದಲ್ಲೇ ಮಾಜಿ ನಾಯಕರೊಬ್ಬರ ವಿರುದ್ಧ ನೀಡಿದ ಅತಿಕಠಿಣ ತೀರ್ಪು. 2024ರ ಜುಲೈ-ಆಗಸ್ಟ್‌ನಲ್ಲಿ ಬಾಂಗ್ಲಾ ವಿಮೋಚನೆಗಾಗಿ ಹೋರಾಡಿದವರ ಮೊಮ್ಮಕ್ಕಳಿಗೂ ಮೀಸಲಾತಿ ನೀಡುವುದನ್ನು ವಿರೋಧಿಸಿ ಭಾರೀ ದಂಗೆ ನಡೆದಿತ್ತು. ಈ ಸಂದರ್ಭದಲ್ಲಿ ಹಲವರ ಹತ್ಯೆಗೆ ಹಸೀನಾ ನೇರವಾಗಿ ಕಾರಣವಾಗಿದ್ದಾರೆ, ಮಾನವೀಯತೆ ಮೇಲೆ ಭಾರೀ ಹಲ್ಲೆ ಮಾಡಿದ್ದಾರೆಂದು ಹೇಳಿ ಅವರಿಗೆ ಮರಣದಂಡನೆ ನೀಡಿದ್ದಾರೆ.

ತೀರ್ಪಿನಲ್ಲೇನಿದೆ?: ಮಾನವೀಯತೆಯ ಮೇಲೆ ಹಲ್ಲೆ ಮಾಡಿದ ಪ್ರಕರಣದಲ್ಲಿ ಹಸೀನಾ ತಪ್ಪಿತಸ್ಥೆಯಾಗಿದ್ದಾರೆ. ನೂರಾರು ವಿದ್ಯಾರ್ಥಿಗಳ ಹತ್ಯೆಗೆ ಹಸೀನಾ ಆದೇಶ ನೀಡಿದ್ದಾರೆ. ನಾಗರಿಕರ ಮೇಲೆ ಗುಂಡು ಹಾರಿಸುವುದಕ್ಕೆ ಹೆಲಿಕಾಪ್ಟರ್‌ಗಳು, ಡ್ರೋನ್‌ಗಳನ್ನು ಅವರ ಆದೇಶದ ಮೇರೆಗೆ ಬಳಸಿಕೊಳ್ಳಲಾಗಿದೆ. ಹಸೀನಾಗೆ ಗೊತ್ತಿದ್ದೇ, ಉದ್ದೇಶ ಪೂರ್ವಕವಾಗಿ ಹತ್ಯೆ ಮಾಡಲಾಗಿದೆ ಎಂದು ಹಸೀನಾ ವಿರುದ್ಧದ ತೀರ್ಪಿನಲ್ಲಿ ಹೇಳಲಾಗಿದೆ.

ಹಸೀನಾ ಜೊತೆಗೆ ಅಂದು ಬಾಂಗ್ಲಾ ಗೃಹ ಸಚಿವರಾಗಿದ್ದ ಅಸಾದುಜ್ಜಮಾನ್ ಖಾನ್ ಕಮಾಲ್, ಮಾಜಿ ಪೊಲೀಸ್ ಮುಖ್ಯಸ್ಥ (ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್) ಚೌಧರಿ ಅಬ್ದುಲ್ಲಾ ಅಲ್ ಮಮುನ್ ಕೂಡ ತಪ್ಪಿತಸ್ಥರು ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಇದು ರಾಜಕೀಯ ಪ್ರೇರಿತ, ಪಕ್ಷಪಾತಿ ತೀರ್ಪು. ಚುನಾಯಿತವಲ್ಲದ, ಪ್ರಜಾಪ್ರಭುತ್ವದ ಬೆಂಬಲವೂ ಇಲ್ಲದ ಸರಕಾರವೊಂದರ ನೇತೃತ್ವದಲ್ಲಿ, ವಿರೂಪಗೊಳಿಸಲ್ಪಟ್ಟ ನ್ಯಾಯಾಧಿಕರಣ ನೀಡಿದ ಆದೇಶವಿದು.

-ಶೇಖ್ ಹಸೀನಾ, ಬಾಂಗ್ಲಾ ಮಾಜಿ ಪ್ರಧಾನಿ

ಬಾಂಗ್ಲಾ ನ್ಯಾಯಾಧಿಕರಣದ ತೀರ್ಪನ್ನು ಭಾರತ ಗಮನಿಸಿದೆ. ನೆರೆಯ ರಾಷ್ಟ್ರದ ಆತ್ಮೀಯ ದೇಶವಾಗಿರುವ ಭಾರತ ಅಲ್ಲಿ ಜನರ ಹಿತಕಾಯಲು ಬದ್ಧವಾಗಿದೆ. ಆ ದೇಶದಲ್ಲಿ ಶಾಂತಿ, ಸ್ಥಿರತೆಯನ್ನು ಕಾಪಾಡುವುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲೇ ನಾವು ಕೆಲಸ ಮಾಡುತ್ತೇವೆ.

-ಭಾರತ ವಿದೇಶಾಂಗ ಸಚಿವಾಲಯ

ಏಕೆ ಈ ತೀರ್ಪು?

- 2024ರಲ್ಲಿ ಬಾಂಗ್ಲಾದಲ್ಲಿ ನಡೆದ ದಂಗೆಯಲ್ಲಿ ನೂರಾರು ಸಾವು
- ಮಾಜಿ ಪ್ರಧಾನಿ ಹಸೀನಾ ಆದೇಶದಡಿಯೇ ಭೀಕರ ಹತ್ಯೆಗಳಾಗಿವೆ
- ಮಾನವೀಯತೆಯ ಮೇಲೆ ಹಸೀನಾ ಘೋರ ಹಲ್ಲೆ ಮಾಡಿದ್ದಾರೆ
- ಬಾಂಗ್ಲಾದೇಶ ಅಂತಾರಾಷ್ಟ್ರೀಯ ನ್ಯಾಯಾಧಿಕರಣದಿಂದ ತೀರ್ಪು

ಹಸೀನಾರನ್ನು ನಮಗೊಪ್ಪಿಸಿ: ಭಾರತಕ್ಕೆ ಬಾಂಗ್ಲಾ ಆಗ್ರಹ

ಸದ್ಯ ಭಾರತದ ಆಶ್ರಯದಲ್ಲಿರುವ ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾರನ್ನು ತಮಗೊಪ್ಪಿಸಬೇಕೆಂದು ಬಾಂಗ್ಲಾದೇಶ ವಿದೇಶಾಂಗ ಸಚಿವಾಲಯ ಭಾರತಕ್ಕೆ ಆಗ್ರಹಿಸಿದೆ. ಎರಡೂ ದೇಶಗಳ ನಡುವೆ ಗಡಿಪಾರು ಒಪ್ಪಂದವಿದೆ. ಮಾನವೀಯತೆ ಮೇಲೆ ಹಲ್ಲೆ ಮಾಡಿರುವ ಇಂತಹ ವ್ಯಕ್ತಿಗಳಿಗೆ ಆಶ್ರಯ ನೀಡುವ ಸೌಹಾರ್ದಯುತ ನಡೆಯಲ್ಲ ಎಂದಿದೆ.

ಹಸೀನಾ ಶುರು ಮಾಡಿದ್ದ ಬಾಂಗ್ಲಾ ಅಂ.ರಾ. ನ್ಯಾಯಾಧಿಕರಣ!

1971ರಲ್ಲಿ ಪಾಕಿಸ್ತಾನದ ಮುಷ್ಟಿಯಿಂದ ಬಿಡುಗಡೆಗೊಂಡು ಬಾಂಗ್ಲಾ ಸ್ವತಂತ್ರ ದೇಶವಾಯಿತು. ಆ ವೇಳೆ ಪಾಕ್ ಸೇನೆ ಮತ್ತು ಅವರ ಸ್ಥಳೀಯ ಬೆಂಬಲಿಗರಾದ ರಜಾಕಾರರು, ಅಲ್ ಬದ್ರ್, ಅಲ್ ಶಮ್ಸ್ ಬಾಂಗ್ಲಾ ದೇಶೀಯರ ಮೇಲೆ ನಡೆಸಿದ ಅಮಾನವೀಯ ಹಿಂಸಾಚಾರವನ್ನು ವಿಚಾರಣೆಗೊಳಪಡಿಸಿ, ಶಿಕ್ಷಿಸಲು 2009ರಲ್ಲಿ ಬಾಂಗ್ಲಾದಲ್ಲಿ ಅಂತಾರಾಷ್ಟ್ರೀಯ ಅಪರಾಧ ನ್ಯಾಯಾಧಿಕರಣ ಆರಂಭವಾಯಿತು. ಇದನ್ನೂ ಆರಂಭಿಸಿದ್ದು ಹಸೀನಾ ಅವರೇ!

ಭಾರತದ ಆಶ್ರಯದಲ್ಲಿರುವ ಬಾಂಗ್ಲಾ ಮಾಜಿ ಪ್ರಧಾನಿ ಅಂ.ರಾ. ಕೋರ್ಟ್‌ಗೆ?

ಈ ಹಿಂದೆ ಹಲವು ಬಾರಿ ಹಸೀನಾರನ್ನು ಗಡಿಪಾರು ಮಾಡುವಂತೆ ಬಾಂಗ್ಲಾ ಆಗ್ರಹಿಸಿದ್ದರೂ ಭಾರತ ಮಣೆ ಹಾಕಿರಲಿಲ್ಲ. ಭಾರತ-ಬಾಂಗ್ಲಾದ ನಡುವೆ ಅಪರಾಧಿಗಳ ಗಡಿಪಾರಿಗೆ 2013ರಲ್ಲೇ ಒಪ್ಪಂದವಾಗಿದೆ. ಹಾಗಿದ್ದರೂ ರಾಜಕೀಯ ಪ್ರಚೋದಿತ ಉದ್ದೇಶಗಳಿದ್ದಾಗ ವ್ಯಕ್ತಿಗಳನ್ನು ಗಡಿಪಾರು ಬೇಡಿಕೆಯನ್ನು ನಿರಾಕರಿಸಬಹುದು ಎಂದೂ ಸೇರಿಸಲಾಗಿದೆ. ಹಸೀನಾ ಮುಂದೆ ಅಂತಾರಾಷ್ಟ್ರೀಯ ಕೋರ್ಟ್ ಮೊರೆ ಹೋಗಿ ನ್ಯಾಯಕ್ಕೆ ಮೊರೆಯಿಡುವ ಸಾಧ್ಯತೆಯಿದೆ.

ಸೊಂಪಾದ ಪುಟಗಳು

ಸಿಕ್ಕ ಯಶಸ್ಸನ್ನು ಉಳಿಸಿಕೊಳ್ಳುವಲ್ಲಿ ವಿಫಲ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ದುಡಿಲ್ಲದೆ ಜಗವಿಲ್ಲ, ದುಡಿದರೆ ಜಗವೆಲ್ಲ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಬೇರೆಯವರು ಜೀವನದ ವ್ಯಾಖ್ಯೆಯನ್ನು ಹೇಳಿದರೆ, ಅದನ್ನು ಕುರುಡಾಗಿ ಸ್ವೀಕರಿಸಬಾರದು. ನಿಮ್ಮ ಜೀವನದ ವ್ಯಾಖ್ಯಾನವನ್ನು ನೀವೇ ಮಾಡಬೇಕು. ಬೇರೆಯವರು ವ್ಯಾಖ್ಯಾನ ಮಾಡಿದರೆ, ಅದು ಅವರ ಬದುಕಿಗೆ ಸಂಬಂಧಪಡಬಹುದು.

ವಕ್ರತುಂಡೋಕ್ತಿ

ಮೊಬೈಲ್‌ನ ಬ್ಯಾಟರಿ ಮುಗಿಯುವಾಗ, 'ಚಾರ್ಜರ್ ಎಲ್ಲಿ ಸಿಗುತ್ತದೆ?' ಎಂದು ಗೂಗಲ್‌ನ್ನು ಕೇಳಿದರೆ ಅದು ಉತ್ತರಿಸುವುದಿಲ್ಲ.

ತಿಮರೋಡಿ ಗಡಿಪಾರಿಗೆ ತಡೆ

ಬೆಂಗಳೂರು: ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧದ ಗಡಿಪಾರು ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ. ಗಡಿಪಾರು ಆದೇಶ ಪ್ರಶ್ನಿಸಿ ತಿಮರೋಡಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಪುರಸ್ಕರಿಸಿದ್ದು, ಗಡಿಪಾರು ಆದೇಶ ರದ್ದು ಮಾಡಿ ಆದೇಶ ಹೊರಡಿಸಿದೆ. ಪ್ರಕರಣದ ಕುರಿತು ಹೊಸದಾಗಿ ವಿಚಾರಣೆ ನಡೆಸಿ, ಮುಂದಿನ 15 ದಿನಗಳೊಳಗೆ ಸೂಕ್ತವಾದ ಕಾರಣಗಳು ಮತ್ತು ಕಾನೂನಿನ ಸೆಕ್ಷನ್‌ಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿ ಹೊಸ ಆದೇಶ ಹೊರಡಿಸಬೇಕು ಎಂದು ಪೀಠವು ಪುತ್ತೂರಿನ ಉಪವಿಭಾಗಾಧಿಕಾರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಹೈಕೋರ್ಟ್‌ನ ಈ ಆದೇಶದಿಂದಾಗಿ ತಿಮರೋಡಿ ಅವರ ಮೇಲಿದ್ದ ಗಡೀಪಾರು ಭೀತಿ ಸದ್ಯಕ್ಕೆ ದೂರವಾಗಿದೆ.

ತುಮಕೂರಿಗೆ ಮೆಟ್ರೋ ಡಿಪಿಆರ್‌ಗೆ ಟೆಂಡರ್

ಬೆಂಗಳೂರು: ಬೆಂಗಳೂರಿನಿಂದ ತುಮಕೂರಿಗೆ ನಮ್ಮ ಮೆಟ್ರೋ ರೈಲು ಯೋಜನೆ ಪ್ರಸ್ತಾಪಕ್ಕೆ ಅಧಿಕೃತ ಚಾಲನೆ ದೊರೆತಿದೆ. ಬಿಎಂಆರ್‌ಸಿಎಲ್ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಟೆಂಟರ್ ಆಹ್ವಾನಿಸಿದೆ. 2024-25ನೇ ಸಾಲಿನ ಕರ್ನಾಟಕ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಯೋಜನೆಯನ್ನು ಘೋಷಿಸಿದ್ದರು. ಈ ಯೋಜನೆ ಕಾರ್ಯಗತಗೊಂಡರೆ ಇದು ರಾಜ್ಯದ ಮೊದಲ ಇಂಟರ್-ಸಿಟಿ ಮೆಟ್ರೋ ಯೋಜನೆಯಾಗಲಿದೆ. ಸದ್ಯ ಮಾದಾವರದವರೆಗೂ ನಮ್ಮ ಮೆಟ್ರೋ ಓಡಾಡುತ್ತಿದೆ.

ಸಿಎಂ ಪತ್ನಿ ಆಸ್ಪತ್ರೆಗೆ ದಾಖಲು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಆರೋಗ್ಯದಲ್ಲಿ ಏರುಪೇರು ಉಂಟಾ ಗಿದ್ದು, ಬೆಂಗಳೂರಿನ ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪಾರ್ವತಿ ಅವರು ಶ್ವಾಸಕೋಶದ ಸಮಸ್ಯೆ ಯಿಂದಾಗಿ ಸೋಮವಾರ ಬೆಂಗಳೂರಿನ ಶೇಷಾದ್ರಿಪುರಂ ಬಳಿಯ ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದಾರೆ. ತಜ್ಞ ವೈದ್ಯರಿಂದ ಪಾರ್ವತಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವೈದ್ಯಕೀಯ ಮೂಲಗಳು ತಿಳಿಸಿವೆ.

ಚೀನಾಕ್ಕೆ ಏರಿಂಡಿಯಾ ವಿಮಾನ

ದೆಹಲಿ: ಏರ್ ಇಂಡಿಯಾದಿಂದ ಚೀನಾ ದೇಶಕ್ಕೆ ನೇರ ವಿಮಾನ ಸೇವೆ 6 ವರ್ಷಗಳ ಬಳಿಕ ಪುನಾರಂಭಗೊಳ್ಳುತ್ತಿದೆ. 2026ರ ಫೆ.1ರಿಂದ ದೆಹಲಿ ಮತ್ತು ಶಾಂಘೈ ನಡುವೆ ತಡೆರಹಿತ ವಿಮಾನ ಸೇವೆ ಪುನಾರಂಭವಾಗಲಿದೆ ಎಂದು ಏರ್ ಇಂಡಿಯ ವಿಮಾನ ಯಾನ ಸಂಸ್ಥೆ ಸೋಮವಾರ ಪ್ರಕಟಿಸಿದೆ. ಇದಲ್ಲದೇ ಮುಂದಿನ ವರ್ಷದಿಂದ ಮುಂಬೈ ಮತ್ತು ಶಾಂಘೈ ನಡುವೆಯೂ ತಡೆರಹಿತ ವಿಮಾನಗಳನ್ನು ಪರಿಚಯಿಸಲು ಏರ್ ಇಂಡಿಯ ಉದ್ದೇಶಿಸಿದೆ.

20ರಂದು ನಿತೀಶ್ ಪ್ರಮಾಣ

ಪಟನಾ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ಸೋಮವಾರ ಸಚಿವ ಸಂಪುಟ ಸಭೆ ಸೇರಿ ವಿಧಾನಸಭೆ ವಿಸರ್ಜನೆಗೆ ಅನುಮೋದನೆ ನೀಡಿದೆ. ನ.20ರಂದು ನಿತೀಶ್ ನೇತೃತ್ವದಲ್ಲಿ ಹೊಸ ಸಚಿವ ಸಂಪುಟ ಪ್ರಮಾಣವಚನ ಸ್ವೀಕರಿಸಲಿದೆ. ನ.19ರಿಂದಲೇ ಜಾರಿಗೆ ಬರುವಂತೆ ಪ್ರಸ್ತುತ ವಿಧಾನಸಭೆಯನ್ನು ವಿಸರ್ಜಿಸಲು ಸಚಿವ ಸಂಪುಟ ನಿರ್ಧರಿಸಿದ್ದು, ರಾಜ್ಯಪಾಲರಿಗೆ ಪ್ರಸ್ತಾವನೆ ಸಲ್ಲಿಸಲಿದೆ ಎಂದು ಸಚಿವ ವಿಜಯ್ ಚೌಧರಿ ಸುದ್ದಿಗಾರರಿಗೆ ತಿಳಿಸಿದರು.

ದಿಲ್ಲಿ ಸ್ಫೋಟ ಇನ್ನಿಬ್ಬರ ಬಂಧನ

ದೆಹಲಿ: ದೆಹಲಿ ಸ್ಫೋಟಕ್ಕೆ ಸಂಬಂಧಿಸಿ ಹರಿಯಾಣದ ಫರೀದಾಬಾದ್‌ನ ಅಲ್ ಫಲಾಹ್ ವಿವಿ ಅಧ್ಯಕ್ಷ ಜಾವೇದ್ ಸಿದ್ದಿಕಿಯ ಸೋದರ ಹಮೂದ್ ಅಹಮದ್ ಸಿದ್ದಿಕಿಯನ್ನು ಮಧ್ಯ ಪ್ರದೇಶ ಪೊಲೀಸರು ಮೋಹ್‌ವಾದಲ್ಲಿ ಬಂಧಿಸಿದ್ದಾರೆ. ಇದೇ ವೇಳೆ ದೆಹಲಿ ಸ್ಫೋಟದ ಪ್ರಮುಖ ರೂವಾರಿಗಳಲ್ಲಿ ಒಬ್ಬನಾಗಿರುವ ಜಸೀರ್ ಬಿಲಾಲ್ ವಾನಿ ಅಲಿಯಾಸ್ ದಾನೀಶ್‌ನನ್ನು ಜಮ್ಮು ಮತ್ತು ಕಾಶ್ಮೀರ ಅನಂತನಾಗ್ ಜಿಲ್ಲೆಯ ಖಾಜಿಗುಂಡ್‌ನಲ್ಲಿ ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ.



ಸಾಮೂಹಿಕ ಅತ್ಯಾಚಾರ

ಕೊಪ್ಪಳ: ಜಿಲ್ಲೆಯ ಯಲಬುರ್ಗಾ ತಾಲೂಕು ಮದ್ಲೂರು ಗ್ರಾಮದ ಬಳಿ ಮಹಿಳೆಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದು, ಐವರನ್ನು ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತೆ ಕೊಪ್ಪಳ ಜಿಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗದಗ ಜಿಲ್ಲೆ ರೋಣ ತಾಲೂಕು ಸೂಡಿ ಗ್ರಾಮದ ಲಕ್ಷ್ಮಣ ಹಾಗೂ ಬಸಬರಾಜ, ಯಲಬುರ್ಗಾ ತಾಲೂಕು ಹನುಮಾಪುರ ಗ್ರಾಮದ ಭೀಮಪ್ಪ ಶಶಿಕುಮಾರ್ ಹಾಗೂ ಯಮನೂರ ಬಂಧಿತ ಆರೋಪಿಗಳು. ಯಲಬುರ್ಗಾ ಪೊಲೀಸ್ ಠಾಣೆಯಲ್ಲಿಪ್ರಕರಣ ದಾಖಲಾಗಿದೆ.

ಸೈಬರ್ ವಂಚನೆ: ವರ್ಷದ ಬಳಿಕ ಎಚ್ಚೆತ್ತ ಮಹಿಳೆ

ಡಿಜಿಟಲ್ ಅರೆಸ್ಟ್: ಟೆಕ್ಕಿಗೆ 31 ಕೋಟಿ ರು. ದೋಖಾ!

ಬೆಂಗಳೂರು: ಸರಕಾರ ಎಷ್ಟೇ ಎಚ್ಚರಿಕೆ ವಹಿಸಿದರೂ ಸೈಬರ್ ವಂಚನೆ, ಡಿಜಿಟಲ್ ಅರೆಸ್ಟ್ ಇತ್ಯಾದಿ ಸೈಬರ್‌ಕ್ರೈಮ್‌ಗೆ ಜನ ಬಲಿ ಬೀಳುತ್ತಲೇ ಇದ್ದಾರೆ. ಬೆಂಗಳೂರಿನ ಮಹಿಳಾ ಟೆಕ್ಕಿಯೊಬ್ಬರು ಡಿಜಿಟಲ್ ಅರೆಸ್ಟ್‌ನಲ್ಲಿ ವಂಚನೆಗೊಳಗಾಗಿ ಬರೋಬ್ಬರಿ 31.83 ಕೋಟಿ ರು. ಕಳೆದುಕೊಂಡಿರುವುದು ಹೊಸ ಉದಾಹರಣೆ. ಕರ್ನಾಟಕದಲ್ಲೇ, ಡಿಜಿಟಲ್ ಅರೆಸ್ಟ್‌ನಲ್ಲಿ ವ್ಯಕ್ತಿಯೊಬ್ಬರು ಕಳೆದುಕೊಂಡ ಗರಿಷ್ಠ ಮೊತ್ತವಾಗಿದೆ. → 4

ಏನಾಯ್ತು?

- 2024, ಸೆ.15ರಂದು ಕೊರಿಯರ್ ಹೆಸರು ಹೇಳಿ ಮಹಿಳಾ ಟೆಕ್ಕಿಗೆ ಕರೆ
- ಮಾದಕ ದ್ರವ್ಯ, ಕ್ರೆಡಿಟ್ ಕಾರ್ಡ್‌ಗಳು ಬಂದಿವೆ ಎಂದು ವಂಚನೆ
- ಸಿಬಿಐ ಹೆಸರಿನಲ್ಲಿ ಮಹಿಳೆಗೆ ನಾಮ

ಬೆಂಗಳೂರಿನಲ್ಲಿ ಸೋಮವಾರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನದಿಂದ ವಾರ್ಷಿಕ 'ರಮಣಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಸಚಿವ ಎಂ.ಬಿ.ಪಾಟೀಲ, ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಮತ್ತಿತರರು ಇದ್ದರು.

ಆರ್‌ಎಸ್‌ಎಸ್‌ಗೆ ಅಂಕುಶ: ರಾಜ್ಯ ಸರಕಾರಕ್ಕೆ ಹಿನ್ನಡೆ

ಬೆಂಗಳೂರು: ಆರ್‌ಎಸ್‌ಎಸ್ ಶಾಖೆಗಳಿಗೆ ಪರೋಕ್ಷವಾಗಿ ಅಂಕುಶ ಹಾಕುವ ರಾಜ್ಯ ಸರಕಾರದ ಉದ್ದೇಶಕ್ಕೆ ಮತ್ತೆ ಹಿನ್ನಡೆಯಾಗಿದೆ. ಹತ್ತಕ್ಕಿಂತ ಹೆಚ್ಚು ಜನರು ಸರಕಾರಿ ಸ್ಥಳಗಳಲ್ಲಿ ಒಪ್ಪಿಗೆ ಯಿಲ್ಲದೇ ಸೇರಿದರೆ, ಅದನ್ನು ಅಕ್ರಮಕೂಟವೆಂದು ಪರಿಗಣಿಸು ವುದಾಗಿ ಮಾಡಿದ್ದ ಸರಕಾರದ ಆದೇಶಕ್ಕೆ ನೀಡಿದ್ದ ಮಧ್ಯಂತರ ತಡೆಯನ್ನು ಹೈಕೋರ್ಟ್‌ನ ಧಾರವಾಡ ವಿಭಾಗೀಯ ಪೀಠ ವಿಸ್ತರಿಸಿದೆ. ಡಿ.15ರವರೆಗೆ ತಡೆಯಾಜ್ಞೆ ವಿಸ್ತರಣೆಯಾಗಿದೆ. → 4

ಏನಿದು ಪ್ರಕರಣ?

- ಸರಕಾರಿ ಜಾಗಗಳಲ್ಲಿ 10ಕ್ಕಿಂತ ಹೆಚ್ಚು ಜನ ಸೇರುವುದಕ್ಕೆ ನಿರ್ಬಂಧ ವಿಧಿಸಿದ್ದ ರಾಜ್ಯ ಸರಕಾರ
- ಇದು ಆರ್‌ಎಸ್‌ಎಸ್‌ಗೆ ನಿರ್ಬಂಧ ಆದೇಶವೆಂದೇ ವರ್ಣನೆ
- ಇದರ ವಿರುದ್ಧ ಪುನಶ್ಚೇತನ ಸೇವಾ ಸಂಸ್ಥೆ ಹೈಕೋರ್ಟ್‌ಗೆ, ತಡೆಯಾಜ್ಞೆ

ಸೌದಿಯಲ್ಲಿ ಬಸ್-ಟ್ಯಾಂಕರ್ ಡಿಕ್ಕಿ ದುರಂತ

ಮದೀನಾ ಯಾತ್ರೆಗೆ ತೆರಳಿದ್ದ 42 ಭಾರತೀಯರು ಸಜೀವ ದಹನ

ರಿಯಾಧ್: ಸೌದಿ ಅರೇಬಿಯಾದಲ್ಲಿ ಸೋಮವಾರ ಮಧ್ಯಾಹ್ನ ಭಾರತೀಯ ಕಾಲಮಾನ 1.30ಕ್ಕೆ ಘೋರ ದುರಂತ ಸಂಭವಿಸಿದೆ. ಉಮ್ರಾ ಯಾತ್ರೆ ಹಿನ್ನೆಲೆಯಲ್ಲಿ ಮೆಕ್ಕಾದಿಂದ ಮದೀನಾಗೆ ತೆರಳುತ್ತಿದ್ದ 46 ಯಾತ್ರಿಕರ ಬಸ್, ಡೀಸೆಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ 45 ಮಂದಿ ಸಜೀವ ದಹನವಾಗಿದ್ದಾರೆ. ಈ ಪೈಕಿ ಹುಬ್ಬಳ್ಳಿಯ ವ್ಯಕ್ತಿ ಸೇರಿ 42 ಮಂದಿ ಭಾರತೀ ಯರು ಸೇರಿದ್ದಾರೆ. ಹೈದರಾಬಾದ್‌ನ ಒಂದೇ ಕುಟುಂಬಕ್ಕೆ ಸೇರಿದ 18 ಮಂದಿಯೂ ಮೃತಪಟ್ಟಿದ್ದಾರೆ.

ಬಸ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆಯುತ್ತಿದ್ದಂತೆ ಬೆಂಕಿ ಹೊತ್ತಿಕೊಂಡಿದ್ದು, ಹೆಚ್ಚಿನ ಪ್ರಯಾಣಿಕರು ನಿದ್ರಾವಸ್ಥೆಯಲ್ಲಿದ್ದ ಕಾರಣ ಸಾವಿನ ಸಂಖ್ಯೆ ಹೆಚ್ಚಾಗಿರುವ ಸಾಧ್ಯತೆ ಇದೆ. → 4

ಉಮ್ರಾಗೆ ತೆರಳಿದ್ದ ಹುಬ್ಬಳ್ಳಿಯ ಅಬ್ದುಲ್ ನಿಧನ

ಹುಬ್ಬಳ್ಳಿ: ದುರಂತದಲ್ಲಿ ಹುಬ್ಬಳ್ಳಿಯ ಅಬ್ದುಲ್ ಘನಿ ಶಿರಹಟ್ಟಿ (55) ಸಾವಿಗೀಡಾಗಿರುವ ಕನ್ನಡಿಗ. ಇವರು ಹುಬ್ಬಳ್ಳಿ ನಗರದ ಗಣೇಶ್ ಪೇಟ್ ನಿವಾಸಿ. ದುಬೈನಲ್ಲಿ ಹೋಟೆಲೊಂದರಲ್ಲಿ ಕೆಲಸ ಮಾಡುತ್ತಿದ್ದರು. ದುಬೈನಿಂದ ಸೌದಿಗೆ ಉಮ್ರಾಗೆ ಹೋಗಿದ್ದರು. ಅವರು ಅಬುಧಾಬಿ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಚಾಲಕರೂ ಆಗಿದ್ದರು. ಈಗ ಸೌದಿಯಲ್ಲಿ ಹುಬ್ಬಳ್ಳಿ ನಿವಾಸಿ ಅಬ್ದುಲ್ ಅವರ ಮೃತದೇಹ ಇದೆ. ಹೀಗಾಗಿ, ತಮ್ಮನ್ನು ಸೌದಿಗೆ ಕಳುಹಿಸುವಂತೆ ಕುಟುಂಬಸ್ಥರು ಕಣ್ಣೀರಿಟ್ಟಿದ್ದಾರೆ.

ಯಾದಗಿರಿ: ವಿಧವಾ ವಿವಾಹ ನೆಪದಲ್ಲಿ ಸಹಾಯಧನ ಕಬಳಿಕೆ ಬಯಲು

ಸರಕಾರದ ದುಡ್ಡಿಗಾಗಿ ವಿಧವಾ ವಿವಾಹ!

ವೀರೇಶ ಎಸ್.ಕೆಂಭಾವಿ ಯಾದಗಿರಿ

ಸಮಾಜ ಕಲ್ಯಾಣ ಇಲಾಖೆ ಮಹತ್ತರ ಯೋಜನೆಗಳಲ್ಲಿ ಒಂದಾದ ವಿಧವಾ ಪುನರ್ವಿವಾಹ ಯೋಜನೆ ದುರ್ಬಳಕೆ ಮಾಡಿಕೊಂಡು, ಮಧ್ಯವರ್ತಿಗಳು ಕರಾಮತ್ತು ತೋರಿ ಲಕ್ಷಾಂತರ ರು. ವಂಚಿಸಿರುವ ಪ್ರಕರಣ ಬಯಲಿಗೆ ಬಂದಿದೆ. ವಿಧವೆಯರಿಗೆ ಸುಳ್ಳು ಮರುಮದುವೆ ಮಾಡಿಸಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ ವಿಧವಾ ಪುನರ್ವಿವಾಹ ಯೋಜನೆಯಡಿ ಪ್ರೋತ್ಸಾಹ ಧನ ಪಡೆದಿದ್ದಾರೆ ಎನ್ನಲಾಗಿದೆ. ಇದಕ್ಕೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಕೈಜೋಡಿಸಿದ್ದಾರೆ ಎನ್ನುವ ಆರೋಪ ಸಹ ಕೇಳಿಬಂದಿದೆ.

ಸುರಪುರ ತಾಲೂಕಿನ ಪಟ್ಟಣ ಒಂದರಲ್ಲಿಯೇ ಒಂದೇ ಸಮುದಾಯದ ಕೆಲ ವಿಧವೆಯರಿಗೆ, ಸುಳ್ಳು ಮದುವೆ ಮಾಡಿಸಿ ಪ್ರೋತ್ಸಾಹಧನ ಲಪಾಟಾಯಿಸಲಾಗಿದೆ. ಇಂತಹ ಪ್ರಕರಣ ಯಾದಗಿರಿ, ಕಲಬುರಗಿ ಜಿಲ್ಲೆಯಲ್ಲಿ ಬಹಳಷ್ಟು ನಡೆದಿದ್ದು, ಇದಕ್ಕೆ ಮಧ್ಯವರ್ತಿಗಳಿಗೆ ಅಧಿಕಾರಿ ಗಳು ಸಾಥ್ ನೀಡಿದ್ದಾರೆ ಎಂದು ದಲಿತ ಮುಖಂಡರೊಬ್ಬರು ದೂರಿದ್ದಾರೆ.

ಪ್ರೋತ್ಸಾಹಧನಕ್ಕಾಗಿ ಮಾತ್ರ ಮದುವೆ!: ಸದ್ಯ ಸುರಪುರ ತಾಲೂಕಿನಲ್ಲಿ ನಾಲ್ಕು ಪ್ರಕರಣಗಳು ವರದಿಯಾಗಿದ್ದು, ವಿಧವಾ ವಿವಾಹ ಆಗಿರುವ ಯಾರೊಬ್ಬರೂ ಸಹ ತಮ್ಮ ಪತಿಯೊಂದಿಗೆ ಜೀವನ ನಡೆಸುತ್ತಿಲ್ಲ ಎನ್ನಲಾಗಿದೆ. ಕೇವಲ ಸರಕಾರದ ಹಣ ಪಡೆಯಲೆಂದು ಮಾಡಿರುವ ಮದುವೆಗಳು ಇವಾಗಿವೆ. ಇನ್ನೂ ಪ್ರೋತ್ಸಾಹಧನದಲ್ಲಿ ಸಹ ಹೆಚ್ಚಿನ ಹಣವನ್ನು ಮಧ್ಯವರ್ತಿಗಳೇ ನುಂಗಿ, ಫಲಾನುಭವಿಗಳಿಗೆ ಸಹ ಮೋಸ ಮಾಡಿದ್ದಾರೆ ಎನ್ನಲಾಗಿದೆ.

ವರಸೆಯಲ್ಲಿ ಅಣ್ಣನಾಗುವವರ ಜೊತೆಗೆ ನಿಲ್ಲಿಸಿ ಗಂಡ ಎಂದು ನಂಬಿಸಿದ್ದ ಭೂಪರು ವಿಧವೆಯರಿಗೆ ಸುಳ್ಳು ಮದುವೆಯಾಗಿರುವಂತೆ ನಟಿಸಲು, ನಕಲಿ ಪತಿಯಾಗುವವನಿಗೆ 500 ರು. ನೀಡಲಾಗಿದೆ. ವಿಚಿತ್ರವೆಂದರೆ ಸಂಬಂಧದಲ್ಲಿ ಅಣ್ಣ ಎನ್ನಿಸಿಕೊಂಡಿದ್ದರೂ ಸಹಿತ ವಿಧವೆಯ ಪಕ್ಕದಲ್ಲಿ ನಿಂತು ಪೋಟೋಗೆ ಪೋಸ್ ಕೊಡಲಾಗಿದೆ. ಇದು ಇಲಾಖೆಗೆ ನೀಡಿರುವ ದಾಖಲೆಯಲ್ಲಿ ಬಯಲಾಗಿದೆ.

ರಾಜ್ಯದ ಎಲ್ಲ ಇಲಾಖೆಯಲ್ಲಿಯೂ ಮಧ್ಯವರ್ತಿಗಳ ಹಾವಳಿ ವ್ಯಾಪಕವಾಗಿದೆ. ದಲ್ಲಾಳಿಗಳಿಗೆ ಆದಾಯ ಕಡಿಮೆಯಾದರೆ ಈ ರೀತಿಯ ವಾಮಮಾರ್ಗದಲ್ಲಿ ಸಾಗಿ, ಸುಳ್ಳು ದಾಖಲೆ ಸೃಷ್ಟಿಸಿ ಸರಕಾರಕ್ಕೆ ವಂಚಿಸುತ್ತಿದ್ದಾರೆ. ಈ ಪ್ರಕರಣದಲ್ಲಿನ ಮಧ್ಯವರ್ತಿಗಳ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಿ ಪಾಠ ಕಲಿಸಬೇಕು.

-ಸದಾಶಿವ ಬೊಮ್ಮನಳ್ಳಿ, ಡಿಎಸ್‌ಎಸ್ ಮುಖಂಡ

ಸುಳ್ಳು ಮದುವೆಯಾಗಿ ಸರಕಾರಕ್ಕೆ ವಂಚಿಸಿರುವ ಬಗ್ಗೆ ಮಾಹಿತಿಯಿದೆ. ಈಗಾಗಲೇ ಇಲಾಖೆಯ ಸುರಪುರದ ಅಧಿಕಾರಿಗಳಿಗೆ ವರದಿ ನೀಡಲು ಸೂಚಿಸಿ, ಮತ್ತೊಮ್ಮೆ ಪಂಚನಾಮೆ ಮಾಡಲು ಸ್ಥಳೀಯ ಆಡಳಿತಕ್ಕೆ ಪತ್ರ ಬರೆಯುವಂತೆ ತಿಳಿಸಲಾಗಿದೆ.

-ಚನ್ನಬಸಪ್ಪ, ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ

ವಂಚನೆಯೇನು?

- 2017-18ರಲ್ಲಿ ಕಾಂಗ್ರೆಸ್ ಸರಕಾರದಿಂದ ವಿಧವೆಯರಿಗೆ ಮರು ಮದುವೆಗೆ ಪ್ರೋತ್ಸಾಹ
- ಪರಿಶಿಷ್ಟ ಜಾತಿಗೆ ಸೇರಿದ ವಿಧವೆಯರು ಮರು ಮದುವೆಯಾದರೆ 3 ಲಕ್ಷ ರು. ನೆರವು
- ಈ ಹಣಕ್ಕಾಗಿಯೇ ಸುಳ್ಳು ಮದುವೆ, ಅಣ್ಣ-ತಂಗಿಯ ನಡುವೆಯೂ ನಕಲಿ ಮದುವೆ!

ಏನಿದು ವಿಧವಾ ಪುನರ್ವಿವಾಹ ಯೋಜನೆ?

ರಾಜ್ಯದಲ್ಲಿ 2017-18ನೇ ಸಾಲಿನಲ್ಲಿ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಅಂದಿನ ಸಮಾಜ ಕಲ್ಯಾಣ ಸಚಿವ ಆಂಜನೇಯ ವಿಧವಾ ಪುನರ್ವಿವಾಹ ಯೋಜನೆ ಜಾರಿ ತಂದಿದ್ದರು. ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ವಿಧವೆಯರು ಚಿಕ್ಕವಯಸ್ಸಿನಲ್ಲಿ ವಿಧವೆಯಾಗಿ ಬದುಕು ಕಳೆದುಕೊಂಡವರ ನೆರವಿಗಾಗಿ ಈ ಯೋಜನೆ ಮಾಡಲಾಗಿತ್ತು. ಇದರಡಿ ಮರು ವಿವಾಹವಾದ ವಿಧವೆಯರಿಗೆ 3 ಲಕ್ಷ ರು. ಪ್ರೋತ್ಸಾಹಧನ ನೀಡಲು ಆದೇಶ ಹೊರಡಿಸಲಾಗಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

ದೆಹಲಿಯಲ್ಲಿ ಪಿಎಂ ಹಾಗೂ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡಿದ ಸಿಎಂ
ಸುದ್ದಿ



ಸಮಾಚಾರ ಸಣ್ಣದಲ್ಲ

ಹಾಸನ ನಗರ ಪಾಲಿಕೆಗೆ ಆಡಳಿತಾಧಿಕಾರಿ ನೇಮಕ

ಹಾಸನ: ನಗರಸಭೆಯಿಂದ ಹೊಸದಾಗಿ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವ ಹಾಸನ ಮಹಾನಗರ ಪಾಲಿಕೆಯ ಚುನಾಯಿತ ಆಡಳಿತ ಮಂಡಳಿಯ ಅವಧಿ ಮುಕ್ತಾಯ ಆಗಿರುವುದರಿಂದ ಮುಂದಿನ ಆಡಳಿತ ನಿರ್ವಹಣೆಗಾಗಿ ನೂತನ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.ಅದರಂತೆ ಮೈಸೂರು ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್ ಅವರು ಹಾಸನ ಮಹಾನಗರ ಪಾಲಿಕೆಗೆ ಆಡಳಿತಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಪಾಲಿಕೆಯ ಚುನಾಯಿತ ಆಡಳಿತ ಮಂಡಳಿ ಅವಧಿ 2025 ಅ.28 ರಂದು ಕೊನೆಗೊಂಡಿದೆ. ಹಾಗಾಗಿ ಮುಂದಿನ ಆಡಳಿತಾತ್ಮಕ ಹಿತದೃಷ್ಟಿಯಿಂದ ಮುಂದಿನ ಹೊಸ ಚುನಾಯಿತ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬರುವವರೆಗೂ ಕಾರ್ಯ ನಿರ್ವಹಣೆಗಾಗಿ ಆಡಳಿತಾಧಿಕಾರಿ ನೇಮಕ ಮಾಡಲಾಗಿದೆ.ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ನಿಯಮ-509 ರನ್ವಯ ಪ್ರದತ್ತವಾಗಿರುವ ಅಧಿಕಾರದನ್ವಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಅ.29 ರಿಂದಲೇ ಮುಂದಿನ ಆದೇಶದವರೆಗೆ ನಿತೇಶ್ ಪಾಟೀಲ್ ಅವರು ಹಾಸನ ಮಹಾ ನಗರ ಪಾಲಿಕೆ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ ಎಂದು ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಂಜುನಾಥ ತಿಳಿಸಿದ್ದಾರೆ.

ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಅಂಬರೀಷ್

ಕೋಲಾರ: ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಪಂಗಡ ವಿಭಾಗದ ಅಧ್ಯಕ್ಷರಾಗಿ ನಗರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎನ್. ಅಂಬರೀಷ್ ಅವರನ್ನು ನೇಮಕ ಮಾಡಲಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶದ ಮೇರೆಗೆ ಜಿಲ್ಲಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಹೊಣೆಗಾರಿಕೆಯನ್ನು ನಿಷ್ಠೆಯಿಂದ ನಿರ್ವಹಿಸಿ ರಾಜ್ಯ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಹಾಗೂ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಥಳೀಯ ನಾಯಕರುಗಳ ಸಹಕಾರದೊಂದಿಗೆ ನೀಡಲಾಗಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ಪಕ್ಷದ ಸಂಘಟನೆಗೆ ಶ್ರಮಿಸುವಂತೆ ರಾಜ್ಯ ಘಟಕದ ಅಧ್ಯಕ್ಷ ಎಂ.ವಿಜಯ ನಾಯಕ್ ಆದೇಶದಲ್ಲಿ ಸೂಚಿಸಿದ್ದಾರೆ.

ಕೊಲ್ಲಾಪುರದಮ್ಮ ಲಕ್ಷದೀಪೋತ್ಸವ

ತುಮಕೂರು: ನಗರದ ಹನುಮಂತಪುರದ ಕೊಲ್ಲಾಪುರ ದಮ್ಮದೇವಿ ದೇವಸ್ಥಾನದಲ್ಲಿ ಈ ತಿಂಗಳ 20ರಂದು ಸಂಜೆ 6.30ಕ್ಕೆ ವೈಭವದ ಲಕ್ಷದೀಪೋತ್ಸವ ಹಾಗೂ ಇದರ ಅಂಗವಾಗಿ ಕನ್ನಡ ರಾಜ್ಯೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ನಗರಪಾಲಿಕೆ ಮಾಜಿ ಉಪಮೇಯರ್‌ಟಿ.ಕೆ.ನರಸಿಂಹಮೂರ್ತಿ ತಿಳಿಸಿದ್ದಾರೆ. ಲಕ್ಷದೀಪೋತ್ಸವದ ಪ್ರಯುಕ್ತ ಕೊಲ್ಲಾಪುರದಮ್ಮದೇವಿಗೆ ವಿಶೇಷ ಹೂವಿನ ಅಲಂಕಾರ, ವಿಶೇಷ ಪೂಜೆ ಹಾಗೂ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ ದೇವಸ್ಥಾನದ ಬಳಿ ಕನ್ನಡರಾಜ್ಯೋತ್ಸವ ಆಚರಣೆಯಾಗಿ ಕನ್ನಡ ಧ್ವಜಾರೋಹಣ ನೆರವೇರಿಸಲಾಗುವುದು ಎಂದು ಹೇಳಿದ್ದಾರೆ.ಈ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಗೃಹ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್,ಶಾಸಕರಾದ ಕೆ.ಎನ್. ರಾಜಣ್ಣ, ಜಿ.ಬಿ.ಜ್ಯೋತಿಗಣೇಶ್, ಬಿ.ಸುರೇಶ್‌ಗೌಡ, ಎಸ್.ಆರ್.ಶ್ರೀನಿವಾಸ್, ಆರ್.ರಾಜೇಂದ್ರ, ಮಾಜಿ ಸಂಸದ ಜಿ.ಎಸ್.ಬಸವರಾಜು, ಮಾಜಿ ವಿಧಾನ ಪರಿಷತ್ ಸದಸ್ಯ ಡಾ.ಎಂ.ಆರ್.ಹುಲಿನಾಯ್ಕರ್,ಮಾಜಿ ಶಾಸಕ ಡಾ.ರಫಿಕ್ ಅಹ್ಮದ್, ಎಸ್.ನಾಗಣ್ಣ, ಜಿಲ್ಲಾ ಗೆಳೆಯರ ಬಳಗದ ಅಧ್ಯಕ್ಷ ಎನ್.ಗೋವಿಂದರಾಜು, ರಾಜ್ಯ ತಿಗಳ ಮಹಾಸಭಾ ಅಧ್ಯಕ್ಷ ಹೆಚ್.ಸುಬ್ಬಣ್ಣ ಸೇರಿದಂತೆ ಸಮಾಜದ ಯಜಮಾನರು, ಮುಖಂಡರು ಭಾಗವಹಿಸುವರು ಎಂದು ಹೇಳಿದ್ದಾರೆ.

{ಯು.ಟಿ.ಖಾದರ್} ವಿಧಾನಸಭೆ ಸ್ಪೀಕರ್

ಸಚಿವ ಸಂಪುಟ ವಿಸ್ತರಣೆ ಬಗ್ಗೆ ನನಗೇನೂ ಗೊತ್ತಿಲ್ಲ. ಅಧಿವೇಶನ ನಡೆಸಲು ನಾವು ಸಿದ್ಧತೆ ಮಾಡಿಕೊಳ್ಳಿದ್ದೇವೆ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗಳು ನಡೆಯಬೇಕು. ಈ ಬಗ್ಗೆ ನಾವು ಸಿದ್ಧತೆ ಮಾಡಿಕೊಳ್ಳಿದ್ದೇವೆ. ಸಂಪುಟ ವಿಸ್ತರಣೆ ಬಗ್ಗೆ ರಾಜಕೀಯದ ಬಗ್ಗೆ ಗೊತ್ತಿಲ್ಲ.

ಕ್ರೀಡಾಪಟುಗಳಿಗೆ ಶೇ.3ರಷ್ಟು ಮೀಸಲಾತಿ | ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ | ಸಚಿವ ಡಾ.ಜಿ.ಪರಮೇಶ್ವರ್‌ಹೇಳಿಕೆ

ಶಿಸ್ತು, ದೈಹಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿ

ತುಮಕೂರು: ಕ್ರೀಡೆ ಮನುಷ್ಯನಿಗೆ ಶಿಸ್ತು, ಆರೋಗ್ಯದ ಜತೆಗೆ ಜೀವನದಲ್ಲಿ ಪಾಠ ಕಲಿಸುತ್ತದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಡಿಎಆರ್‌ಮೈದಾನದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಏರ್ಪಡಿಸಲಾಗಿರುವ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟವನ್ನು ಬಲೂನ್ ಹಾಗೂ ಪಾರಿವಾಳಗಳನ್ನು ಹಾರಿ ಬಿಡುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಪೊಲೀಸ್ ಇಲಾಖೆ ಶಿಸ್ತು ಕಾಪಾಡುವ ಇಲಾಖೆ. ಸದಾ ಒತ್ತಡದಲ್ಲಿ ಸೇವೆ ಸಲ್ಲಿಸುವ ಪೊಲೀಸರು ವರ್ಷಕ್ಕೊಮ್ಮೆ ಆಯೋಜಿಸುವ ವಾರ್ಷಿಕ ಕ್ರೀಡಾಕೂಟದಲ್ಲಿ ಭಾಗವಹಿಸಿ ಒತ್ತಡ ನಿವಾರಿಸಿಕೊಳ್ಳಲು ಮುಂದಾಗಬೇಕು. ಇದರೊಂದಿಗೆ ಕ್ರೀಡೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದರು.ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇ. 3 ರಷ್ಟು ಮೀಸಲಾತಿ ನೀಡಲಾಗಿದೆ. ಹಾಗೆಯೇ ಈ ಮೀಸಲಾತಿಯನ್ನು ಎಲ್ಲಾ ಇಲಾಖೆಗಳಿಗೂ ವಿಸ್ತರಣೆ ಮಾಡಲಾಗಿದೆ.

ನಗರದ ಡಿಎಆರ್‌ಮೈದಾನದಲ್ಲಿ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ಸಚಿವ ಡಾ. ಜಿ. ಪರಮೇಶ್ವರ್ ಚಾಲನೆ ನೀಡಿದರು.

ಬೇರೆ ಇಲಾಖೆಗಳ ನೇಮಕಾತಿ ಸಂದರ್ಭದಲ್ಲಿ ಶೇ. 2 ರಷ್ಟು ಮೀಸಲಾತಿ ನಿಗದಿಗೊಳಿಸಲಾಗಿದೆ. ಪೊಲೀಸ್ಗೆ ಮಾತ್ರ ಶೇ. 3 ರಷ್ಟು ಮೀಸಲಾತಿ ನಿಗದಿಪಡಿಸಲಾಗಿದೆ. ಹಾಗೆಯೇ ಭಾರತೀಯ ಸೇನೆಯಲ್ಲೂ ಸಹ ಕ್ರೀಡಾಪಟುಗಳಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು. ತಿಲಕ್‌ಪಾರ್ಕ್ ಪೊಲೀಸ್ ಠಾಣೆಯ ಗುರುಪ್ರಸಾದ್ ಅಂತಾರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿ ದೇಶ ಮತ್ತು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ಇದೇ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ದೇಶಕ್ಕೆ ಕೀರ್ತಿ ತಂದಿರುವ ತಿಲಕ್‌ಪಾರ್ಕ್ ಪೊಲೀಸ್ ಠಾಣೆಯ ಗುರುಪ್ರಸಾದ್ ಅವರನ್ನು ಸಚಿವರು ಅಭಿನಂದಿಸಿದರು.

ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಕುಣಿಗಲ್, ತಿಪಟೂರು, ಮಧುಗಿರಿ, ತುಮಕೂರು, ಸಿರಾ ಉಪವಿಭಾಗದ ಪೊಲೀಸರಿಂದ ಆಕರ್ಷಕ ಪಥಸಂಚಲನ ನಡೆಯಿತು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆ. ಸದಾ ಕಾಲ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರಿಗೆ ವರ್ಷಕ್ಕೊಮ್ಮೆ ಕ್ರೀಡಾಕೂಟದ ಅವಶ್ಯವಿದೆ. ಹೀಗಾಗಿ ಪ್ರತಿ ವರ್ಷವೂ ಕ್ರೀಡಾಕೂಟವನ್ನು ನಡೆಸಲಾಗುತ್ತಿದೆ ಎಂದರು.ಸಮಾರಂಭದಲ್ಲಿ ಜಿಲ್ಲಾಧಿಕಾರಿ ಶುಭಕಲ್ಯಾಣ್, 12ನೇ ಕೆಎಸ್‌ಆರ್‌ಪಿ ಬೆಟಾಲಿಯನ್ ಮುಖ್ಯಸ್ಥರಾದ ಹಂಜಾ ಹುಸೇನ್, ಅಡಿಷನಲ್ ಎಸ್ಪಿ ಪುರುಷೋತ್ತಮ್, ಜಿಲ್ಲೆಯ ಡಿವೈಎಸ್ಪಿಗಳು, ಸರ್ಕಲ್ ಇನ್‌ಸ್ಪೆಕ್ಟರ್‌ಗಳು ಸೇರಿದಂತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

> ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇ. 3 ರಷ್ಟು ಮೀಸಲಾತಿ ನೀಡಲಾಗಿದೆ. ಹಾಗೆಯೇ ಈ ಮೀಸಲಾತಿಯನ್ನು ಎಲ್ಲಾ ಇಲಾಖೆಗಳಿಗೂ ವಿಸ್ತರಣೆ ಮಾಡಲಾಗಿದೆ. ಬೇರೆ ಇಲಾಖೆಗಳ ನೇಮಕಾತಿ ಸಂದರ್ಭದಲ್ಲಿ ಶೇ. 2 ರಷ್ಟು ಮೀಸಲಾತಿ ನಿಗದಿಗೊಳಿಸಲಾಗಿದೆ. ಪೊಲೀಸ್ಗೆ ಮಾತ್ರ ಶೇ. 3 ರಷ್ಟು ಮೀಸಲಾತಿ ನಿಗದಿಪಡಿಸಲಾಗಿದೆ. ಹಾಗೆಯೇ ಭಾರತೀಯ ಸೇನೆಯಲ್ಲೂ ಸಹ ಕ್ರೀಡಾಪಟುಗಳಿಗೆ ಆದ್ಯತೆ ನೀಡಲಾಗುತ್ತಿದೆ.
>
> -ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಡಿಸಿಪಿ ದೇವರಾಜ್‌ರಿಂದ ಸ್ಟೇಡಿಯಂ ಭರವಸೆ

ಕೋಲಾರ: ತಾಲ್ಲೂಕಿನ ನರಸಾಪುರ ಪಿಯು ಕಾಲೇಜು ಪಕ್ಕದಲ್ಲಿ ಮೈದಾನ ಬೇಕು ಎಂದು ಯುವಕರು ಆಗ್ರಹಿಸಿದ್ದು, ಎಸ್ಡಿಎಂಸಿ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯಿತಿಯಿಂದ ಅನುಮತಿ ಕೊಡಿಸಿದರೆ ಆರು ತಿಂಗಳಲ್ಲಿ ಸ್ಟೇಡಿಯಂ ಮಾದರಿಯಲ್ಲೇ ಮೈದಾನವನ್ನು ಸಿದ್ದಪಡಿಸಿ ಕೊಡುವ ಭರವಸೆಯನ್ನು ಬೆಂಗಳೂರು ಪೂರ್ವ ವಲಯ ಡಿಸಿಪಿ ಡಿ.ದೇವರಾಜ್ ನೀಡಿದರು.

ನರಸಾಪುರದಲ್ಲಿ ನಡೆದ ಪ್ರೀಮಿಯರ್ ಲೀಗ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಮಾತನಾಡಿದ ಡಿಸಿಪಿ ದೇವರಾಜ್, ಸಿಎಸ್‌ಆರ್‌ಅನುದಾನದಲ್ಲಿ ಕ್ರೀಡಾಂಗಣವನ್ನು ಮಾಡಿಸಿಕೊಡುವುದಾಗಿ ಹೇಳಿದರು.

ಕ್ರಿಕೆಟ್ ಹಾಗೂ ಇನ್ನಿತರ ಆಟವಾಡಲು ಮೈದಾನ ಬೇಕೆಂದು ಈ ಭಾಗದ ಗ್ರಾಮದ ಯುವಕರು ಬಹಳ ದಿನಗಳಿಂದ ಬೇಡಿಕೆ ಇಟ್ಟಿದ್ದರು. ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಕ್ರೀಡೆಯಲ್ಲಿ ಭಾಗವಹಿಸುವ ಆಸಕ್ತಿ ಇರುತ್ತದೆ. ಆದರೆ ಅವರಿಗೆ ಸರಿಯಾದ ರೀತಿಯಲ್ಲಿ ತರಬೇತಿ ಪಡೆಯಲು ಸ್ಥಳವಿರಲ್ಲ. ಅದಕ್ಕಾಗಿ ಈ ಭಾಗದಲ್ಲಿ ಮೈದಾನ ಸಿದ್ದಪಡಿಸಲಾಗುತ್ತದೆ ಎಂದು ಡಿಸಿಪಿ ದೇವರಾಜ್ ನುಡಿದರು. ಮುಖಂಡರಾದ ಎಂಟಿಬಿ ಶ್ರೀನಿವಾಸ್, ರಾಮಸಂದ್ರ ತಿರುಮಲೇಶ್, ಕಡಗಟ್ಟೂರು ವಿಜಯಕುಮಾರ್,ಖಾಜಿಕಲ್ಲಹಳ್ಳಿ ಹರೀಶ್ ಗೌಡ, ಡಾ.ಕಿರಣ್, ನರಸಾಪುರ ಗ್ರಾಪಂ ಅಧ್ಯಕ್ಷ ಕುಮಾರ್,ಸದಸ್ಯ ಕೆಐಬಿ ಚಂದ್ರು ಇದ್ದರು.

ನರಸಾಪುರದ ಪ್ರೀಮಿಯರ್‌ಲೀಗ್ನಲ್ಲಿ ಡಿಸಿಪಿ ದೇವರಾಜ್ರನ್ನು ಸನ್ಮಾನಿಸಲಾಯಿತು.

ಕೆರೆಗೆ ನೀರು ಹರಿಸುವ ಯೋಜನೆಗೆ ಇಂದು ಚಾಲನೆ

ಚಿಕ್ಕಬಳ್ಳಾಪುರ: ನವೆಂಬರ್18 ರಂದು ಬೆಳಗ್ಗೆ 10 ಗಂಟೆಗೆ ಬಾಗೇಪಲ್ಲಿ ತಾಲ್ಲೂಕಿನ ಆಚೇಪಲ್ಲಿ ಕೆರೆಯ ಅಂಗಳದಲ್ಲಿ ಏರ್ಪಡಿಸಿರುವ ತಾಲ್ಲೂಕಿನ 24 ಕೆರೆಗಳಿಗೆ ನೀರು ಹರಿಸುವ ಹೆಚ್.ಎನ್.ವ್ಯಾಲಿ ಯೋಜನೆಯ ಉದ್ಘಾಟನೆಯನ್ನು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ .ಬೋಸರಾಜು ನೆರವೇರಿಸುವರು ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ಜಿಲ್ಲಾ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿ, ಬಾಗೇಪಲ್ಲಿ ಇವರ ಸಂಯುಕ್ತಾಶ್ರಯದಲ್ಲಿ ಬೆಂಗಳೂರು ನಗರದ ಹೆಬ್ಬಾಳ-ನಾಗವಾರ ವ್ಯಾಲಿ ಯೋಜನೆಯಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ 24 ಕೆರೆಗಳಿಗೆ ನೀರು ಹರಿಸುವ ಎರಡನೇ ಹಂತದ ಯೋಜನೆಯ ಉದ್ಘಾಟನಾ ಸಮಾರಂಭವನ್ನು ನವೆಂಬರ್18 ರಂದು ಬೆಳಿಗ್ಗೆ 10 ಗಂಟೆಗೆ ಬಾಗೇಪಲ್ಲಿ ತಾಲ್ಲೂಕಿನ ಆಚೇಪಲ್ಲಿ ಕೆರೆಯ ಅಂಗಳದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ಉನ್ನತ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ.ಸುಧಾಕರ್ ವಹಿಸುವರು.

ಎಚ್.ಎನ್.ವ್ಯಾಲಿ ಸಂಸ್ಕರಿತ ನೀರಿನ ಚಿತ್ರದ ಪಟ.

ಅಧ್ಯಕ್ಷತೆಯನ್ನು ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಕೆ.ಸುಧಾಕರ್, ವಿಧಾನ ಪರಿಷತ್ತು ಶಾಸಕರಾದ ಚಿದಾನಂದ ಎಂ. ಗೌಡ, ಎಂ.ಎಲ್. ಅನಿಲ್ ಕುಮಾರ್,ಡಿ.ಟಿ ಶ್ರೀನಿವಾಸ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಸ್.ನರೇಂದ್ರ, ಯಲ್ಲಂಪಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಸರಸ್ವತಮ್ಮ ಅಶ್ವತ್ಥಪ್ಪ ರವರು ಭಾಗವಹಿಸುವರು.ಅತಿಥಿಗಳಾಗಿ ಸರ್ಕಾರದ ಕಾರ್ಯದರ್ಶಿಗಳು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿ ಎನ್. ಮಂಜುಳ, ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವೈ. ನವೀನ್ ಭಟ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಸರಕಾರದ ಕಾರ್ಯದರ್ಶಿ ಬಿ.ಕೆ. ಪವಿತ್ರ, ಬೆಂಗಳೂರಿನ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್‌ಬಿ. ಪ್ರಕಾಶ್ ಶ್ರೀಹರಿ, ಅಧೀಕ್ಷಕ ಇಂಜಿನಿಯರ್ ಕೆ.ಗುರು, ಕಾರ್ಯಪಾಲಕ ಇಂಜಿನಿಯರ್ ವಿಷ್ಣು ಕಾಮತ್ ರವರು ಭಾಗವಹಿಸುವರು.

ಇ-ಸ್ವತ್ತು ಕುರಿತು ಪಿಡಿಓಗಳಿಗೆ ತರಬೇತಿ

ತುಮಕೂರು: ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ -2025ರಡಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳಿಗೆ ಸಂಬಂಧಿಸಿದ ನಿಯಮಗಳ ಕುರಿತು ತರಬೇತಿ ಏರ್ಪಡಿಸಲಾಗಿತ್ತು. ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಓದುವ ಹವ್ಯಾಸ ವ್ಯಕ್ತಿತ್ವ ರೂಪಿಸುತ್ತದೆ

ತುಮಕೂರು: ಮಕ್ಕಳಲ್ಲಿ ಪುಸ್ತಕ ಓದುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಓದುವುದರಿಂದ ಜ್ಞಾನ ಬೆಳೆದು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಸಾಧನೆ ಮಾಡಿದವರೆಲ್ಲಾ ಪುಸ್ತಕ ಓದಿ ಉನ್ನತ ವ್ಯಕ್ತಿತ್ವ ರೂಪಿಸಿಕೊಂಡಿದ್ದಾರೆ. ಅಲ್ಲದೆ, ಓದುವ ಸಂಸ್ಕೃತಿಯನ್ನು ಪ್ರತಿಪಾದಿಸಿದ್ದಾರೆ ಎಂದು ರಾಜ್ಯ ಗ್ರಂಥಾಲಯ ಸಂಘದ ಅಧ್ಯಕ್ಷ ಡಾ.ಶಿವಶಂಕರ ಕಾಡದೇವರಮಠ ಹೇಳಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ-ಜಿಲ್ಲಾ ಕೇಂದ್ರ ಗ್ರಂಥಾಲಯ, ಇನ್ನರ್ ವ್ಹೀಲ್ ಸಂಸ್ಥೆ, ಗ್ರಂಥಾಲಯ ಸಂಘದ ಆಶ್ರಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಸೋಮವಾರ ನಗರದ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ನಡೆದ ಸಮಾರಂಭ ಉದ್ಘಾಟಿಸಿದ ಅವರು, ಈಗ ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗಿದೆ ಎನ್ನುವ ಮಾತು ಸುಳ್ಳು, ಓದುಗರ ಸಂಖ್ಯೆ, ಓದುವ ಹವ್ಯಾಸ ಬೆಳೆಯುತ್ತಲೇ ಇದೆ. ಪುಸ್ತಕ ಓದುವ ಹವ್ಯಾಸದಿಂದ ಜ್ಞಾನ, ಏಕಾಗ್ರತೆ, ಆಲೋಚನಾ ಶಕ್ತಿ ವೃದ್ಧಿಯಾಗುತ್ತದೆ. ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸಬೇಕು ಎಂದು ಸಲಹೆ ಮಾಡಿದರು.

ಪುಸ್ತಕ ಓದುವ ಆಂದೋಲನವಾಗಿ 'ಓದು ಕರ್ನಾಟಕ' ಎಂಬ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಆರಂಭಿಸಲಾಗುತ್ತಿದ್ದು, ಡಿಸೆಂಬರ್18ರಂದು ತುಮಕೂರಿನಲ್ಲಿ ಉದ್ಘಾಟನೆಯಾಗಲಿದೆ. ನಗರದ ಎಲ್ಲಾ 35 ವಾರ್ಡ್‌ಗಳಲ್ಲಿ 35 ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿ ಶಾಲೆ ಮಕ್ಕಳಲ್ಲಿ ಪುಸ್ತಕ ಓದುವ ಸಂಸ್ಕೃತಿ ಬೆಳೆಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ನಗರದ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ನಡೆದ ಸಮಾರಂಭವನ್ನು ಡಾ.ಶಿವಶಂಕರ ಕಾಡದೇವರಮಠ ಅವರು ಉದ್ಘಾಟಿಸಿದರು.

ತುಮಕೂರು ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ರೂಪೇಶ್ಕುಮಾರ್ ಮಾತನಾಡಿ, ಸಾರ್ವಜನಿಕ ಗ್ರಂಥಾಲಯ ಎಂಬುದು ಸಾರ್ವಜನಿಕ ವಿಶ್ವವಿದ್ಯಾಲಯ. ಸಾರ್ವಜನಿಕ ಗ್ರಂಥಾಲಯ ಜೀವನಪರ್ಯಂತ ಎಲ್ಲರಿಗೂ ಜ್ಞಾನವನ್ನು ಧಾರೆ ಎರೆಯುವ, ವ್ಯಕ್ತಿತ್ವ ರೂಪಿಸುವ ಸಂಸ್ಥೆ. ಗ್ರಂಥಾಲಯ ಸಮಾಜದ ಮೇಲೆ ತನ್ನದೇ ಆದ ವಿಶೇಷ ಪರಿಣಾಮವನ್ನು ಬೀರುತ್ತದೆ. ಓದುಗ ಪ್ರವೃತ್ತಿ ಬೆಳೆಸಿಕೊಂಡ ಸಮಾಜ ಯಾವತ್ತೂ ನಾಗರೀಕ ಸಮಾಜ ಎಂದರು.

ನಗರ-ಜಿಲ್ಲಾ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ದಿವಾಕರ್‌ಮಾತನಾಡಿ, ಪುಸ್ತಕ ಓದುವ ಮೂಲಕ ಅಧ್ಯಯನಶೀಲತೆ, ಸಂಸ್ಕಾರ, ಪರಿಶ್ರಮದ ಪ್ರಯತ್ನದಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು. ಓದುವುದು ಎಂಬುದು ಜ್ಞಾನದ ಹಸಿವು. ಈ ಹಸಿವು ಇಂಗಿಸಿಕೊಳ್ಳಲು ಪುಸ್ತಕಗಳೇ ಆಹಾರ ಎಂದರು. ಸಿ.ವಿ.ರಾಮನ್ ಸಂಶೋಧನಾ ಕೇಂದ್ರದ ಗ್ರಂಥಾಲಯ ಮುಖ್ಯಸ್ಥ ನಾಗರಾಜು, ಇನ್ನರ್‌ವ್ಹೀಲ್ ಸಂಸ್ಥೆ ಅಧ್ಯಕ್ಷೆ ಮಂಜುಳಾ ಲೋಕೇಶ್, ಕಾರ್ಯದರ್ಶಿ ಸುಮಿತ್ರಾ, ನಾಗರಾಜು, ಗ್ರಂಥಪಾಲಕ ಬಸವರಾಜು, ಬಿ.ಎಸ್.ವಿಜಯಕುಮಾರ್ ಮೊದಲಾದವರು ಭಾಗವಹಿಸಿದ್ದರು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ, ಸಾರ್ವಜನಿಕ ಓದುಗರಿಗೆ ಹಮ್ಮಿಕೊಂಡಿದ್ದ ಪ್ರಬಂಧ, ರಸಪ್ರಶ್ನೆ, ಚಿತ್ರಕಲೆ, ರಂಗೋಲಿ ಸ್ಪರ್ಧೆ ವಿಜೇತರಿಗೆ, ಗ್ರಂಥಾಲಯದ ಉತ್ತಮ ಓದುಗರಿಗೆ ಸಮಾರಂಭದಲ್ಲಿ ಬಹುಮಾನ ವಿತರಿಸಲಾಯಿತು. ಗ್ರಂಥಾಲಯದಲ್ಲಿ ಅಧ್ಯಯನ ಮಾಡಿ ಸರಕಾರಿ ಉದ್ಯೋಗ ಪಡೆದವರನ್ನು ಗೌರವಿಸಲಾಯಿತು.

ಸಾಲುಮರದ ತಿಮ್ಮಕ್ಕನ ಕೊಡುಗೆ ಅಪಾರ

ಗುಡಿಬಂಡೆ : ಯಾವುದೇ ಸ್ವಾರ್ಥ ಮನೋಭಾವ, ಆಸೆಯಿಲ್ಲದೆ 8 ಸಾವಿರಕ್ಕೂ ಅಧಿಕ ಮರಗಳನ್ನು ನೆಟ್ಟು ಪೋಷಣೆ ಮಾಡಿರುವಂತಹ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಪ್ರಾಣಿ ಸಂಕುಲಕ್ಕೆ ಅಪಾರವಾದ ಕೊಡುಗೆ ಕೊಟ್ಟಿದ್ದಾರೆ. ಅವರನ್ನು ಈ ಭೂಮಿ ಇರುವ ತನಕ ಯಾರೂ ಮರೆಯ ಬಾರದು ಎಂದು ರಾಜ್ಯ ಪ್ರಶಸ್ತಿ ವಿಜೇತ ಗುಂಪು ಮರದ ಆನಂದ್ ತಿಳಿಸಿದರು.

ಪಟ್ಟಣದ ಹೊರವಲಯದ ಅಂಬೇಡ್ಕರ್ ವೃತ್ತದ ಬಳಿ ಗುಡಿಬಂಡೆ ಸಾರ್ವಜನಿಕರ ವತಿಯಿಂದ ದಿವಂಗತ ಸಾಲು ಮರದ ತಿಮ್ಮಕ್ಕನವರ ಶ್ರದ್ಧಾಂಜಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಬಡತನದಲ್ಲಿ ಹುಟ್ಟಿದ್ದರೂ ಸಹ ದೊಡ್ಡ ಮಟ್ಟದಲ್ಲಿ ಪರಿಸರ ಸೇವೆ ಮಾಡಿದ್ದಾರೆ. ಯಾವುದೇ ಆಸೆಯಿಲ್ಲದೇ ಸಸಿಗಳನ್ನು ನೆಟ್ಟು ಪೋಷಣೆ ಮಾಡಿ ಕೋಟ್ಯಂತರ ಪ್ರಾಣಿ ಸಂಕುಲಕ್ಕೆ ನೆರವಾಗಿದ್ದಾರೆ. ಅವರು ತಮ್ಮ ಜೀವನ ಪರ್ಯಂತ ಪರಿಸರ ಸಂರಕ್ಷಣೆಗೆ ಮೀಸಲಿಟ್ಟಿದ್ದಾರೆ. ಅವರು ಇಂದು ನಮ್ಮನ್ನ ಅಗಲಿರುವುದು ತುಂಬಾ ನೋವಿನ ಸಂಗತಿಯಾಗಿದೆ ಎಂದರು.

ನಿವೃತ್ತ ಶಿಕ್ಷಕ ಎನ್.ನಾರಾಯಣಸ್ವಾಮಿ ಮಾತನಾಡಿದರು. ಈ ಶ್ರದ್ಧಾಂಜಲಿ ಸಭೆಯಲ್ಲಿ ದಲಿತ ಸಂಘರ್ಷ ಸಮಿತಿಯ ಜಿ.ವಿ.ಗಂಗಪ್ಪ, ಕಸಾಪ ಅಧ್ಯಕ್ಷ ಬಿ. ಮಂಜುನಾಥ್, ನ್ಯೂ ವಿಷನ್ ಶಾಲೆಯ ಮುಖ್ಯಸ್ಥೆ ಡಿ.ಎಲ್.ಪರಿಮಳ, ಕರುನಾಡ ಸಾಹಿತ್ಯ ಪರಿಷತ್ ನ ರಾಜ್ಯಾಧ್ಯಕ್ಷ ಫಯಾಜ್ ರವರು ಸಾಲು ಮರದ ತಿಮ್ಮಕ್ಕನವರ ಕುರಿತು ಮಾತನಾಡಿದರು. ದಲಿತ ಮುಖಂಡ ಇಸ್ಕೂಲಪ್ಪ ಸಾಲು ಮರದ ತಿಮ್ಮಕ್ಕನವರ ಕುರಿತು ಪರಿಸರ ಗೀತೆಯನ್ನು ಹಾಡುವ ಮೂಲಕ ತಿಮ್ಮಕ್ಕನವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಈ ಸಮಯದಲ್ಲಿ ಶಿಕ್ಷಕರು ಸೇರಿದಂತೆ ಹಲವರು ಇದ್ದರು.

ಪಟ್ಟಣದ ಹೊರವಲಯದ ಅಂಬೇಡ್ಕರ್‌ವೃತ್ತದ ಬಳಿ ಸಾಲುಮರದ ತಿಮ್ಮಕ್ಕನವರ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು.

ಹೋರಾಟಕ್ಕೆ 10 ದಿನ ಮೊದಲೇ ಡಿಸಿ, ಎಸ್ ಪಿ ಅನುಮತಿ ಕಡ್ಡಾಯ | ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ

ಆದೇಶ ಹಿಂಪಡೆಯಲು ಆಗ್ರಹಿಸಿ ಜಿಲ್ಲಾಧಿಕಾರಿಗೆ ಪತ್ರ

ಚಿಕ್ಕಬಳ್ಳಾಪುರ : ಪ್ರಜಾಸೌಧವೆಂದೇ ಕರೆಯುವ ಜಿಲ್ಲಾಡಳಿತ ಭವನದ ಹೊರಾವರಣದಲ್ಲಿ ನಾಗರೀಕರು, ಸಂಘ ಸಂಸ್ಥೆಗಳು ಚಳವಳಿಗಾರರು ಹೋರಾಟ ಮಾಡಬೇಕಾದರೆ 10 ದಿನ ಮೊದಲೇ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಅನುಮತಿ ಕಡ್ಡಾಯ ಎಂದು ಹೊರಡಿಸಿದ್ದ ಜಿಲ್ಲಾಧಿಕಾರಿಗಳು ನ.12ರಂದು ಹೊರಡಿಸಿದ್ದ ಆದೇಶಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿತ್ತು.

ಈ ಬಗ್ಗೆ ವಿಶ್ವವಾಣಿ ನ.17ರಂದು ಹೋರಾಟಕ್ಕೆ ಹತ್ತು ದಿನ ಮೊದಲೇ ಅನುಮತಿ ಕಡ್ಡಾಯ ಣ ಜಿಲ್ಲಾಧಿಕಾರಿ ಆದೇಶಕ್ಕೆ ಸಂಘಟನೆಗಳಿಂದ ಆಕ್ರೋಶ, ಆದೇಶ ಹಿಂಪಡೆಯದಿದ್ದರೆ ಬೃಹತ್ ಹೋರಾಟ ಪ್ರತಿಭಟನೆ ಎಂದ ಶೀರ್ಷಿಕೆಯಲ್ಲಿ ಜನರ ಮತ್ತು ಚಳವಳಿಗಾರರ ಆಕ್ರೋಶವನ್ನು ಸಕಾಲಿಕವಾಗಿ ವಿಶೇಷ ವರದಿ ಪ್ರಕಟಿಸಿತ್ತು.

ನಮ್ಮ ವರದಿ ಪರಿಣಾಮ

ವರದಿಯ ಫಲಶೃತಿಯೆಂಬಂತೆ ಚಿಕ್ಕಬಳ್ಳಾಪುರ ಜಿಲ್ಲಾ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳ ನಿಯೋಗ ನ.17ರ ಸೋಮವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಅವರಿಗೆ ಮನವಿ ಪತ್ರ ನೀಡುವ ಮೂಲಕ ತಮ್ಮ ಆದೇಶವನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿರುವುದು ಪತ್ರಿಕೆಯ ಜನಪರ ಕಾಳಜಿಗೆ ಜ್ವಲಂತ ನಿದರ್ಶನದಂತಿದೆ.

ಏನಿದು ಜಿಲ್ಲಾಧಿಕಾರಿಗಳ ಆದೇಶ: ನ.12ರಂದು ಸ್ವತಃ ಜಿಲ್ಲಾಧಿಕಾರಿಗಳೇ ಸಹಿ ಮಾಡಿ ಹೊರಡಿಸಿರುವ ಆದೇಶದಲ್ಲಿರುವಂತೆ ಪ್ರಜಾಸೌಧದ ಹೊರಭಾಗದಲ್ಲಿ ಅನುಮತಿ ಪಡೆಯದೆ ಚಳವಳಿಗಳನ್ನು ನಡೆಸುತ್ತುರುವುದು ಕಂಡು ಬಂದಿರುತ್ತದೆ.ಇನ್ನು ಮುಂದೆ ಯಾವುದೇ ಚಳವಳಿ ಮಾಡಬೇಕಾದಲ್ಲಿ 10 ದಿನ ಮುಂಚಿತವಾಗಿ ಅನುಮತಿ ಪಡೆಯಲು ತಿಳಿಸಿದೆ. ತಾವು ಸಲ್ಲಿಸಿದ ಕೋರಿಕೆಯನ್ನು ಪೊಲೀಸ್ ಇಲಾಖೆಗೆ ಸಲ್ಲಿಸಿ ಪರಿಶೀಲಿಸಿ ಅನುಮತಿ ನ ಈಡುವ ಕುರಿತು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಚಳವಳಿ ನಡೆಸಲು ಅನುಮತಿ ನೀಡಲಾಗುವುದು ಎಂದು ತಿಳಿಸಲಾಗಿತ್ತು.

ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಆದೇಶ ರದ್ದತಿ ಕೋರಿ ಆಗ್ರಹ ಪೂರ್ವಕ ಮನವಿಪತ್ರ ಸಲ್ಲಿಸಿದ್ದಾರೆ .ಅದರಂತೆ ಜಿಲ್ಲೆಯ ಎಲ್ಲಾ ಪ್ರಗತಿಪರ ಸಮಘಟನೆಗಳ ಒಕ್ಕೂಟ ಈ ಸುತ್ತೋಲೆಯನ್ನು ವಾಪಸ್ಸು ಪಡೆಯಲು ಆಗ್ರಹಿಸುತ್ತವೆ. ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳನ್ನು ನಡೆಸುವ ಜಿಲ್ಲೆಯಿದಾಗಿದೆ. ದಶಕಗಳಿಂದ ಪ್ರಜಾಪ್ರಭುತ್ವದ ಹಕ್ಕಾದ ಹೋರಾಟ, ಪ್ರತಿಭಟನೆಗಳ ಮೂಲಕ ಸಮಸ್ಯೆಗಳ ಗಂಭೀರತೆಯನ್ನು ಜಿಲ್ಲಾಡಳಿತ ಸರಕಾರದ ಗಮನಕ್ಕೆ ತಂದು ಪರಿಹಾರದ ಮಾರ್ಗಗಳ ಶೋಧನೆ ಮಾಡುತ್ತಾ ಬಂದಿರುವ ಪರಂಪರೆ ಜಿಲ್ಲೆಗಿದೆ. ಆದರೆ ಜಿಲ್ಲಾಧಿಕಾರಿಗಳ ಆದೇಶ ಹೋರಾಟದ ಹಕ್ಕನ್ನೇ ದಮನಗೊಳಿಸುವ, ಪ್ರಜಾಪ್ರಭುತ್ವ ವಿರೋಧಿ ನಿಲುವಾಗಿದೆ.ಆದ್ದರಿಂದ ಜಿಲ್ಲಾಧಿಕಾರಿಗಳು ಕೂಡಲೇ ಹೊರಡಿಸಲಾಗಿರುವ ಆದೇಶವನ್ನು ವಾಪಸ್ಸು ಪಡೆಯಬೇಕೆಂದು ಆಗ್ರಹಿಸುತ್ತೇವೆ ಎಂದಿದ್ದಾರೆ. ಈ ನಿಯೋಗದಲ್ಲಿ 25ಕ್ಕೂ ಹೆಚ್ಚು ವಿವಿಧ ಸಂಘಟನೆಗಳ ಮುಖಂಡರಾದ ಕರ್ನಾಟಕ ಪ್ರಾಂತ ರೈತಸಂಘದ ಜಿಲ್ಲಾಧ್ಯಕ್ಷ ಬಿ.ಎನ್.ಮುನಿವೆಂಕಟಪ್ಪ, ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್. ಆಂಜನೇಯರೆಡ್ಡಿ,ಕರವೇ ಜಿಲ್ಲಾಧ್ಯಕ್ಷ ಲೋಕೇಶ್, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ನಾರಾಯಣಸ್ವಾಮಿ, ಕರವೇ ಜಿಲ್ಲಾಧ್ಯಕ್ಷ ರಾಮೇಗೌಡ,ತಿಪ್ಪೇನಹಳ್ಳಿ ನಾರಾಯಣಸ್ವಾಮಿ,ಬಾಲಕೃಷ್ಣ, ದಸಂಸದ ರಾಜಾಕಾಂತ್ ,ಪರಮೇಶ್, ಬಿ.ವಿ.ಆನಂದ್, ಎಸ್ಎಸ್ಡಿ ಮತ್ತು ರಾಜ್ಯ ಮುಖಂಡ ಜಿ.ಸಿ.ವೆಂಕಟರೋಣಪ್ಪ, ಹಳ್ಳಿ ಮಕ್ಕಳ ಸಂಘದ ವೆಂಕಟರೋಣಪ್ಪ, ಸಿಪಿಐಎಂ ರಾಜ್ಯ ಕಾರ್ಯದರ್ಶಿ ಮುನಿವೆಂಕಟಪ್ಪ, ರೈತ ಸಂಘದ ಎಂ.ಆರ್.ಲಕ್ಷ್ಮೀ ನಾರಾಯಣ, ಜಿ.ವಿ.ಶ್ರೀನಿವಾಸ್, ದಂಸಂಸ ರಾಜ್ಯ ಮುಖಂಡ ಸುಧಾವೆಂಕಟೇಶ್, ರೈತಸಂಘದ ಮುಖಂಡರಾದ ಯಣ್ಣೂರು ರಾಮಕೃಷ್ಣ, ಭಕ್ತರಹಳ್ಳಿ ಪ್ರತೀಶ್, ವಿಶೇಷ ಚೇತನ ಸಂಘಟನೆಯ ಉಷಾಕಿರಣ್,ಕೆ.ವಿ.ಎಸ್. ಸುಬ್ರಹ್ಮಣಿ, ಕಟ್ಟಡ ಶ್ರಮಿಕರ ಸಂಘದ ಜಿ.ವಿ.ಮೂರ್ತಿ,ಕಾರ್ಮಿಕ ಸಂಘದ ಸಿ.ನಾರಾಯಣಸ್ವಾಮಿ, ಪುಲಿಕೇಶಿ ಸಂಘದ ಚಂದ್ರಶೇಖರ್‌ಜಿ.ಮತ್ತಿತರರು ಇದ್ದರು.



ಜಿಲ್ಲಾ ಪ್ರಗತಿಪರ ಸಂಘಟನೆಗಳ ನಿಯೋಗ ಜಿಲ್ಲಾಧಿಕಾರಿಗಳಿಗೆ ಮನವಿ ನೀಡುತ್ತಿರುವ ಚಿತ್ರ.

ಆದೇಶ ಪರಿಷ್ಕರಣೆ: ಡಿಸಿ ಭರವಸೆ

ನಿಯೋಗದ ಮುಖಂಡರ ಎದುರು ಮಾತನಾಡಿರುವ ಜಿಲ್ಲಾಧಿಕಾರಿಗಳು ನಿಮ್ಮ ಹೋರಾಟದ ಹಕ್ಕನ್ನು ಕಸಿಯುವ ಉದ್ದೇಶದಿಂದ ನಮ್ಮ ಆದೇಶದಲ್ಲಿ ಇಲ್ಲ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಯಾರಿಗೂ ತೊಂದರೆ ಆಗದಂತೆ ನೋಡಿಕೊಳ್ಳಲು ಈ ಆದೇಶ ಹೊರಡಿಸಲಾಗಿದೆ. ಜಿಲ್ಲೆಯ ಎಲ್ಲಾ ಹೋರಾಟಗಾರರು ಒಟ್ಟಾಗಿ ಬಂದು ವಾಪಸ್ಸಿಗೆ ಆಗ್ರಹಿಸುವ ಮೂಲಕ ನಿಮ್ಮ ಆತಂಕವನ್ನು ವ್ಯಕ್ತಪಡಿಸಿದ್ದೀರಿ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಆದೇಶವನ್ನು ಪರಿಷ್ಕರಿಸಲಾಗುವುದು ಎಂದು ವಾಗ್ದಾನ ನೀಡಿದ್ದಾರೆ. ಇದನ್ನು ಮಾಡಲಿಲ್ಲ ಎಂದರೆ ಪ್ರತಿಭಟನೆಯ ಹಾದಿ ಇದ್ದೆ ಎನ್ನುವುದು ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್.ಆಂಜನೇಯರೆಡ್ಡಿ ಅವರ ಮಾತಾಗಿದೆ.

ಹೋರಾಟಕ್ಕೆ ಹತ್ತು ದಿನ ಮೊದಲೇ ಅನುಮತಿ ಕಡ್ಡಾಯ | ಜಿಲ್ಲಾಧಿಕಾರಿ ಆದೇಶಕ್ಕೆ ಸಂಘಟನೆಗಳಿಂದ ಆಕ್ರೋಶ

ಆದೇಶ ಹಿಂಪಡೆಯದಿದ್ದರೆ ಬೃಹತ್ ಪ್ರತಿಭಟನೆ

1,995 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಎನ್‌ಐಟಿಕೆ 23ನೇ ಘಟಿಕೋತ್ಸವ | ಸಂಸ್ಥೆಯ ಇತಿಹಾಸದಲ್ಲಿಯೇ ದಾಖಲೆ | ಕಮಲ್ ಬಾಲಿ ಭಾಗಿ

ಎನ್‌ಐಟಿಕೆದ 23ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪತ್ರಗಳನ್ನು ವಿತರಣೆ ಮಾಡಿದರು.

ಮಂಗಳೂರು: ಮಂಗಳೂರು ಸುರತ್ಕಲ್ ನಲ್ಲಿರುವ ಅತ್ಯಂತ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕರ್ನಾಟಕ (ಎನ್‌ಐಟಿಕೆ)ದ 23ನೇ ಘಟಕೋತ್ಸವ ಸಂಪನ್ನಗೊಂಡಿತು.

1,995 ವಿದ್ಯಾರ್ಥಿಗಳಿಗೆ ಪದವಿ ಪತ್ರಗಳನ್ನು ಮತ್ತು ದಾಖಲೆಯ 193 ಪಿಎಚ್.ಡಿ ಪದವಿಗಳನ್ನೂ ಪ್ರದಾನ ಮಾಡಲಾಯಿತು.

ಈ ಸಮಾರಂಭವು ಇತ್ತೀಚಿನ ವರ್ಷಗಳಲ್ಲೇ ಅತಿ ಹೆಚ್ಚು ಸಂಖ್ಯೆಯ ಪದವೀಧರರು ಮತ್ತು ಕುಟುಂಬಗಳು ಭಾಗವಹಿಸಿದ ಕಾರ್ಯಕ್ರಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಸಮಾರಂಭದಲ್ಲಿ ಒಟ್ಟು 935 ಬಿ.ಟೆಕ್, 641 ಎಂ.ಟೆಕ್, 23 ಎಂ.ಟೆಕ್ (ರಿಸರ್ಚ್), 66 ಎಂಸಿಎ, 69 ಎಂಬಿಎ, 68 ಎಂ.ಎಸ್ಸಿ ಪದವಿ ವಿದ್ಯಾರ್ಥಿಗಳಿಗೆ ಪದವಿ ಪತ್ರಗಳನ್ನು ನೀಡಲಾಯಿತು.

ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ (ಸಿಐಐ) ಸೌತ್ ಇಂಡಿಯಾದ ಮಾಜಿ ಅಧ್ಯಕ್ಷರು, ವೋಲ್ವೋ ಗ್ರೂಪ್ ಇಂಡಿಯಾದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಕಮಲ್ ಬಾಲಿ ಅವರು ಈ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಅವರು ಈ ಸಂದರ್ಭದಲ್ಲಿ, ''ಜಗತ್ತು ಬಹಳ ವೇಗವಾಗಿ ಬದಲಾಗುತ್ತಿದೆ.

ದೊಡ್ಡ ದೊಡ್ಡ ಶಕ್ತಿಗಳು ಸ್ಪರ್ಧೆಗೆ ಬಿದ್ದಿವೆ. ಜಾಗತೀಕರಣ ಪ್ರಾದೇಶಿಕತೆ ಕಡೆಗೆ ಹಿಂದಿರುಗುತ್ತಿದೆ. ಎಐ ಅನೇಕ ಕ್ಷೇತ್ರಗಳಲ್ಲಿ ಸಂಚಲನ ಮೂಡಿಸಿದೆ. ಇಂಥಾ ಹೊತ್ತಲ್ಲಿ ನಾವು ಆರ್ಥಿಕವಾಗಿ ಸಮರ್ಥ,ಪರಿಸರ ಸ್ನೇಹಿ, ಒಳಗೊಳ್ಳುವ ಮತ್ತು ನೈತಿಕತೆ ಹೊಂದಿರುವ 'ಸಮಗ್ರ ಸುಸ್ಥಿರತೆ'ಯ ಬಗ್ಗೆ ಯೋಚಿಸಬೇಕು. ಪದವೀಧರರು ನಾವೀನ್ಯತೆ, ಉದ್ಯಮಶೀಲತೆ, ಗುಣಮಟ್ಟದಲ್ಲಿ ಶ್ರೇಷ್ಠತೆ ಹೊಂದಬೇಕು ಮತ್ತು ಭಾರತೀಯನಾಗಿರುವುದಕ್ಕೆ ಹೆಮ್ಮೆಪಡಬೇಕು. ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ನಿಜವಾದ ನಾಯಕರ ಅಗತ್ಯವಿದೆ. ಎನ್‌ಐಟಿಕೆ ಅಂಥಾ ನಾಯಕರನ್ನು ರೂಪಿಸುವ ಎಲ್ಲಾ ಸಾಮರ್ಥ್ಯವನ್ನು ಹೊಂದಿದೆ'' ಎಂದರು.

ಎನ್‌ಐಟಿಕೆ ಸುರತ್ಕಲ್ ನ ನಿರ್ದೇಶಕರಾದ ಪ್ರೊ. ಬಿ. ರವಿ ಅವರು, ಸಂಸ್ಥೆಯ ಮೂಲಸೌ ಕರ್ಯ ,ಶೈಕ್ಷಣಿಕ ಮತ್ತು ಸಂಶೋಧನಾ ಪ್ರಗತಿಯನ್ನು ಸಾರುತ್ತಲೇ, ಬೀಹೈವ್, ಬ್ಲೂಟೊಕೈ, ಡೆಲ್ವಿವರಿ, ಪ್ರಾಕ್ಟೋ ಮತ್ತು ರೋಬೋಸಾಫ್ಟ್ ಮುಂತಾದ ಎನ್‌ಐಟಿಕೆ ಸ್ಟಾರ್ಟ್‌ಅಪ್ಗಳ ಯಶೋಗಾಥೆಯನ್ನು ಕೊಂಡಾಡಿದರು. ''ಈ ವರ್ಷ ಎನ್‌ಐಟಿಕೆಗೆ ಮಹತ್ವದ ವರ್ಷವಾಗಿದ್ದು, ಸಂಸ್ಥೆಯು ನಾವೀನ್ಯತೆ ಮತ್ತು ಉದ್ಯಮಶೀಲತೆಯಲ್ಲಿ ಬಹಳ ವೇಗವಾಗಿ ಪ್ರಗತಿ ಸಾಧಿಸಿದೆ.

ಹೊಸ ನೀತಿಗಳು, ತರಬೇತಿ ಕಾರ್ಯಕ್ರಮಗಳು, ಪೇಟೆಂಟ್ಗಳು, ತಂತ್ರಜ್ಞಾನ ಲೈಸೆನ್ಸ್ ಗಳು ಹೀಗೆ ಅನೇಕ ಸಾಧನೆಗಳು ಸಾಧ್ಯವಾಗಿವೆ'' ಎಂದು ಹೇಳಿದರು. ಬಿಓಜಿ ಅಧ್ಯಕ್ಷ ಶ್ರೀ ಬಿ.ವಿ.ಆರ್. ಮೋಹನ್ ರೆಡ್ಡಿ ಮತ್ತು ಬಿಓಜಿ ಸದಸ್ಯರು, ಸೆನೇಟರ್ಗಳು, ಡೀನ್ಗಳು, ಎಚ್‌ಒಡಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿಗಳಿಗೆ ಬೆಂಬಲ ನೀಡಿರುವುದಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು.

> ಪದವೀಧರರು ನಾವೀನ್ಯತೆ, ಉದ್ಯಮಶೀಲತೆ, ಗುಣಮಟ್ಟದಲ್ಲಿ ಶ್ರೇಷ್ಠತೆ ಹೊಂದಬೇಕು ಮತ್ತು ಭಾರತೀ ಯನಾಗಿರುವುದಕ್ಕೆ ಹೆಮ್ಮೆ ಪಡಬೇಕು. ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ನಿಜವಾದ ನಾಯಕರ ಅಗತ್ಯವಿದೆ. ಎನ್‌ಐಟಿಕೆ ಅಂಥಾ ನಾಯಕರನ್ನು ರೂಪಿಸುವ ಎಲ್ಲಾ ಸಾಮರ್ಥ್ಯವನ್ನು ಹೊಂದಿದೆ.
>
> -ಕಮಲ್ ಬಾಲಿ, ಸಿಐಐ, ಸೌತ್ ಇಂಡಿಯಾದ ಮಾಜಿ ಅಧ್ಯಕ್ಷ

10 ಬಿ.ಟೆಕ್ ಮತ್ತು 31 ಸ್ನಾತಕೋತ್ತರ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಗಾಗಿ ಚಿನ್ನದ ಪದಕಗಳು ಮತ್ತು ಪ್ರಮುಖ ಸಂಸ್ಥೆಗಳ ಪ್ರಾಯೋಜಿತ ಪದಕಗಳನ್ನು ಪಡೆದರು. 1,995ರಲ್ಲಿ 1,455 ಪದವೀಧರರು ಕಾರ್ಯಕ್ರಮದಲ್ಲಿ ವೈಯಕ್ತಿಕವಾಗಿ ಭಾಗವಹಿಸಿದರು. 1,885 ಪೋಷಕರು ಇದ್ದರು. ಹೀಗಾಗಿ ಪ್ರಧಾನ ವೇದಿಕೆಯಲ್ಲಿ ಎಲ್ಲಾ ಪದವಿ ಪತ್ರ ವಿತರಣೆ ಮಾಡುವುದು ಸವಾಲಾಗಿತ್ತು. ಅದಕ್ಕಾಗಿ ಎನ್‌ಐಟಿಕೆ ಇದೇ ಮೊದಲ ಬಾರಿಗೆ ನಾಲ್ಕು ಸಮಾನಾಂತರ ಮಿನಿ-ವೇದಿಕೆಗಳನ್ನು ರಚಿಸಿತ್ತು.

ಡೀನ್ಗಳು ಮತ್ತು ಎಚ್ ಒಡಿಗಳು ಏಕಕಾಲದಲ್ಲಿ ಪದವಿ ಪತ್ರ ವಿತರಣೆ ಮಾಜುವಂತೆ ವ್ಯವಸ್ಥೆ ಮಾಡಲಾಯಿತು. ಈ ಮಾದರಿಯಿಂದಾಗಿ ಒಂದು ಗಂಟೆಯೊಳಗೇ ಎಲ್ಲಾ ಪದವಿ ಪತ್ರಗಳನ್ನು ವಿತರಿಸಲಾಯಿತು ಮತ್ತು ನೆರೆದವರ ಮೆಚ್ಚುಗೆ ದೊರೆತಿತು.

ಎನ್‌ಐಟಿಕೆ ಅಲುಮ್ನಿ ಅಸೋಸಿಯೇಷನ್ ನ ಅಧ್ಯಕ್ಷರಾದ ಶ್ರೀ ನಿರಂಜನ್ ಮಹಾಬಲಪ್ಪ ಮಾತನಾಡಿ, ''ಘಟಕೋತ್ಸವವನ್ನು ಅದ್ಭುತವಾಗಿ ಆಯೋಜಿ ಸಲಾಗಿತ್ತು. ಈ ಸಂದರ್ಭದಲ್ಲಿ 2025 ಬ್ಯಾಚ್ ಅನ್ನು ಎನ್‌ಐಟಿಕೆ ಹಳೆ ವಿದ್ಯಾರ್ಥಿಗಳ ಕುಟುಂಬಕ್ಕೆ ಸ್ವಾಗತಿಸಲು ಹೆಮ್ಮೆ ಪಡುತ್ತೇನೆ'' ಎಂದರು.

ಉಜಿರೆಯ ಧರ್ಮಸ್ಥಳದಲ್ಲಿ ಭಾನುವಾರ ರಾತ್ರಿ ಕೆರೆಕಟ್ಟೆ ಉತ್ಸವ ನಡೆಯಿತು.

ರಾಜ್ಯದಲ್ಲಿ ಉದ್ಯೋಗಾವಕಾಶಗಳು ಸ್ಥಗಿತ: ಅಶ್ವತ್ಥನಾರಾಯಣ ಟೀಕೆ

ಮಡಿಕೇರಿ: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಆಡಳಿತ ಸಂಪೂರ್ಣ ವಿಫಲಗೊಂಡಿದೆ. ರಾಜ್ಯದಲ್ಲಿ ಉದ್ಯೋಗಾವಕಾಶಗಳು ನಿಂತಿವೆ, ಅಭಿವೃದ್ಧಿ ಯೋಜನೆಗಳು ಸ್ಥಗಿತಗೊಂಡಿದೆ. ರಾಜ್ಯದ ಹಣಕಾಸು ಸ್ಥಿತಿ ಹದಗೆಟ್ಟಿದೆ. ಅನೇಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರಕಾರ ಅಧಿಕಾರವನ್ನು ಕೂಡ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ರಾಜ್ಯ ಸರಕಾರದ ವಿರುದ್ಧ ಮಾಜಿ ಉಪಮುಖ್ಯಮಂತ್ರಿ ಅಶ್ವಥನಾರಾಯಣ ಟೀಕೆಗಳ ಸುರಿಮಳೆ ಸುರಿಸಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ ರಾಜ್ಯ ಸರಕಾರದ ಆಡಳಿತ ವೈಪಲ್ಯದ ವಿರುದ್ಧ ಬಿಜೆಪಿ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಬಿಜೆಪಿ ಮೇಲಿನ ಅಪಪ್ರಚಾರ ಮತ್ತು ಸುಳ್ಳು ಭರವಸೆಗಳಿಂದ ಕಾಂಗ್ರೆಸ್ ಆಡಳಿತ ಚುಕ್ಕಾಣಿ ಹಿಡಿದಿದೆ. ಗ್ಯಾರಂಟಿ ಯೋಜನೆಗೆ ಕೊಡುವ ಅನುದಾನಕ್ಕಿಂತ ಹೆಚ್ಚಿನ ತೆರಿಗೆಯನ್ನು ಸಾಮಾನ್ಯ ಜನರಿಗೆ ವಿಧಿಸಿದೆ. ರಾಜ್ಯವನ್ನು ಆಳುತ್ತಿರುವ ಬಹುತೇಕ ನಾಯಕರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದೂ ಅವರು ಆರೋಪಿಸಿದರು.

ದೇಶ ರಕ್ಷಣೆಯಲ್ಲಿ ಕೊಡಗಿನ ಸೈನಿಕರ ಕೊಡುಗೆ ಅಪಾರವಾಗಿದೆ. ಬಿಜೆಪಿ ರಾಜ್ಯ ಆಡಳಿತ ಚುಕ್ಕಾಣಿ ಹಿಡಿದ ನಂತರ ಕೊಡಗಿನ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.



ಸೋಮವಾರಪೇಟೆಯಲ್ಲಿ ಬಿಜೆಪಿ ವತಿಯಿಂದ ನಡೆದ ಸಭೆಯಲ್ಲಿ ಮಾಜಿ ಉಪ ಮುಖ್ಯಮಂತ್ರಿ ಅಶ್ವಥ್ ನಾರಾಯಣ ಮಾತನಾಡಿದರು.

ತಾನು ಶಾಸಕನಾಗಿದ್ದಾಗ 94 ಸಿ, 94 ಸಿಸಿ ಸೇರಿದಂತೆ 13 ಸಾವಿರ ಹಕ್ಕುಪತ್ರಗಳನ್ನು ನೀಡಲಾಗಿದೆ. ಸಿ ಆ್ಯಂಡ್ ಡಿ ಭೂಮಿಗೂ ಅನೇಕರಿಗೆ ಹಕ್ಕುಪತ್ರ ನೀಡಿದ್ದೇವೆ. ಆ ಜಾಗದ ದುರಸ್ತಿಯೂ ಆಗಿದೆ. ಕಾಂಗ್ರೆಸ್ನವರಿಗೆ ಸಾಧ್ಯವಾಗುತ್ತಿಲ್ಲ. ಕಾಂಗ್ರೆಸ್ ರೈತವಿರೋಧಿ ಸರಕಾರ ಎನ್ನುವುದು ಇದರಿಂದಲೇ ಗೊತ್ತಾಗುತ್ತದೆ ಎಂದು ರಂಜನ್ ದೂಷಿಸಿದರು.

ಕಳೆದ 25 ವರ್ಷಗಳ ಅವಧಿಯಲ್ಲಿ ಬಿಜೆಪಿ ಶಾಸಕರು ಕೊಡಗನ್ನು ಅಭಿವೃದ್ಧಿ ಮಾಡಿಲ್ಲ ಎಂದು ಕಾಂಗ್ರೆಸ್ ಶಾಸಕರು ಆರೋಪ ಮಾಡುತ್ತಿದ್ದಾರೆ. ಕಳೆದ ಎರಡೂವರೆ ವರ್ಷಗಳಿಂದ ಜನರು ಹೆಲಿಕಾಪ್ಟರ್ನಲ್ಲಿ ತಿರುಗಾಡುತ್ತಿದ್ದಾರೆಯೇ. ಕಾಂಗ್ರೆಸ್ ಕಾರ್ಯಕರ್ತರ ಮನೆಗೆ ರಸ್ತೆ ಮಾಡಿಕೊಂಡಿರುವುದು ಕಾಂಗ್ರೆಸ್ ಶಾಸಕರ ಸಾಧನೆ. ಮೆಡಿಕಲ್ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ವಿಶ್ವವಿದ್ಯಾಲಯ ಎಲ್ಲವನ್ನೂ ಬಿಜೆಪಿ ಆಡಳಿತವಿದ್ದಾಗ ಮಾಡಿದೆ ಎಂದು ಮಾಜಿ ಸ್ಪೀಕರ್-ಕೆ.ಜಿ.ಬೋಪಯ್ಯ ಹೇಳಿದರು.

> ರೈತರ, ಕಾಫಿ ಬೆಳೆಗಾರ ಸಮಸ್ಯೆಗಳು, ರಸ್ತೆಗಳ ದುಸ್ಥಿತಿ ಕುರಿತು ಕಾಂಗ್ರೆಸ್ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೊಡಗಿನ ರಸ್ತೆಗಳ ಗುಂಡಿ ಮುಚ್ಚಲು ಸಾಧ್ಯವಾಗದ ಇಂದಿನ ಜನಪ್ರತಿನಿಧಿಗಳು ಕೋಟಿ ಲೆಕ್ಕದಲ್ಲಿ ಜಿಲ್ಲೆ ಮತ್ತು ಎಲ್ಲಾ ತಾಲೂಕುಗಳು ಅಭಿವೃದ್ಧಿ ಪಡಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದಾರೆ.
>
> ಅಪ್ಪಚ್ಚು ರಂಜನ್, ಮಾಜಿ ಸಚಿವ

ರಾಜ್ಯ ಒಕ್ಕಲಿಗರ ಸಂಘದ ಜಿಲ್ಲಾ ಪ್ರತಿನಿಧಿ ಹರಪಳ್ಳಿ ರವೀಂದ್ರ ಅವರು ಬಿಜೆಪಿ ಗೆ ಅಧಿಕೃತವಾಗಿ ಸೇರ್ಪಡೆಗೊಂಡರು. ಇನ್ನೂ ಹಲವು ಮಂದಿ ವಿವಿಧ ಪಕ್ಷಗಳನ್ನು ತೊರೆದು ಬಿಜೆಪಿ ಸೇರ್ಪಡೆಗೊಂಡರು.

ವೇದಿಕೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ, ಮಂಡಳ ಬಿಜೆಪಿ ಅಧ್ಯಕ್ಷ ಗೌತಮ್ ಗೌಡ, ಯುವಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ತಿಮ್ಮಯ್ಯ, ಮಂಡಲ ಅಧ್ಯಕ್ಷ ಮೋಹಿತ್,ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ತಾಲ್ಲೂಕು ಅಧ್ಯಕ್ಷೆ ಕವಿತಾ ವಿರೂಪಾಕ್ಷ, ಕೃಷಿ ಮೋರ್ಚಾ ಅಧ್ಯಕ್ಷ ಮಚ್ಚಂಡ ಪ್ರಕಾಶ್, ಎಸ್ .ಸಿ.ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ.ರವಿ, ತಾಲ್ಲೂಕು ಅಧ್ಯಕ್ಷ ರಾಮಕೃಷ್ಣ, ಮುಖಂಡರಾದ ಬಿ.ಬಿ. ಭಾರತೀಶ್, ಸುನಿಲ್, ಮಹೇಶ್ ಜೈನಿ, ವಿ.ಕೆ.ಲೋಕೇಶ್ ಇದ್ದರು.

ಪ್ರವಾಸಿ ಪ್ರಪಂಚ
ಉದ್ಯೋಗಾವಕಾಶ!
ವಿಡಿಯೋ ಎಡಿಟರ್
ವಿಡಿಯೋ ಕ್ಯಾಮೆರಾಮನ್
ಗ್ರಾಫಿಕ್ ಡಿಸೈನರ್
ನಿರೂಪಕ/ನಿರೂಪಕಿ/ವ್ಲಾಗರ್
ಕನಿಷ್ಠ ಅನುಭವ: ಒಂದು ವರ್ಷ
ಕ್ರಿಯೇಟಿವಿಟಿ ಮತ್ತು ಚುರುಕುತನಕ್ಕೆ ಆದ್ಯತೆ
ಆಸಕ್ತರು ಸಂಪರ್ಕಿಸಿ
edit@pravasiprapancha.com
7411516824

ಇಮ್ಮಡಿ ಮಹಾದೇವಸ್ವಾಮಿ ವಿರುದ್ಧ ಪ್ರತಿಭಟನೆ

ಚಾಮರಾಜನಗರ: ಸುಳ್ವಾಡಿ ವಿಷ ಪ್ರಸಾದ ದುರಂತದ ಪ್ರಮುಖ ಆರೋಪಿ ಇಮ್ಮಡಿ ಮಹಾದೇವಸ್ವಾಮಿಗೆ ಜಾಮೀನು ಮಂಜೂರಾಗಿರುವುದರ ವಿರುದ್ಧ ಸಂತ್ರಸ್ಥರು ರೊಚ್ಚಿಗೆದ್ದಿದ್ದು ಜಾಮೀನು ರದ್ದತಿಗಾಗಿ ಪ್ರಸಿದ್ಧ ಯಾತ್ರಸ್ಥಳವಾದ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಪ್ರತಿಭಟನೆ ನಡೆಸಿದರು. ಹನೂರು ತಾಲೂಕಿನ ಬಿದರಹಳ್ಳಿ, ಮಾರ್ಟಳ್ಳಿ ಸೇರಿ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಂತ್ರಸ್ಥರು ಭಿತ್ತಿಪತ್ರ ಹಿಡಿದು ದೇವಾಲಯ ಪ್ರದಕ್ಷಿಣೆ ಮಾಡಿ ಇಮ್ಮಡಿ ಮಹಾದೇವಸ್ವಾಮಿ ವಿರುದ್ಧ ಆಕ್ರೋಶ ಹೊರಹಾಕಿದರು.

ಸುಳ್ವಾಡಿ ಕಿಚ್ಚುಗುತ್ತಿ ಮಾರಮ್ಮನ ದೇವಾಲಯದಲ್ಲಿ ಏಳು ವರ್ಷಗಳ ಹಿಂದೆ ವಿಷಪ್ರಸಾದ ತಿಂದಂತ ವಿವಿಧ ಗ್ರಾಮದ 17 ಮಂದಿ ಸಾವನ್ನಪ್ಪಿದ್ದಾರೆ, 150ಕ್ಕೂ ಹೆಚ್ಚು ಮಂದಿ ಸಂಪೂರ್ಣವಾಗಿ ಗುಣಮುಖರಾಗದೆ ಬಾಧಿತರಾಗಿ ಬಳಲುತ್ತಿದ್ದಾರೆ. ಇದಕ್ಕೆ ಕಾರಣಕರ್ತನಾದ ಇಮ್ಮಡಿ ಮಹದೇವಸ್ವಾಮಿಗೆ ಜಾಮೀನು ನೀಡಿರುವುದು ಸಂತ್ರಸ್ತರಿಗೆ ಭಯದ ವಾತಾವರಣ ಉಂಟಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಮಂಜೂರಾದ ಜಾಮೀನನ್ನು ರದ್ದುಗೊಳಿಸಲು ಸರಕಾರಕ್ಕೆ ಮತ್ತು ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿ ಜಾಮೀನು ರದ್ದಾಗಲು ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತ ಕ್ರಮ ವಹಿಸಬೇಕು, ಯಾವುದೇ ಕಾರಣಕ್ಕೂ ಆರೋಪಿ ಜಾಮೀನಿನ ಮೇಲೆ ಹೊರಗಿರಬಾರದು ಎಂದು ಒತ್ತಾಯಿಸಿದರು.

ನೀರಿನಲ್ಲಿ ಕೊಚ್ಚಿ ಹೋದ ಬಾಲಕ

ಪಿರಿಯಾಪಟ್ಟಣ: ಸಾಲಿಗ್ರಾಮ ತಾಲೂಕಿನ ಲಕ್ಷ್ಮಿಪುರ ಗ್ರಾಮದ ಲೇಟ್ ಹರೀಶ್ ರವರ ಪುತ್ರ ಲವಾ (14 ವರ್ಷ) ಮೃತ ದುರ್ದೈವಿ. ಬಾಲಕ ಬೊಮ್ಮನಹಳ್ಳಿ ಗ್ರಾಮದ ಅತ್ತೆಯಾದ ಜಯಮ್ಮ ರವರ ಮನೆಯಲ್ಲಿ ವಾಸಿಸುತ್ತಿದ್ದನು. ಶನಿವಾರ ಶಾಲೆ ರಜೆ ಇರುವ ಕಾರಣ ತಾಲೂಕಿನ ಬೆಟ್ಟದಪುರ ಗ್ರಾಮದ ತಮ್ಮ ಮಾವನಾದ ಸಿದ್ದರಾಮ ರವರ ಮನೆಗೆ ಬಂದಿದ್ದ ವೇಳೆ ಘಟನೆ ಸಂಭವಿಸಿದೆ.

ಕರ್ನಾಟಕ ಸರ್ಕಾರ

ಬೆಂಗಳೂರು ಟೆಕ್ ಸಮ್ಮಿಟ್ 2025
ಬೆಂಗಳೂರು ಇಂಟರ್‌ನ್ಯಾಷನಲ್ ಎಕ್ಸಿಬಿಷನ್ ಸೆಂಟರ್
ನವೆಂಬರ್ 18-20, 2025
ಉದ್ಘಾಟನೆ : ಇಂದು ಬೆಳಿಗ್ಗೆ 10.00 ಗಂಟೆಗೆ
ಗೌರವಾನ್ವಿತ ಅತಿಥಿಗಳು
H.E. ಶ್ರೀ ಜಾನ್ ಕ್ರಿಸ್ಟಿಯನ್ ವೆಸ್ಟ್ರೆ
ಮಾನ್ಯ ಮಂತ್ರಿಗಳು, ಆರೋಗ್ಯ ಮತ್ತು ಕಲ್ಯಾಣ ಇಲಾಖೆ, ನಾರ್ವೆ
H.E. ಶ್ರೀಮತಿ ಇಲ್ಸ್ ಐಗ್ನರ್
ಸಿ ಎಸ್ ಯು - ಮಾನ್ಯ ಅಧ್ಯಕ್ಷರು, ಬವೇರಿಯನ್ ರಾಜ್ಯ ಸಂಸತ್ತು, ಜರ್ಮನಿ
H.E. ಶ್ರೀ ರಫಲ್ ರೋಸಿನ್ಸ್ಕಿ
ಮಾನ್ಯ ಉಪ ಮಂತ್ರಿಗಳು ವಿದೇಶಾಂಗ ಕಾರ್ಯದರ್ಶಿಗಳು, ಪೋಲೆಂಡ್
H.E. ಲಾರ್ಡ್ ಮೇಯರ್ ನಿಕೋಲಾಸ್ ರೀಸ್
ಲಾರ್ಡ್ ಮೇಯರ್ ಆಫ್ ಮಲ್ಬೋರ್ನ್ ಆಸ್ಟ್ರೇಲಿಯಾ
ಟೆಕ್ ಸಮ್ಮಿಟ್ ನ ಮುಖ್ಯಾಂಶಗಳು
ವ್ಯಾಪಾರ ಸಮ್ಮೇಳನ
ಪ್ರಶಸ್ತಿಗಳು ಮತ್ತು ರಸಪ್ರಶ್ನೆಗಳು
ಮಲ್ಟಿಟ್ರ್ಯಾಕ್ ಸಮ್ಮೇಳನ
ಸ್ಟಾರ್ಟಪ್ ಪಿಚ್ಚಸ್ ಮತ್ತು ಉತ್ಪನ್ನ ಬಿಡುಗಡೆಗಳು
FUTURE MAKERS CONCLAVE

ಭವಿಷ್ಯೋದಯ
ಸಹ-ಪ್ರಾಯೋಜಕರು
STPI | K-tech | Karnataka Digital Economy Mission
ಜಾಗತಿಕ ನಾವೀನ್ಯತೆ ಮೈತ್ರಿ ಪಾಲುದಾರರು
ಸಮ್ಮೇಳನದಲ್ಲಿ ಭಾಗವಹಿಸಿ
ಸಮ್ಮೇಳನಕ್ಕೆ ಭೇಟಿ ನೀಡಿ

ಸಮಾಚಾರ ಸಣ್ಣದಲ್ಲ

ಟೆಕ್ಕಿಗೆ ₹31 ಕೋಟಿ ದೋಖಾ!

← ಮೊದಲಪುಟದಿಂದ 2024 ಸೆ.15ರಂದು ಮಹಿಳೆಗೆ ಮೊದಲ ವಂಚನೆ ಕರೆ ಹೋಯಿತು. ನಂತರ ಬಹುತೇಕ ತಿಂಗಳ ಕಾಲ ಆಕೆ ಡಿಜಿಟಲ್ ಅರೆಸ್ಟ್‌ನಲ್ಲಿದ್ದರು. ಹೆಚ್ಚುಕಡಿಮೆ ವರ್ಷದ ನಂತರ ಮಹಿ ಳೆಗೆ ತಾನು ಮೋಸ ಹೋಗಿರುವುದು ಗೊತ್ತಾಗಿದೆ! 2024ರ ಸೆಪ್ಟೆಂಬರ್ 15ರಂದು ಮಹಿಳೆಗೆ ಕೊರಿಯರ್ ಸೇವೆಯಾದ ಡಿಎಚ್‌ಎಲ್‌ಗೆ ಸೇರಿದವನೆಂದು ಹೇಳಿಕೊಂಡ ವ್ಯಕ್ತಿಯೊಬ್ಬ ಕರೆ ಮಾಡಿದ್ದಾನೆ. ಆಕೆಯ ಹೆಸರಿನಲ್ಲಿ ಮೂರು ಕ್ರೆಡಿಟ್ ಕಾರ್ಡ್‌ಗಳು, ನಾಲ್ಕು ಪಾಸ್‌ಪೋರ್ಟ್‌ಗಳು ಮತ್ತು ನಿಷೇಧಿತ ಎಂಡಿಎಂ ಮಾದಕ ದ್ರವ್ಯಗಳನ್ನು ಒಳಗೊಂಡಿರುವ ಒಂದು ಪ್ಯಾಕೇಜ್ ಮುಂಬೈನ ಅಂಧೇರಿಯಲ್ಲಿರುವ ಡಿಎಚ್‌ಎಲ್ ಕೇಂದ್ರಕ್ಕೆ ಬಂದಿದೆ ಎಂದು ಹೇಳಿದ್ದಾನೆ. ಆದರೆ, ತಾನು ಬೆಂಗಳೂರಿನಲ್ಲಿ ವಾಸಿಸುತ್ತಿದ್ದು, ಕೊರಿಯರ್ ಜತೆ ಯಾವುದೇ ಸಂಪರ್ಕವಿಲ್ಲ ಎಂದು ಆಕೆ ಹೇಳಿದ್ದಾಳೆ. ಆಗ ಫೋನ್ ಸಂಖ್ಯೆ ಪ್ಯಾಕೇಜ್‌ಗೆ ಲಿಂಕ್ ಆಗಿರುವುದರಿಂದ ಇದು ಸೈಬರ್ ಅಪರಾಧವಾಗಿರಬಹುದು ಎಂದು ಕರೆ ಮಾಡಿದವ ಹೇಳಿಕೊಂಡಿದ್ದಾನೆ. ಈ ವಿಷಯದ ಬಗ್ಗೆ ಸೈಬರ್ ಅಪರಾಧ ಸೆಲ್‌ಗೆ ದೂರು ನೀಡುವಂತೆ ಆಕೆಯನ್ನು ಕೇಳಿಕೊಂಡಿದ್ದಾನೆ. ಆಕೆ ಪ್ರತಿಕ್ರಿಯಿಸುವ ಮೊದಲು, ಕರೆಯನ್ನು ಸಿಬಿಐ ಅಧಿಕಾರಿಯ ಸೋಗಿನಲ್ಲಿರುವ ವ್ಯಕ್ತಿಗೆ ವರ್ಗಾಯಿಸಲಾಗಿತ್ತು. ಈ ವಂಚನೆ ಮಹಿಳೆಗೆ ಅರ್ಥವಾಗಿತ್ತು 2025 ನವೆಂಬರ್ ಹೊತ್ತಿಗೆ. ಆಕೆ ಮೊನ್ನೆ 14ರಂದು ಪೊಲೀಸರಿಗೆ ದೂರು ನೀಡಿದ್ದಾರೆ!

42 ಭಾರತೀಯರು ದಹನ

← ಮೊದಲಪುಟದಿಂದ ಇನ್ನೂ ಅಚ್ಚರಿಯೆಂದರೆ ಮದೀನಾಕ್ಕೆ ಹೋಗುವುದನ್ನು ಬೇಡವೆಂದು ನಾಲ್ವರು ಮೆಕ್ಕಾದಲ್ಲೇ ಉಳಿದಿದ್ದಾರೆ. ಇನ್ನು ನಾಲ್ವರು ಕಾರಿನಲ್ಲಿ ಹೋಗಿದ್ದಾರೆ. ಹೀಗಾಗಿ ಮತ್ತೆಂಟು ಜನರ ಜೀವವುಳಿದಿದೆ. ಈ ಕುರಿತು ಹೈದರಾಬಾದಿನಲ್ಲಿ ಮಾತನಾಡಿದ ಶೋಯಬ್ ಅವರ ಸಂಬಂಧಿ ಮೊಹಮ್ಮದ್ ತೆಹಸೀನ್, ನಮ್ಮ ಕುಟುಂಬದಿಂದ ಏಳು ಮಂದಿ ಸೌದಿ ಅರೇಬಿಯಾಕ್ಕೆ ತೆರಳಿದ್ದರು. ಕಳೆದ ವಾರ ಅವರು ಸೌದಿಗೆ ಹೋಗಿದ್ದರು. ಯುವಕ ಬಸ್ ನಿಂದ ಜಿಗಿದು ಹೊರಬಂದಿರುವುದಾಗಿ ತಿಳಿದುಬಂದಿದೆ. ಮೃತರ ಪಾರ್ಥಿವ ಶರೀರಗಳನ್ನು ಭಾರತಕ್ಕೆ ತರುವಂತೆ ಭಾರತ ಸರ್ಕಾರಕ್ಕೆ ಮನವಿ ಮಾಡುವುದಾಗಿ ತಿಳಿಸಿದರು. ಮೃತರಲ್ಲಿ ಹೆಚ್ಚಿನವರು ಹೈದರಾಬಾದ್ ಮೂಲದವರಾ ಗಿದ್ದು ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ ಎಂದು ತಿಳಿದುಬಂದಿದೆ.

ಶೃಂಗಸಭೆಯಲ್ಲಿ ಐಟಿ ನೀತಿ, ಸ್ಟಾರ್ಟ್‌ಅಪ್ ನೀತಿ, ಬಾಹ್ಯಾಕಾಶ ತಂತ್ರಜ್ಞಾನ ನೀತಿಗಳ ಘೋಷಣೆ

ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಇಂದಿನಿಂದ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದ ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಬಿಟಿ ಇಲಾಖೆ ಹಾಗೂ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ಜಂಟಿಯಾಗಿ ಆಯೋಜಿಸಿರುವ 28ನೇ ಆವೃತ್ತಿಯ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯು ಇಂದಿನಿಂದ ಅಧಿಕೃತವಾಗಿ ಆರಂಭವಾಗಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶೃಂಗಸಭೆ ಉದ್ಘಾಟನೆ ನೆರವೇರಿಸಲಿದ್ದಾರೆ. ತಂತ್ರಜ್ಞಾನ ಮತ್ತು ನಾವೀನ್ಯತೆ ಮೂಲಕ ಭವಿಷ್ಯ ರೂಪಿಸುವ ಧ್ಯೇಯ (ಫ್ಯೂಚರೈಸ್) ಹೊಂದಿರುವ ಶೃಂಗಸಭೆಯಲ್ಲಿ ಜಾಗತಿಕ ನಾಯಕರು, ನೀತಿ ನಿರೂಪಕರು, ಹೂಡಿಕೆದಾರರು, ನವೋದ್ಯಮಗಳು ಮತ್ತು ನಾವೀನ್ಯಕಾರರು ಭಾಗವಹಿಸಲಿದ್ದಾರೆ. ಡೀಪ್‌ಫೇಕ್, ಬಯೋಟೆಕ್, ಹೆಲ್ತ್ ಟೆಕ್, ಸೆಮಿಕಂಡಕ್ಟರ್ ಮತ್ತು ಸ್ಟಾರ್ಟ್‌ಅಪ್ ಆವಿಷ್ಕಾರ ಕ್ಷೇತ್ರಗಳಾದ್ಯಂತ ಪ್ರವರ್ಧಮಾನಕ್ಕೆ ಬರುತ್ತಿರುವ ಅವಕಾಶಗಳನ್ನು ಅನ್ವೇಷಿಸಲು ಶೃಂಗಸಭೆ ಸಹಕಾರಿಯಾಗಲಿದೆ. ರಕ್ಷಣೆ, ಬಾಹ್ಯಾಕಾಶ ತಂತ್ರಜ್ಞಾನ, ಹಣಕಾಸು ಸೇವೆಗಳು ಹಾಗೂ ವರ್ಚುವಲ್ ಪ್ರಪಂಚದ ಪರಿಕಲ್ಪನೆ (ಫಿನ್ವರ್ಸ್) ಸಂಬಂಧಿತ ಸಭೆಗಳೂ ನಡೆಯಲಿವೆ. ಶೃಂಗಮೇಳದಲ್ಲಿ ಮೂರು ಹೊಸ ನೀತಿಗಳಾದ ಐಟಿ ನೀತಿ, ಸ್ಟಾರ್ಟ್‌ಅಪ್ ನೀತಿ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ನೀತಿಗಳ ಘೋಷಣೆ ಮಾಡಲಾಗುತ್ತದೆ.

ಶೃಂಗಸಭೆಯಲ್ಲಿ ಭವಿಷ್ಯ ರೂಪಿಸುವವರ ಸಮಾವೇಶ ಆಯೋಜಿಸಲಾಗಿದೆ. ಇದು ಉದ್ಯಮಶೀಲತೆಯ ಮುಂದಿನ ಅಲೆ ರೂಪಿಸಲಿರುವ ನವೋದ್ಯಮಗಳ ಸ್ಥಾಪಕರು, ಹೂಡಿಕೆದಾರರು ಮತ್ತು ನಾವೀನ್ಯಕಾರರನ್ನು ಒಳಗೊಂಡ ಅಂದಾಜು 10,000 ಪ್ರತಿಭಾನ್ವಿತರ ಚಿಂತನ-ಮಂಥನದ ವಿಶಿಷ್ಟ ವೇದಿಕೆ ಆಗಿರಲಿದೆ. ಇಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಬಂಡವಾಳ ಲಭ್ಯತೆ, ಉದ್ದಿಮೆ ಪರಿಕರಗಳು, ಮಾರ್ಗದರ್ಶನ, ಅತ್ಯಧಿಕ ಸಂಖ್ಯೆಯ ಜನರ ಗಮನ ಸೆಳೆಯುವ ಮತ್ತು ವೃತ್ತಿಪರರ ಭೇಟಿ ಮತ್ತು ಬಾಂಧವ್ಯ ವೃದ್ಧಿಯಲ್ಲಿ ರಚನಾತ್ಮಕ ಪ್ರಗತಿ ಖಚಿತಪಡಿಸಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪ್ರಸಕ್ತ ವರ್ಷವು ಆಸ್ಟ್ರೇಲಿಯಾ ನಮ್ಮೊಂದಿಗೆ ಪಾಲುದಾರ ದೇಶವಾಗಿ ಕೈಜೋಡಿಸಿದೆ. ಪ್ರಮುಖ ತಂತ್ರಜ್ಞಾನ ರಾಷ್ಟ್ರಗಳಾದ ಅಮೆರಿಕ, ಕ್ಯೂಬಾ, ಉರುಗ್ವೆ, ರಷ್ಯಾ, ಇಂಗ್ಲೆಂಡ್, ಇಸ್ರೇಲ್, ಬೆಲ್ಜಿಯಂ, ಫಿನ್‌ಲ್ಯಾಂಡ್, ಫ್ರಾನ್ಸ್, ದುಬೈ, ಶಾರ್ಜಾ, ದಕ್ಷಿಣ ಕೊರಿಯಾ, ಜಪಾನ್, ಸಿಂಗಪುರ ಮತ್ತು ಥೈಲ್ಯಾಂಡ್ ದೇಶಗಳು ಸಮ್ಮೇಳನ ಮತ್ತು ಪ್ರದರ್ಶನದಲ್ಲಿ ಭಾಗವಹಿಸುತ್ತಿವೆ. ಮಧ್ಯಪ್ರದೇಶವು ಪಾಲುದಾರಿಕೆ, ಒಡಿಶಾ ಸಹ ಪಾಲುದಾರಿಕೆ ರಾಜ್ಯವಾಗಿದೆ. ನ.20 ರಂದು ಭವಿಷ್ಯ ರೂಪಿಸುವವರ ಸಮಾವೇಶದೊಂದಿಗೆ ಶೃಂಗಸಭೆ ಮುಕ್ತಾಯವಾಗಲಿದೆ. ಕೃತಕ ಬುದ್ಧಿಮತ್ತೆ, ಡೀಪ್‌ಟೆಕ್ ಸ್ಟಾರ್ಟ್ ಅಪ್‌ಗಳಲ್ಲಿ ಪ್ರಮುಖ ಹೂಡಿಕೆ ಘೋಷಣೆಗಳು, ಕರ್ನಾಟಕ ಯುನಿಕಾರ್ನ್ ಸ್ಥಾಪಕರ ಸನ್ಮಾನ ಮತ್ತು ಸಾಧಕರಿಗೆ ಪ್ರಶಸ್ತಿ ಪ್ರದಾನ ಒಳಗೊಂಡಿರಲಿದೆ.

ಬೆಂಗಳೂರಿನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಸುದ್ದಿಗೋಷ್ಠಿ ನಡೆಸಿದರು. ಕಿಯೊನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಇದ್ದರು.

ಬೆಂಗಳೂರು ಟೆಕ್ ಶೃಂಗಸಭೆಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಇಒವನ್ನು ಔಪಚಾರಿಕವಾಗಿ ಅನಾವರಣಗೊಳಿಸಲಿದ್ದಾರೆ. ಬಿಡುಗಡೆಯ ನಂತರ, ಇದನ್ನು ಶೃಂಗಸಭೆಯ ಉದ್ದಕ್ಕೂ ಸಾರ್ವಜನಿಕರಿಗೆ ಪ್ರದರ್ಶಿಸಲಾಗುತ್ತದೆ.

– ಪ್ರಿಯಾಂಕ್ ಖರ್ಗೆ
ಗ್ರಾಮೀಣಾಭಿವೃದ್ಧಿ ಮತ್ತು ಐಟಿ ಬಿಟಿ ಸಚಿವ

ಕೆಇಒಐಸಿಎಸ್ ಎಲೆಕ್ಟ್ರಾನಿಕ್ಸ್ ನಾವೀನ್ಯತೆಯ ಧ್ಯೇಯ ಮುನ್ನಡೆಸಿಕೊಂಡು ಹೋಗುವುದಕ್ಕೆ ಒಲವು ತೋರುತ್ತಿದೆ. ಓಪನ್-ಸೋರ್ಸ್ ಆರ್‌ಐಎಸ್ಸಿ-ವಿ ಸ್ಟ್ಯಾಕ್ ಅನ್ನು ಅಳವಡಿಸಿಕೊಳ್ಳುವ ಮೂಲಕ ಕೆಇಒ ಎಲ್ಲರಿಗೂ ಸುಲಭವಾಗಿ ಲಭ್ಯವಾಗುವ, ಸ್ಥಳೀಯವಾಗಿ ಅಳವಡಿಸಿಕೊಳ್ಳುವ, ರಾಜ್ಯದಲ್ಲಿಯೇ ಅಭಿವೃದ್ಧಿಪಡಿಸುವ ಕಂಪ್ಯೂಟಿಂಗ್ ಪರಿಹಾರಗಳಿಗೆ ಕರ್ನಾಟಕದ ಬದ್ಧತೆಯನ್ನು ಬಲಪಡಿಸುತ್ತದೆ.

– ಶರತ್ ಬಚ್ಚೇಗೌಡ
ಕಿಯೊನಿಕ್ಸ್ ಅಧ್ಯಕ್ಷ

ಕೈಗೆಟುಕುವ ದರದ ಪರ್ಸನಲ್ ಕಂಪ್ಯೂಟರ್ ಅಭಿವೃದ್ಧಿ

ಶ್ರೀಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಕಂಪ್ಯೂಟಿಂಗ್ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರವು ಅಗ್ಗದ ದರದ ಪರ್ಸನಲ್ ಕಂಪ್ಯೂಟರ್ ಅಭಿವೃದ್ಧಿಪಡಿಸಿದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೊನಿಕ್ಸ್) ಸಹಯೋಗದಲ್ಲಿ ವಿನ್ಯಾಸ ರೂಪಿಸಿ ಕೃತಕ ಬುದ್ಧಿಮತ್ತೆಯ ಪುಟ್ಟ ಗಾತ್ರದ ಮತ್ತು ಅಗ್ಗದ ಪರ್ಸನಲ್ ಕಂಪ್ಯೂಟರ್ (ಪಿಸಿ) ಅಭಿವೃದ್ಧಿಪಡಿಸಲಾಗಿದೆ. ಇದು ರಾಜ್ಯದಲ್ಲಿನ ಡಿಜಿಟಲ್ ಲಭ್ಯತೆಯ ಅಂತರ ನಿವಾರಿಸುವ ಗುರಿ ಹೊಂದಿದೆ. ದೇಶಿ ಕುಟುಂಬಗಳಲ್ಲಿ ಶೇ 10ಕ್ಕಿಂತ ಕಡಿಮೆ ಜನರು ಕಂಪ್ಯೂಟರ್ ಹೊಂದಿದ್ದಾರೆ. ಕರ್ನಾಟಕದಲ್ಲಿ ಇದರ ಪ್ರಮಾಣ ಕೇವಲ ಶೇ 15ರಷ್ಟಿದೆ. ಇದು ಜ್ಞಾನ ಆಧಾರಿತ, ಮಿತವ್ಯಯ ಮತ್ತು ಮುಕ್ತ-ಕಂಪ್ಯೂಟಿಂಗ್ (ಓಪನ್ ಸೋರ್ಸ್) ಕೆಇಒ ಸವಾಲಿಗೆ ಕರ್ನಾಟಕದ ಉತ್ತರವಾಗಿದೆ. ಲಿನಕ್ಸ್ ಆಧಾರಿತ ಆಪರೇಟಿಂಗ್ ಸಿಸ್ಟಮ್ (ಒಎಸ್) ಹೊಂದಿರುವ ಓಪನ್-ಸೋರ್ಸ್ ಆರ್‌ಐಎಸ್ಸಿ-ವಿ ಪ್ರೊಸೆಸರ್‌ನಲ್ಲಿ ನಿರ್ಮಿಸಿರುವ ಕೆಇಒ ಕೈಗೆಟುಕುವ ಬೆಲೆಯಲ್ಲಿ ಸಂಪೂರ್ಣ ಕಂಪ್ಯೂಟಿಂಗ್ ಬಳಕೆಯ ಅನುಭವ ನೀಡಲಿದೆ.

ಶೃಂಗಸಭೆಯಲ್ಲಿ 60 ದೇಶಗಳು ಭಾಗಿ

ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ನಡೆಯಲಿರುವ ಏಷ್ಯಾದ ಅತಿದೊಡ್ಡ ತಂತ್ರಜ್ಞಾನ ಮೇಳದಲ್ಲಿ 100ಕ್ಕೂ ಹೆಚ್ಚು ಸಭೆಗಳು, 500ಕ್ಕೂ ಹೆಚ್ಚು ಜಾಗತಿಕ ಭಾಷಣಕಾರರು, 1000ಕ್ಕೂ ಹೆಚ್ಚು ಪ್ರದರ್ಶಕರು, 15,000ಕ್ಕೂ ಹೆಚ್ಚು ಅತಿಥಿಗಳು ಮತ್ತು 60ಕ್ಕೂ ಹೆಚ್ಚು ದೇಶಗಳ 50,000ಕ್ಕೂ ಹೆಚ್ಚು ವಾಣಿಜ್ಯ ಸಂದರ್ಶಕರು ಭಾಗವಹಿಸಲಿದ್ದಾರೆ. ಶೃಂಗಸಭೆಯಲ್ಲಿ ಕೃತಕ ಬುದ್ಧಿಮತ್ತೆ(ಎಐ), ಕ್ವಾಂಟಂ ಕಂಪ್ಯೂಟಿಂಗ್ ಮತ್ತು ಜೈವಿಕ ತಂತ್ರಜ್ಞಾನದಂತಹ ಗಮನಾರ್ಹ ವೈಜ್ಞಾನಿಕ ಸಂಶೋಧನೆ ಅಥವಾ ಎಂಜಿನಿಯರಿಂಗ್ ನಾವೀನ್ಯತೆ ಆಧರಿಸಿರುವ ಕಂಪನಿಗಳು ಮತ್ತು ನವೋದ್ಯಮಗಳನ್ನು ಸ್ಥಾಪಿಸಿ-ಬೆಳೆಸುವ ಉದ್ದೇಶದ (ಡೀಪ್ ಟೆಕ್) ಯೋಜನೆಗೆ ಶೃಂಗಸಭೆ ಪೂರಕವಾಗಿ ಇರಲಿದೆ.

ಗಗನಯಾನಿ ಶುಭಾಂಶು ಶುಕ್ಲಾ ಆಕರ್ಷಣೆ

ಶೃಂಗಸಭೆಯು ನವೆಂಬರ್ 20ರಂದು ಭವಿಷ್ಯ ರೂಪಿಸುವವರ ಸಮಾವೇಶದೊಂದಿಗೆ (ಎಫ್‌ಎಂಸಿ) ಮುಕ್ತಾಯಗೊಳ್ಳಲಿದೆ. ತಂತ್ರಜ್ಞಾನ ಲೋಕದ ಯಶೋಗಾಥೆಗಳು, ಸಮರ್ಥ ಚಿಂತನೆಗಳು ಮತ್ತು ಸ್ಫೂರ್ತಿದಾಯಕ ಪಯಣಗಳನ್ನು ಇದು ಒಂದೆಡೆ ತರಲಿದೆ. ಗಗನಯಾನಿ ಶುಭಾಂಶು ಶುಕ್ಲಾ ಭಾಗವಹಿಸುವಿಕೆಯು ಸಮ್ಮಿಟ್‌ನ ಪ್ರಮುಖ ಆಕರ್ಷಣೆಯಾಗಿರಲಿದೆ. ವೊಕ್ಟ್ರೊನಿಕಾ ಹಾಗೂ ಸುಹಾನಿ ಶಾ ಅವರಿಂದ ಸಿಂಫೊನಿ ಆಫ್ ಸೌಂಡ್ ಆ್ಯಂಡ್ ಮೈಂಡ್ ಪ್ರದರ್ಶನ, ಲೇಖಕ ಅಂಕುರ್ ವಾರಿಕೂ ಅವರ ಸ್ಫೂರ್ತಿದಾಯಕ ಭಾಷಣಗಳು, ಕೈವಲ್ಯ ವೋಹ್ರಾ (ಸಹ-ಸಂಸ್ಥಾಪಕಿ, ಜೆಪ್ಟೊ) ಮತ್ತು ಟೆನ್ನಿಸ್ ತಾರೆ ಸಾನಿಯಾ ಮಿರ್ಜಾ ಮತ್ತು ಭಾರತದ ಮಹಿಳಾ ಕ್ರಿಕೆಟ್ ತಾರೆ ರಿಚಾ ಘೋಷ್ ಅವರ ಜತೆಗಿನ ಸಂವಾದ ಕೂಡ ಏರ್ಪಡಿಸಲಾಗಿದೆ.

ಪ್ರಮುಖರು ಭಾಗಿ

BENGALURU TECH SUMMIT 2025
Bangalore International Exhibition Centre
November 18-20, 2025

'ಭಾರತದ ಭವಿಷ್ಯ: ಆಮೂಲಾಗ್ರ ಹಾಗೂ ಸುಸ್ಥಿರ ಪರಿವರ್ತನೆ ಸಾಧಿಸುವ' ಸಮಾವೇಶವು ಸಮ್ಮಿಟ್‌ನ ಪ್ರಮುಖ ಆಕರ್ಷಣೆಯಾಗಿರಲಿದೆ. ಇದರಲ್ಲಿ ಇನ್ಫೋಸಿಸ್ ಸಹ-ಸಂಸ್ಥಾಪಕ ಹಾಗೂ ಕರ್ನಾಟಕ ಸರಕಾರದ ಐಟಿ ಮತ್ತು ಎಲೆಕ್ಟ್ರಾನಿಕ್ಸ್ ವಿಷನ್ ಗ್ರೂಪ್ ಅಧ್ಯಕ್ಷರೂ ಆಗಿರುವ ಕ್ರಿಸ್ ಗೋಪಾಲಕೃಷ್ಣನ್, ಬಯೋಕಾನ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷೆ ಹಾಗೂ ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷೆಯೂ ಅಗಿರುವ ಡಾ. ಕಿರಣ್ ಮಜುಂ ದಾರ್ ಶಾ, ಆ್ಯಕ್ಸೆಲ್ ಇಂಡಿಯಾದ ಸ್ಥಾಪಕ ಪಾಲುದಾರ ಹಾಗೂ ಸ್ಟಾರ್ಟ್‌ಅಪ್ ವಿಷನ್ ಗ್ರೂಪ್ ಅಧ್ಯಕ್ಷರೂ ಆಗಿರುವ ಪ್ರಶಾಂತ್ ಪ್ರಕಾಶ್ ಅವರು ಮಾತನಾಡಲಿದ್ದಾರೆ.

ಆರ್‌ಎಸ್‌ಎಸ್‌ಗೆ ಪರೋಕ್ಷ ಅಂಕುಶ: ರಾಜ್ಯ ಸರಕಾರಕ್ಕೆ ಮತ್ತೆ ಹಿನ್ನಡೆ

← ಮೊದಲಪುಟದಿಂದ ಈ ಹಿಂದೆ ಸರಕಾರ ನಿರ್ಬಂಧ ಆದೇಶವನ್ನು ಹೊರಡಿಸಿದ್ದಾಗ, ಅದನ್ನು ಪ್ರಶ್ನಿಸಿ ಪುನಶ್ಚೇತನ ಸೇವಾ ಸಂಸ್ಥೆ ಹೈಕೋರ್ಟ್ ಮೆಟ್ಟಿಲೇರಿತ್ತು. ಇದನ್ನು ಪುರಸ್ಕರಿಸಿದ್ದ ಧಾರವಾಡ ಪೀಠ, ಅ.28ಕ್ಕೆ ತಡೆ ನೀಡಿತ್ತು. ಇದೀಗ ಮತ್ತೆ ತಡೆಯಾಜ್ಞೆಯನ್ನು ವಿಸ್ತರಿಸಲಾಗಿದೆ. ತಡೆಯಾಜ್ಞೆಯನ್ನು ಅರ್ಜಿದಾರರಿಗೆ ಮಾತ್ರ ಸೀಮಿತಗೊಳಿಸಲು ಸರಕಾರದ ಪರದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮಾಡಿದ್ದ ಮನವಿಯನ್ನೂ ವಿಭಾಗೀಯ ಪೀಠ ತಿರಸ್ಕರಿಸಿತು.

ಸರಕಾರದ ಆದೇಶ ನಾಗರಿಕರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. ಹೀಗಾಗಿ ಮಧ್ಯಂತರ ಆದೇಶವನ್ನು ಅರ್ಜಿದಾರರಿಗೆ ಸೀಮಿತಗೊಳಿಸಲು ಸಾಧ್ಯವಿಲ್ಲ ಎಂದು ನ್ಯಾ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ತಿಳಿಸಿದೆ. ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ಗೆ ಏಕೆ ಹೋಗಲಿಲ್ಲ ಎಂದು ನ್ಯಾಯಮೂರ್ತಿಗಳು ಪ್ರಶ್ನಿಸಿದ್ದು, ಆ ಬಗ್ಗೆ ಯೋಚಿಸಲಾಗುತ್ತಿದೆ ಎಂದು ಎಜಿ ಶಶಿಕಿರಣ್ ಶೆಟ್ಟಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಆಕ್ಷೇಪಣೆ ಸಲ್ಲಿಸಲು ನ್ಯಾಯಪೀಠ ಸೂಚಿಸಿದ್ದು, ಅಡ್ವೋಕೇಟ್ ಜನರಲ್ 4 ವಾರಗಳ ಕಾಲಾವಕಾಶ ಕೇಳಿದ್ದಾರೆ. ಈ ಹಿನ್ನಲೆ ಡಿ.15ರವರೆಗೆ ಮಧ್ಯಂತರ ತಡೆಯಾಜ್ಞೆ ವಿಸ್ತರಿಸಿದ ಕೋರ್ಟ್, ಅಂದು ಮಧ್ಯಾಹ್ನ 2.30ಕ್ಕೆ ಮುಂದಿನ ವಿಚಾರಣೆ ನಿಗದಿಪಡಿಸಿದೆ. 10ಕ್ಕಿಂತ ಹೆಚ್ಚು ಜನರು ಸೇರುವುದಕ್ಕೆ ನಿರ್ಬಂಧ ವಿಧಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, ಪಾರ್ಕ್, ಮೈದಾನ ಎಲ್ಲವೂ ಸರಕಾರದ ಸ್ವತ್ತೆಂದು ಭಾವಿಸಬಾರದು. ಮೈದಾನದಲ್ಲಿ ಕ್ರಿಕೆಟ್ ಆಡಲೂ ಅನುಮತಿ ಬೇಕೆಂಬಂತೆ ನಿಯಮ ತರಲಾಗಿದೆ. ಪೊಲೀಸ್ ಕಾಯಿದೆಯ ಪ್ರಕಾರ ಕ್ರಮ ಕೈಗೊಳ್ಳುವ ಅಧಿಕಾರ ಜಿಲ್ಲಾ ದಂಡಾಧಿಕಾರಿಗೆ ಮಾತ್ರವಿದೆ ಎಂದಿದ್ದರು. ವಾದ-ಪ್ರತಿವಾದ ಆಲಿಸಿದ್ದ ಕೋರ್ಟ್ ಸರಕಾರದ ಪರವಾಗಿ ಸಲ್ಲಿಕೆಯಾದ ಮೇಲ್ಮನವಿ ವಜಾಗೊಳಿಸಿ, ಏಕಸದಸ್ಯ ಪೀಠದಲ್ಲೇ ಇದನ್ನ ಇತ್ಯರ್ಥ ಮಾಡಿಕೊಳ್ಳಿ ಎಂದಿತ್ತು.

ಗ್ಯಾಂಗ್ ರೇಪ್: ಐವರ ಬಂಧನ

ಕೊಪ್ಪಳ: ಜಿಲ್ಲೆಯ ಯಲಬುರ್ಗಾ ತಾಲೂಕು ಮದ್ಲೂರು ಗ್ರಾಮದ ಬಳಿ ಮಹಿಳೆಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದು, ಐವರನ್ನು ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತೆ ಕೊಪ್ಪಳ ಜಿಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗದಗ ಜಿಲ್ಲೆ ರೋಣ ತಾಲೂಕು ಸೂಡಿ ಗ್ರಾಮದ ಲಕ್ಷ್ಮಣ ಹಾಗೂ ಬಸಬರಾಜ, ಯಲಬುರ್ಗಾ ತಾಲೂಕು ಹನುಮಾಪುರ ಗ್ರಾಮದ ಭೀಮಪ್ಪ ಶಶಿಕುಮಾರ್ ಹಾಗೂ ಯಮನೂರ ಬಂಧಿತ ಆರೋಪಿಗಳು. ಸಂತ್ರಸ್ತೆ ದೂರು ಆಧರಿಸಿ ಯಲಬುರ್ಗಾ ಪೊಲೀಸ್ ಠಾಣೆಯಲ್ಲಿಪ್ರಕರಣ ದಾಖಲಾಗಿದೆ. ಆರೋಪಿಗಳ ಪೈಕಿ ಲಕ್ಷ್ಮಣ ಎಂಬಾತ ಮಹಿಳೆಗೆ ಪರಿಚಿತ. ಆಕೆಯಿಂದ 5 ಸಾವಿರ ಪಡೆದಿದ್ದ ಎನ್ನಲಾಗಿದೆ. ಹಣ ವಾಪಸ್ ಕೊಡುವುದಾಗಿ ಕುಷ್ಟಗಿಗೆ ಮಹಿಳೆಯನ್ನು ಕರೆಯಿಸಿಕೊಂಡು ಅತ್ಯಾಚಾರ ಮಾಡಿರುವುದಾಗಿ ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ

ನೊಂದ ಮಹಿಳೆ ಹೋಂ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದಳು ಎನ್ನಲಾಗಿದೆ. ಈ ಬಗ್ಗೆ ಕೊಪ್ಪಳ ಎಸ್ಪಿ ಪ್ರತಿಕ್ರಿಯಿಸಿ, ಹೋಂ ಗಾರ್ಡ್ ಆಗಲು ತರಬೇತಿ ಪಡೆಯುತ್ತಿದ್ದಳು ಎನ್ನಲಾಗುತ್ತಿದೆ. ನಾನು ಹೊಸಪೇಟೆ ಹೋಂ ಗಾರ್ಡ್ ಡಿವೈಎಸ್ಪಿಯಿಂದ ಮಾಹಿತಿ ಕೇಳಿದ್ದೇನೆ. ತನಿಖೆ ನಂತರ ಸಂಪೂರ್ಣ ಮಾಹಿತಿ ತಿಳಿಯಲಿದೆ ಎಂದು ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಜನಿವಾರ ತೆಗೆಸಿದ ದೈಹಿಕ ಶಿಕ್ಷಕನ ವಜಾ

ಕಾರ್ಕಳ: ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಆರೋಪದ ಮೇರೆಗೆ ಶಿಕ್ಷಕನನ್ನು ಕರ್ತವ್ಯದಿಂದ ವಜಾಗೊಳಿಸಿದ ಘಟನೆ ನ.17ರಂದು ಮಿಯ್ಯಾರು ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದಿದೆ. ಮೂಲತಃ ಕಲಬುರಗಿ ನಿವಾಸಿ, ದೈಹಿಕ ಶಿಕ್ಷಣ ಶಿಕ್ಷಕ ಮದರಶಾ ಎಸ್. ಮಕಾಂದರ್ ವಜಾಗೊಂಡ ಶಿಕ್ಷಕ. ಈ ಶಿಕ್ಷಕ 2025ರ ಜೂನ್ ತಿಂಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ವೃತ್ತಿಗೆ ಅತಿಥಿ ಶಿಕ್ಷಕರಾಗಿ ಇಲ್ಲಿಗೆ ಸೇರ್ಪಡೆಗೊಂಡಿದ್ದರು. ವಿದ್ಯಾರ್ಥಿ ಗಳಿಗೆ 200 ಬಸ್ಕಿ ಹೊಡೆಸುವುದು, ಧಾರ್ಮಿಕ ಭಾವನೆಗೆ ಧಕ್ಕೆ ಬರುವಂತ ಜನಿವಾರ ಮತ್ತು ಕೈಗೆ ಕಟ್ಟಿರುವ ದಾರ ತೆಗೆಯುವಂತೆ ಸೂಚಿಸುವುದು ಸಹಿತ ಮೊದಲಾದ ಶಿಕ್ಷೆಗಳನ್ನು ನೀಡುತ್ತಿದ್ದರು ಎಂದು ಮಕ್ಕಳು, ಪೋಷಕರು ಆರೋಪಿಸಿದ್ದಾರೆ. ಮಕ್ಕಳ ದೂರಿನ ಮೇರೆಗೆ ಪೋಷಕರು, ಊರವರು ಶಾಲೆಗೆ ಆಗಮಿಸಿ ಶಿಕ್ಷಕನನ್ನು ತರಾಟೆಗೆ ತೆಗೆದುಕೊಂಡರು. ಮಕಾಂದಾರ್‌ಗೆ ಈ ಬಗ್ಗೆ ಈ ಮೊದಲು ಅನೇಕ ಬಾರಿ ಎಚ್ಚರಿಕೆ ನೀಡಿದ್ದರೂ ಇದೇ ಪ್ರವೃತ್ತಿ ಮುಂದು ವರಿಸಿದ್ದಾರೆ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೇ ಮಕಾಂದರ್‌ನನ್ನು ಪ್ರಾಂಶು ಪಾಲರು ಶಾಲಾ ಕರ್ತವ್ಯದಿಂದ ವಜಾಗೊಳಿಸಿದ್ದಾರೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ:ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2025–26/4930 ದಿನಾಂಕ:15.11.2025
–: ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):–
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 1,2,3 &4 ರಲ್ಲಿ ಲೆಕ್ಕ ಶೀರ್ಷಿಕೆ: 2059 ಸುವರ್ಣಸೌಧ ಕಟ್ಟಡ ನಿರ್ವಹಣೆ, 4059–ಇಲಾಖಾ ಕಟ್ಟಡಗಳು, 3054 ರಾಜ್ಯ ಹೆದ್ದಾರಿ ನಿರ್ವಹಣೆ , 3054 ಜಿಲ್ಲಾ ಮುಖ್ಯ ರಸ್ತೆಗಳು ನಿರ್ವಹಣೆ, 5054 ಜಿಲ್ಲಾ ಮುಖ್ಯ ರಸ್ತೆಗಳು ಸುಧಾರಣೆ, 5054 ಜಿಲ್ಲಾ ಮುಖ್ಯ ರಸ್ತೆಗಳು ಸೇತುವೆ KRDCL, 5054 ರಾಜ್ಯ ಹೆದ್ದಾರಿ ಸೇತುವೆ KRDCL ಅಡಿಯಲ್ಲಿ ಸೇರಿ ಒಟ್ಟು 28 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 6.09 ಲಕ್ಷಗಳು ಹಾಗೂ ರೂ. 118.65 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 11,100/– ಹಾಗೂ ರೂ. 1,79,800/– ಇರುತ್ತದೆ. ಭಾಗ–1: ಟೆಂಡರ ಸ್ವೀಕರಿಸುವ ದಿನಾಂಕ 24.11.2025ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 25.11.2025 ರ ಸಂಜೆ 4.45 ಘಂಟೆ ನಂತರ ಭಾಗ–2:ಟೆಂಡರ ಸ್ವೀಕರಿಸುವ ದಿನಾಂಕ 26.11.2025 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 28.11.2025 ರ ಸಂಜೆ 4.45 ಘಂಟೆ ನಂತರ, ಭಾಗ–3:ಟೆಂಡರ ಸ್ವೀಕರಿಸುವ ದಿನಾಂಕ 08.12.2025 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 10.12.2025 ರ ಸಂಜೆ 4.45 ಘಂಟೆ ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 15.11.2025 ರ ನಂತರ ಪಡೆಯಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1330/KSMCA/2025-26

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ) ರವರ ಕಛೇರಿ, ಅಂತರಗಂಗೆ ರಸ್ತೆ, ಕುವೆಂಪು ನಗರ, ಕೋಲಾರ–563101.
E-mail: ctoenf2klr.bng@ctd.ka.gov.in, Phone No. 7760141569/0815222208
File No. CTO (ENF)-2/KLR/JCM/AUCTION/01/2025-26
Date: 15.11.2025
ಗ್ರಾನೈಟ್ ಸರಕು ಹರಾಜು ಪ್ರಕಟಣೆ
ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–1 & (ಜಾರಿ)–2, ಕೋಲಾರ ರವರು ರಸ್ತೆ ಜಾಗೃತಿ ಕರ್ತವ್ಯದಲ್ಲಿದ್ದಾಗ, ಖೊಟ್ಟಿ ಬಿಲ್ಲುಗಳೊಂದಿಗೆ ತೆರಿಗೆ ವಂಚನೆಯ ಉದ್ದೇಶದಿಂದಲೇ ಗ್ರಾನೈಟ್ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದುದು ಸಾಬೀತಾಗಿದ್ದು, ಸಂಬಂಧಪಟ್ಟ ವ್ಯಕ್ತಿಗಳು ದಂಡವನ್ನು ಪಾವತಿಸದ ಕಾರಣ ಈ ಕೆಳಕಂಡ ಪ್ರಮಾಣದ ಗ್ರಾನೈಟ್‌ಗಳನ್ನು, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017, ಕಲಂ 130 ರಡಿ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ. **(1)** ಲಾಟ್ ನಂ. (1) ರಲ್ಲಿ 7221 ಚದರ ಅಡಿಗಳು, ಒಟ್ಟು ಮೌಲ್ಯ ರೂ. 426040/– **(2)** ಲಾಟ್ ನಂ. (2) ರಲ್ಲಿ 5870 ಚದರ ಅಡಿಗಳು, ಒಟ್ಟು ಮೌಲ್ಯ ರೂ. 346330/– **(3)** ಲಾಟ್ ನಂ. (3) ರಲ್ಲಿ 3150 ಚದರ ಅಡಿಗಳು, ಒಟ್ಟು ಮೌಲ್ಯ ರೂ. 185850/– **(4)** ಲಾಟ್ ನಂ.(4) ರಲ್ಲಿ 6500 ಚದರ ಅಡಿಗಳು, ಒಟ್ಟು ಮೌಲ್ಯ ರೂ. 383500/– ಸದರಿ ಸರಕುಗಳನ್ನು ಸರ್ಕಾರದ ರಾಜಸ್ವ ಹಿತದೃಷ್ಠಿಯಿಂದ "ಹೇಗೆ ಇದೆಯೋ ಹಾಗೆಯೇ" ಇರುವ ಸ್ಥಿತಿಯಲ್ಲಿ **ದಿನಾಂಕ: 09.12.2025ರಂದು** ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಆಸಕ್ತಿಯುಳ್ಳ ಖರೀದಿದಾರರು ತಮ್ಮ ಬಿಡ್ ಮೊತ್ತವನ್ನೊಳಗೊಂಡ ಸೀಲ್ ಮಾಡಿದ ಬಿಡ್ ಲಕೋಟೆಯನ್ನು ನಿಗದಿಪಡಿಸಿದ **ಇಎಂಡಿ ಪ್ರತಿ ಲಾಟ್‌ಗೆ ಮೊತ್ತ ರೂ. 20,000/–ಗಳ ಡಿಡಿಯನ್ನು** Commercial Tax Officer (Enforcement)-2, Kolar ಇವರ ಹೆಸರಿನಲ್ಲಿ ಪಡೆದುಕೊಂಡು **ದಿನಾಂಕ: 08.12.2025ರ ಸಂಜೆ 5:00 ಗಂಟೆಯ ಒಳಗಾಗಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, (ಜಾರಿ), ಕೋಲಾರ ರವರ ಕಛೇರಿಯಲ್ಲಿ ತಲುಪಿಸುವುದು.** ಸದರಿ ಸೀಲು ಮಾಡಿದ ಲಕೋಟೆಗಳನ್ನು **ದಿನಾಂಕ: 09.12.2025ರ ಪೂರ್ವಾಹ್ನ 11:00 ಗಂಟೆಗೆ** ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, (ಜಾರಿ), ಕೋಲಾರ ರವರ ಕಛೇರಿಯಲ್ಲಿ ತೆರೆಯಲಾಗುವುದು. ಆಸಕ್ತಿಯುಳ್ಳ ಖರೀದಿದಾರರು ಬಿಡ್‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ, ಷರತ್ತುಗಳು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹಿರಾತು ಫಲಕ ಮತ್ತು ಇಲಾಖೆಯ ಅಂತರಜಾಲತಾಣ **https://gst.kar.nic.in/tenderAuction.aspx** ದಲ್ಲಿ ಪ್ರಕಟಿಸಲಾಗಿದೆ.
ಸಹಿ/– ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–2, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:359/ಕೆಎಸ್‌ಎಂಸಿಎ/2025–26

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು–570010.
ದೂರವಾಣಿ (ಕಛೇರಿ): 0821–2523626
e-mail::exhibitionauthority@gmail.com
ಸಂಖ್ಯೆ/ಕವಪ್ರಾ/ಮುಕಾನಿ/2025–26 ದಿನಾಂಕ: 17.11.2025
ಪ್ರಕಟಣೆ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ "ಇ" ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡಂತ್ತಿದೆ.
ಕ್ರ.ಸಂ.01 ಕಾಮಗಾರಿಯ ಹೆಸರು: Providing Chainlink Fencing, Cobble stone Pathway, M.S.Gallery Steps, Entrance Steps and M.S.Gate, Seating Arrangement above Chlorination Room, Streetlight Pole and Lawn area Gravel Work other allied works inside Dragon Pond area at Karnataka Exhibition Premises, Mysuru. **ಟೆಂಡರ್‌ನ ಮೊತ್ತ:** Rs.50,98,987/- **ಟೆಂಡರ್ ಸಲ್ಲಿಸಲು ಕೊನೆ ದಿನಾಂಕ:** 24.11.2025 AT 1 PM.
ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್), ರವರನ್ನು ಸಂಪರ್ಕಿಸಿ ಹಾಗೂ ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ.
ಮೊಬೈಲ್ ಸಂಖ್ಯೆ: 9900568915, 7892920878.
ಇ–ಮೇಲ್ ಸಂಖ್ಯೆ: exhibitionauthority@gmail.com
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು.
DIPR/DDMYS/1240/KSMCA/687/2025-26

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ ನಂ.21/1,1ನೇ ಮಹಡಿ, ಜೆಲ್ಲೇಟಾ ಟವರ್, ಮಿಷನ್ ರಸ್ತೆ ಸಂಪಂಗಿರಾಮನಗರ, ಬೆಂಗಳೂರು–560072.
ಫೋನ್: 080–22240449 Email:dswourban@gmail.com
ಸಂಖ್ಯೆ:ಜನಿ.ಸ.ಕ.ಇ/ಬೆಂ(ನ)/ಲೆಕ್ಕ/ಸಿಆರ್–38/2025–26 ದಿನಾಂಕ: 17.11.2025
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
2025–26 ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು / ಜಿಲ್ಲಾ ಕಛೇರಿ, ಡಾ॥ ಬಿ.ಆರ್ ಅಂಬೇಡ್ಕರ್ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳು, ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು/ ಆಶ್ರಮ ಶಾಲೆಗಳಲ್ಲಿ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಸಲಾಗುತ್ತಿರುವ ಮೊರಾರ್ಜಿದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಚಾಮರಾಜಪೇಟೆ, ಅತ್ತಿಬೆಲೆ ಹಾಗೂ ತೆಲಗರಹಳ್ಳಿ ಇಲ್ಲಿ ಖಾಲಿ ಇರುವ ದತ್ತಾಂಶ ನಮೂದು ಸಹಾಯಕರು/ ಅಡುಗೆಯವರು/ ಅಡುಗೆ ಸಹಾಯಕರು/ ರಾತ್ರಿಕಾಲುಗಾರರು/ ವಾಹನ ಚಾಲಕರು/ ಸ್ವಚ್ಛತೆಗಾರರು/ಶುಶ್ರೂಷಕಿಯರು/ಕಛೇರಿ ಜವಾನರುಗಳ ಹುದ್ದೆಗಳಿಗೆ, **ಅಲ್ಪಾವಧಿ ಇ–ಟೆಂಡರ್** ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಸಂಸ್ಥೆಗಳು **ದಿನಾಂಕ: 17.11.2025 ರಿಂದ 08.12.2025 ರವರೆಗೆ ಸಂಜೆ 5.00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮುಖಾಂತರ ಅಪ್‌ಲೋಡ್ ಮಾಡಬಹುದಾಗಿದೆ.

ಕ್ರ ಸಂ	ಜಿಲ್ಲೆಯ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ
01	ಬೆಂಗಳೂರು ನಗರ ಜಿಲ್ಲೆ	ರೂ. 9,45,00,0000/–	ರೂ. 14,17,500/–

ಹೆಚ್ಚಿನ ವಿವರಗಳಿಗೆ ಜಂಟಿ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ನಗರ ಜಿಲ್ಲೆ ನಂ.21/1, 1ನೇ ಮಹಡಿ, ಜೆಲ್ಲೇಟಾ ಟವರ್, ಮಿಷನ್ ರಸ್ತೆ, ಸಂಪಂಗಿರಾಮನಗರ ಬೆಂಗಳೂರು–560027 ದೂರವಾಣಿ ಸಂಖ್ಯೆ: **080–22240448/ 22240449** ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾಪ್ರ/ಶಿರಡಿ ಸಾಯಿ/3848/2025–26

ಪುರಸಭಾ ಕಾರ್ಯಾಲಯ ಅಂಕೋಲಾ (ಉ.ಕ) 581314
ದೂರವಾಣಿ/ಫ್ಯಾಕ್ಸ್: 08388-230268 Website: www.ankolatown.mrc.gov.in
Email: itstaff_ulb_ankola@yahoo.com, co_ankola@yahoo.in
ಕ್ರ: ಪುಸ.ಅಂ.ಕಾವಿ.ಟೆ.ಪ್ರ:14.ವಿವ:2025–26 ದಿನಾಂಕ: 17/11/2025
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ ಪ್ರಕಟಣೆ)
ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000 ರ ಪ್ರಕಾರ ಆಕ್ಟ 2000 ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ 2025–26 ನೇ ಸಾಲಿನ ಪೌರಕಾರ್ಮಿಕ ಗೃಹಭಾಗ್ಯ ಯೋಜನೆಯಡಿ 02 ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.kppp.karnataka.gov.in ರಲ್ಲಿ ಭಾಗವಹಿಸಬಹುದು. ಹಾಗೂ ಹೆಚ್ಚಿನ ಮಾಹಿತಿಯನ್ನು ಹಾಗೂ ಶರ್ತುಗಳನ್ನು ಈ ಕಾರ್ಯಾಲಯದಿಂದ ಕಛೇರಿ ವೇಳೆಯಲ್ಲಿ ಖುದ್ದಾಗಿ ಅಥವಾ www.ankolatown.mrc.gov.in ನಲ್ಲಿ ಪಡೆಯಬಹುದಾಗಿದೆ.
(1) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 08/12/2025 ಸಾಯಂಕಾಲ 4:30 ಗಂಟೆಯೊಳಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ: 09/12/2025 ಸಾಯಂಕಾಲ 5:00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ & ವೇಳೆ: 09/12/2025 ಸಾಯಂಕಾಲ 5:00 ಗಂಟೆಗೆ.
ಸಹಿ/– ಮುಖ್ಯಾಧಿಕಾರಿ,
ಪುರಸಭೆ ಅಂಕೋಲಾ
DIPR/ADK/KSMCA/1506/25-26 dt: 17.11.2025

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/12/2025–26 ದಿನಾಂಕ: 17–11–2025
ಸಾರ್ವಜನಿಕ ಪ್ರಕಟಣೆ
ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕಲ್ಲಹಳ್ಳಿ ಗ್ರಾಮದ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1	ಶ್ರೀಮತಿ ನಾರಾಯಣಮ್ಮ ಕೋಂ ಲೇಟ್ ಕೃಷ್ಣಪ್ಪ	28/1	01-01
2		28/3	00-15 1/2
3		56/1	01-14 1/2

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆ / ವಸತಿ ಸಮುಚ್ಛಯ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶ / ಮನೆಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.
ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/3862/ಅಡ್ವರ್ಟೋರ್/2025–26

ಸಮಾಚಾರ ಸಣ್ಣದಲ್ಲ

ಬಿಹಾರದಲ್ಲಿ 84 ಲಕ್ಷ ಮತಕಳ್ಳತನ: ಲಾಡ್

ಬೀದರ್: ಬಿಹಾರದಲ್ಲಿ 84 ಲಕ್ಷ ಮತಗಳ ಕಳ್ಳತನವಾಗಿದೆ. ವಿಧಾನಸಭೆ ಚುನಾವಣೆಗೂ ಮುನ್ನ ಮತದಾರರ ಪಟ್ಟಿಯಿಂದ 65 ಲಕ್ಷ ಮತದಾರರ ಮತಗಳನ್ನು ತೆಗೆದು, ಹೊಸದಾಗಿ 25 ಲಕ್ಷ ಮತದಾರರ ಹೆಸರು ಸೇರಿಸಿದ್ದಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 100 ಸೀಟುಗಳಲ್ಲಿ ಸ್ಪರ್ಧಿಸಿದೆ. ಇದರಲ್ಲಿ 90ರಲ್ಲಿ ಗೆದ್ದಿದೆ. ಬಿಹಾರವೇನೂ ಅಮೆರಿಕನಾ? ಬೆಂಗಳೂರಿನಲ್ಲಿ ಟಾರ್ಚ್ ಹಾಕಿ ಹುಡುಕಿದರೆ ಮನೆ ಮನೆಯಲ್ಲಿ ಬಿಹಾರಿಗಳು ಸಿಗುತ್ತಾರೆ. ಬಿಜೆಪಿ ಬಿಹಾರದಲ್ಲಿ 90 ಸೀಟ್ ಗೆಲ್ಲಲು ಅವರೇನು ಸಾಧನೆ ಮಾಡಿದ್ದಾರೆ? ಎಂದು ಪ್ರಶ್ನಿಸಿದರು.ಚುನಾವಣಾ ಆಯೋಗವು ಎಸ್ಐಆರ್ ಹೆಸರಿನಲ್ಲಿ 65 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿದೆ. ಸುಪ್ರೀಂಕೋರ್ಟ್ ಹೇಳಿದರೂ ಪುನಃ ಸೇರಿಸಲಿಲ್ಲ. ಚುನಾವಣೆಗೆ ಒಂದು ತಿಂಗಳು ಇರುವಾಗ ಹೆಣ್ಣು ಮಕ್ಕಳ ಖಾತೆಗೆ ₹10 ಸಾವಿರ ಜಮೆ ಮಾಡಿದ್ದಾರೆ. ಬಿಜೆಪಿ ಕೇಂದ್ರದಲ್ಲಿ 11 ವರ್ಷಗಳಿಂದ ಆಡಳಿತ ನಡೆಸುತ್ತಿದೆ. ಹೀಗೆ ಹಣ ಕೊಡುವ ಉದ್ದೇಶವಾದರೂ ಏನು? ಎಂದು ಕೇಳಿದರು.

ಅತ್ಯಾಚಾರ ಆರೋಪಿಗೆ 20 ವರ್ಷ ಜೈಲು ಶಿಕ್ಷೆ

ಮೈಸೂರು: ಪುಸಲಾಯಿಸಿ ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿದ ಅಪರಾಧ ಸಾಬೀತಾಗಿದ್ದು, ಕಿರಣ ಎಂಬಾತನಿಗೆ ಪೋಕ್ಸೋ ಕಾಯ್ದೆಯಡಿ ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕಠಿಣ ವಿಧಿಸಿ ಆದೇಶಿಸಿದೆ. ಪಿರಿಯಾಪಟ್ಟಣ ತಾಲೂಕಿನ ದಡಘಟ್ಟ ಗ್ರಾಮದ ಆರೋಪಿ ಕಿರಣ ಬೆಟ್ಟದಪುರ ಠಾಣಾ ವ್ಯಾಪ್ತಿಯ ಗ್ರಾಮವೊಂದರ ಅಪ್ರಾಪ್ತೆಯನ್ನು ಮದುವೆಯಾಗುವುದಾಗಿ ಪುಸಲಾಯಿಸಿ ಹುಬ್ಬಳ್ಳಿಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಆರೋಪಿಗೆ ಈಗಾಗಲೇ ಮದುವೆಯಾಗಿದ್ದರೂ ಸಹ ಅಪ್ರಾಪ್ತಯನ್ನು ವಿವಾಹವಾಗಿ ಹುಬ್ಬಳ್ಳಿಯಲ್ಲಿ ನಿರಂತರ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಾರ್ಚ್ 23 2022 ರಂದು ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಪೋಕ್ಸೋ ಕಾಯಿದೆಯಡಿ 20 ವರ್ಷ ಕಠಿಣ ಸಜೆ, 5,000 ದಂಡ, ಅಪಹರಣ ಅಪರಾಧಕ್ಕೆ 10 ವರ್ಷ ಸಾದಾ ಸಜೆ, 5,000 ದಂಡ, ಬಾಲ್ಯ ವಿವಾಹಕ್ಕೆ 1 ವರ್ಷ ಸಾದಾ ಸಜೆ ಹಾಗೂ 5,000 ವಿಧಿಸಿ ಗಳ ದಂಡ ವಿಧಿಸಿ ನ್ಯಾ.ಆನಂದ್ ಪಿ.ಹೊಗಾಡೆ ತೀರ್ಪು ಪ್ರಕಟಿಸಿದ್ದಾರೆ. ಕೆ.ಬಿ. ಜಯಂತಿ ವಾದ ಮಂಡಿಸಿದ್ದರು.

ರಾಜ್ಯದ ಹಲವೆಡೆ ಶೀತಗಾಳಿ: ಮುನ್ಸೂಚನೆ

ವಿಜಯಪುರ: ನವೆಂಬರ್ 18 ರಿಂದ 21 ರ ವರೆಗಿನ ಜಿಲ್ಲೆ ಸೇರಿದಂತೆ ರಾಜ್ಯದ ಹಲವೆಡೆ ಶೀತಗಾಳಿ ಬೀಸಲಿದ್ದು, ಕನಿಷ್ಠ ತಾಪಮಾನ ದಾಖಲಾಗಲಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮುನ್ಸೂಚನೆ ನೀಡಿದೆ. ನವೆಂಬರ್ 18 ರಿಂದ 20 ರವರೆಗೆ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ 4 ರಿಂದ 6 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಾಗುವ ಸಾಧ್ಯತೆಯಿದೆ. ಈ ಪ್ರದೇಶಗಳಲ್ಲಿ ತೀವ್ರ ಶೀತಗಾಳಿಯು ಬೀಸಲಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

15 ಶಾಸಕರಿಗೆ ಸಚಿವ ಸ್ಥಾನ ನೀಡಿದರೆ ಒಳ್ಳೆಯದು

ದಾವಣಗೆರೆ: ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಡಿಸೆಂಬರ್ ಮುಗಿಯುವವರೆಗೂ ಏನೂ ಮಾತನಾಡುವುದಿಲ್ಲ. ಜನವರಿ 1 ರಂದೇ ಮಾತನಾಡುತ್ತೇನೆ ಎನ್ನುವ ಮೂಲಕ ಚನ್ನಗಿರಿ ಶಾಸಕ ಬಸವರಾಜ್ ವಿ. ಶಿವಗಂಗಾ ನಾಯಕತ್ವದ ಬದಲಾವಣೆ ಬಗ್ಗೆ ಪರೋಕ್ಷ ಸೂಚನೆ ನೀಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸಚಿವ ಸಂಪುಟ ವಿಸ್ತರಣೆ ಯಾಗಿ, ಹೊಸಬರಿಗೆ ಅವಕಾಶ ನೀಡಿದರೆ ಯಾರು ಬೇಡ ಎನ್ನುತ್ತಾರೆ. ಆದರೆ, ನನ್ನ ಅಜೆಂಡಾನೇ ಬೇರೆ ಇದೆ. ಈಗಾಗಲೇ ನನ್ನ ಅಜೆಂಡಾ ಹೇಳಿದ್ದೇನಲ್ಲ ಎಂದು ಮಾರ್ಮಿಕ ವಾಗಿ ತಿಳಿಸಿದರು. ಸಂಪುಟ ವಿಸ್ತರಣೆಯ ವೇಳೆ ಹೊಸದಾಗಿ 15 ಶಾಸಕರಿಗೆ ಸಚಿವ ಸ್ಥಾನ ನೀಡಿದರೆ ಒಳ್ಳೆಯದು. ಹಳೆ ಬೇರು, ಹೊಸ ಚಿಗುರು ಅನ್ನುವಂತೆ ಅಭಿವೃದ್ಧಿ ಕೆಲಸ ಆಗುತ್ತವೆ. ಹೊಸ ಶಾಸಕರು ಹೊಸ ಆಲೋಚನೆಯೊಂದಿಗೆ ಹಲವಾರು ಅಭಿವೃದ್ಧಿ ಕಾರ್ಯಗಳು ಸರಾಗ ವಾಗಿ ಆಗುತ್ತವೆ. ನೂತನವಾಗಿ ಆಯ್ಕೆಯಾಗಿರು ವಂತಹ 15 ಶಾಸಕರಿಗೆ ಸಚಿವ ಸ್ಥಾನ ನೀಡಿದರೆ ಬಹಳ ಒಳ್ಳೆಯದು ಎಂದು ಪ್ರಶ್ನೆ ಯೊಂದಕ್ಕೆ ಉತ್ತರಿಸಿದರು.

ದಾವಣಗೆರೆ ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನ ನೀಡಿದರೆ ಒಳ್ಳೆಯದಾಗುತ್ತದೆ. ನನ್ನೊಂದಿಗೆ ಜಗಳೂರು ದೇವೇಂದ್ರಪ್ಪ, ಮಾಯಕೊಂಡದ ಕೆ.ಎಸ್.ಬಸವಂತಪ್ಪ ಹೊಸ ಶಾಸಕರಿದ್ದೇವೆ. ಮೂವರಲ್ಲಿ ಒಬ್ಬರಿಗೆ ಸಚಿವ ಸ್ಥಾನ ನೀಡಲಿ ಎಂದರು.

ವಿಶ್ವವಾಣಿ ಕ್ಲಬ್ ಹೌಸ್
18.11.2025
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಡಾ. ನಾ ಸೋಮೇಶ್ವರ
ವಿಷಯ
ಒಂದಾನೊಂದು ಕಾಲದಲ್ಲಿ ಬೆಂಗಳೂರು
vishwavani.news

ರಮಣಶ್ರೀ ಪ್ರಶಸ್ತಿ ಪ್ರದಾನ, ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಚಿವ ಎಂ.ಬಿ.ಪಾಟೀಲ ಘೋಷಣೆ

ಬಸವಾದಿ ಶರಣರ ಕುರಿತ ಕೃತಿಗಳಿಗೆ ₹ 5 ಕೋಟಿ ದೇಣಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಸವಾದಿ ಶರಣರು ಮತ್ತು ಅನುಭವ ಮಂಟಪದಲ್ಲಿನ ಚಿಂತನೆಗಳ ಕುರಿತು ಇಂಗ್ಲಿಷ್‌ನಲ್ಲಿ ಜಾಗತಿಕ ಮಟ್ಟದ ಪುಸ್ತಕಗಳು ಹೊರಬರಬೇಕಾಗಿದೆ. ಇದಕ್ಕಾಗಿ ತಾವು 5 ಕೋಟಿ ರು. ದೇಣಿಗೆ ಕೊಡಲಿದ್ದೇನೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶೀ ಪ್ರತಿಷ್ಠಾನ ಸೋಮವಾರ ಏರ್ಪಡಿಸಿದ್ದ 'ರಮಣಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕದ ಸಾಧಕರಾದ ಫ.ಗು. ಹಳಕಟ್ಟಿ, ಸರ್ ಸಿದ್ದಪ್ಪ ಕಂಬಳಿ, ಲಿಂಗರಾಜ ದೇಸಾಯಿ, ಬಂತನಾಳದ ಪೂಜ್ಯರು, ಸಿದ್ದೇಶ್ವರ ಸ್ವಾಮೀಜಿ ಮುಂತಾದವರ ಬಗ್ಗೆ ಕೂಡ ನಮ್ಮಲ್ಲಿ ಪುಸ್ತಕಗಳು ಪ್ರಕಟವಾಗಬೇಕು. ಹಾಗೆಯೇ ಬೆಂಗಳೂರು ಭಾಗದ ಸರ್ ಪುಟ್ಟಣ್ಣ ಚೆಟ್ಟಿ ಅಂಥವರ ಬಗ್ಗೆಯೂ ತಿಳಿಯಬೇಕು. ಈ ಮೂಲಕ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವ ಭೇದ ಅಳಿಯಬೇಕು ಎಂದು ಸಲಹೆ ನೀಡಿದ್ದಾರೆ.

ಫ.ಗು.ಹಳಕಟ್ಟಿ ಅವರು ಇಲ್ಲದೆ ಹೋಗಿದ್ದರೆ ಬಸವ ಧರ್ಮವಾಗಲಿ, ವಚನ ಸಾಹಿತ್ಯವಾಗಲಿ, ನೂರಾರು ವಚನಕಾರರಾಗಲಿ ಬೆಳಕಿಗೆ ಬರುತ್ತಿರಲಿಲ್ಲ. ಅವರು ಮತ್ತು ಬಂತನಾಳದ ಪೂಜ್ಯರು ಸರ್ವಸ್ವವನ್ನೂ ತ್ಯಾಗ ಮಾಡಿ ವಚನ ಯುಗದ ಬಗ್ಗೆ ಬೆಳಕು ಚೆಲ್ಲುವ ಮಹಾನ್ ಕೆಲಸ ಮಾಡಿಹೋಗಿದ್ದಾರೆ. ಹಳಕಟ್ಟಿ ಅವರು ಆರಂಭಿಸಿದ್ದ 'ಶಿವಾನುಭವ' ಪತ್ರಿಕೆಯನ್ನು ಸದ್ಯದಲ್ಲೇ ಪುನಾರಂಭ ಮಾಡಲಾಗುವುದು ಎಂದು ಹೇಳಿದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಬಸವಣ್ಣ ಯುನಿವರ್ಸಲ್ ವ್ಯಕ್ತಿ, ಅದಕ್ಕೆ ಅವರನ್ನು ಜಗಜ್ಯೋತಿ ಬಸವೇಶ್ವರ ಎಂದು ಕರೆಯುತ್ತಾರೆ. ಜಗತ್ತಿಗೆ ಜ್ಯೋತಿ ಕೊಡುವ ಶಕ್ತಿ ಬಸವಣ್ಣ. ನಾವ್ಯಾರು ದೇವರಾಗಲು ಬಂದಿಲ್ಲ, ದೇವರಾಗಬಾರದು. ಬಸವಣ್ಣನ ಹಾಗೇ ಒಳ್ಳೆಯ ಮಾನವ ಆಗಬೇಕು. ಸಂಸಾರದಲ್ಲಿರುವ ಮಾನವ ಅತ್ಯಂತ ಸಾರ್ಥಕ ಬದುಕು ನಡೆಸಿದರೆ. ಅವನು ದೇವರ ಸರಿ ಸಮಾನ ಆಗುತ್ತಾನೆ. ನಾವು ಪರಿಪೂರ್ಣ ಆಗಲು ಇಡೀ ಜೀವನ ಬೇಕು. ನನ್ನ ಜೀವನದ ಹುಟ್ಟಿದ ಗುರಿ, ಕಾರಣ ಏನು, ಅಡಚಣೆ ಏನು, ಅದನ್ನು ಹೇಗೆ ಸಾಧಿಸಬೇಕು ಎಂದು ತಿಳಿಯಬೇಕು. ಅಂತಹ ಗುರಿಯನ್ನು ಷಡಕ್ಷರಿಯವರು ಸಾಧಿಸಿದ್ದಾರೆ ಎಂದು ಹೇಳಿದರು.

ಷಡಕ್ಷರಿ ಅವರ ಹೆಸರಿನಲ್ಲಿಯೇ ಅಕ್ಷರ ಇದೆ. ಅವರ ಕ್ಷಣ ಹೊತ್ತು ಆಣಿ ಮುತ್ತು ಓದಿದವರಿಗೆ ಗೊತ್ತು. ಒಂದು ವಿಚಾರ ಹೇಳುವ ಶೈಲಿಯಲ್ಲಿ ಜನರನ್ನು ಆಕರ್ಷಿಸಬೇಕು. ವಚನ ಸಾಹಿತ್ಯ ಯಾಕೆ ಅಷ್ಟು ಜನಪ್ರಿಯವಾಯಿತು ಅಂದರೆ ಶರಣರು ಬದುಕಿಗೆ ಹತ್ತಿರವಾಗಿರುವ ವಿಚಾರಗಳನ್ನು ಅತ್ಯಂತ ಪ್ರೀತಿಯಿಂದ ಮಾರ್ಮಿಕವಾಗಿ ಕಠೋರವಾಗಿ ಹೇಳಿದ್ದಾರೆ. ವಚನಕಾರರು ಬದುಕಿನ ಚಿಂತನೆ ಮಾಡಿದ್ದಾರೆ ಎಂದು ನುಡಿದರು. ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಅವರು ಸಾಧಕರಿಗೆ ರಮಣ ಶ್ರೀ ಶರಣ ಪ್ರಶಸ್ತಿ ನೀಡಿ ಗೌರವಿಸಿದರು. ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ಅವರು ಲೇಖಕ ಎಸ್.ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು-ಭಾಗ 15' ಎಂಬ ಪುಸ್ತಕ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್, ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸಿ.ಸೋಮಶೇಖರ, ಹಿರಿಯ ಸಾಹಿತಿ ಗೋ.ರು.ಚನ್ನಬಸಪ್ಪ, ಲೇಖಕ ಷಡಕ್ಷರಿ ಹಾಜರಿದ್ದರು.

ರಮಣಶೀ ಪ್ರತಿಷ್ಠಾನ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಸ್.ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು-ಭಾಗ 15' ಎಂಬ ಪುಸ್ತಕವನ್ನು ಸೋಮವಾರ ಬಿಡುಗಡೆ ಮಾಡಲಾಯಿತು. ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ, ಸಚಿವ ಎಂ.ಬಿ.ಪಾಟೀಲ್, ಕೇಂದ್ರ ಸಚಿವ ವಿ.ಸೋಮಣ್ಣ, ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸಿ.ಸೋಮಶೇಖರ, ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ಸೇರಿದಂತೆ ಮತ್ತಿತರರಿದ್ದರು. ಈ ವೇಳೆ ಲೇಖಕ ಎಸ್.ಷಡಕ್ಷರಿ ಅವರನ್ನು ಅಭಿನಂದಿಸಲಾಯಿತು.

ಸಾಧಕರಿಗೆ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ

ಡಾ.ಜಯ ರಾಜಶೇಖರ್ ಅವರಿಗೆ 'ರಮಣಶ್ರೀ ಶರಣ ಜೀವಮಾನ ಸಾಧನೆ ಸನ್ಮಾನ' ನೀಡಿ ಗೌರವಿಸಲಾಯಿತು. ಅಲ್ಲದೆ, ಡಾ.ವಿಜಯಶ್ರೀ ಸಬರದ (ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆ), ಪ್ರೊ. ಎಚ್.ಲಿಂಗಪ್ಪ (ಆಧುನಿಕ ವಚನ ರಚನೆ), ಡಾ.ಜಯದೇವಿ ಜಂಗಮಶೆಟ್ಟಿ (ವಚನ ಸಂಗೀತ) ಹಾಗೂ ವಚನ ಜ್ಯೋತಿ ಬಳಗಕ್ಕೆ (ಶರಣ ಸಂಸ್ಕೃತಿ ಪ್ರಸಾರ ಸೇವಾ ಸಂಸ್ಥೆ) 'ರಮಣಶ್ರೀ ಶರಣ ಹಿರಿಯ ಶ್ರೇಣಿ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು. ಅದೇ ರೀತಿ, ಡಾ.ಉಷಾದೇವಿ (ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆ), ಎಂ.ಬಿ.ಸಂತೋಷ್ (ಆಧುನಿಕ ವಚನ ರಚನೆ), ರಾಜು ಎಮ್ಮಿಗನೂರು (ವಚನ ಸಂಗೀತ) ಹಾಗೂ ಸಗರನಾಡು ಪ್ರಕಾಶನ ಸುರಪುರ (ಶರಣ ಸಂಸ್ಕೃತಿ ಪ್ರಸಾರ ಸೇವಾ ಸಂಸ್ಥೆ) ಅವರಿಗೆ ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ ನೀಡಲಾಯಿತು. ಇದರೊಂದಿಗೆ, ಪ್ರಿಯಾಂಕ ಪ್ರವೀಣ್ ಹಾವೇರಿ ಅವರಿಗೆ 'ರಮಣಶ್ರೀ ಶರಣ ವಿಶೇಷ ಪ್ರೋತ್ಸಾಹ ಪುರಸ್ಕಾರ' ನೀಡಿ ಗೌರವಿಸಲಾಯಿತು.

ಕಳೆದ 19 ವರ್ಷಗಳಿಂದ ರಮಣ ಶ್ರೀ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯನಾಗಿದ್ದೇನೆ. ಈ ಜಗತ್ತಿನಲ್ಲಿ ಬಹಳ ಕಷ್ಟಕರವಾದ ಕೆಲಸವೆಂದರೆ ಸಂಪುಟ ವಿಸ್ತರಣೆ ಅಲ್ಲದೆ ಪ್ರಶಸ್ತಿ ಪುರಸ್ಕೃತರ ಆಯ್ಕೆ. ಅತಿ ಹೆಚ್ಚು ಲಾಬಿ ನಡೆಯುವಂತದು ಪುರಸ್ಕೃತರ ಆಯ್ಕೆಯ ವಿಷಯದಲ್ಲಿ. ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡುತ್ತಾರೆ. ಆದರೆ ಸದ್ಯ ಪ್ರಶಸ್ತಿ ಪಡೆಯುವುದೇ ಒಂದು ದೊಡ್ಡ ಸಾಧನೆ ಆಗಿದೆ. ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯದ ಪರಿಣತರಿಂದ ಪರಿಗಣಿಸಿ ನಾಲ್ಕು ವಿಭಾಗಗಳಲ್ಲಿ ಪುರಸ್ಕೃತರನ್ನು ಆಯ್ಕೆ ಮಾಡಲಾಗಿದೆ.

-ವಿಶ್ವೇಶ್ವರ ಭಟ್, ವಿಶ್ವವಾಣಿ ಪ್ರಧಾನ ಸಂಪಾದಕ

ಮೈಸೂರಿನ ಚಾಮುಂಡಿ ಬೆಟ್ಟದ 500 ವರ್ಷಗಳ ಐತಿಹಾಸಿಕ ಏಕಶಿಲಾ ನಂದಿ ವಿಗ್ರಹಕ್ಕೆ ಸೋಮವಾರ ಭವ್ಯ ಮಹಾಭಿಷೇಕ ನೆರವೇರಿತು. ಬೆಟ್ಟದ ಗ್ರಾಮಸ್ಥರು ಮತ್ತು ನೂರಾರು ಭಕ್ತರ ಸಮ್ಮುಖದಲ್ಲಿ ನಂದಿಯ ಮಸ್ತಕಕ್ಕೆ ಧಾರೆ ಎರೆಯಲಾಯಿತು. ಸುತ್ತೂರು ಮಠ, ಆದಿಚುಂಚನಗಿರಿ ಮಠ ಮತ್ತು ಹೊಸಮಠದ ಸ್ವಾಮೀಜಿಗಳು ಪೂಜಾ ವಿಧಿಗಳನ್ನು ನೆರವೇರಿಸಿದರು. ಕನಕ ಅಭಿಷೇಕ ಸಂದರ್ಭದಲ್ಲಿ ನಂದಿ ಮೇಲಿಂದ ನಾಣ್ಯಗಳು ಉದುರಿದವು. ಪಂಚಾಮೃತ, ಸುಗಂಧ ದ್ರವ್ಯ ಅಭಿಷೇಕ ಮತ್ತು ಪಂಚ ಕಲಶ ವಿಸರ್ಜನೆಯೊಂದಿಗೆ ಅಭಿಷೇಕ ಪೂರ್ಣಗೊಂಡಿತು.

ಉ.ಕ. ಅಭಿವೃದ್ಧಿ ಚರ್ಚೆಗೆ ಪತ್ರ

ವಿಜಯಪುರ: ಡಿ.8 ರಿಂದ ಬೆಳಗಾವಿಯ ಚಳಿಗಾಲ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ವಿಷಯ ಕುರಿತು ಚರ್ಚೆಗೆ ಅಧಿವೇಶನದ ಮೊದಲ ಅವಧಿಯಲ್ಲೇ ಹೆಚ್ಚಿನ ಸಮಯಾವಕಾಶ ಕಲ್ಪಿಸುವಂತೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಗಳ ಅಭಿವೃದ್ಧಿ ಹಾಗೂ ಸ್ಥಾನಮಾನಗಳ ಹಂಚಿಕೆಯಲ್ಲಿ ಪ್ರಾದೇಶಿಕ ತಾರತಮ್ಯವನ್ನು ನಿವಾರಿಸುವುದು ಅತೀ ಅವಶ್ಯವಿದೆ. ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಚಳಿಗಾಲ ಅಧಿವೇಶನನದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ, ಇನ್ನಿತರ ನೀರಾವರಿ ಯೋಜನೆಗಳ ಅನುಷ್ಠಾನದ ಕುರಿತು ಚರ್ಚೆ ನಡೆಸಲು ಒತ್ತಾಯಿಸಿದ್ದಾರೆ.

ಎಫ್‌ಆರ್‌ಪಿ ದರ ಮರು ಪರಿಶೀಲಿಸಲು ಕೇಂದ್ರ ಸರಕಾರಕ್ಕೆ ಸಚಿವ ತಿಮ್ಮಾಪೂರ ಒತ್ತಾಯ

ಎಫ್‌ಆರ್‌ಪಿ ದರ ನಿಗದಿ ರೈತರ ಹಿತಾಸಕ್ತಿಗೆ ಮಾರಕ

ಬೆಂಗಳೂರು/ದೆಹಲಿ: ಕಬ್ಬು ಬೆಳೆಗಾರರಿಗೆ ಮಾರಕವಾಗಿರುವ ಎಫ್‌ಆರ್‌ಪಿ ಬೆಲೆ ನಿಗದಿ ಮರು ಪರಿಶೀಲಿಸಬೇಕೆಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಒತ್ತಾಯಿಸಿದ್ದಾರೆ. 9.5ರಷ್ಟಿದ್ದ ರಿಕವರಿ ರೇಟನ್ನು ಮೇ 6, 2025ರಂದು ಹೊರಡಿಸಿದ ಅಧಿಸೂಚನೆ ಮೂಲಕ ರಿಕವರಿ ದರವನ್ನು 10.25ಕ್ಕೆ ಹೆಚ್ಚಳ ಮಾಡಿರುವುದು ಅವೈಜ್ಞಾನಿಕವಾಗಿದ್ದು, ರೈತರ ಹಿತಾಸಕ್ತಿಗೆ ಮಾರಕವಾಗಿದೆ. ಇದರಿಂದ ಕಬ್ಬು ಬೆಳೆಗಾರರಿಗೆ ಅನ್ಯಾಯವಾಗಲಿದೆ. ಹಾಗಾಗಿ, 2009 ರಿಂದ ಜಾರಿಯಲ್ಲಿದ್ದ ಶೇ.9.5 ರಿಕವರಿ ದರವನ್ನೇ ಪುನರ್ ಪರಿಶೀಲಿಸಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದಾರೆ.

ಎಥೆನಾಲ್ ಕೋಟಾ ಹಂಚಿಕೆಯಲ್ಲೂ ಗಮನಾರ್ಹ ವ್ಯತ್ಯಾಸವಿದೆ. ಮಹಾರಾಷ್ಟ್ರ ರಾಜ್ಯಕ್ಕೆ 12.4 ಮತ್ತು ಉತ್ತರ ಪ್ರದೇಶ ರಾಜ್ಯಕ್ಕೆ 15.3 ರಷ್ಟಿದೆ, ಕರ್ನಾಟಕಕ್ಕೆ ಶೇ.11.1 ರಷ್ಟಿದ್ದು, ಬೇರೆ ರಾಜ್ಯಗಳಿಗೆ ಶೇ.40 ರಷ್ಟಿದ್ದು ಕರ್ನಾಟಕ್ಕೆ ಕೇವಲ ಶೇ.30 ರಷ್ಟಿದ್ದು ಈ ವ್ಯತ್ಯಾಸ ಸರಿಪಡಿಸಬೇಕಿದೆ. ಅಂತಾರಾಷ್ಟ್ರೀಯ ಸಕ್ಕರೆ ಮಾರುಕಟ್ಟೆ ಮತ್ತು ವಿತರಣೆಯನ್ನು ಗಮನದಲ್ಲಿಟ್ಟುಕೊಂಡು ಸರಕಾರವು ಕಬ್ಬಿನ ಉತ್ಪಾದನೆ, ಸಂಗ್ರಹಣೆ ಮಾರುಕಟ್ಟೆ ಮತ್ತು ಬೆಲೆಯ ವಿವಿಧ ಅಂಶಗಳನ್ನು ಪರಿಗಣಿಸಿ ತನ್ನ ಸಕ್ಕರೆ ರಫ್ತು ನೀತಿಯನ್ನು ಪರಿಗಣಿಸಬೇಕು. ಜತೆಗೆ ಗೃಹ ಬಳಕೆ ಹಾಗೂ ವಾಣಿಜ್ಯ ಉದ್ದೇಶಕ್ಕೆ ಬಳಸುವ ಸಕ್ಕರೆಗೆ ಪ್ರತ್ಯೇಕ ದರ ನಿಗದಿಗೊಳಿಸಬೇಕೆಂದು ರೈತರ ಆಗ್ರಹವಾಗಿದ್ದು, ಈ ಬಗ್ಗೆ ಕೇಂದ್ರ ಸರಕಾರ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ರಾಜ್ಯದ ರೈತರ ಹಿತಾಸಕ್ತಿ ಕಾಪಾಡ ಬೇಕು ಎಂದು ಮುಖ್ಯಮಂತ್ರಿಗಳ ಮೂಲಕ ಪ್ರಧಾನಮಂತ್ರಿ ಗಳನ್ನು ಒತ್ತಾಯಿಸುವುದಾಗಿ ಸಚಿವ ಆರ್.ಬಿ.ತಿಮ್ಮಾಪೂರ ಪ್ರತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಧಕ-ಬಾಧಕ ಕುರಿತು ಸರಕಾರ ಚರ್ಚೆ: ಗೃಹ ಸಚಿವ ಡಾ.ಜಿ.ಪರಮೇಶ್ವರ್

ತುಮಕೂರಿಗೆ ಮೆಟ್ರೋ: ಡಿಪಿಆರ್‌ಗೆ ಟೆಂಡರ್

ತುಮಕೂರು: ತುಮಕೂರಿನವರೆಗೂ ಮೆಟ್ರೋ ವಿಸ್ತರಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಬಿಎಂಆರ್‌ಸಿಎಲ್ ಈಗಾಗಲೇ ಟೆಂಡರ್ ಕರೆದಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಈ ಕುರಿತಾಗಿ ರಾಜ್ಯ ಸರಕಾರ ಸಾಧಕ-ಬಾಧಕಗಳ ಚರ್ಚೆ ಮಾಡಿದೆ. ನಂತರ ಡಿಪಿಆರ್ ಮಾಡಲು ತೀರ್ಮಾನಿಸಲಾಗಿದೆ. ನಾಲ್ಕೈದು ತಿಂಗಳಲ್ಲಿ ಡಿಪಿಆರ್ ಪೂರ್ಣಗೊಳಿಸಬೇಕೆಂದು ಸೂಚನೆ ನೀಡಿದ್ದೇವೆ ಎಂದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ದೆಹಲಿ ಸ್ಫೋಟ ಕುರಿತು ಮಾಧ್ಯಮದವರ ಪ್ರಶ್ನೆಗೆ, ಕೇಂದ್ರದಲ್ಲಿ ವಿವಿಧ ಏಜೆನ್ಸಿಗಳಿವೆ. ಇವೆಲ್ಲವೂ ಒಟ್ಟಿಗೆ ಸೇರಿ ಕೆಲಸ ಮಾಡುತ್ತವೆ. ಅನುಮಾನದ ಮೇಲೆ ಆರೋಪಿಗಳನ್ನು ಹಿಡಿದುಕೊಂಡು ಬರುತ್ತಾರೆ. ಸಾಕ್ಷಿ ಸಿಗದಿದ್ದರೆ ಬಿಟ್ಟು ಕಳುಹಿಸುತ್ತಾರೆ ಎಂದು ಉತ್ತರಿಸಿದರು. ರಾಜ್ಯದಲ್ಲಿ ವರ್ಷ ದಲ್ಲಿ 25 ಸಾವಿರಕ್ಕೂ ಹೆಚ್ಚು ಸೈಬರ್ ಕ್ರೈಂಗಳು ನಡೆಯುತ್ತಿವೆ. ಇದನ್ನು ನಿಯಂತ್ರಿಸಲು ಬಹಳಷ್ಟು ಕ್ರಮ ತೆಗೆದು ಕೊಳ್ಳಲಾಗುತ್ತಿದೆ. ಹಣ ಕಳೆದುಕೊಂಡ ಜನರಿಗೆ ಮರಳಿ ಕೊಡಿಸಲಾಗುತ್ತಿದೆ. ಬೆಂಗಳೂರಿನ ಟೆಕ್ಕಿಯೊಬ್ಬರಿಗೆ 31 ಕೋಟಿ ರು.ವಂಚಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದರು.

20,649 ಕೋಟಿ ರು.ವೆಚ್ಚದ ಡಿಪಿಆರ್

ಡಿಪಿಆರ್‌ಗೆ ಬಿಎಂಆರ್‌ಸಿಎಲ್ ಟೆಂಡರ್ ಕರೆದಿದೆ. ಸಾರ್ವಜನಿಕ ಖಾಸಗಿ ಸಹ ಭಾಗಿತ್ವದಲ್ಲಿ ಸುಮಾರು 20,649 ಕೋಟಿ ರು. ವೆಚ್ಚದ ಈ ಯೋಜನೆಗೆ ಡಿಪಿಆರ್ ಸಿದ್ಧಪಡಿಸಿ 5 ತಿಂಗಳೊಳಗಾಗಿ ಸಲ್ಲಿಸಲು ಟೆಂಡರ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ ಎನ್ನಲಾಗಿದೆ. ಈಗಾಗಲೇ ಬೆಂಗಳೂರಿನಲ್ಲಿ ನೆಲಮಂಗಲ ಸಮೀಪ ಮಾದಾವರದವರೆಗೂ ಮೆಟ್ರೊ ಮಾರ್ಗ ಕಾರ್ಯಾಚರಣೆ ನಡೆಸುತ್ತಿದೆ. ಮುಂದುವರೆದು ಮಾದಾವರದಿಂದ ತುಮಕೂರು ವರೆಗೆ 59.6 ಕಿ.ಮೀ. ಉದ್ದದ ಮೆಟ್ರೊ ಮಾರ್ಗ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಲು ಟೆಂಡರ್ ಕರೆಯಲಾಗಿದೆ. ಈ ಯೋಜನೆ ಅನುಷ್ಠಾನಗೊಂಡಿದ್ದೇ ಆದರೆ ಬೆಂಗಳೂರಿಗೆ ಸಂಚರಿಸುವವರ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ. ಈ ಮಾರ್ಗ ಕಾರ್ಯರೂಪಕ್ಕೆ ಬಂದರೆ ಮೊಟ್ಟ ಮೊದಲ ಅಂತರ್ ಜಿಲ್ಲಾ ಸಂಪರ್ಕದ ಮೆಟ್ರೊ ಮಾರ್ಗ ಎಂಬ ಹೆಗ್ಗಳಿಕೆಗೂ ಪಾತ್ರವಾಗಲಿದೆ. ತುಮಕೂರಿನಲ್ಲಿ ವಸಂತನರಸಾಪುರ, ಕೈಗಾರಿಕಾ ಪ್ರದೇಶ, ಸಿದ್ಧಗಂಗಾಮಠ, ಎಚ್‌ಎಎಲ್ ಹೆಲಿಕಾಪ್ಟರ್ ತಯಾರಿಕಾ ಘಟಕ ಸೇರಿದಂತೆ ನಾನಾ ರೀತಿಯ ಪ್ರಮುಖ ಪ್ರದೇಶಗಳಿವೆ. ಉತ್ತರ ಕರ್ನಾಟಕ ಭಾಗ ಹಾಗೂ ಮಲೆನಾಡು ಜಿಲ್ಲೆಗಳಿಂದ ಅಪಾರ ಪ್ರಮಾಣದ ವಾಹನಗಳು ತುಮಕೂರಿನ ಮೂಲಕವೇ ಬೆಂಗಳೂರಿಗೆ ಹಾದು ಬರುತ್ತಿವೆ. ಒಂದು ವೇಳೆ ತುಮಕೂರಿಗೆ ಮೆಟ್ರೊ ಮಾರ್ಗ ನಿರ್ಮಾಣವಾದರೆ ಪ್ರತಿ ದಿನ 15 ಸಾವಿರಕ್ಕೂ ಹೆಚ್ಚು ಮಂದಿ ಸಂಚರಿಸುವ ಅಂದಾಜಿದೆ.

ಮೊಯ್ದೀನ್ ಬಾವಾ ವಾಟ್ಸಾಪ್ ಹ್ಯಾಕ್

ಮಂಗಳೂರು: ಮಾಜಿ ಶಾಸಕ ಮೊಯ್ದೀನ್ ಬಾವಾರ ಅವರ ವಾಟ್ಸ್ಯಾಪ್ ಅನ್ನು ಹ್ಯಾಕರ್ಸ್ ಹ್ಯಾಕ್ ಮಾಡಿ, ಹಲವಾರು ಮಂದಿಗೆ ಹಣಕ್ಕೆ ಲಕ್ಷಾಂತರ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಸೋಮವಾರ ಮಧ್ಯಾಹ್ನದಿಂದ ಬಾವಾ ಅವರ ವಾಟ್ಸ್ಯಾಪ್ ಹ್ಯಾಕ್ ಮಾಡಿರುವ ಹ್ಯಾಕರ್ಸ್ ಅವರ ನಂಬರ್‌ನಿಂದಲೇ ಪತ್ರಕರ್ತರು, ಪೊಲೀಸರು, ಸೇರಿ ಅವರ ಕಾಂಟಾಕ್ಟ್ ಲಿಸ್ಟ್‌ನಲ್ಲಿರುವವರಿಗೆ ದುಡ್ಡು ಕೊಡುವಂತೆ ಬೇಡಿಕೆ ಇಟ್ಟಿದ್ದಾರೆ ಎಂದು ವರದಿಯಾಗಿದೆ. ಬಾವಾ ಅವರ ವಾಟ್ಸ್ಯಾಪ್ ನಂಬರ್‌ನಿಂದ ನಿಮ್ಮಿಂದ ನನಗೆ ಸಹಾಯ ಬೇಕು ಎಂಬ ಮೆಸೇಜ್ ಬಂದಿದೆ. ಬಾವಾ ಏನೋ ಕಷ್ಟದಲ್ಲಿದ್ದಾರೆ ಎಂದು, ಏನಾಯ್ತು ಬಾವಾ ಎಂದು ಕೇಳಿದಾಗ, ಇಂಗ್ಲೀಷ್‌ನಲ್ಲಿ ಕಂತೆ ಪುರಾಣಗಳನ್ನೆಲ್ಲಾ ಬಿಚ್ಚಿಟ್ಟು, ತನ್ನ ಮತ್ತೊಂದು ಯುಪಿಐ ಐಡಿ ನೀಡಿ ಇದಕ್ಕೆ ಹಣ ಕಳಿಸುವುದು ಮಾತ್ರವಲ್ಲದೆ, ಅದರ ಸ್ಕ್ರೀನ್ ಶಾಟ್ ಕಳಿಸಲು ಕೇಳಿದ್ದಾರೆ ಎನ್ನಲಾಗಿದೆ.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ಭೇಟಿ, ಪರಿಶೀಲನೆ | ಕೃಷ್ಣಮೃಗಗಳ ಸಾವಿನ ಸಂಖ್ಯೆ 31ಕ್ಕೆ ಏರಿಕೆ

ಕೃಷ್ಣಮೃಗಗಳ ಸಾವು: ಲೋಪ ದೃಢಪಟ್ಟರೆ ಸಿಬ್ಬಂದಿ ವಿರುದ್ಧ ಕ್ರಮ

ಬೆಳಗಾವಿ: ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 31 ಕೃಷ್ಣಮೃಗಗಳ ಸಾವಿನ ಪ್ರಕರಣದಲ್ಲಿ ವೈದ್ಯರು ಮತ್ತು ಸಿಬ್ಬಂದಿ ನಿರ್ಲಕ್ಷ್ಯ ವಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಪ್ರಾಣಿಗಳ ಒಳಾಂಗಗಳ ಪರೀಕ್ಷೆ ವರದಿ ಮತ್ತು ತನಿಖಾ ವರದಿಗೆ ಕಾಯುತ್ತಿದ್ದೇವೆ. ಸಿಬ್ಬಂದಿ ಲೋಪವೆಸಗಿರುವುದು ದೃಢಪಟ್ಟರೆ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ಹೇಳಿದರು.

ಕಿರು ಮೃಗಾಲಯಕ್ಕೆ ಸೋಮವಾರ ಭೇಟಿ ನೀಡಿ, ಪ್ರಕರಣದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಳಿವಿನಂಚಿನಲ್ಲಿರುವ ಕೃಷ್ಣಮೃಗಗಳಂಥ ಪ್ರಬೇಧಗಳನ್ನು ಸಂರಕ್ಷಿಸಲು ಮತ್ತು ಅವುಗಳ ಸಂಖ್ಯೆ ಹೆಚ್ಚಿಸಲು ಮೃಗಾಲಯದಲ್ಲಿ ಇರಿಸಲಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿ ಅವು ಮೃತಪಟ್ಟಿರುವುದು ಸ್ವೀಕಾರಾರ್ಹವಲ್ಲ. ಬ್ಯಾಕ್ಟೀರಿಯಾ ಸೋಂಕಿನಿಂದ ಅವು ಸಾವನ್ನಪ್ಪಿವೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಪರೀಕ್ಷಾ ವರದಿಗೆ ನಾವು ಕಾಯುತ್ತಿದ್ದೇವೆ ಎಂದರು.

ಮೃಗಾಲಯದಲ್ಲಿನ ವೈದ್ಯಕೀಯ ತಂಡವು ಪ್ರಾಣಿಗಳ ಆರೋಗ್ಯವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ಆದರೆ, ಇಲ್ಲಿ ಅದು ನಡೆದಿಲ್ಲ ಎಂಬಂತೆ ತೋರುತ್ತಿದೆ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ ಪನ್ವಾರ್ ಕೂಡ ಭಾನುವಾರ ಕಿರು ಮೃಗಾಲಯಕ್ಕೆ ಭೇಟಿ ನೀಡಿದ್ದು, ವರದಿ ಸಲ್ಲಿಸಲಿದ್ದಾರೆ. ಅಧಿಕಾರಿಗಳ ಲೋಪವಿದ್ದರೆ ಅವರ ಕ್ರಮ ಕೈಗೊಳ್ಳುವಂತೆ ಸಿಎಂ ಸಿದ್ದರಾಮಯ್ಯ , ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಗಮನಕ್ಕೆ ತರುತ್ತೇನೆ ಎಂದು ಹೇಳಿದರು.

ಬೆಳಗಾವಿಯ ರಾಣಿ ಚನ್ನಮ್ಮ ಕಿರು ಮೃಗಾಲಯಕ್ಕೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ಅವರು ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಮತ್ತೊಂದು ಕೃಷ್ಣಮೃಗ ಸಾವು

ಬೆಳಗಾವಿ ತಾಲೂಕಿನ ಭೂತರಾಮನಹಟ್ಟಿಯ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಸೋಮವಾರ ನಸುಕಿನ ಜಾವ ಒಂದು ಕೃಷ್ಣಮೃಗ ಮೃತಮೃಟ್ಟಿದ್ದು, ಸಾವಿನ ಸಂಖ್ಯೆ 31ಕ್ಕೆ ಏರಿಕೆಯಾಗಿದೆ. ಪ್ರಾಣಿಗಳ ಸಾವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಸಭೆ ನಡೆಸಿದರು. ಬೇರೆ ಪ್ರಾಣಿಗಳಿಗೆ ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ಸೂಚಿಸಿದ್ದಾರೆ.

ಸೋಂಕು ನಿವಾರಕ ಸಿಂಪಡಣೆ

ಬೆಳಗಾವಿ: ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಕೃಷ್ಣಮೃಗಗಳು ಇರುವ ಆವರಣ ಮತ್ತು ಬೇರೆ ಪ್ರಾಣಿಗಳಿರುವ ಆವರಣಗಳಲ್ಲಿ ಸೋಂಕು ಹರಡದಂತೆ ತಡೆಯಲು ಸೋಂಕು ನಿವಾರಕಗಳನ್ನು ಸಿಂಪಡಿಸಲಾಗಿದೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ ಚವ್ಹಾಣ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಾವನ್ನಪ್ಪಿದ ಕೃಷ್ಣಮೃಗಗಳ ಮರಣೋತ್ತರ ಪರೀಕ್ಷೆ ನಡೆಸಲು ಬನ್ನೇರುಘಟ್ಟದಿಂದ ಬಂದಿದ್ದ ತಜ್ಞರ ಅಭಿ ಪ್ರಾಯದ ಪ್ರಕಾರ, ಬ್ಯಾಕ್ಟೀರಿಯಾ ಸೋಂಕಿನಿಂದ ಪ್ರಾಣಿಗಳು ಸಾವನ್ನಪ್ಪಿವೆ ಎಂದು ಶಂಕಿಸಲಾಗಿದೆ. ಈಗ ಬದುಕುಳಿದ ಕೃಷ್ಣಮೃಗಗಳಿಗೂ ಅವರ ಮಾರ್ಗದರ್ಶನದ ಮೇರೆಗೆ ಚಿಕಿತ್ಸೆ ನೀಡಲಾ ಗುತ್ತಿದೆ. ನಮ್ಮಲ್ಲಿ 7 ಕೃಷ್ಣಮೃಗಗಳು ಜೀವಂತ ವಾಗಿವೆ. ಅವು ಸಕ್ರಿಯವಾಗಿವೆ. ಆದರೆ, ಅವು ಗಳಿಗೂ ಸೋಂಕು ತಗುಲಿದೆ ಎಂದು ಶಂಕಿಸಲಾ ಗಿದೆ. ಹಾಗಾಗಿ ತಜ್ಞರು ಮತ್ತೆ ಆಗಮಿಸುತ್ತಿದ್ದಾರೆ ಎಂದರು. ಮೃಗಾಲಯದಲ್ಲಿ ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿ ಮತ್ತು ಸಹಾಯಕ ಪಶುವೈದ್ಯ ಕಳೆದ ಮೂರು ವರ್ಷಗಳಿಂದ ಪ್ರಾಣಿಗಳ ಆರೈಕೆ ಮಾಡುತ್ತಿದ್ದಾರೆ. ವಿವಿಧ ಕಾರ್ಯಾಗಾರಗಳಿಗೆ ಅವರು ಹಾಜರಾಗಿದ್ದಾರೆ. ರಾಜ್ಯದಲ್ಲಿ ಮೊದಲ ಬಾರಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಕೃಷ್ಣಮೃಗಗಳ ಸಾವು ಸಂಭವಿಸಿದೆ. ಗುಜರಾತ್‌ನ ವಡೋದರಾ ದಲ್ಲಿ ಇಂಥ ಒಂದು ಘಟನೆಯನ್ನು ನಾವು ನೋಡಿ ದ್ದೇವೆ. ಒಳಾಂಗಗಳ ಮಾದರಿಗಳ ಪರೀಕ್ಷಾ ವರದಿ ಗಳು ನಿಖರವಾದ ಕಾರಣ ನೀಡಲಿವೆ. ಇದರಿಂದ ಭವಿಷ್ಯದಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಮೃಗಾಲಯದಲ್ಲಿರುವ ಪ್ರಾಣಿಗಳ ಆರೋಗ್ಯವನ್ನು ಕಾಪಾಡಿಕೊಳ್ಳಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ನಿರ್ಧರಿಸಲು ಮತ್ತು 31 ಕೃಷ್ಣಮೃಗಗಳ ಸಾವಿಗೆ ಕಾರಣವಾದ ಮೃಗಾಲಯದ ಸಿಬ್ಬಂದಿ ಲೋಪಗಳ ವಿರುದ್ಧ ಕ್ರಮ ಕೈಗೊಳ್ಳಲು ಶಿಫಾರಸು ಮಾಡಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸಭೆ ಮುಂದಿನ ವಾರ ನಡೆಯಲಿದೆ.

-ಕೆ.ರಂಗಸ್ವಾಮಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ

ವಿಶ್ವವಾಣಿ

ಸಂಪಾದಕೀಯ

ಬೀಗಿದವ ಬಾಗಲೇಬೇಕು...

ಕಳೆದ ಕೆಲ ತಿಂಗಳಿಂದ ಇನ್ನಿಲ್ಲದಂತೆ ಬೀಗುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊನೆಗೂ ಬಾಗಿದ್ದಾರೆ; ರಷ್ಯಾದಿಂದ ಕಚ್ಚಾತೈಲ ಆಮದು ಮಾಡಿಕೊಳ್ಳುತ್ತಿದೆ ಎಂಬ ನೆಪವೂ ಸೇರಿದಂತೆ ಹಲವು ಕಾರಣಗಳನ್ನು ಮುಂದುಮಾಡಿ, ಭಾರತದಿಂದ ಅಮೆರಿಕಕ್ಕೆ ಬಂದು ಬೀಳುವ ಹಲವು ಉತ್ಪನ್ನಗಳ ಮೇಲೆ ಹೇರಿದ್ದ ಅತಿರೇಕದ ಸುಂಕವನ್ನು ಅವರು ಕಡಿತಗೊಳಿಸಿರುವುದೇ ಇದಕ್ಕೆ ಸಾಕ್ಷಿ. ಟ್ರಂಪ್ ಅವರ ಈ ಕ್ರಮದಿಂದಾಗಿ, ಮಸಾಲೆ ಪದಾರ್ಥಗಳು, ಚಹಾ ಸೇರಿದಂತೆ ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸಾಕಷ್ಟು ಉತ್ಪನ್ನಗಳ ರಫ್ತಿನಲ್ಲಿ ಹೆಚ್ಚಳವಾಗಲಿದೆ ಎಂಬುದು ಕ್ಷೇತ್ರತಜ್ಞರ ಅಭಿಮತ. 'ಅಮೆರಿಕವು ವಿಶ್ವದ ದೊಡ್ಡಣ್ಣ' ಎಂಬ ಗ್ರಹಿಕೆ ಒಂದು ಕಾಲಕ್ಕೆ ಬಲವಾಗಿತ್ತು. ಆದರೀಗ 'ಭೂರಾಜಕೀಯ' ಎಂಬುದು ಮೊದಲಿನಂತಿಲ್ಲ. 'ನೀ ನನಗಾದರೆ, ನಾ ನಿನಗೆ' ಎಂಬ ಆಶಯಕ್ಕೆ ಇಂಬುಕೊಟ್ಟು ಪರಸ್ಪರ ಸಹಕಾರ ಹಸ್ತವನ್ನು ಚಾಚಿದರೆ ಮಾತ್ರವೇ ಆಡಳಿತದ ಬಂಡಿ ಸುಸೂತ್ರವಾಗಿ ಓಡುತ್ತದೆ ಎಂಬುದು ವಿಶ್ವದ ವಿವಿಧ ದೇಶಗಳಲ್ಲಿನ ವಸ್ತುಸ್ಥಿತಿ. ಅಮೆರಿಕ ಕೂಡ ಇದಕ್ಕೆ ಹೊರತಾಗಿಲ್ಲ. ಸಾಕಷ್ಟು ಕ್ಷೇತ್ರಗಳಲ್ಲಿ ಅದು ಪಾರಮ್ಯ/ಸ್ವಾವಲಂಬನೆಯನ್ನು ಸಾಧಿಸಿದ್ದರೂ, ಒಂದಷ್ಟು ವಲಯಗಳಲ್ಲಿ ಪರರಾಷ್ಟ್ರಗಳನ್ನು ನೆಚ್ಚಲೇಬೇಕಾಗಿದೆ. ಈ ಕಹಿಸತ್ಯವನ್ನು ತಡವಾಗಿಯಾದರೂ ಮನಗಂಡಿರುವ ಟ್ರಂಪ್ ಮಹಾಶಯರು, 'ತುಂಡಾದೇನು, ಆದರೆ ಬಾಗಲಾರೆ' ಎಂಬ ತಮ್ಮ ಠೇಂಕಾರವನ್ನು ಸುತ್ತಿ ಪಕ್ಕಕ್ಕಿಟ್ಟು, ಹಳಿಗೆ ಮರಳಿದ್ದಾರೆ. ಅವರ ಈ ನಡೆಯನ್ನು ಸ್ವಾಗತಿಸೋಣ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಪರದೇಶಗಳಿಂದ ಬರುವ ಉತ್ಪನ್ನಗಳ ಮೇಲೆ ಅತಿರೇಕದ ಸುಂಕವನ್ನು ವಿಧಿಸುವ ತಮ್ಮ ನಡೆಗೆ ಅಮೆರಿಕದ ಪ್ರಜೆಗಳಿಂದಲೇ ಆಕ್ರೋಶ-ಅಸಮಾಧಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಟ್ರಂಪ್ ಈ ಹೆಜ್ಜೆಯಿಂದ ಹಿಂದೆ ಸರಿದಿದ್ದಾರೆ ಎಂಬುದು. ರಾಷ್ಟ್ರವೊಂದರ ಪ್ರಜೆಗಳ ಇಚ್ಛಾಶಕ್ತಿ ಬಲವಾಗಿದ್ದರೆ, ಅದರ ನಾಯಕನೂ ಮಣಿಯಲೇಬೇಕಾಗುತ್ತದೆ ಎಂಬುದಕ್ಕೆ ಈ ಬೆಳವಣಿಗೆಯೇ ಸಾಕ್ಷಿ. ನಮ್ಮಲ್ಲೂ ಇಂಥ ಇಚ್ಛಾಶಕ್ತಿ ಕೆನೆಗಟ್ಟುವಂತಾಗಲಿ ಎಂಬುದೇ ಬಹುತೇಕರ ಆಶಯ ಮತ್ತು ನಿರೀಕ್ಷೆ...

ಸೊಂಪಾದಕೀಯ

ಎಲ್ಲಾ ಕೋರ್ಸ್‌ಗೋಸ್ಕರ...

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಂತೂ ಸಿಕ್ಕಾಪಟ್ಟೆ ಕ್ರಾಂತಿ ಆಗುತ್ತಿದೆ. ಹಳೆಯ ಕಾಲದಲ್ಲಿ ಸ್ಕೂಲು, ಕಾಲೇಜಿಗೆ ಹೋದೆ, ಬಂದೆ, ಪರೀಕ್ಷೆ ಬರೆದೆ ಪಾಸಾದೆ, ಇಷ್ಟಕ್ಕೆ ಸೀಮಿತವಾಗಿದ್ದ ವಿದ್ಯಾಭ್ಯಾಸ ಈಗ ಬೇರೆಯದ್ದೇ ಹಂತ ತಲುಪಿದೆ. ಈಗ ಶಾಲೆಗಳು ಸಾಕಾಗುತ್ತಿಲ್ಲ, ಟ್ಯೂಷನ್‌ಗಳು ಬೇಕಾಗಿವೆ. ಹಾಗೆಯೇ ಈಗ ಡಿಗ್ರಿಗಳು ಸಾಕಾಗ್ತಾ ಇಲ್ಲ. ಹೊಸ ಕೋರ್ಸ್‌ಗಳನ್ನು ಕಲಿಯಬೇಕಿದೆ. ಹಾಗಾಗಿಯೇ ಇಂದು ದೇಶದಲ್ಲಿ ಗಲ್ಲಿಗೊಂದು ಕೋಚಿಂಗ್ ಸೆಂಟರ್‌ಗಳು ಕಾಣಬರುತ್ತವೆ. ಇನ್ನು ಆನ್‌ಲೈನ್‌ನಲ್ಲೂ ಕೋರ್ಸ್‌ಗಳದ್ದೇ ಕಾರುಬಾರು.

ವಿದ್ಯಾರ್ಥಿಗಳು ಇಂದು ಹೆಚ್ಚು ನಂಬಿಕೊಂಡಿರೋದು ಈ ಕೋಚಿಂಗ್ ಕ್ಲಾಸ್‌ಗಳನ್ನೇ. ಶಾಲೆ ಕಾಲೇಜುಗಳೇ ನಿದ್ದರೂ ಕೇವಲ ಪರೀಕ್ಷೆ ಬರೆಯೋ ಸೆಂಟರ್‌ಗಳಾಗಿವೆ. ಈಗ ಎಲ್ಲರೂ ಮುಕ್ತವಾಗಿ, ''ಕೆಲಸ ಸಿಗಬೇಕು ಅಂದ್ರೆ ಡಿಗ್ರಿ ಮಾಡಿದ್ರೆ ಸಾಲಲ್ಲ, ಜಾಬ್ ಓರಿಯೆಂಟೆಡ್ ಕೋರ್ಸ್ ಮಾಡಬೇಕು'' ಅಂತಿದ್ದಾರೆ. ಇದರ ಅರ್ಥ ಏನು ಹಾಗಾದರೆ? ನಮ್ಮ ಶಾಲಾ ಕಾಲೇಜುಗಳಲ್ಲಿ ಕೆಲಸ ಸಿಗೋಕೆ ಬೇಕಾದಂಥ ಶಿಕ್ಷಣ ಸಿಕ್ತಾ ಇಲ್ಲ ಅಂತ ತಾನೇ? ಇದು ಶಿಕ್ಷಣ ವ್ಯವಸ್ಥೆಯ ದೋಷ ತಾನೇ? ಸರಿ, ಜ್ಞಾನಾರ್ಜನೆಗಾಗಿ ಓದು ಬೇಕು, ಆದರೆ ಆ ಓದಿನಿಂದ ಬದುಕು ಕಟ್ಟಿಕೊಳ್ಳೋಕೂ ಸಾಧ್ಯ ಆಗಬೇಕು. ಜೀವನದಲ್ಲಿ ಎಂದೂ ಉಪಯೋಗಕ್ಕೆ ಬಾರದ ಪೈಥಾಗರಸ್ ಥೀರಂ, ಟ್ರಿಗ್ನಾಮೆಟ್ರಿಯಂಥ ವಿಷಯಗಳನ್ನು ಕಲಿಸೋದ್ರಿಂದ ವಿದ್ಯಾರ್ಥಿಗಳಿಗೆ ಯಾವ ಲಾಭ ಆಗುತ್ತಿದೆ ಅಂತ ಯೋಚಿಸಬೇಕಾದ ಸಮಯ ಇದು. ಕೆಲವು ಶಾಲೆ, ಕಾಲೇಜುಗಳಂತೂ ಕೇವಲ 'ನಾಮ್-ಕೆ-ವಾಸ್ತೆ' ಆಗಿಬಿಟ್ಟಿವೆ. ನೀವು ನಂಬ್ತೀರೋ ಇಲ್ವೋ, ವಾರಕ್ಕೆ ಕೇವಲ ಎರಡು ದಿನ ಅಟೆಂಡ್ ಆದ್ರೆ ಸಾಕು, ಅಟೆಂಡೆನ್ಸ್ ಕೊಡ್ತೀವಿ, ಪರೀಕ್ಷೆ ಬರೆಯೋಕೆ ಅವಕಾಶ ಕೊಡ್ತೀವಿ ಅನ್ನೋ ಶಾಲೆಗಳೂ ಇವೆ ನಮ್ಮಲ್ಲಿ. ಅಲ್ಲಿ ಅಡ್ಮಿಟ್ ಆಗೋ ಮಕ್ಕಳು ನಿಜವಾದ ಕಲಿಕೆಗೆ ಕೋಚಿಂಗ್ ಸೆಂಟರ್‌ಗಳಿಗೆ ಹೋಗ್ತಾರೆ. ಅಲ್ಲಿಯೇ ಅವರ ವಾರವಿಡೀ ಓದು, ಬರಹ ನಡೆಯೋದು. ಈ ಶಾಲೆ ಕಾಲೇಜುಗಳೇನಿದ್ದರೂ ಕೇವಲ ಪರೀಕ್ಷೆ ಬರೆದು ಪಾಸಾಗೋಕೆ ಇರೋ ಜಾಗ ಅಷ್ಟೇ. ಒಟ್ಟಿನಲ್ಲಿ ಇಂದಿನ ವಿದ್ಯಾರ್ಥಿಗಳು, 'ಶಾಲೆ ಕಾಲೇಜಿನಾ ಮನೆ ತೊಳಿಯ, ಕೋಚಿಂಗ್ ಸೆಂಟರ್‌ಗಳೇ ಶಾಶ್ವತ ಗೆಳೆಯ' ಅಂತ 'ಗಾಳಿಪಟ 2' ಚಿತ್ರದ ಧಾಟಿಯಲ್ಲಿ ಹಾಡ್ತಾ ಇರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಡಾ.ಸಿಂಗ್ ವಿತ್ತ ಸಚಿವರಾಗಿದ್ದು ಹೇಗೆ?

ಡಾ.ಮನಮೋಹನ ಸಿಂಗ್ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದರೆ ಹೇಗೆ ಎಂಬ ಯೋಚನೆ ಮೊದಲ ಬಾರಿಗೆ ಬಂದಿದ್ದು ಯಾರಿಗೆ?' ಪ್ರಾಯಶಃ ಈ ಪ್ರಶ್ನೆಗೆ ಎಲ್ಲರೂ ಪಿ.ವಿ.ನರಸಿಂಹ ರಾವ್ ಎಂದು ಹೇಳಬಹುದು. ಆದರೆ ಈ ಯೋಚನೆ ಬಂದಿದ್ದು ಆರ್. ವೆಂಕಟರಾಮನ್ ಅವರಿಗಂತೆ. ಈ ವಿಷಯವನ್ನು ಹಿರಿಯ ಪತ್ರಕರ್ತೆ ನೀರಜಾ ಚೌಧುರಿ ತಮ್ಮ ಹೊಸ ಪುಸ್ತಕ 'How Prime MInisters Decide' ದಲ್ಲಿ ಬರೆದಿದ್ದಾರೆ. 2002ರಲ್ಲಿ ಅಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರು ಈ ವಿಷಯವನ್ನು ಖುದ್ದಾಗಿ ನೀರಜಾ ಅವರಿಗೆ ಹೇಳಿದ್ದರಂತೆ. ಸಾಮಾನ್ಯವಾಗಿ ನರಸಿಂಹರಾವ್ ಅವರು ಪ್ರಮುಖ ವಿಷಯಗಳ ಬಗ್ಗೆ ವೆಂಕಟರಾಮನ್‌ರ ಸಲಹೆಗಳನ್ನು ಪಡೆಯುತ್ತಿದ್ದರು. 1980-82ರವರೆಗೆ ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ಅವಧಿಯಲ್ಲಿ ವೆಂಕಟರಾಮನ್ ಹಣಕಾಸು ಸಚಿವರಾಗಿದ್ದರು. ಅವರು ಹಣಕಾಸು ಇಲಾಖೆಯ ಒಳಮರ್ಮವನ್ನು ಅರಿತವರು. ಈ ಸಂದರ್ಭದಲ್ಲಿ ಯಾರನ್ನು ಹಣಕಾಸು ಸಚಿವರನ್ನಾಗಿ ಮಾಡಿದರೆ ಒಳ್ಳೆಯದು ಎಂದು ನರಸಿಂಹರಾಯರು ಕೇಳಿದಾಗ, ವೆಂಕಟರಾಮನ್ ಎರಡು ಹೆಸರುಗಳನ್ನು ಸೂಚಿಸಿದರು. ಮೊದಲನೆಯವರು ಐ.ಜಿ.ಪಟೇಲ್. ಅವರು ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿದ್ದವರು. ಎರಡನೆಯವರು ಡಾ.ಮನಮೋಹನ್ ಸಿಂಗ್. ಆದರೆ ಪಟೇಲ್ ಆ ಆಹ್ವಾನವನ್ನು ನಯವಾಗಿ ನಿರಾಕರಿಸಿದರು. ಡಾ.ಸಿಂಗ್ ಸಂತಸದಿಂದ ಒಪ್ಪಿಕೊಂಡರು. ಆ ಸಂದರ್ಭದಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲ. ಆರ್ಥಿಕ ಹೊರೆ, ಸಾಲ ಮಿತಿಮೀರಿತ್ತು. ಚಂದ್ರಶೇಖರ್ ಪ್ರಧಾನಿಯಾಗಿದ್ದಾಗ ವಿದೇಶಿ ಸಾಲವನ್ನು ತೀರಿಸಲು ಬಂಗಾರವನ್ನು ಅಡ ಇಡಲಾಗಿತ್ತು. ಆ ಬಂಗಾರವನ್ನು ಮರಳಿ ತರಬೇಕಾದ ಜರೂರು ಇತ್ತು. ಸೋವಿಯತ್ ಒಕ್ಕೂಟ ಪತನವಾಗಿತ್ತು. ವಿಶ್ವಬ್ಯಾಂಕ್ ಮತ್ತು ಐಎಂಎಫ್ ಭಾರತದ ವಿತ್ತ ಪರಿಸ್ಥಿತಿ ನೋಡಿ ಕಳವಳ ವ್ಯಕ್ತಪಡಿಸಿದ್ದವು. ಇವೆರಡೂ ಅಂತಾರಾಷ್ಟ್ರೀಯ ಸಂಸ್ಥೆಗಳನ್ನು ನಿಭಾಯಿಸುವವರು ದೇಶದ ಹಣಕಾಸು ಸಚಿವರಾದರೆ ಒಳ್ಳೆಯದು ಎಂದು ನರಸಿಂಹರಾಯರಿಗೆ ಬಲವಾಗಿ ಅನಿಸಿತ್ತು. ಅದೇ ವೇಳೆ, ಕಾಂಗ್ರೆಸ್ ನಾಯಕ ಕ್ಯಾಪ್ಟನ್ ಸತೀಶ್ ಶರ್ಮ ಅವರು ನರಸಿಂಹರಾಯರನ್ನು ಭೇಟಿಯಾದರು. 'ರಾಯರೇ, ಯಾರನ್ನು ಹಣಕಾಸು ಸಚಿವರನ್ನಾಗಿ ಮಾಡುತ್ತಿದ್ದೀರಿ?' ಎಂದು ಸಹಜವಾಗಿ ಕೇಳಿದರು. ಕ್ಯಾಪ್ಟನ್ ಶರ್ಮ ಹಾಗೆ ಕೇಳಿದಾಗ, ಸೋನಿಯಾ ಗಾಂಧಿಯವರಿಂದ ಯಾವುದಾದರೂ ಹೆಸರನ್ನು ಹೊತ್ತು ತಂದಿರಬಹುದಾ ಎಂಬ ಯೋಚನೆ ರಾಯರ ಮನಸ್ಸಿನಲ್ಲಿ ಹಾದುಹೋಯಿತು. ಆ ದಿನಗಳಲ್ಲಿ ಕ್ಯಾಪ್ಟನ್ ಶರ್ಮ ಮೂಲಕ ಸೋನಿಯಾ ಗಾಂಧಿ ಸಂದೇಶಗಳನ್ನು ಕಳಿಸುತ್ತಿದ್ದರು. ರಾಯರು ಯಾರ ಹೆಸರನ್ನೂ ಹೇಳದೇ, 'ಮುಂದಿನ ಹಣಕಾಸು ಸಚಿವರು ವಿಷಯ ಪರಿಣತರಾಗಿರುತ್ತಾರೆ' ಎಂದು ಮುಗುಮ್ಮಾಗಿ ಹೇಳಿದರು. ಹಾಗೆ ಹೇಳಿದಾಗ ಕ್ಯಾಪ್ಟನ್ ಶರ್ಮ ಏನನ್ನೂ ಹೇಳಲಿಲ್ಲ. ಸೋನಿಯಾ ಯಾವುದೇ ಹೆಸರನ್ನು ಹೇಳಿಲ್ಲ ಎಂಬುದು ರಾಯರಿಗೆ ಖಾತ್ರಿಯಾಯಿತು. ಸಂಪುಟ ರಚನೆಯಲ್ಲಿ ನೆರವಾಗುತ್ತಿದ್ದ ಪಿ.ಸಿ.ಅಲೆಗ್ಸಾಂಡರ್ ಅವರನ್ನು ಕರೆದು, ಡಾ.ಸಿಂಗ್ ಅವರನ್ನು ಭೇಟಿ ಮಾಡಿ ವಿಷಯವನ್ನು ಚರ್ಚಿಸುವಂತೆ ಸೂಚಿಸಿದರು. 1991ರ ಜೂನ್ 21ರಂದು ಬೆಳಗ್ಗೆ 5 ಗಂಟೆಗೆ ಅಲೆಗ್ಸಾಂಡರ್, ಡಾ.ಸಿಂಗ್‌ಗೆ ಫೋನ್ ಮಾಡಿ ತಮ್ಮನ್ನು ಭೇಟಿ ಮಾಡುವಂತೆ ಸೂಚಿಸಿದರು. ಅದಾದ ಬಳಿಕ ರಾಯರ ಸೂಚನೆ ಮೇರೆಗೆ ಅವರ ಭೇಟಿಗೆ ಹೋದರು. ಅಲೆಗ್ಸಾಂಡರ್ ವಿಷಯವನ್ನು ಪ್ರಸ್ತಾಪಿಸುತ್ತಿದ್ದಂತೆ, ಡಾ.ಸಿಂಗ್ ಮರುಮಾತಾಡದೇ ಒಪ್ಪಿಕೊಂಡರು (ಚಂದ್ರಶೇಖರ್ ಅವಧಿಯಲ್ಲಿ ಯುಜಿಸಿ ಅಧ್ಯಕ್ಷರಾಗಿ ನೇಮಕವಾಗಿದ್ದ ಡಾ.ಸಿಂಗ್, ತಮ್ಮನ್ನು ಅದೇ ಹುದ್ದೆಯಲ್ಲಿ ಮುಂದುವರಿಸುವಂತೆ ಕೇಳುವವರಿದ್ದರು). ಅದೇ ದಿನ ಮಧ್ಯಾಹ್ನದ ವೇಳೆಗೆ ನರಸಿಂಹರಾಯರು ಪ್ರಧಾನಿಯಾಗಿ ಮತ್ತು ಡಾ.ಮನಮೋಹನ್ ಸಿಂಗ್ ಹಣಕಾಸು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಡಾ.ಸಿಂಗ್ ಅವರು ಆ ಸಚಿವರಾಗಿದ್ದು ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿತ್ತು.

ಸಿಕ್ಕ ಯಶಸ್ಸನ್ನು ಉಳಿಸಿಕೊಳ್ಳುವಲ್ಲಿ ವಿಫಲರಾದರೆ?

ಕೆಲ ದಶಕದ ಹಿಂದೆ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡರೆ ಚುನಾವಣೆಯಲ್ಲಿ ಲಾಭವಾಗುತ್ತದೆ ಎನ್ನುವ ಲೆಕ್ಕಾಚಾರದಲ್ಲಿ ಅನೇಕ ಪ್ರಾದೇಶಿಕ ಹಾಗೂ ಸಣ್ಣ ಪಕ್ಷಗಳಿದ್ದವು. ಆದರೆ ಕಾಂಗ್ರೆಸ್‌ನ ಇತ್ತೀಚಿನ ಪ್ರದರ್ಶನವನ್ನು ನೋಡಿದರೆ, ಯಾವುದೇ ಮೈತ್ರಿಪಕ್ಷಕ್ಕೆ ಕಾಂಗ್ರೆಸ್ 'ಸಹಕಾರಿ'ಯಾಗುವುದಕ್ಕಿಂತ ಹೆಚ್ಚಾಗಿ 'ಹೊರೆ'ಯಾಗುತ್ತದೆ ಎನ್ನುವುದು ಸ್ಪಷ್ಟ.

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ದೇಶದ ರಾಜಕೀಯ ಚಿತ್ರಣದಲ್ಲಿ ಅತ್ಯಂತ ಪ್ರಮುಖ ಎನಿಸಿದ್ದ ಬಿಹಾರ ವಿಧಾನಸಭಾ ಚುನಾವಣೆ ಕಳೆದ ವಾರ ಮುಗಿದಿದೆ. ಲೋಕಸಭಾ ಚುನಾವಣೆಯ ಬಳಿಕ 'ರಾಜಕೀಯ'ವಾಗಿ ತೀವ್ರ ಆಯಕಟ್ಟಿನ ರಾಜ್ಯ ಎನಿಸಿದ್ದ ಬಿಹಾರ ಚುನಾವಣೆಯ ಮೂಲಕ ಎನ್‌ಡಿಎ ಮತ್ತೊಮ್ಮೆ ತನ್ನ ಬಲವನ್ನು ಹೆಚ್ಚಿಸಿಕೊಂಡಿದೆ. ಒಂದೊಮ್ಮೆ ತಾನು ಸೋತರೂ ಅದು 'ಗೌರವ'ಯುತ ಸೋಲು ಆಗಲಿದೆ ಎಂಬ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್ ನೇತೃತ್ವದ ಮಹಾಘಟಬಂಧನ ಮೈತ್ರಿಗೆ ಬಿಹಾರಿ ಮತದಾರರು ನೀಡಿರುವ ಮತಗಳು ಮರ್ಮಾಘಾತವನ್ನು ಉಂಟು ಮಾಡಿದೆ ಎಂದರೆ ತಪ್ಪಾಗುವುದಿಲ್ಲ.

2024ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗಿಂತ ಹೆಚ್ಚಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಟ್ಟಿಹಾಕಲು ಒಂದಾದ 'ಇಂಡಿಯಾ' ಮೈತ್ರಿಕೂಟವು ತಕ್ಕಮಟ್ಟಿಗೆ ಯಶಸ್ಸು ಕಂಡಿತ್ತು. ಈ ಹಿಂದಿನ ಎರಡು ಲೋಕಸಭಾ ಚುನಾವಣೆಗೆ ಹೋಲಿಸಿದಾಗ, 2024ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯು ಮ್ಯಾಜಿಕ್ ನಂಬರ್ ದಾಟಲಿಲ್ಲ. ಆದರೆ ಮೈತ್ರಿ ಪಕ್ಷಗಳ ಬೆಂಬಲದೊಂದಿಗೆ ಸಲೀಸಾಗಿ ಅಧಿಕಾರದ ಗದ್ದುಗೆಗೆ ಮೋದಿ ಏರಿದ್ದು ಸುಳ್ಳಲ್ಲ. ಆದರೆ 2019ರ ಚುನಾವಣೆಗೆ ಹೋಲಿಸಿದರೆ 2024ರ ಚುನಾವಣೆಯು ಬಿಜೆಪಿ ಪಾಲಿಗೆ 'ಲ್ಯಾಂಡ್‌ಸ್ಲೈಡ್ ವಿಕ್ಟರಿ' ಆಗಿರಲಿಲ್ಲ. ಮತ್ತೊಂದೆಡೆ, ಈ ಹಿಂದಿನ ಎರಡು ಅವಧಿಯಲ್ಲಿ ಅಧಿಕೃತ ಪ್ರತಿಪಕ್ಷ ಸ್ಥಾನ ಪಡೆಯಲು ವಿಫಲವಾಗಿದ್ದ ಕಾಂಗ್ರೆಸ್ 2019ರ ಚುನಾವಣೆಗೆ ಹೋಲಿಸಿದರೆ ಹೆಚ್ಚುವರಿ 47 ಸೀಟುಗಳನ್ನು ಗೆಲ್ಲುವ ಮೂಲಕ 99 ಸ್ಥಾನಕ್ಕೆ ಏರಿತ್ತು. ಅದೇ ಬಿಜೆಪಿ 19ರಲ್ಲಿ 303 ಸ್ಥಾನದೊಂದಿಗೆ ಮುನ್ನೂರರ ಗಡಿ ದಾಟಿತ್ತು. ಆದರೆ 2024ರ ಚುನಾವಣೆಯಲ್ಲಿ 63 ಸ್ಥಾನಗಳನ್ನು ಕಳೆದುಕೊಂಡು 240 ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಶೇಕಡಾವಾರು ಮತಗಳಿಕೆ ವಿಷಯದಲ್ಲಿ ಬಹುದೊಡ್ಡ ವ್ಯತ್ಯಾಸವಿರದಿದ್ದರೂ, ಸೀಟುಗಳಿಕೆಯಲ್ಲಿ ಕಾಂಗ್ರೆಸ್‌ನ ಸಾಧನೆಯು ಕಾಂಗ್ರೆಸ್ ಸೇರಿದಂತೆ ಬಿಜೆಪಿ ವಿರೋಧಿ ಪಾಳಯದಲ್ಲಿ ಕಾಣಿಸಿಕೊಂಡಿದ್ದ ಬಹುತೇಕ ಪಕ್ಷಗಳಿಗೆ ಭರವಸೆಯನ್ನು ಹುಟ್ಟಿಸಿತ್ತು, 2029ರ ಲೋಕಸಭಾ ಚುನಾವಣೆಯು 'ಆಶಾದಾಯಕ'ವಾಗಿ ಕಾಣಿಸಲು ಶುರುವಾಗಿತ್ತು.

ಆದರೆ ಲೋಕಸಭಾ ಚುನಾವಣೆಯಲ್ಲಿ ಮುನ್ನಡೆ ಸಾಧಿಸಿದ್ದ ಕಾಂಗ್ರೆಸ್, ಅದೇ ಸಮಯದಲ್ಲಿ ನಡೆದ ಆಂಧ್ರಪ್ರದೇಶ, ಒಡಿಶಾ, ಅರುಣಾಚಲ ಪ್ರದೇಶ, ಸಿಕ್ಕಿಂ ವಿಧಾನಸಭಾ ಚುನಾವಣೆಗಳಲ್ಲಿನ ಹಿನ್ನಡೆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ; ಈ ನಾಲ್ಕು ರಾಜ್ಯಗಳ ಪೈಕಿ ಆಂಧ್ರಪ್ರದೇಶದಲ್ಲಿ ಎನ್‌ಡಿಎ ಮೈತ್ರಿಪಕ್ಷವು ಅಧಿಕಾರದ ಗದ್ದುಗೆ ಹಿಡಿದರೆ, ಒಡಿಶಾ ಹಾಗೂ ಅರುಣಾಚಲ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು. ಅದಾದ ಬಳಿಕ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 48 ಕ್ಷೇತ್ರದಲ್ಲಿ ಗೆಲ್ಲುವ ಮೂಲಕ ಅಧಿಕಾರದ ಗದ್ದುಗೆಯನ್ನು ಏರಿತ್ತು. ಜಾರ್ಖಂಡ್‌ನಲ್ಲಿ ಜೆಎಂಎಂ ಪಕ್ಷವು ಕಾಂಗ್ರೆಸ್ ಸೇರಿದಂತೆ ಮಿತ್ರಪಕ್ಷಗಳ ಸಹಾಯದೊಂದಿಗೆ ಅಧಿಕಾರದ ಗದ್ದುಗೆಯನ್ನು ಹಿಡಿದಿದೆ.

ಈ ರಾಜ್ಯಗಳನ್ನು ಹೊರತುಪಡಿಸಿದರೆ ರಾಷ್ಟ್ರ ರಾಜಧಾನಿ, ಕೇಂದ್ರಾಡಳಿತ ಪ್ರದೇಶವಾಗಿರುವ ದೆಹಲಿಯಲ್ಲಿ ನಡೆದ ಚುನಾವಣೆಯಲ್ಲಿ ಒಂದು ದಶಕಗಳ ಕಾಲ ಭಾರಿ ಬಹುಮತದೊಂದಿಗೆ ಅಧಿಕಾರ ನಡೆಸಿದ್ದ 'ಆಮ್ ಆದ್ಮಿ ಪಾರ್ಟಿ'ಗೆ (ಆಪ್)ಪರ್ಯಾಯವಾಗಿ ಬಿಜೆಪಿ ಕಾಣಿಸಿದೆ. 2024ರ ಚುನಾವಣೆಯಲ್ಲಿ 70 ಕ್ಷೇತ್ರಗಳಲ್ಲಿ 48 ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದರೆ, 22 ಕ್ಷೇತ್ರಕ್ಕೆ 'ಆಪ್' ಕುಸಿದಿತ್ತು. ಈ ಮೂಲಕ ಕಾಂಗ್ರೆಸ್ ದೆಹಲಿಯಲ್ಲಿ ಶೂನ್ಯ ಸಾಧನೆಯನ್ನು ಮಾಡಿದೆ. ಹಾಗೆ ನೋಡಿದರೆ, ದೆಹಲಿ ಮಾತ್ರವಲ್ಲದೇ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಸಿಕ್ಕಿಂ, ನಾಗಾಲ್ಯಾಂಡ್‌ಗಳಲ್ಲಿ ಕಾಂಗ್ರೆಸ್ ಶಾಸಕರ ಪ್ರಾತಿನಿಧ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಮುಂದುವರಿದ ಭಾಗವಾಗಿ ಕಳೆದ ವಾರ ಪ್ರಕಟವಾದ ಬಿಹಾರ ಚುನಾವಣಾ ಫಲಿತಾಂಶದಲ್ಲಿ ಒಂದಂಕಿಗೆ ಸೀಮಿತವಾಗುವ ಮೂಲಕ ಕಾಂಗ್ರೆಸ್ ಮತ್ತಷ್ಟು ಕುಸಿದಿದೆ ಎಂದರೆ ತಪ್ಪಾಗುವುದಿಲ್ಲ. ಈ ಮೂಲಕ ದೇಶಾದ್ಯಂತ 4092 ಶಾಸಕರ ಪೈಕಿ ಕಾಂಗ್ರೆಸ್ 646 ಶಾಸಕರ ಬಲವನ್ನು ಹೊಂದಿದೆ. ಅದರಲ್ಲಿ ಕರ್ನಾಟಕದಲ್ಲಿಯೇ 136ರಷ್ಟು ಸಂಖ್ಯಾಬಲವಿದೆ ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ.

ಹಾಗೆ ನೋಡಿದರೆ, ಮೊದಲೇ ಹೇಳಿದಂತೆ ಲೋಕಸಭಾ ಚುನಾವಣೆಯಲ್ಲಿ ಸಂಸದರ ಸಂಖ್ಯೆಯನ್ನು ಏರಿಸಿಕೊಂಡ ಬಳಿಕ ಹಲವು ನಾಯಕರಿಗೆ ಮುಂದಿನ ದಿನದಲ್ಲಿ ಬಿಜೆಪಿ ವಿರುದ್ಧ ಪ್ರಬಲ ಸ್ಪರ್ಧೆ ಒಡ್ಡಬಹುದು ಎನ್ನುವ ನಿರೀಕ್ಷೆಯಿತ್ತು. ಆದರೆ ಅದಾದ ಬಳಿಕ ನಡೆದ ಬಹುತೇಕ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ತಾನು ಮೆರೆದ ನೀರಸ ಸಾಧನೆ ಕಾಂಗ್ರೆಸ್‌ನ ಆತಂಕಕ್ಕೆ ಕಾರಣವಾಗಿದೆ. ಸ್ವಾತಂತ್ರ್ಯಪೂರ್ವ ಪಕ್ಷವಾಗಿರುವ ಕಾಂಗ್ರೆಸ್‌ಗೆ ಈಗಲೂ ಕಾರ್ಯಕರ್ತರ ಕೊರತೆಯಿಲ್ಲ. ರಾಹುಲ್ ಗಾಂಧಿ ಎಲ್ಲಿಯೇ ಹೋದರೂ ಸೇರುವ ಜನರ ಸಂಖ್ಯೆಗೇನು ಕಡಿಮೆಯಿಲ್ಲ, ಕೇಂದ್ರ ಬಿಜೆಪಿ ವಿರುದ್ಧ ದಿನಕ್ಕೊಂದು ಆರೋಪವನ್ನು ಸುದ್ದಿಗೋಷ್ಠಿಯಲ್ಲಿ ಮಾಡಿಕೊಂಡೇ ಬರಲಾಗುತ್ತಿದೆ. ಇಷ್ಟೆಲ್ಲ ಆದರೂ ಮತಗಳಿಕೆ ವಿಷಯದಲ್ಲಿ ಮಾತ್ರ ಪಕ್ಷವು ಸುಧಾರಣೆ ಕಾಣದಿರುವುದು ಕಾಂಗ್ರೆಸ್‌ನ ಥಿಂಕ್ ಟ್ಯಾಂಕ್‌ಗೆ ಬಹುದೊಡ್ಡ ಸಮಸ್ಯೆಯಾಗಿದೆ.

ಬಿಹಾರ ಚುನಾವಣೆ ಬಳಿಕ ಬಿಜೆಪಿಯೊಂದು ವಿಭಿನ್ನ ಅಂಕಿ-ಅಂಶವನ್ನು ಬಿಡುಗಡೆ ಮಾಡಿತ್ತು. ರಾಹುಲ್ ಗಾಂಧಿ ಕಾಂಗ್ರೆಸ್ ನೇತೃತ್ವ ವಹಿಸಿದ ಬಳಿಕ ಸುಮಾರು ಚುನಾವಣೆಗಳನ್ನು ಎದುರಿಸಲಾಗಿದೆ. ಇದರಲ್ಲಿ 95 ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ಸೋಲಾಗಿದೆಯಂತೆ. ಪ್ರಮುಖವಾಗಿ ಹಿಮಾಚಲ ಪ್ರದೇಶ (2007, 2017), ಪಂಜಾಬ್ (2007, 2012, 2022), ಗುಜರಾತ್ (2007, 2012, 2017, 2022), ಮಧ್ಯಪ್ರದೇಶ (2008, 2013, 2018, 2023), ಮಹಾರಾಷ್ಟ್ರ (2014, 2019, 2024) ಮತ್ತು ದೆಹಲಿ, ಹರಿಯಾಣ, ಉತ್ತರಪ್ರದೇಶ, ಬಿಹಾರದಲ್ಲಿ ಸರಣಿ ಸೋಲುಗಳನ್ನು ಕಾಂಗ್ರೆಸ್ ಕಂಡಿದೆ. ಬಿಹಾರದಲ್ಲಿ ರಾಹುಲ್ ರ‍್ಯಾಲಿ ನಡೆಸಿದ ಎಲ್ಲ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಪರಾಭವ ಅನುಭವಿಸಿರುವುದು ಅಂಕಿ-ಅಂಶದಲ್ಲಿ ಸ್ಪಷ್ಟವಾಗಿದೆ.

ಲೋಕಸಭೆಯಲ್ಲಿ ಗೆಲುವಿನ ಟ್ರ್ಯಾಕ್ ಕಂಡುಕೊಂಡಿದ್ದ ಕಾಂಗ್ರೆಸ್ ಮತ್ತೆ ಸೋಲಿನ ಸುಳಿಗೆ ಸಿಲುಕಲು ಹತ್ತಾರು ಕಾರಣಗಳಿವೆ. ಪ್ರಮುಖವಾಗಿ 'ಇಂಡಿಯಾ' ಮೈತ್ರಿಕೂಟದಲ್ಲಿರುವ ಬಹುತೇಕ ಪಕ್ಷಗಳಿಗೆ ಕಾಂಗ್ರೆಸ್ ನಾಯಕತ್ವವನ್ನು ಪೂರ್ಣಪ್ರಮಾಣದಲ್ಲಿ ಒಪ್ಪಿಕೊಳ್ಳಲು ಆಗಿಲ್ಲ, ಆ ನಾಯಕತ್ವದಲ್ಲಿ ಅವಕ್ಕೆ ವಿಶ್ವಾಸವಿಲ್ಲ. ಹಾಗೆಂದು, ಕಾಂಗ್ರೆಸ್ ಹೊರತಾಗಿ ಬೇರೆ ಪಕ್ಷಕ್ಕೆ ನಾಯಕತ್ವ ನೀಡಲು ಕಾಂಗ್ರೆಸ್ಸಿಗರು ಸಿದ್ಧರಿಲ್ಲ. ಇದರೊಂದಿಗೆ ಎಲ್ಲ ಚುನಾವಣೆಗಳಲ್ಲಿಯೂ ಮೈತ್ರಿಪಕ್ಷದೊಂದಿಗೆ ಸೀಟು ಹಂಚಿಕೆ ವಿಷಯದಲ್ಲಿ ಕಾಂಗ್ರೆಸ್ ಎಡವುತ್ತಿರುವುದು ಸ್ಪಷ್ಟ. ಬಿಹಾರ ಚುನಾವಣೆಯಲ್ಲಿಯಂತೂ ಹಲವು ಕ್ಷೇತ್ರದಲ್ಲಿ ಮಹಾಘಟಬಂಧನದ ಎಲ್ಲ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದರು. ಇದರೊಂದಿಗೆ ಕರ್ನಾಟಕದಲ್ಲಿ ಯಶಸ್ವಿಯಾದ 'ಗ್ಯಾರಂಟಿ ಘೋಷಣೆ'ಯನ್ನು ಎಲ್ಲ ಚುನಾವಣೆಯ ಪ್ರಣಾಳಿಕೆಯಲ್ಲಿಯೂ ಕಾಪಿ-ಪೇಸ್ಟ್ ಮಾಡಲು ಶುರು ಮಾಡಿದ್ದಾರೆ. ಆದರೆ ಪ್ರತಿ ಬಾರಿಯೂ ಇದು ವರ್ಕ್ ಔಟ್ ಆಗುವುದಿಲ್ಲ ಎನ್ನುವುದನ್ನು ಕಾಂಗ್ರೆಸ್‌ನ ದೆಹಲಿ ನಾಯಕರು ಅರಿಯಬೇಕಿದೆ.

ಹಾಗೆ ನೋಡಿದರೆ, ಮುಳುಗುತ್ತಿರುವ ಕಾಂಗ್ರೆಸ್‌ಗೆ ಹೊಸ ಚೈತನ್ಯ ನೀಡಿದ ರಾಜ್ಯವೆಂದರೆ ಕರ್ನಾಟಕ. 2023ರಲ್ಲಿ



ನಡೆದ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿದ್ದರಿಂದ, ಮುಂದಿನ ಲೋಕಸಭಾ ಚುನಾವಣೆ ಸೇರಿ ಇನ್ನುಳಿದ ಚುನಾವಣೆಯಲ್ಲಿ ಪಕ್ಷಕ್ಕೆ ಅವಕಾಶವಿದೆ ಎನ್ನುವ ಆತ್ಮವಿಶ್ವಾಸವು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹಾಗೂ ನಾಯಕರುಗಳಲ್ಲಿ ಮೂಡಿತ್ತು. ಕರ್ನಾಟಕದಲ್ಲಿ ಕಾಂಗ್ರೆಸ್ ಗೆಲ್ಲುವುದಕ್ಕೆ ಇಲ್ಲಿನ ಸ್ಥಳೀಯ ನಾಯಕತ್ವ ಹಾಗೂ ಇಡೀ ದೇಶದಲ್ಲಿ ಮೊದಲು ಎನ್ನುವ ರೀತಿಯಲ್ಲಿ ನೀಡಿದ್ದ ಗ್ಯಾರಂಟಿ ಯೋಜನೆಯ ಭರವಸೆಗಳು ವರ್ಕ್ ಔಟ್ ಆಗಿದ್ದವು. ಆದರೆ ಗೆಲುವಿಗೆ ಕಾರಣವಾಗಿದ್ದ ಈ ಅಂಶಗಳನ್ನು ಮುನ್ನೆಲೆಗೆ ತರುವ ಬದಲು, ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ರಾಹುಲ್ ಗಾಂಧಿ ನಡೆಸಿದ 'ಭಾರತ್ ಜೋಡೋ' ಪಾದಯಾತ್ರೆ ಕಾರಣವೆಂದು ಬಿಂಬಿಸಲು ಶುರುಮಾಡಿದರು. ಕರ್ನಾಟಕದ ಕಾಂಗ್ರೆಸ್ ನಾಯಕರಿಗೆ 'ನೈಜ' ಕಾರಣ ಗೊತ್ತಿದ್ದರೂ ಗಾಂಧಿ ಕುಟುಂಬವನ್ನು ಓಲೈಸಿಕೊಳ್ಳುವ ಭರದಲ್ಲಿ ಕರ್ನಾಟಕದ ಚುನಾವಣೆ ಮುಖ್ಯ ಕಾರಣವಾಗಿದ್ದ ರಾಜ್ಯ ನಾಯಕತ್ವವನ್ನು ತೋರಿಸುವ ಪ್ರಯತ್ನವನ್ನು ಮಾಡಲಿಲ್ಲ. ಇನ್ನು ತೆಲಂಗಾಣದಲ್ಲಿನ ಗೆಲುವಿನಲ್ಲಿಯೂ ಕರ್ನಾಟಕದ ಬಹುದೊಡ್ಡ ಪಾತ್ರವಿತ್ತು. ಇದರೊಂದಿಗೆ, ತೆಲಂಗಾಣ, ಜಾರ್ಖಂಡ್‌ನಲ್ಲಿದ್ದ ಆಡಳಿತ ವಿರೋಧಿ ಅಲೆ ವರ್ಕ್ ಔಟ್ ಆಗಿತ್ತು. ಆದರೆ ಈ ಎರಡೂ ರಾಜ್ಯದಲ್ಲಿ 'ರಾಗಾ' ಕಮಾಲ್ ಆಗಿದೆ ಎನ್ನುವ ನರೇಟಿವ್ ಅನ್ನು ಫಿಕ್ಸ್ ಮಾಡುವ ಪ್ರಯತ್ನವನ್ನು ಗಾಂಧಿ ಕುಟುಂಬದ ಹಿಂದೆ-ಮುಂದೆ ಓಡಾಡಿಕೊಂಡಿದ್ದ ನಾಯಕರು ನಿರಂತರವಾಗಿ ಮಾಡಿದರು. ಈ ನರೇಟಿವ್ ಸುಳ್ಳೆಂದು ಹೇಳಿ ಗಾಂಧಿ ಕುಟುಂಬವನ್ನು ಎದುರುಹಾಕಿಕೊಳ್ಳಲು ಕಾಂಗ್ರೆಸ್‌ನ ಯಾವ ನಾಯಕರೂ ಸಿದ್ಧವಿಲ್ಲದ ಕಾರಣ ಸತ್ಯದ ಬಗ್ಗೆ ಚರ್ಚೆಯಾಗಲೇ ಇಲ್ಲ.

ಕರ್ನಾಟಕ, ತೆಲಂಗಾಣ, ಜಾರ್ಖಂಡ್ ಹೊರತುಪಡಿಸಿದರೆ ಇನ್ನುಳಿದ ರಾಜ್ಯಗಳಲ್ಲಿ ಸ್ಥಳೀಯ ನಾಯಕತ್ವದಲ್ಲಿದ್ದ ಹಲವಾರು ಗೊಂದಲ, ಮೈತ್ರಿಪಕ್ಷಗಳೊಂದಿಗಿನ ಭಿನ್ನಾಭಿಪ್ರಾಯದಿಂದ ಬಿಜೆಪಿ ಹಾಗೂ ಮೈತ್ರಿಪಕ್ಷಗಳಿಗೆ 'ರೆಡ್ ಕಾರ್ಪೆಟ್' ಅನ್ನು ಕಾಂಗ್ರೆಸ್ ಪಕ್ಷವೇ ಹಾಕಿಕೊಟ್ಟಿದೆ ಎಂದರೆ ತಪ್ಪಾಗುವುದಿಲ್ಲ.

ತೀರಾ ಇತ್ತೀಚಿನ ಉದಾಹರಣೆ ನೀಡುವುದಾದರೆ, ಇತ್ತೀಚೆಗೆ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 61 ಕ್ಷೇತ್ರವನ್ನು ಬಿಟ್ಟುಕೊಡಲು ಮಹಾಘಟಬಂಧನದ ಮೈತ್ರಿಪಕ್ಷ ಆರ್‌ಜೆಡಿಗೆ ಸುತರಾಂ ಇಷ್ಟವಿರಲಿಲ್ಲ. ಆದರೆ ರಾಹುಲ್ ಗಾಂಧಿ ಅವರ ಒತ್ತಡಕ್ಕೆ ಮಣಿದು 61 ಸೀಟನ್ನು ಬಿಟ್ಟುಕೊಟ್ಟಿತ್ತು. ಆದರೆ ಬಂದಿದ್ದು ಮಾತ್ರ ಆರು ಸೀಟು. ಬಿಹಾರ ಮಾತ್ರವಲ್ಲ, ಮಹಾಘಟಬಂಧನ ರಚನೆಯಾದ ಬಳಿಕ ನಡೆದಿರುವ ಬಹುತೇಕ ಚುನಾವಣೆಗಳಲ್ಲಿ ಸೋಲುವುದಕ್ಕೆ ಸೀಟು ಹಂಚಿಕೆಯೂ ಬಹುದೊಡ್ಡ ಸಮಸ್ಯೆಯಾಗಿದೆ.

ಕೆಲ ದಶಕದ ಹಿಂದೆ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡರೆ ಚುನಾವಣೆಯಲ್ಲಿ ಲಾಭವಾಗುತ್ತದೆ ಎನ್ನುವ ಲೆಕ್ಕಾಚಾರದಲ್ಲಿ ಅನೇಕ ಪ್ರಾದೇಶಿಕ ಹಾಗೂ ಸಣ್ಣ ಪಕ್ಷಗಳಿದ್ದವು. ಆದರೆ ಕಾಂಗ್ರೆಸ್‌ನ ಇತ್ತೀಚಿನ ಪ್ರದರ್ಶನವನ್ನು ನೋಡಿದರೆ, ಯಾವುದೇ ಮೈತ್ರಿಪಕ್ಷಕ್ಕೆ ಕಾಂಗ್ರೆಸ್ 'ಸಹಕಾರಿ'ಯಾಗುವುದಕ್ಕಿಂತ ಹೆಚ್ಚಾಗಿ 'ಹೊರೆ'ಯಾಗುತ್ತದೆ ಎನ್ನುವುದು ಸ್ಪಷ್ಟ.

ಸೋನಿಯಾ ಗಾಂಧಿ ಅವರು ಸಕ್ರಿಯ ರಾಜಕಾರಣದ ಹೊಣೆಯನ್ನು ರಾಹುಲ್ ಗಾಂಧಿ ಅವರಿಗೆ ವಹಿಸಿದ ಬಳಿಕ 'ರಾಗಾ' ಹತ್ತು ಹಲವು ರೀತಿಯ ತಂತ್ರಗಾರಿಕೆ ಮಾಡುತ್ತಿದ್ದಾರೆ. ಅವರು ಇಡೀ ದೇಶವನ್ನು ಪಾದಯಾತ್ರೆಯ ಮೂಲಕ ಸುತ್ತಿ ಪಕ್ಷದ ಕಾರ್ಯಕರ್ತರಿಗೆ ಮತ್ತು ವಿವಿಧ ಸ್ತರದ ನಾಯಕರಿಗೆ ಹೊಸ ಹುರುಪನ್ನು ನೀಡಿದ್ದು ನಿಜ. ಆದರೆ ರಾಹುಲ್ ಗಾಂಧಿ ಕೈಗೆತ್ತಿಕೊಳ್ಳುವ ಬಹುತೇಕ ಚರ್ಚಾವಿಷಯಗಳು 'ಹಿಟ್ ಆ್ಯಂಡ್ ರನ್' ರೀತಿಯಲ್ಲಿರುತ್ತವೆ. 2013-14ರ ಸಮಯದಲ್ಲಿ ತಮ್ಮ ಹುಡುಗಾಟಿಕೆಯ ಮಾತುಗಳಿಂದ ಜನರನ್ನು ತಲುಪುವಲ್ಲಿ ವಿಫಲರಾಗಿದ್ದ ರಾಹುಲ್ ಗಾಂಧಿಯವರು, ಕಳೆದೊಂದು ದಶಕದಲ್ಲಿ ಮಾಗಿದ್ದಾರೆ ನಿಜ. ಆದರೆ ಮಾತಿನಲ್ಲಿ ಮಾಗಿರುವ ರಾಹುಲ್ ಗಾಂಧಿ ತಮ್ಮ ಆಲೋಚನೆಗಳಲ್ಲಿ ಇನ್ನೂ ಮಾಗುವುದು ಬಾಕಿಯಿದೆ. ಯಾವುದೇ ಚರ್ಚಾವಿಷಯವನ್ನು ಕೈಗೆತ್ತಿಕೊಂಡರೂ ಅದಕ್ಕೆ 'ತಾರ್ಕಿಕ' ಅಂತ್ಯ ಕಾಣಿಸುವ ರೀತಿಯಲ್ಲಿ ಯೋಚಿಸದೇ, ಸುದ್ದಿಗೋಷ್ಠಿ, ಸಾಮಾಜಿಕ ಜಾಲತಾಣಗಳಲ್ಲಿ ಒಂದು ಪೋಸ್ಟ್ ಹಾಕಿ ಕೈತೊಳೆದುಕೊಂಡರೆ ಜನ ನಂಬುವ ಪರಿಸ್ಥಿತಿಯಲ್ಲಿಲ್ಲ ಎನ್ನುವುದನ್ನು ಕಾಂಗ್ರೆಸ್ ಪಕ್ಷವು ಇನ್ನಾದರೂ ಅರ್ಥೈಸಿಕೊಳ್ಳಬೇಕಿದೆ. ಹವಾನಿಯಂತ್ರಿತ ಕೋಣೆಯಲ್ಲಿ ಕೂತು ಅಂಕಿ-ಅಂಶಗಳನ್ನು ಹೇಳುವುದನ್ನು ಬಿಟ್ಟು, ಜನರ ಬಳಿಗೆ ಹೋಗಬೇಕಿದೆ. ಇಲ್ಲವಾದರೆ ಉಳಿದಿರುವ ಕೆಲ ರಾಜ್ಯಗಳು ಕೈಬಿಟ್ಟು ಹೋದರೂ ಅಚ್ಚರಿಪಡಬೇಕಿಲ್ಲ.

ಭಾರತೀಯ ರಾಜಕಾರಣದಲ್ಲಿ ಹೊಸ ವ್ಯಾಖ್ಯಾನದ ಉದಯ

ಬಿಹಾರದ ಚುನಾವಣೆಗಳು ಒಂದು ಕಾಲದಲ್ಲಿ ಮತಗಟ್ಟೆ ವಶಪಡಿಸಿಕೊಳ್ಳುವುದರೊಂದಿಗೆ ಮತ್ತು ಹಿಂಸಾಚಾರದೊಂದಿಗೆ ಸಂಬಂಧ ಹೊಂದಿದ್ದವು. ಇತ್ತೀಚಿನ ವರ್ಷಗಳಲ್ಲಿ, ಆ ಸನ್ನಿವೇಶಗಳು ಬಹಳ ಕಡಿಮೆಯಾಗಿವೆ. ದೃಢವಾದ ಭದ್ರತಾ ಕ್ರಮಗಳು, ಆರ್ಥಿಕ ಅಭಿವೃದ್ಧಿಯ ಜತೆಗೆ ಗಲಭೆಯಿಂದ ಬಾಧಿತ ಪ್ರದೇಶಗಳನ್ನು ಹಿಂದಿಕ್ಕಲಾಗಿದೆ. ವ್ಯಾಪಾರಿಗಳು ಈಗ ತಮ್ಮ ಅಂಗಡಿಗಳನ್ನು ಹೆಚ್ಚು ಸಮಯ ತೆರೆದಿರುತ್ತಾರೆ, ವಿದ್ಯಾರ್ಥಿಗಳು ಹೆಚ್ಚಿನ ಆತ್ಮವಿಶ್ವಾಸದಿಂದ ಪ್ರಯಾಣ ಮಾಡುತ್ತಾರೆ ಮತ್ತು ಕುಟುಂಬಗಳು ಕಡಿಮೆ ಆತಂಕದೊಂದಿಗೆ ಸಾರ್ವಜನಿಕ ಜೀವನವನ್ನು ಅನುಭವಿಸುತ್ತಾರೆ.

ಕೇಳು ಜನಮೇಜಯ

ಹರ್‌ದೀಪ್‌ಸಿಂಗ್ ಪುರಿ

vveditoped@gmail.com

ಬಿಹಾರದ ಜನರು ಸ್ಥಾನಗಳ ಲೆಕ್ಕಾಚಾರವನ್ನೂ ಮೀರಿದಂಥ ಅಧಿಕ ತೂಕವನ್ನು ಹೊಂದಿರುವ ಜನಾದೇಶವನ್ನು ನೀಡಿದ್ದಾರೆ. ವಿಧಾನಸಭೆಯ 243 ಸ್ಥಾನಗಳ ಪೈಕಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟಕ್ಕೆ (ಎನ್‌ಡಿಎ) 202 ಸ್ಥಾನಗಳಲ್ಲಿ ಗೆಲುವು ಲಭಿಸಿದ್ದು, ಅದರಲ್ಲಿ ಬಿಜೆಪಿಯೊಂದೇ 89 ಸ್ಥಾನಗಳನ್ನು ಗಳಿಸಿದೆ, ಇದು ಆ ರಾಜ್ಯದಲ್ಲಿ ಪಕ್ಷದ ಇದುವರೆಗಿನ ಅತ್ಯುತ್ತಮ ಸಾಧನೆಯಾಗಿದೆ. ವಿವಿಧ ಮೈತ್ರಿಕೂಟಗಳಲ್ಲಿ ದಶಕಗಳಿಂದ ಬಿಹಾರದ ರಾಜಕೀಯದಲ್ಲಿ ಪ್ರಾಬಲ್ಯ ಸಾಧಿಸಿದ್ದ ಮಹಾಘಟಬಂಧನ್ ಇದೀಗ ಕೇವಲ 34 ಸ್ಥಾನಗಳಿಗೆ ಕುಸಿದಿದೆ. 7.4 ಕೋಟಿಗೂ ಅಧಿಕ ನೋಂದಾಯಿತ ಮತದಾರರಿರುವ ಈ ರಾಜ್ಯದಲ್ಲಿ ಈ ಸಲ ಶೇ. 67.13ರಷ್ಟು ಮತದಾನವಾಗಿದ್ದು, ಇದು ಬಿಹಾರದ ಇತ್ತೀಚಿನ ಇತಿಹಾಸದಲ್ಲಿ ಅತ್ಯಂತ ತೀವ್ರ ಸ್ಪರ್ಧೆ ಇದ್ದಂಥ ಚುನಾವಣೆಗಳಲ್ಲಿ ಒಂದಾಗಿದೆ ಮತ್ತು ಫಲಿತಾಂಶವು ನಿಜವಾದ ಪ್ರಜಾಪ್ರಭುತ್ವದ ಆಳದ ಅರಿವನ್ನು ಮೂಡಿಸುತ್ತದೆ.

ಹಲವು ವರ್ಷಗಳಿಂದ ಬಿಹಾರದ ಕುರಿತಾದ ಹೆಚ್ಚಿನ ವ್ಯಾಖ್ಯಾನವು ರಾಜ್ಯವನ್ನು ತಟಸ್ಥವಾಗಿ ನಿಂತಿರುವಂತೆ ಪರಿಗಣಿಸಿತು. ಚುನಾವಣೆಗಳನ್ನು ಜಾತಿ ಆಧಾರಿತ ಪ್ರಕ್ರಿಯೆಗಳನ್ನಾಗಿ ನೋಡಲಾಗುತ್ತಿತ್ತು, ಜನಸಂಖ್ಯೆಯ ಸಾಮಾಜಿಕ ಸ್ಥಿತಿಗತಿಯು ಯಾಂತ್ರಿಕವಾಗಿ ರಾಜಕೀಯ ಫಲಿತಾಂಶಗಳಾಗಿ ಪರಿವರ್ತನೆಯಾಗುತ್ತಿತ್ತು ಎಂದು ಭಾವಿಸಲಾಗಿತ್ತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತೀಯ ರಾಜಕೀಯದ ವ್ಯಾಕರಣವು ಅಭಿವೃದ್ಧಿ, ಎಲ್ಲರನ್ನೂ ಒಳಗೊಳ್ಳುವುದು ಮತ್ತು ರಾಜ್ಯದ ಸಾಮರ್ಥ್ಯವನ್ನು ಗುರುತಿಸಿ ಅದನ್ನು ಬೆಳಸುವ ನಿರ್ಣಾಯಕ ವಿಧಾನವಾಗಿ ಬದಲಾಗಿದೆ ಮತ್ತು ಬಿಹಾರದ ಮತದಾರರು ಆ ಬದಲಾವಣೆಗೆ ಅತ್ಯಂತ ಸ್ಪಷ್ಟತೆಯೊಂದಿಗೆ ಪ್ರತಿಕ್ರಿಯಿಸಿದ್ದಾರೆ. 2025ರ ಫಲಿತಾಂಶವು ಹೆಚ್ಚು ಬೇಡಿಕೆಯಿರುವ ಮತದಾರರ ಮನದಾಳವನ್ನು ಬಹಿರಂಗಪಡಿಸುತ್ತದೆ; ಅವರು ಅಭದ್ರತೆ ಮತ್ತು ಸಂವೇದನಾರಹಿತ ಬಿಹಾರ ಮತ್ತು ಸುಧಾರಿತ ಆಡಳಿತದ ಬಿಹಾರದ ನಡುವಿನ ವ್ಯತ್ಯಾಸವನ್ನು ನೋಡಿದ್ದಾರೆ. 2024ರ ಸಾರ್ವತ್ರಿಕ ಚುನಾವಣೆಯಲ್ಲಿ ನಿರೀಕ್ಷೆಗಿಂತ ಕಡಿಮೆ ಜನಸಮೂಹದ ನಂತರ ಈ ಚುನಾವಣೆಯು ಜವಾಬ್ದಾರಿಯುತ ಪ್ರಜ್ಞೆಯನ್ನು ಹೊಂದಿದೆ ಎಂಬುದನ್ನು ಅನೇಕ ನಾಗರಿಕರು ಸಂಭಾಷಣೆಗಳು ಮತ್ತು ಮತದಾನದ ಮಾದರಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ದೇಶದ ವಿಶಾಲ ಪಯಣದಲ್ಲಿ ಬಿಹಾರ ಎಲ್ಲಿ ನಿಲ್ಲಬೇಕೆಂದು ಅವರು ಬಯಸುತ್ತಾರೆ ಎಂಬುದರ ಕುರಿತು ಅವರು ತಮ್ಮದೇ ಆದ ತೀರ್ಮಾನ ಕೈಗೊಂಡಿದ್ದಾರೆ.

ಈ ಪರಿವರ್ತನೆಗೆ ಆಡಳಿತ ವಿತರಣೆಯು ಆಧಾರವಾಗಿದೆ. ಕಳೆದೊಂದು ದಶಕದಲ್ಲಿ ಬಿಹಾರವು 55,000 ಕಿಲೋಮೀಟರ್‌ಗಳಿಗೂ ಅಧಿಕ ಗ್ರಾಮೀಣ ರಸ್ತೆಗಳನ್ನು ನಿರ್ಮಿಸಿದೆ ಅಥವಾ ಮೇಲ್ದರ್ಜೆಗೇರಿಸಿದೆ. ಇದು ಗ್ರಾಮಗಳನ್ನು ಮಾರುಕಟ್ಟೆಗಳು, ಶಾಲೆಗಳು ಮತ್ತು ಆರೋಗ್ಯ ಕೇಂದ್ರಗಳಿಗೆ ಸಂಪರ್ಕಿಸುತ್ತದೆ. ಕೇಂದ್ರ ಯೋಜನೆಗಳು ಮತ್ತು ರಾಜ್ಯ ಕಾರ್ಯಕ್ರಮಗಳ ಸಂಯೋಜನೆಯ ಮೂಲಕ ಲಕ್ಷಾಂತರ ಮನೆಗಳು ವಿದ್ಯುತ್, ಕುಡಿಯುವ ನೀರು ಮತ್ತು ಸಾಮಾಜಿಕ ಭದ್ರತೆಯನ್ನು ಪಡೆದಿವೆ. ಸೌಭಾಗ್ಯ ಮತ್ತು ಸಂಬಂಧಿತ ಉಪಕ್ರಮಗಳ ಅಡಿಯಲ್ಲಿ, ಬಿಹಾರದಲ್ಲಿ 35 ಲಕ್ಷಕ್ಕೂ ಅಧಿಕ ಮನೆಗಳನ್ನು ವಿದ್ಯುದೀಕರಣಗೊಳಿಸಲಾಗಿದ್ದು, ರಾಜ್ಯವನ್ನು ಸಾರ್ವತ್ರಿಕ ವಿದ್ಯುತ್ ಸಂಪರ್ಕದ ಸನಿಹಕ್ಕೆ ಅದು ಕೊಂಡೊಯ್ದಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಬಿಹಾರಕ್ಕೆ 57 ಲಕ್ಷಕ್ಕೂ ಅಧಿಕ ಪಕ್ಕಾ ಮನೆಗಳನ್ನು ಮಂಜೂರು ಮಾಡಲಾಗಿದೆ. ಅವುಗಳಲ್ಲಿ ಹಲವು, ಮಹಿಳೆಯರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿವೆ. ಸರ್ವಋತು ರಸ್ತೆ, ಸದಾ ಉರಿಯುವ ದೀಪಗಳು, ಅಡೆತಡೆಯಿಲ್ಲದೆ ನೀರು ನೀಡುವ ಕೊಳಾಯಿ, ಘನತೆಯನ್ನು ಒದಗಿಸುವ ಮನೆ- ಇಂಥ ಅಂಕಿ ಅಂಶಗಳು ಜನರು ಕಣ್ಣಾರೆ ನೋಡುವ ಮತ್ತು ಅಭಿವೃದ್ಧಿಯನ್ನು ಕೈಯಾರೆ ಸ್ಪರ್ಶಿಸಬಹುದಾದ ಸಮಗ್ರ ಬದಲಾವಣೆಯನ್ನು ಸೂಚಿಸುತ್ತವೆ.

ಈ ಸಾರ್ವಜನಿಕ ಅಂಶಗಳು ಜನರಲ್ಲಿ ಹರಡುತ್ತಿರುವಂತೆಯೇ ಹಳೆಯ ಹಣೆಪಟ್ಟಿಗಳು ಸಹಜವಾಗಿ ಕಳೆದುಕೊಳ್ಳುತ್ತವೆ. ಬಿಹಾರದ ಸಮಾಜವು ವೈವಿಧ್ಯಮಯ ಮತ್ತು

ಹಲವು ಪದರಗಳಾಗಿ ಉಳಿದುಕೊಂಡಿದೆ. ಆದರೆ ಆ ಪದರಗಳು ಚುನಾವಣಾ ಪರಿಭಾಷೆಯಲ್ಲಿ ಇನ್ನು ಮುಂದೆ ಜಲನಿರೋಧಕ ಪಾತ್ರೆಗಳಂತೆ ವರ್ತಿಸುವುದಿಲ್ಲ. ವಿವಿಧ ಸಮುದಾಯಗಳ ಮಹಿಳೆಯರು ಈಗ ಸುರಕ್ಷತೆ, ಸಂಚಾರ ಮತ್ತು ಅವಕಾಶದ ಬಗ್ಗೆ ನಿರೀಕ್ಷೆಗಳನ್ನು ಹಂಚಿಕೊಳ್ಳುತ್ತಾರೆ. ಒಂದು ಕಾಲದಲ್ಲಿ ಸಾಮಾಜಿಕ ಶ್ರೇಣಿಯ ವಿರುದ್ಧ ತುದಿಗಳಲ್ಲಿದ್ದ ಕುಟುಂಬಗಳ ಯುವಕರು ಈಗ ಒಂದೇ ರೀತಿಯ ತರಬೇತಿ ತರಗತಿಗಳು ಮತ್ತು ಕಾರ್ಮಿಕ ಮಾರುಕಟ್ಟೆಗಳಲ್ಲಿ ತಮ್ಮನ್ನು ತಾವು ಕಂಡುಕೊಳ್ಳುತ್ತಾರೆ. ಅವರ ದೈನಂದಿನ ಅನುಭವಗಳು ಅವರನ್ನು ಹಂಚಿಕೆಯ ಆಕಾಂಕ್ಷೆಯ ಸ್ಥಳಕ್ಕೆ ಸೆಳೆಯುತ್ತವೆ. ಆ ಜಾಗದಲ್ಲಿ, ಅವರು ರಾಜಕೀಯದ ಬಗ್ಗೆ ಕೇಳುವ ಪ್ರಶ್ನೆಗಳು, ಉದ್ಯೋಗಗಳು, ಮೂಲಸೌಕರ್ಯ ಸ್ಥಿರತೆ ಮತ್ತು ನ್ಯಾಯಸಮ್ಮತತೆಗೆ ಸಂಬಂಧಿಸಿವೆ.

ಈ ಜನಾದೇಶವು 'ಕುಟುಂಬ ರಾಜಕೀಯ'ದ ಬಗ್ಗೆಯೂ ಸ್ಪಷ್ಟ ಸಂದೇಶವನ್ನು ನೀಡಿದೆ. ಕುಟುಂಬದ ವರ್ಚಸ್ಸು ಮತ್ತು ಆನುವಂಶಿಕ ಜಾಲಗಳನ್ನು ಅವಲಂಬಿಸಿದ್ದ ಪಕ್ಷಗಳು ಶಾಸಕಾಂಗದಲ್ಲಿ ತಮಗಿರುವ ಸ್ಥಳವನ್ನು ಅರಿತುಕೊಳ್ಳುವಂತಾಗಿದೆ. ಬಿಹಾರವು ಹಲವಾರು ದಶಕಗಳಿಂದ ಆಯಕಟ್ಟಿನ ಸ್ಥಳಗಳಲ್ಲಿ ಇಂಥ ಮೈತ್ರಿಗಳನ್ನು ಗಮನಿಸಿದೆ ಮತ್ತು ಅವುಗಳ ಮಿತಿಗಳನ್ನು ಅರ್ಥಮಾಡಿಕೊಂಡಿದೆ. 2025ರ ಫಲಿತಾಂಶವು, ನಾಯಕರು ಸರಕಾರದಲ್ಲಿ ಹೇಗೆ ವರ್ತಿಸುತ್ತಾರೆ, ಬಿಕ್ಕಟ್ಟುಗಳಲ್ಲಿ ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ, ಸಂಸ್ಥೆಗಳೊಂದಿಗೆ ಹೇಗೆ ತೊಡಗಿಸಿಕೊಳ್ಳುತ್ತಾರೆ ಮತ್ತು ಸಾರ್ವಜನಿಕ ಸಂಪನ್ಮೂಲಗಳನ್ನು ಹೇಗೆ ಬಳಸುತ್ತಾರೆ ಎಂಬುದನ್ನು ಮತದಾರರು ಹೇಗೆ ನೋಡುತ್ತಿದ್ದಾರೆಂಬುದನ್ನು ಸೂಚಿಸುತ್ತದೆ. ಹೆಚ್ಚು ವಿಸ್ತೃತವಾಗಿ ಬೇರುಬಿಟ್ಟಿರುವ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದೊಳಗೆ ಕುಟುಂಬದ ಹಿನ್ನೆಲೆಗಳು ಪ್ರಮುಖವಾಗುತ್ತವೆ; ಅವರು ಕಠಿಣ ಪರಿಶ್ರಮ, ಸಂಘಟನಾ ಸಾಮರ್ಥ್ಯ ಮತ್ತು ಸೇವೆಯ ದಾಖಲೆಯ ಬೇಡಿಕೆಗಳ ಮೂಲಕ ಹೆಚ್ಚಾಗಿ ಸ್ಪಂದಿಸುತ್ತಾ ಹೋಗುತ್ತಾರೆ.

ಯುವ ಮತದಾರರ ನಡವಳಿಕೆಯು ಈ ಬದಲಾವಣೆಯ ಕೇಂದ್ರ ಬಿಂದುವಾಗಿದೆ. ಬಿಹಾರವು ಭಾರತದ ಅತ್ಯಂತ ಹೆಚ್ಚಿನ ಯುವಸಂಖ್ಯೆ ಹೊಂದಿರುವ ರಾಜ್ಯಗಳಲ್ಲಿ ಒಂದಾಗಿದೆ ಮತ್ತು 2000 ನೇ ಇಸವಿಯ ನಂತರ ಜನಿಸಿದ ಲಕ್ಷಾಂತರ ನಾಗರಿಕರು ಈ ಚುನಾವಣೆಯಲ್ಲಿ ಮತ ಚಲಾಯಿಸಿದ್ದಾರೆ. ಅವರು ಎಕ್ಸ್‌ಪ್ರೆಸ್ ವೇಗಳು, ಡಿಜಿಟಲ್ ಪಾವತಿಗಳು, ಸ್ಪರ್ಧಾತ್ಮಕ ಒಕ್ಕೂಟ ಮತ್ತು ಮಹತ್ವಾಕಾಂಕ್ಷೆಯ ಕಲ್ಯಾಣ ಯೋಜನೆಗಳು ನಿರೀಕ್ಷೆಗಳನ್ನು ರೂಪಿಸುವ ಭಾರತವನ್ನು ನೋಡಿಕೊಂಡು ಬೆಳೆದಿದ್ದಾರೆ. ಅವರು ರಾಜ್ಯಗಳ ನಡುವೆ ಹೋಲಿಕೆ ಮಾಡುತ್ತಾರೆ, ಘೋಷಣೆಗಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿವೆ ಎಂಬುದನ್ನು ಗಮನಿಸುತ್ತಾರೆ ಮತ್ತು ಭರವಸೆಗಳು ಸಾಕಾರವಾಗಿಯೇ ಎಂಬುದನ್ನು ನೋಡಿ ತಮ್ಮ ನಾಯಕರನ್ನು ನಿರ್ಧರಿಸುತ್ತಾರೆ. ಅವರು ಸಮಯಕ್ಕೆ ಸರಿಯಾಗಿ ನಿರ್ಮಿಸಿದ ರಸ್ತೆಯನ್ನು ಮತ್ತು ಎಂದಿಗೂ ಸರಿಯಾಗದ ರಸ್ತೆಯ ನಡುವಿನ ವ್ಯತ್ಯಾಸವನ್ನು ಗಮನಿಸುತ್ತಾರೆ. ಅವರು ಪ್ರತಿದಿನ ಕಾಲೇಜುಗಳು, ತರಬೇತಿ ಕೇಂದ್ರಗಳು ಅಥವಾ ದುಡಿಯುವ ಸ್ಥಳಗಳಿಗೆ ಪ್ರಯಾಣಿಸುವಾಗ, ತಮ್ಮ ಕುಟುಂಬಗಳು ಸಂಪರ್ಕ ಮತ್ತು ಕಲ್ಯಾಣದಿಂದ ಪ್ರಯೋಜನ ಪಡೆಯುವುದನ್ನು ಕಂಡು ಆಗಿರುವ ವ್ಯತ್ಯಾಸವನ್ನು ಖುದ್ದು ನೋಡುತ್ತಿದ್ದಾರೆ.

ಈ ಯುವ ಪೀಳಿಗೆಯು ರಾಷ್ಟ್ರೀಯ ಸಮಾನತೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತದೆ. ಯುವ ಮತದಾರರು ಸಂಸ್ಥೆಗಳನ್ನು ದುರ್ಬಲಗೊಳಿಸುವ, ಪ್ರತ್ಯೇಕತಾವಾದದ ಭಾವನೆಯೊಂದಿಗೆ ಚೆಲ್ಲಾಟವಾಡುವ ಅಥವಾ ರಾಷ್ಟ್ರೀಯ ಭದ್ರತೆಯನ್ನು ಅಸ್ಥಿರಗೊಳಿಸುವ ಹೇಳಿಕೆಗಳ ಬಗ್ಗೆ ಬಹಳ ಜಾಗರೂಕರಾಗಿರುತ್ತಾರೆ. ಅವರು ನಿರುದ್ಯೋಗ ಮತ್ತು ಅಸಮಾನತೆ ಸೇರಿದಂತೆ ನೀತಿ ಚರ್ಚೆಗಳನ್ನು ವಿಮರ್ಶಾತ್ಮಕವಾಗಿ ನೋಡುತ್ತಾರೆ; ಆದರೆ ಅವರು ಗಣರಾಜ್ಯವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಟೀಕೆ ಮತ್ತು ಅದರ ಒಗ್ಗಟ್ಟಿನ ಬಗ್ಗೆ ಅಸಡ್ಡೆ ತೋರುವ ನಿರೂಪಣೆಗಳ ನಡುವೆ ಸ್ಪಷ್ಟವಾದ ಗೆರೆಯನ್ನು ಎಳೆಯುತ್ತಾರೆ. ಬಿಹಾರದ ತೀರ್ಪು ಈ ವ್ಯತ್ಯಾಸವನ್ನು ಪ್ರತಿಬಿಂಬಿಸುತ್ತದೆ. ಅಭಿವೃದ್ಧಿ ಮತ್ತು ರಾಷ್ಟ್ರೀಯ ಉದ್ದೇಶ ಎರಡರ ಬಗ್ಗೆ ಮಾತನಾಡುವ ರಾಜಕೀಯ ನಾಯಕರಿಗೆ ಮತದಾರರು ಅಸಾಮಾನ್ಯ ಸ್ಪಷ್ಟತೆಯಿಂದ ಪ್ರತಿಕ್ರಿಯಿಸಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆಯು ವಿವರಣೆಯ ಮತ್ತೊಂದು ಹಂತದ ಸ್ಪಷ್ಟತೆಯನ್ನು ಒದಗಿಸುತ್ತದೆ. ಬಿಹಾರದ ಚುನಾವಣೆಗಳು ಒಂದು ಕಾಲದಲ್ಲಿ ಮತಗಟ್ಟೆ ವಶಪಡಿಸಿಕೊಳ್ಳುವುದರೊಂದಿಗೆ ಮತ್ತು ಹಿಂಸಾಚಾರದೊಂದಿಗೆ ಸಂಬಂಧ ಹೊಂದಿದ್ದವು. ಇತ್ತೀಚಿನ ವರ್ಷಗಳಲ್ಲಿ, ವಿಶೇಷವಾಗಿ ಈ ಚುನಾವಣೆಯಲ್ಲಿ ಆ ಸನ್ನಿವೇಶಗಳು ಬಹಳ ಕಡಿಮೆಯಾಗಿವೆ. ದೃಢವಾದ ಭದ್ರತಾ ಕ್ರಮಗಳು ಮತ್ತು ಆರ್ಥಿಕ ಅಭಿವೃದ್ಧಿಯ ಜತೆಗೆ ಗಲಭೆಯಿಂದ ಬಾಧಿತ ಪ್ರದೇಶಗಳನ್ನು ಹಿಂದಿಕ್ಕಲಾಗಿದೆ. ವ್ಯಾಪಾರಿಗಳು ಈಗ ತಮ್ಮ ಅಂಗಡಿಗಳನ್ನು ಹೆಚ್ಚು ಸಮಯ ತೆರೆದಿರುತ್ತಾರೆ, ವಿದ್ಯಾರ್ಥಿಗಳು ಹೆಚ್ಚಿನ ಆತ್ಮವಿಶ್ವಾಸದಿಂದ ಪ್ರಯಾಣ ಮಾಡುತ್ತಾರೆ ಮತ್ತು ಕುಟುಂಬಗಳು ಕಡಿಮೆ ಆತಂಕದೊಂದಿಗೆ ಸಾರ್ವಜನಿಕ ಜೀವನವನ್ನು ಅನುಭವಿಸುತ್ತಾರೆ. ಈ ಸುಧಾರಣೆಯನ್ನು ಕಂಡ ಮತದಾರರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಆ ಎಲ್ಲಾ ಅಂಶಗಳನ್ನು ನಿರ್ಲಕ್ಷಿಸುವುದಿಲ್ಲ.

ಈ ಬೆಳವಣಿಗೆಗಳಿಗೆ ವಿರೋಧ ಪಕ್ಷದ ಕೆಲವು ಪ್ರತಿಕ್ರಿಯೆಯು ಬಹಿರಂಗವಾಗಿದೆ. ತಾವು ಬೆಂಬಲ ಕಳೆದುಕೊಳ್ಳುತ್ತಿರುವುದಕ್ಕೆ ಕಾರಣಗಳೇನು ಎಂದು ಚಿಂತಿಸುವ ಬದಲು, ಕೆಲವು ನಾಯಕರು ಚುನಾವಣಾ ಆಯೋಗದ ಮೇಲೆಯೇ, ಮತದಾರರ ಪಟ್ಟಿಗಳ ಮೇಲೆ ಅಥವಾ ಪ್ರಕ್ರಿಯೆಯ ನ್ಯಾಯಸಮ್ಮತತೆಯ ಮೇಲೆ ಅನುಮಾನ ವ್ಯಕ್ತಪಡಿಸಲು ಆದ್ಯತೆ ನೀಡಿದ್ದಾರೆ. ಅದೇ ಸಾಂಸ್ಥಿಕ ಚೌಕಟ್ಟು ಇತರ ರಾಜ್ಯಗಳಲ್ಲಿ ವಿರೋಧ ಪಕ್ಷಗಳಿಗೆ ಅನುಕೂಲಕರ ಫಲಿತಾಂಶಗಳನ್ನು ತಂದುಕೊಟ್ಟಿದೆ ಎಂಬ ಅಂಶವನ್ನೂ ಅವರು ಗಮನಿಸಲಿಲ್ಲ. ಮತದಾರರು ತಾವು ಉತ್ಸಾಹದಿಂದ ಬಳಸಿದ ವ್ಯವಸ್ಥೆಯನ್ನು ಸಂಪೂರ್ಣವಾಗಿ ಖಂಡಿಸುವುದರ ಬಗ್ಗೆ ಬೇಸತ್ತು, ಅದರ ಬಗ್ಗೆ ಇನ್ನೂ ಹೆಚ್ಚಿನ ಕಾಳಜಿ ತೋರಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

ವಿಸ್ತೃತವಾದ ರಾಷ್ಟ್ರೀಯ ಮತ್ತು ಜಾಗತಿಕ ಸನ್ನಿವೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ, ಬಿಹಾರದ ತೀರ್ಪು ಉದಯಿಸುತ್ತಿರುವ ಮಾದರಿಯನ್ನು ಬಲಪಡಿಸುತ್ತದೆ. ಹಲವು ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವಗಳು ಧ್ರುವೀಕರಣ, ಆರ್ಥಿಕ ದಿಕ್ಚ್ಯುತಿ ಮತ್ತು ಸಾಂಸ್ಥಿಕ ಬಳಲಿಕೆಯ ಸಮಸ್ಯೆಗಳಿಗೆ ಸಿಕ್ಕು ಒದ್ದಾಡುತ್ತಿರುವ ಸಮಯದಲ್ಲಿ ಭಾರತವು ಹೆಚ್ಚಿನ ಪಾಲ್ಗೊಳ್ಳುವಿಕೆ, ಸ್ಥಿರ ನಾಯಕತ್ವ ಮತ್ತು ಪ್ರಗತಿ, ಎಲ್ಲರನ್ನೂ ಒಳಗೊಳ್ಳುವಿಕೆ ಮತ್ತು ರಾಷ್ಟ್ರೀಯ ಸಾಮರ್ಥ್ಯವನ್ನು ಕೇಂದ್ರೀಕರಿಸಿದ ನೀತಿ ಯಶೋಗಾಥೆಯ ಪಥವನ್ನು ಮುಂದುವರಿಸುತ್ತಿರುವುದನ್ನು ಕಾಣಬಹುದು. ಬಿಹಾರ ಫಲಿತಾಂಶವು, ಆ ಯಶೋಗಾಥೆಯ ಪ್ರಜಾಪ್ರಭುತ್ವದ ಅನುಮೋದನೆಯ ಮತ್ತೊಂದು ಅಂಶವನ್ನು ಸೇರಿಸುತ್ತದೆ. ಭಾರತದ ಅತ್ಯಂತ ಹೆಚ್ಚಿನ ರಾಜಕೀಯ ಪ್ರಜ್ಞೆಯುಳ್ಳ ರಾಜ್ಯಗಳಲ್ಲಿ ಒಂದಾದ ಮತದಾರರು, 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಮತ್ತು ಆತ್ಮವಿಶ್ವಾಸದ ಭಾರತದತ್ತ ದೇಶದ ದೊಡ್ಡ ಪ್ರಯಾಣದೊಂದಿಗೆ ತಮ್ಮ ಪ್ರಗತಿಯೂ ಬೆಸೆದುಕೊಂಡಿರುವುದನ್ನು ನೋಡುತ್ತಾರೆಂಬುದನ್ನು ಇದು ಸೂಚಿಸುತ್ತದೆ.

ಈ ಜನಾದೇಶವು ಎನ್‌ಡಿಎಗೆ ಪ್ರೋತ್ಸಾಹ ಮತ್ತು ಸೂಚನೆ ಎರಡೂ ಆಗಿದೆ. ಇದು ಮೂಲಸೌಕರ್ಯ, ಕಲ್ಯಾಣ ವಿತರಣೆ ಮತ್ತು ಭದ್ರತೆಯ ಮೇಲಿನ ಒತ್ತು ನೀಡುವುದನ್ನು ಪ್ರಮಾಣೀಕರಿಸುತ್ತದೆ; ಆದರೆ ಇದು ವೇಗವಾಗಿ ಉದ್ಯೋಗ ಸೃಷ್ಟಿ, ಆಳವಾದ ಸುಧಾರಣೆಗಳು ಮತ್ತು ನಿರಂತರ ಸಾಂಸ್ಥಿಕ ಸುಧಾರಣೆಗಾಗಿ ನಿರೀಕ್ಷೆಗಳನ್ನು ಹುಟ್ಟುಹಾಕುತ್ತದೆ. ವಿರೋಧ ಪಕ್ಷಗಳಿಗೆ ಈ ಜನಾದೇಶವು ಅವರ ಕಾರ್ಯತಂತ್ರ, ನಾಯಕತ್ವ ಮತ್ತು ಕಾರ್ಯಕ್ರಮದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಬಿಹಾರದ ಮತದಾರರು ಆಡಳಿತ, ಗಂಭೀರತೆ ಮತ್ತು ರಾಷ್ಟ್ರೀಯ ಒಗ್ಗಟ್ಟಿನ ಗೌರವವನ್ನು ಆಧರಿಸಿದ ರಾಜಕೀಯವನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ಸೂಚಿಸಿದ್ದಾರೆ. ಆ ನಿರೀಕ್ಷೆಗಳು ಮುಂಬರುವ ವರ್ಷಗಳಲ್ಲಿ ಭಾರತೀಯ ರಾಜಕೀಯದ ವ್ಯಾಕರಣವನ್ನು ಹೊಸದಾಗಿ ರೂಪಿಸುವ ಸಾಧ್ಯತೆಯಿದೆ.

(ಲೇಖಕರು ಭಾರತ ಸರಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವರು)

ಭಟ್ಟರ್ ಸ್ಕಾಚ್

- **ಪೂರ್ಣಯ್ಯ, ಮೈಸೂರು**
ಓದುಗರಿಗೆ ಭಟ್ಟರು ಮುಂಚಿತವಾಗಿ ಬಿಟ್ಟುಕೊಡದ ಆ ಎರಡು ಸುಳಿವುಗಳು ಯಾವುವು?
- **ಒಂದು ಪುಸ್ತಕ ಬಿಡುಗಡೆ, ಮತ್ತೊಂದು ವಿದೇಶ ಪ್ರಯಾಣ!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ನನ್ನ ಹೆಸರಲ್ಲೇ ಅಮಾಸೆ ಕಾರ್ ಡ್ರೈವಿಂಗ್ ಶಾಲೆ ತೆರೆಯಬೇಕೆಂದಿದ್ದೇನೆ, ಯಾತಕ್ಕೂ ನಿಮ್ಮ ಸಲಹೆ?
- **ಕತ್ತಲಲ್ಲಿ ಕಾರು ಕಲಿಸುವ ಶಾಲೆ ಅಂತ ತಪ್ಪು ತಿಳಿದಾರು!**

- **ಕೀರ್ತಿನಾರಾಯಣ, ಕೃಷ್ಣಮೂರ್ತಿಪುರ**
ಭಟ್ರೇ, ಯಾವ ಸ್ನೇಹಿತರ ಗೊಡವೆಗೆ ಹೋಗದೇ ನನ್ನಷ್ಟಕ್ಕೆ ನಾನಿದ್ದರೂ ಸ್ನೇಹಿತರು ನನ್ನನ್ನು ರೇಗಿಸುವುದು ನಿಮಗೆ ಕೇಳಿಸುತ್ತಿಲ್ಲವೇ ?
- **ಕಿರಿಕ್ ನಾರಾಯಣ ಅನ್ನುತ್ತಿದ್ದಾರಾ?**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ರೇ, ಅಚಾನಕ್ಕಾಗಿ ಭಟ್ಟರು ವಿಮಾನ ಸಂಚಾರ ಹೋಗುವಾಗ ಅವರ ಪಕ್ಕದ ಆಸನವೇ ನನ್ನದಾದರೆ ಅವರು ನನಗೆ ಏನು ಕಲಿಸಿಕೊಟ್ಟಾರು?
- **ಪತ್ರಿಕೋದ್ಯಮದ ಹೊರ ಮತ್ತು ಒಳ ಸುಳಿಗಳು!**

- **ಹರಿ ಓಂ ಶಾಸ್ತ್ರೀ, (ಇಮೇಲ್ ಮೂಲಕ)**
ಭಟ್ರೇ, ಕೊಲ್ಕತ್ತಾ ಕ್ರಿಕೆಟ್ ಸೋಲಿನ ನಂತರ ನೀವು ಜ್ಞಾಪಿಸಿಕೊಂಡ ಗಾದೆ ಮಾತು?
- **ಇರುಳು ಕಂಡ ಭಾವಿಗೆ ಹಗಲು ಬಂದು ಬಿದ್ದರು!**

- **ಭೂಷಣ ಶಾಸ್ತ್ರೀ, ನಂಜನಗೂಡು**
ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಷಣದ ಉದ್ದಕ್ಕೂ ಭಟ್ಟರೇಕೆ ಬೆಂಗಾವಲು ಇಟ್ಟುಕೊಂಡು ಭಾಷಣ ಮಾಡಿದರು?
- **ಹಮಾಸ್ ಉಗ್ರರ ಭಯ ಎಂದು ವಿರೋಧಿಗಳು ಹೇಳಬಹುದು!**

- **ಪಲ್ಲಕ್ಕಿ ರಾಘು, ಮಲ್ಲೇಶ್ವರಂ**
ಭಟ್ರೇ, ವೃದ್ಧ ರಾಜಕಾರಣಿ ಯೊಬ್ಬರ ಪೋಕ್ಸೊ ಪ್ರಕರಣವನ್ನು ಮಾಧ್ಯಮದಲ್ಲಿ ರಸವತ್ತಾಗಿ ನ್ಯಾಯವಾದಿಯೊಬ್ಬರು ವರ್ಣಿಸಿದರೆ ಅದಕ್ಕೆ ನೀವೇನಂತೀರಿ?
- **ಬಾಲ (ನ್) ಭಾಷೆ!**

- **ಶ್ರೀನಿವಾಸ, ಮೈಸೂರು**
ವಿಶ್ವವಾಣಿ ಭಟ್ಟರು ತಮ್ಮ ಪುಸ್ತಕಗಳ ಬಿಡುಗಡೆಯನ್ನು ಮಟಮಟ ಮಧ್ಯಾಹ್ನದಲ್ಲೇ ಏಕೆ ಇಟ್ಟುಕೊಳ್ಳುತ್ತಾರೆ?
- **ಬಿಡುಗಡೆ ಭೋಜನಕ್ಕೆ ದಾರಿ ಮಾಡಿಕೊಡಬೇಡವೇ ?**

- **ಗುರುಮಧ್ವರಾಯ, ಉಡುಪಿ**
ಭಟ್ರೇ, ಉಡುಪಿ ಅಷ್ಟ ಮಠಾಧೀಶರು ಅಷ್ಟದಿಕ್ಕುಗಳತ್ತ ಮುಖ ಮಾಡಿ ಕುಳಿತಿದ್ದಾರಲ್ಲ?
- **ವಿಷಯ ಅದಲ್ಲ, ಮೋದಿ ಬಂದ ದಿನವಾದರೂ ಒಟ್ಟಿಗೆ ಸೇರುತ್ತಾರಾ?**

ದುಡ್ಡಿಲ್ಲದೆ ಜಗವಿಲ್ಲ, ದುಡ್ಡಿದ್ದರೆ ಜಗವೆಲ್ಲ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಶುಕ್ರವಾರ, ಶನಿವಾರ ಮತ್ತು ಭಾನುವಾರ ಬೆಂಗಳೂರು ನಗರವು ಪುಸ್ತಕ ಸಂತೆಗೆ ಸಾಕ್ಷಿಯಾಯ್ತು. ಶನಿವಾರ ಬೆಳಗಿನ ಹನ್ನೆರಡು ಗಂಟೆಯಿಂದ ಸಂಜೆ ಏಳರವರೆಗೂ ಅಲ್ಲಿದ್ದು ಅಲ್ಲಿಗೆ ಹರಿದುಬಂದ ಜನಸಮೂಹಕ್ಕೆ ಸಾಕ್ಷಿಯಾದೆ. ಶನಿವಾರ ವೀರ ಲೋಕದ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. 'ಸಾಹಿತ್ಯದಲ್ಲಿ ಸಂಪಾದಿಸುವುದು ಹೇಗೆ?' ಎನ್ನುವುದು ವಿಷಯವಾಗಿತ್ತು. ಲೇಖಕರನ್ನು ನಾನು ಪ್ರತಿನಿಧಿಸುತ್ತಿದ್ದೆ. ಪ್ರಕಾಶಕರನ್ನು ಸಪ್ನಾ ಬುಕ್ ಹೌಸಿನ ದೊಡ್ಡೇಗೌಡರು ಪ್ರತಿನಿಧಿಸುತ್ತಿದ್ದರು. ನಮ್ಮನ್ನು ಮಹೇಶ ಅರಬಳ್ಳಿ ಅವರು ಸಂದರ್ಶಿಸುತ್ತಿದ್ದರು. ಹಣದ ಬಗ್ಗೆ ಮುಕ್ತವಾಗಿ ನಮ್ಮಲ್ಲಿ ಚರ್ಚೆಯಾಗುವುದೇ ಇಲ್ಲ. ಈ ವಿಷಯದಲ್ಲಿ ಬಹಳಷ್ಟು ಜನ ಮನಸ್ಸಿನಲ್ಲಿ ಮಂಡಿಗೆಯನ್ನು ತಿನ್ನುತ್ತಾರೆ. ಮುಕ್ತವಾಗಿ ಹೇಳಿದರೆ ಎಲ್ಲಿ ಜನ 'ಧನದಾಹಿ' ಎಂದುಕೊಳ್ಳುತ್ತಾರೋ ಎನ್ನುವ ಭಯ. ಬರಹವನ್ನು ನಂಬಿಕೊಂಡು ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲವೇ? ಒಬ್ಬ ಲೇಖಕ ಒಂದು ಲೇಖನ ಬರೆಯಬೇಕು ಎಂದರೆ ಅದಕ್ಕೆ ಒಂದಷ್ಟು ತಯಾರಿ ಬೇಕೇಬೇಕು. ಓದಬೇಕು, ಅದನ್ನು ಸರಿಯಾಗಿ ಜೀರ್ಣಿಸಿಕೊಳ್ಳಬೇಕು ಮತ್ತು ಅದನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಇದರ ಜತೆಗೆ ಬರಹ ಹೆಚ್ಚು ತ್ರಾಸು ನೀಡದೆ ಓದಿಸಿಕೊಂಡು ಹೋಗುವಂತೆ ಕೂಡ ಇರಬೇಕು. ಒಂದು ಲೇಖನ ಬರೆಯಲು ಕನಿಷ್ಠ ಒಂದೆರಡು ತಾಸು ಅವರು ವ್ಯಯಿಸಬೇಕಾಗುತ್ತದೆ. ಇನ್ನು ಒಂದು ಪುಸ್ತಕವನ್ನು ಬರೆಯಲು ಮೂರು ತಿಂಗಳು ಬೇಕಾಗುತ್ತದೆ. ಸಮಾಜಕ್ಕೆ, ಓದುಗರಿಗೆ ಏನು ಬೇಕು ಎಂದು ಅರಿಯುವುದು ಬಹಳ ಮುಖ್ಯ. ಇಷ್ಟೆಲ್ಲಾ ಮಾಡಿ ಕೂಡ ಒಬ್ಬ ಲೇಖಕ ಗೆಲ್ಲುತ್ತಾನೆ ಎನ್ನುವುದಕ್ಕೆ ಯಾವ ಗ್ಯಾರಂಟಿಯೂ ಇಲ್ಲ. ಆದರೆ, ಆತನ ಶ್ರಮಕ್ಕೆ ತಕ್ಕಷ್ಟು ಅಲ್ಲದಿದ್ದರೂ ಒಂದು ಗೌರವಧನವನ್ನು ಆತ ಬಯಸಿದರೆ ತಪ್ಪೇನು?

ಮೊದಲ ಸಾಲುಗಳಲ್ಲಿ ಹೇಳಿದಂತೆ ಹಣದ ಬಗ್ಗೆ ಮಾತಾಡುವುದು ಮಹಾಪರಾಧ ಎನ್ನುವ ಸನ್ನಿವೇಶ ನಮ್ಮ ಸಮಾಜದಲ್ಲಿದೆ. ಅದು ಎಲ್ಲಾ ವಲಯದಲ್ಲೂ ಇಲ್ಲ. ಕಲಾವಿದರು ಮತ್ತು ಬರಹಗಾರರಲ್ಲಿ ಇದು ಬಹಳ ಹೆಚ್ಚಿದೆ. ಯಾರೆಲ್ಲಾ ಸೃಜನಾತ್ಮಕ ಕೆಲಸದಲ್ಲಿ ತೊಡಗಿದ್ದಾರೆ ಅವರೆಲ್ಲಾ ಹಣದ ಬಗ್ಗೆ ಮಾತಾಡಲು, 'ನನ್ನ ಕಾರ್ಯಕ್ಕೆ ಇಷ್ಟು ಹಣ ಬೇಕು' ಎನ್ನಲು ಬಹಳ ಸಂಕೋಚ ಪಡುತ್ತಾರೆ. ಅದರಲ್ಲೂ ಉದಯೋನ್ಮುಖ ಬರಹಗಾರರು ಅಥವಾ ಕಲಾವಿದರು ಆಗಿದ್ದು ಅವರು ಹಣದ ಬಗ್ಗೆ ಮಾತಾಡಿದಾದರೆ ಅಲ್ಲಿಗೆ ಅವರ ಪಯಣ ಕೊನೆಯಾಗಿಬಿಡುತ್ತದೆ. ಸಿನಿಮಾ ಮತ್ತು ಕಿರುತೆರೆ ಕ್ಷೇತ್ರದಲ್ಲಿ ಕೆಲಸ ಮಾಡುವವರ ಪಾಡು ಇದಕ್ಕಿಂತ ವಿಭಿನ್ನವಾಗೇನೂ ಇಲ್ಲ. ಅಲ್ಲಿ ಒಂದಿಬ್ಬರು ಪೋಷಕ ಪಾತ್ರ ಮಾಡುವವರಿಗೆ, ನಾಯಕ ಮತ್ತು ನಾಯಕಿ ಪಾತ್ರಧಾರಿಗಳಿಗೆ ಸಂಭಾವನೆ ಕೊಟ್ಟರೆ ಅಲ್ಲಿಗೆ ಮುಗಿಯಿತು. ಉಳಿದವರನ್ನು ದಿನಗೂಲಿಗಳ ಲೆಕ್ಕದಲ್ಲಿ ನೋಡಲಾಗುತ್ತದೆ.

ಅದೇಕೆ ನಮ್ಮ ಕಲಾವಿದರು, ಬರಹಗಾರರು ಇದರ ಬಗ್ಗೆ ಮಾತಾಡುವುದಿಲ್ಲ? ಬರಹವನ್ನು ನಂಬಿಕೊಂಡು ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲವೇ? ಪಾಶ್ಚಾತ್ಯ ದೇಶಗಳಲ್ಲಿ ಬರಹದಿಂದ ಅತ್ಯುತ್ತಮ ಬದುಕನ್ನು ಕಟ್ಟಿಕೊಂಡವರ ಸಂಖ್ಯೆ ಬಹಳವಿದೆ. ಹಿಂದಿ ಭಾಷೆಯಲ್ಲಿ ಸಹ ಬಹಳ ಜನರಿದ್ದಾರೆ. ಇನ್ನು ಇಂಗ್ಲಿಷಿನಲ್ಲಿ ಬರೆಯುವ ಭಾರತೀಯ ಬರಹಗಾರರ ಬದುಕು ಸಹ ಚೆನ್ನಾಗಿದೆ. ಕನ್ನಡ ಭಾಷೆಯಲ್ಲಿ ಇದು ಸಾಧ್ಯವಿಲ್ಲವೇ? ನನ್ನ ಪ್ರಕಾರ ಸಾಧ್ಯವಿದೆ. ಬರಹದಿಂದ ಬದುಕನ್ನು ಕಟ್ಟಿಕೊಂಡವರ ಸಂಖ್ಯೆ ನಮ್ಮಲ್ಲೂ ಬಹಳವಿದೆ. ಈ ರೀತಿ ಬದುಕನ್ನು ಕಟ್ಟಿಕೊಂಡವರನ್ನು ನಾವು ಸಂಭ್ರಮಿಸುತ್ತಿಲ್ಲ, ಹಣದ ಬಗ್ಗೆ ಮಾತಾಡುವುದು ಪಾಪ ಎನ್ನುವ ಪಾಪಪ್ರಜ್ಞೆಯಿಂದ ನಮ್ಮ ಸಮಾಜ ಹೊರಬರಬೇಕಿದೆ. ಬರಹಗಾರರು ಮತ್ತು ಕಲಾವಿದರು ಕೂಡ ಎಲ್ಲರಂತೆ ಮನುಷ್ಯರೇ, ಅವರಿಗೂ ಬದುಕಿದೆ. ಜೀವಿಸಲು ಅವರಿಗೂ ಹಣದ ಅವಶ್ಯಕತೆಯಿದೆ. ಹೆಚ್ಚು ಬೇಕಿಲ್ಲ, ಕಡಿಮೆಯೂ ಬೇಕಿಲ್ಲ, ತಮ್ಮ ಕೆಲಸಕ್ಕೆ ತಕ್ಕ ಪ್ರತಿಫಲವನ್ನು

ಬಯಸುವುದು ಮತ್ತು ಅದನ್ನು ಪಡೆದುಕೊಳ್ಳುವುದು ಅದೇಕೆ ತಪ್ಪಾಗುತ್ತದೆ ಎನ್ನುವುದು ನನಗೆ ಇನ್ನೂ ಅರ್ಥವಾಗದ ವಿಷಯ. ಸೃಜನಾತ್ಮಕ ವ್ಯಕ್ತಿಗಳು ಈ ಬಗ್ಗೆ ಒಂದಷ್ಟು ಬದಲಾಗುವ ಅವಶ್ಯಕತೆ ಖಂಡಿತ ಇದೆ.

ನಮ್ಮ ವಸುಧೇಂದ್ರ, ಮಣಿಕಾಂತ್ ಪುಸ್ತಕ ಮಾರಾಟದಿಂದ ಗಳಿಸಿದ್ದಾರೆ. ಹಾಗೆಯೇ, ಇತ್ತೀಚೆಗೆ ನಿಧನರಾದ ಎಸ್.ಎಲ್. ಭೈರಪ್ಪನವರು ಈ ಸಾಲಿನಲ್ಲಿ ಮೊದಲು ನಿಲ್ಲುತ್ತಾರೆ. ರವಿ ಬೆಳಗೆರೆ ಇರಬಹುದು ಅಥವಾ ನನ್ನ ನೆಚ್ಚಿನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ಇರಬಹುದು, ಹಾಗೆಯೇ ನಮ್ಮ ಅರಿವಿಗೆ ಬಾರದ ಬಹಳಷ್ಟು ಜನ ಬರಹದಿಂದ ಬದುಕನ್ನು ಕಟ್ಟಿಕೊಂಡಿದ್ದಾರೆ. ಇದನ್ನು ನಾವು ಸಂಭ್ರಮಿಸಬೇಕು. ಯುವ ಬರಹ ಗಾರರು, ಕಲಾವಿದರು ಇಂಥವರನ್ನು ಮಾದರಿಯಾಗಿ ಇಟ್ಟುಕೊಂಡು ಕೆಲಸ ಮಾಡಲು ಶುರು ಮಾಡಬೇಕು.

ವೀರಲೋಕದ ಶನಿವಾರದ ಸಂವಾದ ಕಾರ್ಯಕರ್ಮದಲ್ಲಿ ನಾನು ಪ್ರತಿಪಾದಿಸಿದ್ದು ಇದೇ ಅಂಶಗಳನ್ನು. ರಸ್ತೆಯಲ್ಲಿ ಬಜ್ಜಿ ಬೋಂಡಾ ಹಾಕುವವರು ಕೂಡ ಉತ್ತಮ ಬದುಕನ್ನು ಕಟ್ಟಿಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಬರಹಗಾರ ಮಾತ್ರ ಬರಿಗೈಯಲ್ಲಿ ಕೂರುವುದು ನಾವು ಅವರಿಗೆ ಮಾತ್ರ ಮಾಡುತ್ತಿರುವ ಅವಮಾನವಲ್ಲ, ಅದು ನಮಗೆ ನಾವು ಮಾಡಿಕೊಂಡ ಅವಮಾನ ಕೂಡ. ಸಮಾಜಕ್ಕೆ ಮಾಡಿದ ಅವಮಾನ. ಹಣ ಎನ್ನುವುದು ಪ್ರತಿಯೊಬ್ಬನಿಗೂ ಬದುಕಿಗೆ ಬೇಕಾದ ಮೂಲ ದ್ರವ್ಯ. ಅದನ್ನು ಗಳಿಸುವುದು ಎಲ್ಲರ ಹಕ್ಕು ಹಾಗೂ ಬಾಧ್ಯತೆ ಕೂಡ. ಭಾನುವಾರ ಸಾವಣ್ಣ ಪ್ರಕಾಶನದ ವತಿಯಿಂದ ಆರು ಪುಸ್ತಕಗಳು ಲೋಕಾರ್ಪಣೆಯಾದವು. ಅದರಲ್ಲಿ ನನ್ನ ಪುಸ್ತಕವೂ ಇತ್ತು. ಅಲ್ಲಿ ಗುರುರಾಜ ಕರ್ಜಗಿ ಅವರು ಮುಖ್ಯ ಅತಿಥಿಯಾಗಿ ಬಂದಿದ್ದರು. ಅವರು ತಮ್ಮದೇ ಆದ ಪ್ರಕಾಶನ ಸಂಸ್ಥೆಯನ್ನು ಹೊಂದಿದ್ದಾರೆ. ಒಂದು ಸಂಸ್ಥೆ ನಡೆಯಬೇಕಾದರೆ ಹಣ ಬಹಳ ಮುಖ್ಯವಾಗುತ್ತದೆ. ಇವತ್ತಿಗೆ ಅವರ ಪ್ರಕಾಶನ ಸಂಸ್ಥೆ, ಟ್ರಸ್ಟ್ ತನ್ನೆಲ್ಲಾ ಖರ್ಚುಗಳನ್ನು ಸರಿದೂಗಿಸಿ ಕೊಂಡು ಎರಡು ಕೋಟಿಯಷ್ಟು ಹಣವನ್ನು ಹೊಂದಿದೆ ಎನ್ನುವ ಮಾತನ್ನು ಅವರು ಆಡಿದರು. ಒಳ್ಳೆಯ ಕೆಲಸ ಮಾಡಲು ಕೂಡ ಹಣ ಬೇಕು. ಹಣ ಗಳಿಸುವುದು, ಅದು ಕೂಡ ಸನ್ಮಾರ್ಗದಲ್ಲಿ ಹಣ ಗಳಿಸುವುದು ತಪ್ಪಲ್ಲ. ಅದು ಹಕ್ಕು. ಈ ಮಾತುಗಳನ್ನು ನಮ್ಮ ಎಲ್ಲಾ ಕಲಾವಿದರು, ಬರಹಗಾರರು ಅರಿತುಕೊಳ್ಳಬೇಕು. ನನ್ನ ಪುಸ್ತಕ ಪ್ರಕಟವಾದರೆ ಸಾಕು ಎನ್ನುವ ಮನೋಭಾವದಿಂದ ಅವರು ಹೊರಬರಬೇಕು. ಹೆಚ್ಚು ಅಧ್ಯಯನ ಮಾಡಿ ಉತ್ತಮ ವಿಷಯವನ್ನು ಇಟ್ಟುಕೊಂಡು ಬರೆಯಬೇಕು. ಕೇವಲ 'ನಾನೂ ಒಬ್ಬ ಬರಹಗಾರ, ಸಾಹಿತಿ' ಎನ್ನುವ ಹಣೆಪಟ್ಟಿಯು ಹೊಟ್ಟೆಯನ್ನೂ ಎಂದಿಗೂ ತುಂಬಿಸುವುದಿಲ್ಲ. ಪ್ರಕಾಶಕರು ಪುಸ್ತಕದ ಬೆಲೆಯಲ್ಲಿ ಲೇಖಕರ ಸಂಭಾವನೆಯನ್ನು ಖಂಡಿತ ಸೇರಿಸಿರುತ್ತಾರೆ. ಅವರ ಹಣವನ್ನು ಅವರಿಗೆ ಕೊಡಲು ಅದೇಕೆ ಅಷ್ಟು ಕೈ ಹಿಡಿತ? ಒಬ್ಬ ಲೇಖಕ ಸಂಪಾದಿಸಿದರೆ ಆತ ಇನ್ನಷ್ಟು ಉತ್ಸಾಹದಿಂದ ಅಧ್ಯಯನ ಮಾಡಿ ಪುಸ್ತಕವನ್ನು ಖಂಡಿತ ಬರೆಯುತ್ತಾನೆ. ಜಗತ್ತಿನಲ್ಲಿ ಎಲ್ಲಾ ರೀತಿಯ ಕೆಲಸ ಮಾಡುವವರು ಕೂಡ ಅದಕ್ಕೆ ಪ್ರತಿಯಾಗಿ ಒಂದಷ್ಟು ಸಂಭಾವನೆ ಪಡೆದುಕೊಳ್ಳುತ್ತಾರೆ. ಆದರೆ ಕಲಾವಿದ ಮತ್ತು ಬರಹಗಾರರಿಗೆ ಮಾತ್ರ ಬೇರೆ ರೀತಿಯ ಟ್ರೀಟ್‌ಮೆಂಟ್ ದೊರೆಯುತ್ತಿದೆ. ಇದರ ಬಗ್ಗೆ ನಮ್ಮಲ್ಲಿ ಮನಸ್ಥಿತಿ ಬದಲಾಗಬೇಕಿದೆ.

ಸಂವಾದ, ಮಾತುಕತೆ ಮುಗಿದ ನಂತರ ಅಲ್ಲಿದ್ದ ಕೇಳುಗರಲ್ಲಿ ಒಂದಷ್ಟು ಜನ ನನ್ನ ಬಳಿ ಬಂದು ತಮ್ಮ ಅಸಮಾಧಾನವನ್ನು ತೋಡಿಕೊಂಡರು. ಸಾಹಿತಿಯಾದವನು ಹಣದ ಹಿಂದೆ ಓಡಬಾರದು ಎನ್ನುವುದು ಅವರ ಮಾತಿನ ಸಾರಾಂಶ. ನಾನು ಹಣದ ಹಿಂದೆ ಓಡುವುದರ ಬಗ್ಗೆ ಮಾತನ್ನು ಆಡಲೇ ಇಲ್ಲ, ಪ್ರತಿಯೊಬ್ಬರಿಗೂ ತಮ್ಮ ಬೆವರಿನ ಫಲವನ್ನು ಪಡೆಯುವ ಹಕ್ಕಿದೆ ಎಂದಷ್ಟೇ ಹೇಳಿದ್ದೆ. ನಮ್ಮಲ್ಲಿ ಹಣದ ಬಗೆಗಿನ ನಂಬಿಕೆಗಳು ಅದೆಷ್ಟು ಆಳವಾಗಿ ಬೇರೂರಿವೆ ಎಂದರೆ, ಒಬ್ಬ ಒಳ್ಳೆ ಸಾಹಿತಿ ಕೇವಲ ಉತ್ತಮ ಸಾಹಿತ್ಯವನ್ನು ಮಾತ್ರ ಕೊಡುತ್ತಿರಬೇಕು. ಆತ ಒಪ್ಪೊತ್ತಿನ ಊಟಕ್ಕೆ ಇಲ್ಲದಿದ್ದರೂ ಹಣದ ಬಗ್ಗೆ ಮಾತ್ರ ಮಾತಾಡಬಾರದು! ಇದ್ಯಾವ ಸೀಮೆ ನ್ಯಾಯ? ಪ್ರಮಾಣ ಮಾಡಿ ಹೇಳುತ್ತೇನೆ, ಹಿಂದೆಯೂ ಮತ್ತು ಇಂದಿಗೂ ಒಳ್ಳೆಯ ಸಾಹಿತಿಯ ಹೆಸರಿನಲ್ಲಿ ಬಹಳಷ್ಟು ಜನ ಹಣ ಮಾಡಿಕೊಂಡಿದ್ದಾರೆ. ಅವರೆಲ್ಲರಿಗೂ ಇಲ್ಲದ ನೈತಿಕತೆಯ ಪಾಠ ಕೇವಲ ಮತ್ತು ಕೇವಲ ಸಾಹಿತಿಗೆ ಮಾತ್ರ ಏಕೆ ಸೀಮಿತ? ಬದಲಾದ ಕಾಲಘಟ್ಟದಲ್ಲಿ ಸಾಹಿತಿಗಳು, ಕಲಾವಿದರು ತಮ್ಮ ಹಕ್ಕಿನ ಬಗ್ಗೆ ಇನ್ನಷ್ಟು ಜಾಗೃತರಾಗಬೇಕಿದೆ.

ಕೇಳುಗರಲ್ಲಿ ಒಬ್ಬರಂತೂ 'ಬರೆಯುವುದು ಆತ್ಮತೃಪ್ತಿಗೆ, ಅದರ ಜತೆಗೆ ಹಣವನ್ನು ಜೋಡಿಸಿ ನೀವು ಅದಕ್ಕೆ ಅಪಮಾನ ಮಾಡಿದಿರಿ' ಎನ್ನುವಂತೆ ಮಾತಾಡಿದರು. ಹಣ ಮತ್ತು ಸಾಹಿತ್ಯ ಎರಡೂ ಎಣ್ಣೆ ಮತ್ತು ಸೀಗೆಕಾಯಿ ಎನ್ನುವ ಭಾವನೆಯನ್ನು ಅದೆಷ್ಟು ಚೆನ್ನಾಗಿ ಬಿತ್ತಿದ್ದಾರೆ ನೋಡಿ! ಬರಹಗಾರರನ್ನು ಬದಿಗಿಡಿ, ಓದುಗ ಕೂಡ ತನ್ನ ನೆಚ್ಚಿನ ಲೇಖಕ ಹಣದ ಬಗ್ಗೆ ಮಾತಾಡಿದರೆ ಸಹಿಸುವುದಿಲ್ಲ. 'ಈತ ಸರಿಯಿಲ್ಲ, ವ್ಯಾವಹಾರಿಕ ವ್ಯಕ್ತಿ' ಎನ್ನುವ ಹಣೆಪಟ್ಟಿ ಹಚ್ಚಿಬಿಡುತ್ತಾರೆ. ಹಣದ ಬಗೆಗಿನ ಕೆಲವೊಂದು ನಂಬಿಕೆಗಳನ್ನು ಬದಲಿಸಲು ಇನ್ನೆಷ್ಟು ತಲೆಮಾರು ಬೇಕಾಗುತ್ತದೋ ಭಗವಂತನೇ ಬಲ್ಲ.

ಹಣದ ಬಗ್ಗೆ ಅಪಾರ ಪ್ರೀತಿ, ವಿಶ್ವಾಸ, ಅದನ್ನ ಪಡೆಯಲು ಬೇಕಾಗುವ ಸಂಯಮದ ಜತೆಗೆ, ಅದನ್ನ ಪಡೆದಂತೆ, ಉತ್ತಮವಾಗಿ ವಿನಿಯೋಗಿಸಿದಂತೆ ಕನಸು ಕಾಣುವುದು ಕೂಡ ಬಹಳ ಅಗತ್ಯ. ಮನಶ್ಶಾಸ್ತ್ರಜ್ಞರು ಇದಕ್ಕೆ ಪ್ರೊ-ಆಕ್ಟಿವ್ ಎನ್ನುತ್ತಾರೆ. ಹಣವನ್ನ ಗಳಿಸಿದಂತೆ, ಗಳಿಸಿದ ಮೇಲೆ ಅದನ್ನ ಗಳಿಸಿದ ಸಂತೋಷವನ್ನ ಬಂಧು ಮಿತ್ರರೊಂದಿಗೆ ಹಂಚಿಕೊಂಡಂತೆ ಕನಸು ಕಾಣುವುದು ಮುಖ್ಯ. ಕಂಡ ಕನಸುಗಳನ್ನು ನಿಜವಾಗಿಸಲು ಕಾರ್ಯತತ್ಪರರಾಗುವುದು ಕೂಡ ಬಹಳ ಮುಖ್ಯ. ಸಂಸ್ಕೃತ ಸುಭಾಷಿತವೊಂದು 'ಯದ್ಭಾವಂ ತದ್ಭವತಿ' ಎನ್ನುತ್ತದೆ. ಸರಳ ಕನ್ನಡದಲ್ಲಿ 'ಮನಸ್ಸಿನಂತೆ ಮಹಾದೇವ' ಎನ್ನಲಾಗುತ್ತದೆ. ಇವೆಲ್ಲವುಗಳ ಅರ್ಥ ಒಂದೇ, ನಾವೇನು ಬಯಸುತ್ತೇವೋ, ನಾವೇನು ಧ್ಯಾನಿಸುತ್ತೇವೋ ಅದು ಸಿಗುತ್ತದೆ. ಅಲ್ಲಿಯವರೆಗೆ ಪ್ರಯತ್ನ ನಿಲ್ಲಬಾರದು. ಅದು ಮೊದಲ ಪ್ರಯತ್ನಗಳಲ್ಲಿ ಸಿಗಲಿಲ್ಲ ಎಂದ ಮಾತ್ರಕ್ಕೆ ಅದರ ವಿರುದ್ಧ, ಅಥವಾ ಅದರ ಬಗ್ಗೆ ಹಗುರವಾಗಿ ಮಾತನಾಡುವುದನ್ನ ಮಾಡಬಾರದು.

ನೀವೇ ಗಮನಿಸಿ ನೋಡಿ, ನಮ್ಮಲ್ಲಿ ಬಹುತೇಕರು 'ಹಣ ಅಷ್ಟೊಂದು ಮುಖ್ಯವಲ್ಲ', 'ಹಣಕ್ಕೆ ನಾನು ಬೆಲೆ ಕೊಡುವುದಿಲ್ಲ', 'ಹಣದ ಬಗ್ಗೆ ನನಗ್ಯಾವ ಆಸಕ್ತಿಯಿಲ್ಲ' ಎನ್ನುವ ಮಾತುಗಳನ್ನ ಆಡುವುದನ್ನ ನಾವು ಕೇಳಿರುತ್ತೇವೆ, ಕೇಳುತ್ತಲೇ ಇರುತ್ತೇವೆ. ನಮ್ಮ ಕಲಾವಿದರು, ಬರಹಗಾರರು ಮತ್ತು ಮಾಡುವ ಕೆಲಸದಲ್ಲಿ ಹತ್ತಾರು ಬಾರಿ ಸೋತವರಲ್ಲಿ ಇದು ಹೆಚ್ಚು. ಅವರ ಅಂತರಾತ್ಮದಲ್ಲಿ ಅವರಿಗೆ ಹಣದ ಅವಶ್ಯಕತೆ ಹೆಚ್ಚಾಗಿರುತ್ತದೆ. ಅವರಿಗೆ ಹಣ ಬೇಕಾಗಿರುತ್ತದೆ. ಹಣವನ್ನ ಒಲಿಸಿಕೊಳ್ಳುವ ಮನಸ್ಥಿತಿ, ಅದಕ್ಕೆ ಬೇಕಾಗುವ ಸಿದ್ಧತೆ ಇರದ ಕಾರಣ ಹಣದ ಬಗ್ಗೆ ಉಡಾಫೆಯ ಮಾತುಗಳನ್ನ ಆಡಲು ಶುರುಮಾಡುತ್ತಾರೆ. ನಿಮಗೆಲ್ಲಾ ನೆನಪಿರಲಿ 'ಬಾಯಲ್ಲಿ ಆಡಿದ್ದು ಬೆನ್ನಿಗೆ ಮೂಲ' ಎನ್ನುತ್ತದೆ ಒಂದು ನಾಣ್ಣುಡಿ. ನಾವು ಆಡಿದ ಮಾತುಗಳು ಸುಪ್ತ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತವೆ. ಆಡಿದ ಮಾತನ್ನು ಮನಸ್ಸು ಮತ್ತು ದೇಹ ಎರಡೂ ಕಾರ್ಯರೂಪಕ್ಕೆ ತರಲು ಪ್ರಾರಂಭಿಸುತ್ತವೆ. ನಾವು ಯಾರಾಗಿರಬೇಕು? ನಮ್ಮ ಗಣತಿ ಸಂಖ್ಯೆಯ ಯಾವ ಕಡೆಗೆ ಇರಬೇಕು? ಎನ್ನುವ ನಿಖರತೆ ನಮಗಿರಬೇಕು. ಅಂಥವರಿಗೆ ಹಣ ಒಲಿಯುವುದು ಕಷ್ಟವಲ್ಲ.

ಕಮಲದ ಹೂವು ಹೇಗೆ ಕೆಸರಿನಲ್ಲಿದ್ದೂ ಅದಕ್ಕೆ ಅಂಟದಂತೆ, ಕೆಸರಿನ ಕೊಳಕು ತನ್ನ ಸೌಂದರ್ಯಕ್ಕೆ ಧಕ್ಕೆ ಬಾರದಂತೆ ತನ್ನತನವನ್ನ ಉಳಿಸಿಕೊಳ್ಳುತ್ತದೋ, ಹಾಗೆಯೇ ನಾವು ಕೂಡ ಹಣವನ್ನ ಬಯಸಿಯೂ ಬಯಸದಂತೆ ಇರಬೇಕಾಗುತ್ತದೆ. ಹಣದ ಬಗ್ಗೆಯ ಮೋಹವೂ ಬೇಕು, ಒಂದು ರೀತಿಯ ನಿರ್ಲಿಪ್ತತೆಯೂ ಬೇಕು. ಇದೊಂದು ವಿಚಿತ್ರ ಮನಸ್ಥಿತಿ. ಹಣದ ಗುಣಕ್ಕೆ ತಕ್ಕಂತೆ ನಾವು ನಮ್ಮ ಗುಣದಲ್ಲಿ ಅಲ್ಪಸ್ವಲ್ಪ ಬದಲಾವಣೆ ತಂದುಕೊಳ್ಳುವ ಅಗತ್ಯವಿದೆ. ಹಣ ಬೇಕೆನ್ನುವ ವ್ಯಾಪಾರಿ ಮನೋಭಾವ, ಏನೂ ಬೇಡವೆನ್ನುವ ಸಂತನ ಮನಸ್ಥಿತಿ ಎರಡರ ಸಂಗಮವದು! ಎಲ್ಲವೂ ಇದ್ದೂ ಏನೂ ಇಲ್ಲದಂತೆ ಬದುಕುವ ವೈರಾಗ್ಯ, ಏನೂ ಇಲ್ಲದೆ ಜಗತ್ತನ್ನ ಗೆಲ್ಲುವ ಆತ್ಮವಿಶ್ವಾಸದ ಮನಸ್ಥಿತಿಯದು!! ಆಧುನಿಕ ಜಗತ್ತಿನಲ್ಲಿ ಇಂಥ ಮನಸ್ಥಿತಿಯನ್ನ ನಾವು 'ನಿರ್ವಾಣ' ಎನ್ನಬಹುದೇನೋ? ಇಂಥ ಮನಸ್ಥಿತಿಯನ್ನು ನಾವೆಲ್ಲರೂ ಬೆಳೆಸಿಕೊಳ್ಳಬೇಕಿದೆ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- ಹಗಲು-ರಾತ್ರಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದ್ದೇನೆ. ನಾನು ಪಕ್ಷದ ಶಿಸ್ತಿನ ಸಿಪಾಯಿ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನೇಕೆ ರಾಜೀನಾಮೆ ನೀಡಲಿ?: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್
- **ಶಭಾಷ್! ನಿಮ್ಮ ನಿಲುವು 'ಬಂಡೆ'ಯಷ್ಟೇ ಅಚಲ ಮತ್ತು ಗಟ್ಟಿ ಅಂತ ಗೊತ್ತಾಯ್ತು ಬಿಡಿ ಸರ್!**

- ಆರ್‌ಜೆಡಿ ಪಕ್ಷವು ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದಕ್ಕೆ ಸೋದರಿ ರೋಹಿಣಿ ಆಚಾರ್ಯ ಅವರೇ ಕಾರಣ ಎಂದು ಕೋಪಗೊಂಡು ಅವರ ಮೇಲೆ ಚಪ್ಪಲಿ ಎಸೆದ ಸೋದರ ತೇಜಸ್ವಿ ಯಾದವ್: ಸುದ್ದಿ
- **ಉಳಿದ ಮತ್ತೊಂದು ಚಪ್ಪಲಿಯಿಂದ ಅವರು 'ಏನು ಮಾಡಿಕೊಂಡರು?' ಎಂಬುದಿನ್ನೂ ವರದಿಯಾಗಿಲ್ಲ, ಕ್ಷಮಿಸಿ!!**

- ನಾಯಿಯನ್ನು ಮುದ್ದಿಸುವ ನೆಪದಲ್ಲಿ ಯುವತಿಗೆ ಲೈಂಗಿಕ ಕಿರುಕುಳ ನೀಡಿದ ಅಪರಿಚಿತ: ಸುದ್ದಿ
- **ಥೂ! ನಾಯಿ...!**

- ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶದ ಪರಿಣಾಮ ಕರ್ನಾಟಕದ ಮೇಲೆ ಬೀಳುವುದಿಲ್ಲ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರಕಾರ ಸುಭದ್ರವಾಗಿದ್ದು 2028ರ ಎಲೆಕ್ಷನ್‌ನಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ: ಸಚಿವ ಮುನಿಯಪ್ಪ
- **ಈ ಹೇಳಿಕೆ ಹೊರಬಿದ್ದಿದ್ದೇ ತಡ, ವಠಾರದ ಶ್ರದ್ಧಾವಂತ ಭಕ್ತರೊಬ್ಬರ ಮನೆಯ ಟೇಪ್ ರೆಕಾರ್ಡರ್‌ನ ಹಳೆಯ ಕ್ಯಾಸೆಟ್ಟು, ''.... ಎಂಬಲ್ಲಿಗೆ ಸ್ಕಾಂದ ಪುರಾಣದ ರೇವಾ ಕಾಂಡದ ಮೊದಲ ಅಧ್ಯಾಯವು ಸಮಾಪ್ತವಾಯಿತು'' ಎಂಬುದಾಗಿ ಕೇಕೆ ಹಾಕಿತಂತೆ!**

- ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸೋಲಿನ ಬಳಿಕ ಆರ್‌ಜೆಡಿ ಪಕ್ಷದ ನಾಯಕ ಲಾಲೂ ಪ್ರಸಾದ್ ಯಾದವ್ ಕುಟುಂಬದಲ್ಲಿ ಭಾರಿ ಜಗಳ. ಮನೆ ತೊರೆದ ಲಾಲು ಪುತ್ರಿಯರು: ಸುದ್ದಿ
- **ಹಾಗಾದರೆ, ತೇಜಸ್ವಿ ಯಾದವ್ ಅವರು 'ತವರಿಗೆ ಬಾ ತಂಗಿ' ಶೈಲಿಯಲ್ಲಿ 'ತವರಿಗೆ ಬಾ ಅಕ್ಕಾ' ಅಂತ ಇನ್ಮೇಲೆ ಅವರನ್ನ ಕರೆಯೋಕ್ಕೆ ಆಗಲ್ವಾ? ಛೇ!**

- ಬಾಂಬ್ ಸ್ಫೋಟದ ಪ್ರಕರಣದ ತನಿಖೆಯಲ್ಲಿ ಮಹತ್ವದ ಬೆಳವಣಿಗೆ. ಆತ್ಮಹತ್ಯಾ ಬಾಂಬರ್‌ಗೆ ನೆರವಾದ ಅಮೀರ್ ರಶೀದ್ ಅಲಿಯನ್ನು ಬಂಧಿಸಿದ ರಾಷ್ಟ್ರೀಯ ತನಿಖಾ ಸಂಸ್ಥೆ: ಸುದ್ದಿ
- **ತನಿಖಾ ಸಂಸ್ಥೆಯವರು ಒಂದಿಷ್ಟು ಚೆನ್ನಾಗಿ ರುಬ್ಬಿದರೆ 'ಹೂರಣ' ಆಚೆಗೆ ಬರುತ್ತೆ ಬಿಡಿ..!!**

- ಕಾಲೇಜಿನಲ್ಲಿ ಶೋಕಿ ಮಾಡಲು 'ಮನೆಗಳ್ಳತನ'ಕ್ಕೆ ಇಳಿದಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಬಂಧಿಸಿದ ಚಿಕ್ಕಬಳ್ಳಾಪುರ ಪೊಲೀಸರು: ಸುದ್ದಿ
- **'ಮತಗಳ್ಳತನ'ದ ಸುದ್ದಿಯನ್ನು ಕೇಳಿ ಕೇಳಿ ತಲೆಚಿಟ್ಟು ಹಿಡಿಸಿಕೊಂಡಿದ್ದವರಿಗೆ ಈ 'ಮನೆಗಳ್ಳತನ'ದ ಸುದ್ದಿ ರಿಲೀಫ್ ಕೊಡುತ್ತೆ ಅಂತ ಹೇಳಿದರೆ ಅದು ಕುಹಕವಾದೀತು..!!**

- ಟ್ರಂಪ್‌ಗೆ ಮುಳುವಾದ ಸುಂಕಬಾಧೆ. ಚಹಾ, ಮಸಾಲೆ ಸೇರಿದಂತೆ 200 ಉತ್ಪನ್ನಗಳ ಮೇಲಿನ ತೆರಿಗೆ ಇಳಿಕೆ. ಭಾರತೀಯರಿಗೆ ಲಾಭ: ಸುದ್ದಿ
- **ಈ ಬೆಳವಣಿಗೆಯನ್ನು 'ಕೆಟ್ಟ ಮೇಲೆ ಬುದ್ಧಿ ಬಂತು' ಅಂತ ಕರೀಬೇಕೋ ಅಥವಾ 'ಮೂಗನ್ನು ಗಟ್ಟಿಯಾಗಿ ಹಿಡಿದರೆ ಬಾಯಿ ತಾನಾಗೇ ತೆರೆದುಕೊಳ್ಳುತ್ತೆ' ಅನ್ನಬೇಕೋ ಎಂದು ಗೊತ್ತಾಗದೆ ವಿ.ವಿ.ಪುರಂನ ಶೆಟ್ಟರೊಬ್ಬರು 'ನಿಪ್ಪಟ್ಟು-ಕೋಡುಬಳೆ'ಯನ್ನು ಪುಷ್ಕಳವಾಗಿ ಬಾಯಾಡಿಸಿ, ಸಜ್ಜನ್‌ರಾವ್ ಸರ್ಕಲ್ ಸುತ್ತಲೂ ಸುತ್ತತೊಡಗಿದರಂತೆ!!**

ವೃತ್ತಿಪರ ಕೋರ್ಸ್ ತನ್ನ ಉದ್ದೇಶ ಮರೆತರೆ ಹೇಗೆ?

ಯಕ್ಷಪ್ರಶ್ನೆ
ಸುರೇಂದ್ರ ಪೈ, ಭಟ್ಕಳ
vveditoped@gmail.com

ಒಂದು ದೇಶದ ಭವಿಷ್ಯವು ಶಾಲೆಯ ನಾಲ್ಕು ಗೋಡೆಯ ನಡುವೆ ನಿರ್ಮಾಣವಾಗುತ್ತದೆ ಎಂಬ ಮಾತಿದೆ. ಆ ನಾಲ್ಕು ಗೋಡೆಯ ಒಳಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಗುರುತರವಾದ ಹೊಣೆಗಾರಿಕೆ ಶಿಕ್ಷಕನ ಮೇಲಿರುತ್ತದೆ. ಇಂದು ಔಪಚಾರಿಕ ಶಿಕ್ಷಣವೇ ಚಾಲ್ತಿಯಲ್ಲಿರುವುದರಿಂದ ಶಿಕ್ಷಕರ ಪಾತ್ರವು ಮಹತ್ವದ್ದು. ಹಾಗಾಗಿಯೇ ವಿದ್ಯಾರ್ಥಿ ಜೀವನದಲ್ಲಿ 'ಮುಂದೆ ಗುರಿ, ಹಿಂದೆ ಗುರು' ಇರಬೇಕು ಎಂದು ಹೇಳುವುದು.

ಅಜ್ಞಾನವೆಂಬ ಕತ್ತಲೆಯನ್ನು ಸರಿಸಿ, ಸುಜ್ಞಾನದ ಬೆಳಕನ್ನು ನೀಡುವಾತನೇ ಗುರು. ಈ ಗುರು ಸ್ಥಾನದಲ್ಲಿರುವ ಶಿಕ್ಷಕರಿಗೆ ಅಂಥದೊಂದು ಗೌರವ, ಬೆಲೆ ಇರಲು ಕಾರಣ ಅವರಲ್ಲಿರುವ 'ಜ್ಞಾನ'. ಶಿಕ್ಷಕನಾದವನಲ್ಲಿ ಸದಾ ಸಂಯಮ, ಕುತೂಹಲ, ಅಧ್ಯಯನಶೀಲತೆ ಇದ್ದರೆ ಮಾತ್ರವೇ ಆತ ಸುಜ್ಞಾನವನ್ನು ಪಡೆಯಲು ಸಾಧ್ಯ.

ಅದೊಂದು ಕಾಲವಿತ್ತು, ಕೇವಲ ಹತ್ತನೇ ತರಗತಿ ಪಾಸಾದರೆ ಸಾಕಿತ್ತು, ಮನೆ ಬಾಗಿಲಿಗೆ ಶಿಕ್ಷಕ ಹುದ್ದೆಯ ನೇಮಕಾತಿ ಪತ್ರ ಅರಸಿ ಬರುತ್ತಿತ್ತು. ತದನಂತರ ಪಿಯುಸಿ ಮುಗಿದು ಟಿಸಿಎಚ್ ಕೋರ್ಸ್ ಮಾಡಿದರೂ ಸಾಕಾಗಿತ್ತು, ಯಾವುದೇ ಪ್ರವೇಶ ಪರೀಕ್ಷೆಯಿಲ್ಲದೇ ನೇರವಾಗಿ ಶಿಕ್ಷಕರಾಗುವ ಭಾಗ್ಯ ಹುಡುಕಿಕೊಂಡು ಬರುತ್ತಿತ್ತು.

ಆದರೆ ಈಗ ಕಾಲ ಸಂಪೂರ್ಣ ಬದಲಾಗಿದೆ. ಇಂದು ಶಿಕ್ಷಕರಾಗಬೇಕಾದರೆ ಮೊದಲಿದ್ದ ಟಿಸಿಎಚ್ ಬದಲಾಗಿ ಪಿಯುಸಿ ನಂತರದ ಡಿ.ಇಡಿ ಅಥವಾ ಪದವಿ ನಂತರದ ಬಿ.ಇಡಿ ತರಬೇತಿ ಪಡೆಯಬೇಕು. ಕಳೆದ ಹಲವು ವರ್ಷಗಳಿಂದ ಪ್ರಾಥಮಿಕ ಶಾಲಾ ಶಿಕ್ಷಕರಾಗಲು ಕೇವಲ ಶಿಕ್ಷಕರ ತರಬೇತಿ ಕೋರ್ಸ್ ಮಾಡಿದರೆ ಸಾಲದು, ಟಿಇಟಿ ಎಂಬ ಅರ್ಹತಾ ಪರೀಕ್ಷೆಯನ್ನು ತೇರ್ಗಡೆಯಾಗಿ, ಬಳಿಕ ಶಿಕ್ಷಕರ ನೇಮಕಾತಿ ಪರೀಕ್ಷೆ ಕರೆದಾಗ ಮತ್ತೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ, ಮೆರಿಟ್ ಲಿಸ್ಟ್‌ನಲ್ಲಿ ಸ್ಥಾನಪಡೆಯಬೇಕು. ಆಗ ಸರಕಾರಿ ಶಾಲೆಯ ಶಿಕ್ಷಕರಾಗಲು ಸಾಧ್ಯ. ಹಾಗಂತ ಸರಕಾರಿ ಹುದ್ದೆ ಸಿಗಲಿಲ್ಲವೆಂದರೂ ಬಿ.ಇಡಿ ತರಬೇತಿ ಪಡೆದವರು ಟಿಇಟಿ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿಯೂ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸಬಹುದು. ಇದು ಶಿಕ್ಷಣ ಇಲಾಖೆ ಹೊರಡಿಸಿರುವ ಫರ್ಮಾನು. ಆದರೆ ಸರಕಾರ ಹೊರಡಿಸಿರುವ ಆದೇಶಗಳು ಯಥಾಪ್ರಕಾರ ಅನುಷ್ಠಾನಕ್ಕೆ ಬಂದು ಯೋಜನೆ ಕಾರ್ಯರೂಪಕ್ಕೆ ಬರುವಂತೆ ಮಾಡುವುದೇ ಪ್ರಸ್ತುತ ನಮ್ಮ ವ್ಯವಸ್ಥೆಗಿರುವ ಬಹುದೊಡ್ಡ ಸವಾಲು.

ಇಂದು ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ಆದೇಶವನ್ನು ಶೇ.70ರಷ್ಟು ಖಾಸಗಿ ಶಾಲೆಗಳು ಪಾಲಿಸದಿರುವುದು ಕಂಡುಬರುತ್ತದೆ. ಇತ್ತೀಚೆಗೆ ಬಿಡುಗಡೆಯಾದ 2025-26ನೇ ಸಾಲಿನ 'ಯುಡೈಸ್ ಪ್ಲಸ್' ವರದಿ ಹೇಳುವಂತೆ, ಶೈಕ್ಷಣಿಕ ಹಾಗೂ ವೃತ್ತಿಪರ ಅರ್ಹತೆ ಇಲ್ಲದ ಶೇ. 35ರಷ್ಟು ಮಂದಿ ದೇಶದ ಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರೊಂದಿಗೆ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಶಿಕ್ಷಕರು ಹಲವಾರು ಕಾರಣಗಳಿಂದಾಗಿ ಶಿಕ್ಷಕ ವೃತ್ತಿಯನ್ನು ತೊರೆಯುತ್ತಿದ್ದಾರೆ ಎಂಬ ಕಳವಳವು ವಿವಿಧ ಖಾಸಗಿ ಸಮೀಕ್ಷಾ ವರದಿಗಳಿಂದ ಕೇಳಿಬರುತ್ತಿದೆ.

ಇದೀಗ ರಾಜ್ಯದಲ್ಲಿ ಬಿ.ಇಡಿ ವೃತ್ತಿಪರ ಕೋರ್ಸ್‌ಗಳಿಗೆ ಪದವೀಧರ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಶಿಕ್ಷಕರಾಗಬೇಕೆಂಬ ಕನಸು ಕಟ್ಟಿಕೊಂಡವರು ಬಿ.ಇಡಿ, ಡಿ.ಇಡಿ ಎಂಬ ವೃತ್ತಿಪರ ಕೋರ್ಸ್ ಪೂರ್ಣಗೊಳಿಸಬೇಕು. ಅದುವೇ ಶಿಕ್ಷಕರಾಗಲು ಇರುವ ಮೊದಲ ಅರ್ಹತೆ. ಆದರೆ ಇತ್ತೀಚಿನ ದಶಕಗಳಲ್ಲಿ ವೃತ್ತಿಪರ ಕೌಶಲ ತರಬೇತಿ ಕೋರ್ಸ್‌ಗಳು ಅಕ್ರಮಗಳ ಕಾರಣದಿಂದಾಗಿ ತಮ್ಮ ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿಲ್ಲ. ಹಾಗಾಗಿ ಬಿ.ಇಡಿ ಕೋರ್ಸ್ ಎಂಬುದು ಚೈತನ್ಯವಿಲ್ಲದ ಬುಗ್ಗೆಯಾಗುತ್ತಿದೆ. ಇದರ ಪರಿಣಾಮ ಸಂಪನ್ಮೂಲ ವ್ಯಕ್ತಿಗಳು ಅಗತ್ಯಕ್ಕೆ ತಕ್ಕಂತೆ ಕೌಶಲಗಳನ್ನು ಗಳಿಸುವುದರಲ್ಲಿ ವಿಫಲರಾಗುತ್ತಿದ್ದಾರೆ.

ಇಂದು ರಾಜ್ಯದಲ್ಲಿ 225ಕ್ಕೂ ಹೆಚ್ಚು ಬಿ.ಇಡಿ ಕಾಲೇಜುಗಳು ವಿವಿಧ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದರೂ ಕೋರ್ಸ್ ವೈಫಲ್ಯ ಹೊಂದಲು ಹಲವು ಕಾರಣಗಳಿವೆ. ಈ ಪೈಕಿ ಕೆಲವನ್ನು ಗಮನಿಸುವುದಾದರೆ, ಪ್ರತಿ ಒಂದು ಬ್ಯಾಚ್‌ನಲ್ಲಿ ನೂರು ಜನ ವಿದ್ಯಾರ್ಥಿಗಳಲ್ಲಿ 50ರಷ್ಟು ಸರಕಾರಿ ಕೋಟಾಗೆ ಸೇರಿದರೆ, ಇನ್ನುಳಿದವರು ಆಡಳಿತ ಮಂಡಳಿ ಕೋಟಾಗೆ ಸೇರಿದವರು. ಇವರಲ್ಲಿ ಶೇ.25ರಷ್ಟು ಪ್ರಶಿಕ್ಷಣಾರ್ಥಿಗಳು ನಿಯತವಾಗಿ ಕಾಲೇಜಿಗೆ ಹಾಜರಾಗದೆ ಕೇವಲ ವರ್ಷಕ್ಕೊಮ್ಮೆ ಸಮನ್ವಯ ಸಮಿತಿಯ ಸದಸ್ಯರು ಕಾಲೇಜಿಗೆ ಭೇಟಿ ನೀಡುವ ಸಮಯದಲ್ಲಿ, ಇನ್ನುಳಿದಂತೆ ನೇರವಾಗಿ ಪರೀಕ್ಷೆಗೆ ಹಾಜರಾಗುತ್ತಾರೆ. ಇಂಥ ಅಕ್ರಮ ದಾಖಲಾತಿ ತಪ್ಪಿಸಲು ಬಯೋಮೆಟ್ರಿಕ್ ಹಾಜರಾತಿ ಜಾರಿಯಿದ್ದರೂ ಸುಳ್ಳು ದಾಖಲೆ ಸೃಷ್ಟಿಸಿ ವಂಚಿಸಲಾಗುತ್ತಿದೆ. ಅವರೆಲ್ಲಾ ದೂರ ಶಿಕ್ಷಣ ವ್ಯವಸ್ಥೆಯಂತೆ ಒಂದೆಡೆ ಕೆಲಸ ಮಾಡುತ್ತಲೇ ಇತ್ತ ಬಿ.ಇಡಿ ಕೋರ್ಸ್ ಮುಗಿಸುತ್ತಾರೆ.

ಇನ್ನು ಬಿ.ಇಡಿಯಲ್ಲಿ ಕಲಿಯುವ ವಿಷಯ ಹಾಗೂ ಬೋಧನಾ ಪದ್ಧತಿಗಳು ಪುರಾತನವಾಗಿವೆ. ಇಂದಿನ ಆಧುನಿಕ ಶಾಲಾ ಶಿಕ್ಷಣಕ್ಕೆ ತಕ್ಕುದಾದ ಕೌಶಲಾಧಾರಿತ ಬೋಧನೆ ನಡೆಯುತ್ತಿಲ್ಲ. ನಿತ್ಯದ ಶಾಲಾ ತರಗತಿಯಲ್ಲಿ ಶಿಕ್ಷಕರು ಎದುರಿಸುವ ವಿವಿಧ ಸವಾಲುಗಳಿಗೂ ಕೋರ್ಸ್‌ನಲ್ಲಿ ಕಲಿಸಲಾಗುವ ಶೇ. 70ರಷ್ಟು ಅಂಶಕ್ಕೂ ಸಂಬಂಧವೇ ಇಲ್ಲ. ಉದಾಹರಣೆಗೆ, ಶೈಕ್ಷಣಿಕ ಮನೋವಿಜ್ಞಾನ ಪಠ್ಯಕ್ರಮವನ್ನು ಒಬ್ಬ ಸಾಮಾನ್ಯ ಅಧ್ಯಾಪಕ ಪಾಠ ಮಾಡುವುದರ ಜತೆಯಲ್ಲೇ ಒಬ್ಬ ಮಕ್ಕಳ ಮನಶ್ಶಾಸ್ತ್ರಜ್ಞನಿಂದ (ವೈದ್ಯರಿಂದ) ಕನಿಷ್ಠ ಒಂದು ವಾರದ ಕಾರ್ಯಾಗಾರವನ್ನು ಹಮ್ಮಿಕೊಂಡರೆ ಎಷ್ಟು ಅರ್ಥಪೂರ್ಣವಾಗಿರುತ್ತದೆ, ಯೋಚಿಸಿ. ಬಹು ಮುಖ್ಯವಾಗಿ ಎರಡು ವರ್ಷದ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಗಳು ಬರೋಬ್ಬರಿ ನಾಲ್ಕು ತಿಂಗಳು ಶಾಲೆಗಳಿಗೆ ತೆರಳಿ ಪಾಠ ಬೋಧನೆ ಮಾಡುತ್ತಾರೆ. ಆದರೆ ಸರಕಾರಿ ಶಾಲೆಯಲ್ಲಿ ಬೆರಳೆಣಿಕೆಯಷ್ಟು ಮಕ್ಕಳಿರುವುದರಿಂದ ಅಲ್ಲೂ ಸೂಕ್ತ ತರಬೇತಿ ದೊರಕುತ್ತಿಲ್ಲ. ತರಗತಿಯ ಸವಾಲುಗಳನ್ನು, ವಿದ್ಯಾರ್ಥಿಗಳ ಮನೋವೈಜ್ಞಾನಿಕ ಮಟ್ಟವನ್ನು ಅರಿಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಇನ್ನೂ ಅದೆಷ್ಟೋ ಪ್ರಶಿಕ್ಷಣಾರ್ಥಿಗಳು ಯಾವ ಪಾಠಬೋಧನೆ ಮಾಡದೇ, ಸುಳ್ಳು ದಾಖಲೆ ಸೃಷ್ಟಿಸಿ ಒಪ್ಪಿಸುತ್ತಿದ್ದಾರೆ. ಇವೆಲ್ಲವೂ ಕೇವಲ ಆಂತರಿಕ ಅಂಕಗಳನ್ನು ಪಡೆಯುವ ಸಲುವಾಗಿ ನಡೆಯುವ ಒಂದು ಪ್ರಕ್ರಿಯೆ ಅಷ್ಟೇ.

ಅಣುಬೋಧನೆಯಿಂದ ಹಿಡಿದು ಪಾಠ ಬೋಧನೆಯ ತನಕವೂ ಪಾಠಕ್ಕೆ ಬೇಕಾದ ಎಲ್ಲಾ ಬೋಧನೋಪಕರಣಗಳನ್ನು ಬೇರೆಯವರಿಂದಲೇ ಸಿದ್ಧಪಡಿಸಿ ಬಳಸುತ್ತಾರೆಯೇ ವಿನಾ ಅವುಗಳನ್ನು ಹೇಗೆ ಶಿಕ್ಷಕರೇ ಸಿದ್ಧಪಡಿಸಬೇಕೆಂಬ ತರಬೇತಿ ನೀಡುವುದಿಲ್ಲ. ಇಷ್ಟೆಲ್ಲಾ ಅವ್ಯವಸ್ಥೆಗಳ ಮಧ್ಯೆ, ಬಿ.ಇಡಿ ಕೋರ್ಸ್ ಕೌಶಲಪೂರ್ಣ, ಗುಣಮಟ್ಟದ ಶಿಕ್ಷಕರನ್ನು ರೂಪಿಸಲು ಹೇಗೆ ಸಾಧ್ಯವಾದಿತು? ಶಿಕ್ಷಕರನ್ನು ನಿರ್ಮಿಸುವ ತರಬೇತಿ ಸಂಸ್ಥೆಗಳ ಮೇಲೆ ಸೂಕ್ತ ಮೇಲ್ವಿಚಾರಣೆ ಮಾಡಲು ತೋರುವ ಪ್ರಜ್ಞಾಪೂರ್ವಕವಾದ ನಿರ್ಲಕ್ಷ್ಯದಿಂದಾಗಿ ಇಂದು ಲಕ್ಷಾಂತರ ನಕಲಿ ಶಿಕ್ಷಕರು ಕೇವಲ ಪ್ರಮಾಣಪತ್ರದ ಆಧಾರದ ಮೇಲೆ ಕೆಲಸ ಗಿಟ್ಟಿಸಿಕೊಳ್ಳುವಂತಾಗಿದೆ.

ಇಂದು ರಾಜ್ಯದಲ್ಲಿ ಗುಣಮಟ್ಟದ ಶಿಕ್ಷಕರ ಕೊರತೆ ಬಹಳ ಕಾಡುತ್ತಿದೆ. ಅದಕ್ಕಾಗಿ ಶೇ. 40ರಷ್ಟು ಖಾಸಗಿ ಶಾಲೆಯಲ್ಲಿ ಬಿ.ಇಡಿ ತರಬೇತಿ ಹೊಂದಿರದಿದ್ದರೂ, ಶೇ. 85ರಷ್ಟು ಶಾಲೆಗಳಲ್ಲಿ ಟಿಇಟಿ, ಸಿಟಿಇಟಿ ಅರ್ಹತಾ ಪರೀಕ್ಷೆ ತೇರ್ಗಡೆಯಾಗದಿದ್ದರೂ ಅಭ್ಯರ್ಥಿಗಳಲ್ಲಿ ಕೌಶಲ, ಜ್ಞಾನ ಎರಡಿದ್ದರೆ ಅವರು ಯಾವುದೇ ಪದವಿ ಪಡೆದಿದ್ದರೂ ಅವರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಹೀಗೆ ವೃತ್ತಿಪರ ಕೌಶಲಗಳ ಅರಿವಿಲ್ಲದ ಶಿಕ್ಷಕರಿಂದ ಶಿಕ್ಷಣ ಕ್ಷೇತ್ರ ಹೇಗೆ ತಾನೇ ಅಪೇಕ್ಷಿತ ಗುರಿ ಮುಟ್ಟಲು ಸಾಧ್ಯ?

ಇನ್ನು ಟಿಇಟಿ ಅರ್ಹತಾ ಪರೀಕ್ಷೆ ಎಂಬುದು ಸರಕಾರಕ್ಕೆ ಆದಾಯ ತಂದುಕೊಡುವ ಒಂದು ಯಂತ್ರವಷ್ಟೇ. ಏಕೆಂದರೆ ರಾಜ್ಯದಲ್ಲಿ 2014ರಲ್ಲಿ ಪ್ರಾರಂಭವಾದ ಶಿಕ್ಷಕರ ಅರ್ಹತಾ ಪರೀಕ್ಷೆ ಪ್ರತಿ ವರ್ಷವೂ ನಡೆಯುತ್ತಲೇ ಇದೆ. ಆದರೆ 1-5 (ಪೇಪರ್ -1) ತರಗತಿಯವರೆಗಿನ ಟಿಇಟಿ ಅರ್ಹತೆ ಪಡೆದವರಿಗೆ 2014ರಲ್ಲಿ ಒಮ್ಮೆ ಮಾತ್ರ ನೇಮಕಾತಿ ಮಾಡಿಕೊಳ್ಳಲಾಗಿದೆ. ತದನಂತರ ಇಲ್ಲಿಯ ತನಕ ಅವರ ನೇಮಕಾತಿ ನಡೆದಿಲ್ಲ. ಕಾರಣ 1-5 ತರಗತಿಯವರೆಗೆ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯೇ ಖಾಲಿ ಇಲ್ಲ. ಹುದ್ದೆ ಖಾಲಿ ಇಲ್ಲದಿದ್ದರೂ ಶಿಕ್ಷಣ ಇಲಾಖೆ ಟಿಇಟಿ ಕರೆಯುತ್ತಿದೆ. ಪ್ರತಿ ವರ್ಷವೂ ಕನಿಷ್ಠ 30-40 ಸಾವಿರ ಅಭ್ಯರ್ಥಿಗಳು ಈ ಅರ್ಹತಾ ಪರೀಕ್ಷೆಯನ್ನು ಬರೆಯುತ್ತಿದ್ದಾರೆ. ಇಂಥ ಅರ್ಹತಾ ಪರೀಕ್ಷೆಯಿಂದ ಏನು ಪ್ರಯೋಜನ? ಕೇವಲ ಬಿ.ಇಡಿ ತರಬೇತಿ ಪಡೆದು ಐದಾರು ವರ್ಷ ಕೆಲಸವಿಲ್ಲದೇ ಸುಮ್ಮನೆ ಕುಳಿತಿದ್ದರೆ ಅಥವಾ ಬಿ.ಇಡಿ ಎಂಬ ಶಿಕ್ಷಕರ ವೃತ್ತಿಪರ ತರಬೇತಿ ಪಡೆದು ಬೇರಾವುದೋ ಕೆಲಸಕ್ಕೆ ತೊಡಗಿಕೊಂಡರೆ ಕಲಿತ ವಿದ್ಯೆಗೇನು ಫಲ?

ಹೀಗೆ ವೃತ್ತಿಪರ ಶಿಕ್ಷಣವು ನಿತ್ಯಜೀವನಕ್ಕೆ ಸಂಬಂಧವನ್ನೇ ಹೊಂದಿಲ್ಲದಿರುವಾಗ ಅದು ಶಿಕ್ಷಕರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಹೇಗೆ ಸಾಧ್ಯ? ಇನ್ನಾದರೂ ಸರಕಾರವು ಹೊಸ ಶಿಕ್ಷಣ ನೀತಿ ಹಾಗೂ ಆಧುನಿಕ ಅಗತ್ಯತೆಗೆ ತಕ್ಕಂತೆ ಬಿ.ಇಡಿ ಕೋರ್ಸ್‌ನಲ್ಲಿ ಸೂಕ್ತ ಬದಲಾವಣೆಯನ್ನು ಮಾಡುವ ಮೂಲಕ ಅದನ್ನು ಮರುಸಂಯೋಜಿಸಿದರೆ ಬಹುತೇಕ ಶಿಕ್ಷಕರು ತಮ್ಮ ತಾಲೂಕು, ಜಿಲ್ಲೆಯಲ್ಲಿನ ಖಾಸಗಿ ಶಾಲೆಗಳಲ್ಲೇ ಉದ್ಯೋಗವನ್ನು ಪಡೆಯುವ ಹಲವು ಅವಕಾಶ ತೆರೆದುಕೊಳ್ಳುತ್ತವೆ. ಮೂರುಪಟ್ಟು ವೇತನ ನೀಡಿ ನಮ್ಮ ನೆಲ-ಜಲ-ಭಾಷೆ-ಸಂಸ್ಕೃತಿಯ ಅರಿವಿಲ್ಲದ ಅನ್ಯರಾಜ್ಯದ ಶಿಕ್ಷಕರನ್ನು ಅವಲಂಬಿಸುವ ಬದಲು ನಮ್ಮವರೇ ಅದರ ಸದುಪಯೋಗ ಪಡೆದುಕೊಳ್ಳುವಂತೆ ಮಾಡಬೇಕಲ್ಲವೇ?

(ಲೇಖಕರು ಶಿಕ್ಷಕರು)

ಪ್ರಶಸ್ತಿಗಳು ಬಿಕರಿಗಿವೆ, ಬೇಕೇನ್ರೀ?!

ಪ್ರತಿಸ್ಪಂದನ
ಎಚ್.ಕೆ.ಮಧು, ಕತಾರ್

ಕಿರಣ್ ಉಪಾಧ್ಯಾಯ ಅವರ ನವೆಂಬರ್ 3ರ 'ವಿದೇಶವಾಸಿ' ಅಂಕಣದಲ್ಲಿ 'ರಾಜ್ಯಪ್ರಶಸ್ತಿ; ಅರ್ಹರಿಗೆ ಮುಂದಿನ ಬಾರಿ' ಶೀರ್ಷಿಕೆಯ ಬರಹವನ್ನು ಓದಿ ಪೇಚಾಡಿಕೊಂಡು ಸುಮ್ಮನಾಗಿದ್ದೆ. ಪ್ರಶಸ್ತಿಗಳು ಬಿಕರಿಗಿವೆ ಎಂಬ ಸಂಗತಿಯು ಸರ್ವವೇದ್ಯವಾಗಿರುವಾಗ, ಅವರ ಬರಹದಲ್ಲಿ ಆಶ್ಚರ್ಯಪಡುವಂಥದ್ದೇನೂ ಇರಲಿಲ್ಲ. ಆದರೆ ಸಾವಿರ ಸಂಖ್ಯೆಯಲ್ಲಿ ಬರುವ ಅರ್ಜಿಗಳು ಮತ್ತು ಅದರಲ್ಲಿನ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸದೆ ಆಯ್ಕೆಮಾಡುವುದು ಸರ್ವೇಸಾಮಾನ್ಯವಾಗಿದೆ. ಇಷ್ಟಾಗಿಯೂ, ಕೇಂದ್ರದಲ್ಲಿ ನರೇಂದ್ರ ಮೋದಿಯವರ ನೇತೃತ್ವದ ಸರಕಾರ ಬಂದ ಮೇಲೆ, ರಾಷ್ಟ್ರ ಮಟ್ಟದಲ್ಲಿನ 'ಪದ್ಮ ಪ್ರಶಸ್ತಿ'ಗಳಿಗೆ ತೂಕ ಹಾಗೂ ಗೌರವಗಳು ಮರಳಿವೆ ಹಾಗೂ ಅರ್ಹರನ್ನು ಹುಡುಕಿ ಹುಡುಕಿ ಪ್ರಶಸ್ತಿಗಳನ್ನು ಕೊಡಲಾಗುತ್ತಿದೆ ಎಂಬುದು ಶ್ಲಾಘನೀಯ ಬೆಳವಣಿಗೆ.

ಪ್ರಶಸ್ತಿ, ಬಿರುದು, ಸನ್ಮಾನಗಳು ಅರ್ಹರನ್ನು ಅರಸಿ ಬರುತ್ತವೆ; ಎಲ್ಲೇ ಇದ್ದರೂ ಗೌರವಾದರಗಳು ಹುಡುಕಿಕೊಂಡು ಬರುತ್ತವೆ. ಯಾವುದೇ ಕ್ಷೇತ್ರದಲ್ಲಿನ ನಿಜಸಾಧಕರು, ತಮ್ಮ ಯೋಗ್ಯತೆ/ಪರಿಣತಿಯನ್ನು ಬಳಸಿಕೊಂಡು ಸದ್ದಿಲ್ಲದೆ ಸಾಧನೆ ಮಾಡುತ್ತಲೇ ಹೋಗುತ್ತಾರೆ. ಅಂದರೆ, ಸಮಾಜ, ದೇಶ, ಪರಿಸರ, ಭಾಷೆ, ಜ್ಞಾನ-ವಿಜ್ಞಾನ, ಕಲಾಪ್ರಕಾರ ಇತ್ಯಾದಿಗಳ ಮೇಲಿನ ಒಲವಿನಿಂದಾಗಿ ಸ್ವಾರ್ಥವಿಲ್ಲದೆ ಸೇವೆ ಮಾಡುತ್ತಾರೆ. ಅಂಥವರು ಯಾವ ಪ್ರಶಸ್ತಿ, ಸನ್ಮಾನಗಳ ಗೊಡವೆಗೂ ಹೋಗುವುದಿಲ್ಲ. ಇಂಥವರ ಪರಿಸರದಲ್ಲಿರುವ ಜನರಿಗೆ, 'ಆಹ್, ಈ ವ್ಯಕ್ತಿಗೆ ಪ್ರಶಸ್ತಿ ಬರಬೇಕಿತ್ತು, ಈ ಬಾರಿಯಾದರೂ ಸಿಗಬೇಕು' ಅನಿಸುತ್ತಿರುತ್ತದೆ. ಸಮಾಜವೇ ಮುಂದಾಗಿ, ಅರ್ಹರನ್ನು ಸರಕಾರಕ್ಕೆ ಶಿಫಾರಸು ಮಾಡಿ, ಪ್ರಶಸ್ತಿ ಬರುವಂತೆ ಮಾಡಬೇಕು. ಅಂಥ ಪ್ರಶಸ್ತಿ/ಗೌರವಕ್ಕೆ ಪಾತ್ರರಾದವರಿಗೆ ನಿಜಕ್ಕೂ ಜನಮನ್ನಣೆ ದೊರೆಯುತ್ತದೆ, ಕೊಟ್ಟ ಪ್ರಶಸ್ತಿಯ ಕಿಮ್ಮತ್ತೂ ಹೆಚ್ಚುತ್ತದೆ. ಪ್ರಶಸ್ತಿ ಪಡೆದವರ ಮೇಲೂ, ಕೊಟ್ಟವರ ಮೇಲೂ ನಂಬಿಕೆ ಹಾಗೂ ಭರವಸೆಗಳು ಉಳಿದು ಬೆಳೆಯುತ್ತವೆ. ವಿಪರ್ಯಾಸವೆಂದರೆ, ಅರ್ಹರಿಗೆ, ಸಾಧನೆ ಮಾಡಿದವರಿಗೆ, ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆ ಮಾಡಿದವರಿಗೆ ಪ್ರಶಸ್ತಿ ಸಿಗುವುದು ಬಹಳ ಕಷ್ಟವೇ. ಅಳುವ ಮಗುವಿಗೆ ಮಾತ್ರವೇ ತಾಯಿ ಹಾಲುಣಿಸುವ ಕಾಲವಿದು; ಹೀಗಾಗಿ ಸಾಧನೆ ಮಾಡಿ ಸುಮ್ಮನೆ ಕೂತರೆ ಪ್ರಶಸ್ತಿಗಳು ಅರಸಿ ಬರುವುದು ದುಸ್ತರವೇ!!

ಅರ್ಹ ವ್ಯಕ್ತಿಗಳ ಸಾಧನೆಗಳು ಸಾರ್ವಜನಿಕವಾಗಿ ಗುರುತಿಸಲ್ಪಟ್ಟಿದ್ದರೂ, ಅವರಿಗೆ ಸೂಕ್ತ ಸಮಯದಲ್ಲಿ ಪ್ರಶಸ್ತಿಗಳು ಲಭ್ಯವಾಗುವುದಿಲ್ಲವೇಕೆ? ಕಾರಣವಿಷ್ಟೇ- ನಮ್ಮಲ್ಲಿ ವಶೀಲಿಬಾಜಿ, ಪ್ರಭಾವ, ಹಣ ಇತ್ಯಾದಿಗಳನ್ನು ಬಳಸಿಕೊಂಡು ಪ್ರಶಸ್ತಿಗಳನ್ನು ಪಡೆದು, ಕೃತ್ರಿಮವಾಗಿ ಹೆಸರು ಮಾಡುವ ಹುಚ್ಚು ಇರುವವರೇ ಜಾಸ್ತಿ. ಹೀಗೆ 'ವಾಮಮಾರ್ಗದಲ್ಲಿ ಪಡೆದ' ಪ್ರಶಸ್ತಿಗಳನ್ನು ಅವರು ತಮ್ಮ ಸ್ವವಿವರಗಳಲ್ಲಿ ಎದ್ದುಕಾಣುವಂತೆ ಬಿಂಬಿಸಿಕೊಳ್ಳುವುದು, ಏನನ್ನೋ ಕಡಿದು ಕಟ್ಟೆ ಹಾಕಿರುವೆಂದು ಬೀಗುವುದು ವಾಡಿಕೆಯಾಗಿಬಿಟ್ಟಿದೆ. ಮಾತ್ರವಲ್ಲದೆ, 'ಇನ್ಯಾರಿಗೋ ಪ್ರಶಸ್ತಿ ಬಂದುಬಿಟ್ಟಿದೆ, ನಾನೇನು ಕಡಿಮೆಯೇ?' ಎಂದು ಹಠಕ್ಕೆ ಬೀಳುವುದು, ರಾಜಕೀಯ ವಲಯದಲ್ಲಿನ ದೊಡ್ಡ ಕುಳಗಳ ಸ್ನೇಹ/ಪರಿಚಯದ ಬಲದೊಂದಿಗೆ ಕೆಲಸ ಮಾಡಿಸಿಕೊಳ್ಳುವುದು, ಅವಶ್ಯವಿದ್ದಲ್ಲಿ ಹಣವನ್ನು ಚೆಲ್ಲಿ ಪ್ರಶಸ್ತಿಗಳನ್ನು ಪಡೆದುಕೊಳ್ಳುವುದು ಹೀಗೆ ಕೀಳು ಲಾಲಸೆಗಳು ಕೆಲವರಲ್ಲಿ ತಾಂಡವವಾಡುತ್ತಿವೆ. ಕೆಲ ಸಂಘಟನೆಗಳಲ್ಲಿ, ಅದರಲ್ಲೂ ವಿದೇಶಗಳಲ್ಲಿರುವ ಸಂಘ-ಸಂಸ್ಥೆಗಳಲ್ಲಿ, ಆಯಕಟ್ಟಿನ ಹುದ್ದೆಗಳನ್ನು ಅಲಂಕರಿಸಿ ಒಂದೆರಡು ವರ್ಷ ಕೆಲಸ ಮಾಡಿದವರು, ತಮ್ಮ ಕೋಳಿ ಕೂಗಿದ್ದರಿಂದಲೇ ಸೂರ್ಯನು ಹುಟ್ಟಿದ್ದು ಎಂದು ತಿಳಿದು ಪ್ರಶಸ್ತಿಯ ಹಿಂದೆ ಬೀಳುತ್ತಾರೆ, ರಾಜಕೀಯದಲ್ಲಿರುವವರು ಕೂಡ ಹಾಕದ ಪಟ್ಟುಗಳನ್ನು ಹಾಕುತ್ತಾರೆ! 'ಇವರಿಗೆ ದೇಶದ ದೊಡ್ಡ ರಾಜಕೀಯ ಪಕ್ಷಗಳಲ್ಲಿ ಉಜ್ವಲ ಭವಿಷ್ಯವಿದೆ' ಎಂದು ಅವರಿವರು ನಂಬುವಂತೆ ಮಾಡಿಬಿಡುತ್ತಾರೆ! ಅಧಿಕಾರಿಗಳು, ಮಂತ್ರಿಗಳನ್ನು ಎಡತಾಕಿ, ಕಸರತ್ತು ಮುಂದುವರಿಸುತ್ತಾರೆ. ಸಂಘ-ಸಂಸ್ಥೆಯೊಂದರ ಹೆಸರಲ್ಲಿ ಮಾಡುವ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳನ್ನು, ಪರಿಸರ ಕಾಳಜಿಯ, ನೆರವಿನ ಚಟುವಟಿಕೆಗಳನ್ನು ತಮಗೆ ಒದಗಿರುವ ಒಳ್ಳೆಯ ಅವಕಾಶವೆಂದು ತಿಳಿದು ಆತ್ಮಸಂತೋಷ ಪಟ್ಟುಕೊಳ್ಳದೆ, ತಮ್ಮ ವೈಯಕ್ತಿಕ ಲಾಭಕ್ಕೆ ಮುಂದಾದಾಗ 'ಪ್ರಶಸ್ತಿಯ ಗೀಳು' ಘೀಳಿಡಲು ಶುರುಮಾಡುತ್ತದೆ. ಇದೇ ರೀತಿಯಲ್ಲಿಯೇ ಹಲವರು ನಿರ್ದಿಷ್ಟ ಪ್ರಶಸ್ತಿಯನ್ನು ದಕ್ಕಿಸಿಕೊಳ್ಳಲು ಯತ್ನಿಸುತ್ತಿದ್ದಾರೆಂದರೆ ಮುಗಿಯಿತು, ಆ ಪ್ರಶಸ್ತಿಯನ್ನು ಪಡೆಯಲು ತಂತ್ರಗಳ ಅಖಾಡ ಸಿದ್ಧವಾಗುತ್ತದೆ. ಹೀಗೆ ಅನರ್ಹರು ಅಡ್ಡದಾರಿಗಳಿಂದ ಪ್ರಶಸ್ತಿ ಪಡೆದರೆ, ನಿಜವಾಗಿಯೂ ಅರ್ಹರಾದವರಿಗೆ ಮೋಸ ಮಾಡಿದಂತೆ ಆಗುವುದಿಲ್ಲವೇ? ಸ್ವಾರ್ಥರಹಿತರಾಗಿ ಕೆಲಸ ಮಾಡಿ ಸಮಾಜದಲ್ಲಿ ಮೆಚ್ಚುಗೆಯನ್ನು ದಕ್ಕಿಸಿಕೊಂಡವರಿಗೆ ಬೆನ್ನಿಗೆ ಇರಿದಂತಾಗುವುದಿಲ್ಲವೇ? ಪ್ರಶಸ್ತಿಗಾಗಿ ಇನ್ನೊಂದು ವರ್ಷ ಮತ್ತೆ ಕಾಯುವಂಥ ಅನಿವಾರ್ಯತೆಗೆ ಅರ್ಹರು ಸಿಲುಕಿದಾಗ, ಸಮಯ ಮತ್ತು ಸ್ಥಿತ್ಯಂತರದ ದಿಕ್ಕು-ದೆಸೆಗಳನ್ನು ಹೇಗೆ ಹೇಳಲಾದೀತು?

ಪ್ರಶಸ್ತಿಗಳು ತಾವಾಗಿಯೇ ಹುಡುಕಿಕೊಂಡು ಬಂದರೆ ಅದು ಸಂತಸದ ಸಂಗತಿ ಮತ್ತು ಯೋಗ್ಯತೆಗೆ ಸಿಕ್ಕಿದ ಮನ್ನಣೆಯಾಗುತ್ತದೆ. ಬದಲಿಗೆ, ತಾವೇ ಅರಸಿ, ತಡಕಿ, ಕೆಣಕಿ, ಬೆನ್ನತ್ತಿ ಪಡೆದರೆ ಅದು ಡಂಭಾಚಾರ, ಆತ್ಮವಂಚನೆ ಎನಿಸಿಕೊಳ್ಳುತ್ತದೆ. ಅಷ್ಟೇ..!

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10,Issue:307

ಸಮಾಚಾರ ಸಣ್ಣದಲ್ಲ

6 ವರ್ಷ ನಂತರ ಚೀನಾಗೆ ಏರ್ ಇಂಡಿಯ ವಿಮಾನ

ದೆಹಲಿ: ಏರ್ ಇಂಡಿಯದಿಂದ ಚೀನಾ ದೇಶಕ್ಕೆ ನೇರ

ವಿಮಾನ ಸೇವೆ 6 ವರ್ಷಗಳ ಬಳಿಕ ಪುನಾರಂಭಗೊಳ್ಳುತ್ತಿದೆ. 2026ರ ಫೆ.1ರಿಂದ ದೆಹಲಿ ಮತ್ತು ಶಾಂಘೈ ನಡುವೆ ತಡೆ ರಹಿತ ವಿಮಾನ ಸೇವೆ ಪುನಾ ರಂಭವಾಗಲಿದೆ ಎಂದು ಏರ್ ಇಂಡಿಯ ವಿಮಾನ ಯಾನ ಸಂಸ್ಥೆ ಸೋಮವಾರ ಪ್ರಕಟಿಸಿದೆ. ಇದಲ್ಲದೇ ಮುಂದಿನ ವರ್ಷದಿಂದ ಮುಂಬೈ ಮತ್ತು ಶಾಂಘೈ ನಡುವೆಯೂ ತಡೆರಹಿತ ವಿಮಾನಗಳನ್ನು ಪರಿಚಯಿಸಲು ಏರ್ ಇಂಡಿಯ ಉದ್ದೇಶಿಸಿದೆ. ಇದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ(ಡಿಜಿಸಿಎ) ಅನುಮೋದನೆ ಬಳಿಕ ಚಾಲನೆಗೊಳ್ಳಲಿದೆ ಎಂದು ವಿಮಾನ ಯಾನ ಸಂಸ್ಥೆ ತಿಳಿಸಿದೆ. ಅವಳಿ-ಹಜಾರ ಬೋಯಿಂಗ್ 787-8 ವಿಮಾನಗಳು ದೆಹಲಿ-ಶಾಂಘೈ ನಡುವೆ ವಾರಕ್ಕೆ 4 ಬಾರಿ ಕಾರ್ಯ ನಿರ್ವಹಿಸಲಿವೆ. ಬಿಸಿನೆಸ್ ಕ್ಲಾಸ್‌ನಲ್ಲಿ 18 ಫ್ಲಾಟ್ ಬೆಡ್‌ಗಳು ಮತ್ತು ಎಕಾನಮಿ ಕ್ಲಾಸ್‌ನಲ್ಲಿ 238 ವಿಶಾಲ ಆಸನಗಳಿರಲಿವೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. 2020ರ ವರ್ಷಾರಂಭದಲ್ಲಿ ಭಾರತ-ಚೀನಾ ನಡುವೆ ವಿಮಾನಯಾನ ಸೇವೆ ಸ್ಥಗಿತಗೊಂಡಿತ್ತು.

ಶಬರಿಮಲೆ: ಚಿನ್ನದ ಹೊದಿಕೆ ತೆಗೆದು ಪರೀಕ್ಷೆ

ಶಬರಿಮಲೆ ದ್ವಾರದ ಚಿನ್ನದ ಹೊದಿಕೆ ತೆಗೆದು ಪರೀಕ್ಷೆಗೊಳಪಡಿಸಲಾಗಿದೆ.

ಶಬರಿಮಲೆ: ಕೇರಳದ ಪ್ರಸಿದ್ಧ ದೇಗುಲಗಳಲ್ಲೊಂದಾದ ಶಬರಿ ಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಚಿನ್ನದ ಕಳವು ಪ್ರಕರಣದಲ್ಲಿ ವೈಜ್ಞಾನಿಕ ಪರೀಕ್ಷೆ ಶುರುವಾಗಿದೆ. ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳ ತಂಡ, ದೇಗುಲದ ಮುಂಭಾಗದ ಪ್ರಮುಖ ದ್ವಾರಗಳಲ್ಲಿರುವ ದ್ವಾರಪಾಲಕ ದೇವರ ಪ್ರತಿಮೆಗಳಿಗೆ ಹಾಗೂ ದ್ವಾರಕ್ಕೆ ಅಳವಡಿಸಲಾಗಿರುವ ಚಿನ್ನದ ಹೊದಿಕೆಗಳನ್ನು ಸೋಮವಾರ ತೆಗೆಸಿ ವೈಜ್ಞಾನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿದೆ. ಈ ಸಂದರ್ಭದ ವಿಡಿಯೊವನ್ನೂ ಸುದ್ದಿಸಂಸ್ಥೆ ಸೋಮವಾರ ಹಂಚಿಕೊಂಡಿದೆ. ಶಬರಿಮಲೆ ದೇವಸ್ಥಾನದ ಮುಂಭಾಗದ ಪ್ರಮುಖ ದ್ವಾರ ಮತ್ತು ದ್ವಾರಪಾಲಕರ ಪ್ರತಿಮೆಗಳಿಗೆ ಅಳವಡಿಸಿದ್ದ ಚಿನ್ನದ ಹೊದಿಕೆಗಳನ್ನು ಪಾಲಿಷ್ ಮಾಡಿಸಲು ನೀಡಿದಾಗಲೇ 4.54 ಕೆಜಿ ಚಿನ್ನ ಕಾಣೆಯಾಗಿದೆ. ಈ ಚಿನ್ನ ಕಳವು ಪ್ರಕರಣದಲ್ಲಿ ಕೇರಳ ಮೂಲದ ಉದ್ಯಮಿ ಉನ್ನಿ ಕೃಷ್ಣನ್ ಪೊಟ್ಟಿಯನ್ನು ಬೆಂಗಳೂರಲ್ಲಿ ಎಸ್‌ಐಟಿ ಕಳೆದ ತಿಂಗಳು ವಶಪಡೆದುಕೊಂಡಿದ್ದು ವಿಚಾರಣೆಗೆ ಒಳಪಡಿಸಿದೆ. ಜತೆಗೆ ದೇಗುಲದ ಮಾಜಿ ಆಡಳಿತಾಧಿಕಾರಿಯನ್ನೂ ಬಂಧಿಸಲಾಗಿದೆ.

ಜಾಫರ್ ಎಕ್ಸ್‌ಪ್ರೆಸ್ ಮೇಲೆ ಬಲೂಚ್ ಐಇಡಿ ದಾಳಿ

ಇಸ್ಲಾಮಾಬಾದ್: ಪಾಕಿಸ್ತಾನದ ಕ್ವೆಟ್ಟಾದಿಂದ ಪೇಶಾವರಕ್ಕೆ ಸಂಚರಿಸುತ್ತಿದ್ದ ಜಾಫರ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಸೋಮವಾರ ಮತ್ತೆ ದಾಳಿ ನಡೆದಿದೆ. ಸಿಬಿ ಜಿಲ್ಲೆ ಬಳಿಯ ನಾಸಿರಾಬಾದ್ ಪ್ರದೇಶದಲ್ಲಿ ಜಾಫರ್ ಎಕ್ಸ್‌ಪ್ರೆಸ್ ಸಾಗುತ್ತಿದ್ದಾಗ ಈ ಬಾರಿ 'ಐಇಡಿ' ಸ್ಫೋಟಿಸಲಾಗಿದೆ. ಪರಿಣಾಮ ಜಾಫರ್ ಎಕ್ಸ್‌ಪ್ರೆಸ್‌ನ ಹಲವು ಬೋಗಿಗಳು ಹಳಿತಪ್ಪಿವೆ. 'ಬಲೂಚ್ ರಿಪಬ್ಲಿಕನ್ ಗಾರ್ಡ್'(ಬಿಆರ್‌ಜಿ) ಈ ದಾಳಿ ಹೊಣೆ ಹೊತ್ತುಕೊಂಡಿದೆ. ಬಲೂಚಿಸ್ತಾನ ಭಾಗದಲ್ಲಿ ಸಂಚರಿಸುವ ಪ್ರಯಾಣಿಕರ ರೈಲು ಗಾಡಿಯಾದ ಜಾಫರ್ ಎಕ್ಸ್‌ಪ್ರೆಸ್ ಮೇಲೆ ಈ ಹಿಂದೆಯೂ ಹಲವು ಬಾರಿ ದಾಳಿಗಳಾಗಿವೆ. ಸೋಮವಾರದ ಐಇಡಿ ದಾಳಿಯಲ್ಲಿ ಜಾಫರ್ ಎಕ್ಸ್‌ಪ್ರೆಸ್‌ನಲ್ಲಿದ್ದ ಪಾಕಿಸ್ತಾನ ಸೇನೆಯ ಹಲವು ಯೋಧರು ಸಾವಿಗೀಡಾಗಿದ್ದಾರೆ ಎಂದು 'ಬಿಆರ್‌ಜಿ' ಹೋರಾಟಗಾರರು ಹೇಳಿಕೊಂಡಿದ್ದಾರೆ. ಆದರೆ, ಜಾಫರ್ ಎಕ್ಸ್‌ಪ್ರೆಸ್ ಮೇಲಿನ ದಾಳಿಯಲ್ಲಿ ಸಾವು-ನೋವು ಉಂಟಾಗಿರುವ ಬಗ್ಗೆ ಪಾಕಿಸ್ತಾನ ಸರಕಾರ, ರೈಲ್ವೆ ಇಲಾಖೆ ಸೋಮವಾರ ಸಂಜೆವರೆಗೂ ಯಾವುದೇ ಹೇಳಿಕೆ ನೀಡಿಲ್ಲ. ದಾಳಿ ನಡೆದ ಸ್ಥಳದಲ್ಲಿ ಹೆಚ್ಚಿನ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಪಾಕ್ ಸೇನೆ ಹೇಳಿದೆ.

{ಶತ್ರುಘ್ನ ಸಿನ್ಹಾ} ಟಿಎಂಸಿ ಸಂಸದ

ಬಿಹಾರ ಜನರು ವಿಧಾನಸಭೆ ಚುನಾವಣೆಯಲ್ಲಿ ಅಮೂಲ್ಯ ಮತ ಚಲಾಯಿಸಿ ಅರ್ಹ ಸರಕಾರವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಜನಪ್ರಿಯ, ಸಜ್ಜನ ರಾಜಕಾರಣಿ, ಯಶಸ್ವಿ ಸಿಎಂ ನಿತೀಶ್ ಕುಮಾರ್ ನಾಯಕತ್ವವನ್ನು ನಿರಂತರ 20 ವರ್ಷಗಳಿಂದ ಬೆಂಬಲಿಸುತ್ತಾ ಬಂದಿರುವ ಬಿಹಾರದ ಮತದಾರರಿಗೆ ಹೃತ್ಪೂರ್ವಕ ವಂದನೆ, ನಿತೀಶ್ ಕುಮಾರ್ ಅವರಿಗೆ ಅಭಿನಂದನೆ.

- ದಂಗೆ, ಯುದ್ಧದಿಂದಲೇ 1971ರಲ್ಲಿ ಜನ್ಮತಳೆದ ದೇಶ
- 1975ರ ಆಗಸ್ಟ್‌ನಲ್ಲಿ ಸೇನಾದಂಗೆ ಮುಜೀಬರ್ ಬಲಿ
- 2024ರ ವಿದ್ಯಾರ್ಥಿ ದಂಗೆಗೆ ಹಸೀನಾ ಸರಕಾರ ಪತನ

ದಂಗೆಗಳ ನಾಡು ಬಾಂಗ್ಲಾ ದೇಶದ ರಕ್ತಸಿಕ್ತ ಇತಿಹಾಸ

ಢಾಕಾ: ಬಾಂಗ್ಲಾದೇಶದ ಇತಿಹಾಸವೇ ಪಾಕಿಸ್ತಾನ ಸೇನೆಯ

ದೌರ್ಜನ್ಯ, ಸೇನೆಯ ದಂಗೆ, ವಿದ್ಯಾರ್ಥಿ ದಂಗೆ ಮೊದಲಾದ ಘಟನೆಗಳಿಂದಾಗಿ ರಕ್ತಸಿಕ್ತವಾಗಿದೆ. 1975ರ ಆಗಸ್ಟ್ ನಲ್ಲಿಯೂ ಸೇನಾ ದಂಗೆ ನಡೆದು ದೇಶದ ಅಧ್ಯಕ್ಷರು, ಅವರ ಕುಟುಂಬದ ರಕ್ತವನ್ನೇ ಚೆಲ್ಲಾಡಿಸಿದೆ. 1975 ಆಗಸ್ಟ್ 15, ಭಾರತದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ ನಡೆದಿದ್ದರೆ, ಅತ್ತ ನೆರೆಯ ಬಾಂಗ್ಲಾದೇಶದಲ್ಲಿ ಕರಾಳ ಅಧ್ಯಾಯಕ್ಕೆ ಕಾರಣವಾದ ಸಂದರ್ಭವದು.

'ಬಾಂಗ್ಲಾದೇಶದ ಜನಕ', 'ಫಾದರ್ ಆಫ್ ದಿ ನೇಷನ್', 'ವಂಗಬಂಧು' ಎಂದೇ ಜನಪ್ರಿಯರಾಗಿದ್ದ ಬಾಂಗ್ಲಾದೇಶದ ಪ್ರಥಮ ಅಧ್ಯಕ್ಷ(1971-72), ಸ್ವತಂತ್ರ ಬಾಂಗ್ಲಾದೇಶದ 2ನೇ ಪ್ರಧಾನಿಯಾಗಿದ್ದ(1972-75) ಶೇಖ್ ಮುಜೀಬುರ್ ರೆಹಮಾನ್ ಮತ್ತು ಅವರ ಕುಟುಂಬ ಸದಸ್ಯರ ಮಾರಣ ಹೋಮವೇ ನಡೆದುಹೋಯಿತು.

ಅದೃಷ್ಟವೆಂಬಂತೆ ಮುಜೀಬುರ್ ರೆಹಮಾನ್ ಅವರ ಇಬ್ಬರು ಪ್ರೀತಿಯ ಪುತ್ರಿಯರಾದ ಶೇಖ್ ಹಸೀನಾ ಮತ್ತು ಶೇಖ್ ರೆಹಾನಾ ಇಬ್ಬರೂ ಈ ಸೇನಾದಂಗೆಯ ಸಂದರ್ಭದಲ್ಲಿ ವಿದೇಶದಲ್ಲಿ ಇದ್ದುದರಿಂದ ಜೀವಂತ ಉಳಿದುಕೊಂಡರು. ಅವರೇನಾದರೂ ಅಂದು ಢಾಕಾ ಅರಮನೆಯಲ್ಲಿ ಇದ್ದಿದ್ದರೆ ಜೀವಂತ ಉಳಿಯುವುದೇ ಕಷ್ಟವಿತ್ತು.

ಮಧ್ಯಮ ವರ್ಗದ ಕೃಷಿಕ ಕುಟುಂಬದಲ್ಲಿ ಜನಿಸಿದ ಶೇಖ್ ಮುಜೀಬುರ್ ರೆಹಮಾನ್, ಕೊಲ್ಕತ್ತ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಶಾಸ್ತ್ರದಲ್ಲಿ ಪದವಿ ಮತ್ತು ಕಾನೂನು ಪದವಿ ಪಡೆದಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಧರಣಿ ನಡೆಸಿದ ಕಾರಣಕ್ಕೆ ಅಲ್ಪಕಾಲ ಜೈಲು ಶಿಕ್ಷೆಯನ್ನೂ ಅನು ಭವಿಸಿದ್ದರು. 1949ರಲ್ಲಿ ರಾಜಕೀಯ ಪ್ರವೇಶಿಸಿ 'ಅವಾಮಿ ಲೀಗ್' ಸ್ಥಾಪಿಸಿದರು. ಆ ಮೂಲಕ ಪೂರ್ವ ಪಾಕಿಸ್ತಾನ ವಾಗಿದ್ದ (ಈಗಿನ ಬಾಂಗ್ಲಾದೇಶ) ಭೂಭಾಗವನ್ನು ಪಾಕ್ ಆಡಳಿತದಿಂದ ಸ್ವತಂತ್ರಗೊಳಿಸುವ ಹೋರಾಟವನ್ನು ಆರಂಭಿ ಸಿದರು. ಅದಕ್ಕಾಗಿ 1960ರಲ್ಲಿ ಗಲಭೆ ನಡೆಸಿದ ಆರೋಪದಡಿ ಬಂಧನಕ್ಕೊಳಗಾಗಿ ಜೈಲು ಸೇರಿದರು. 1970ರ ಡಿಸೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಮುಜೀಬುರ್ ರೆಹಮಾನ್ ಅವರ ಆವಾಮಿ ಲೀಗ್ ಪಕ್ಷವು ಸಂಸತ್ತಿನಲ್ಲಿ ಬಹುಮತ ಗಳಿಸಿತು. 1971ರಲ್ಲಿ ಅಧ್ಯಕ್ಷ ಪೀಠಕ್ಕೇರಿದ ಮುಜೀಬುರ್ ರೆಹಮಾನ್, 'ಸ್ವತಂತ್ರ ಬಾಂಗ್ಲಾದೇಶ'ಕ್ಕೆ ಬೇಡಿಕೆ ಇಟ್ಟರು. ಆಗ ಪಶ್ಚಿಮ ಪಾಕಿಸ್ತಾನದಿಂದ(ಈಗಿನ ಪಾಕ್) ಸೇನಾಪಡೆಗಳು ಪೂರ್ವ ಪಾಕಿಸ್ತಾನಕ್ಕೆ ಯುದ್ಧ ನೌಕೆಗಳಲ್ಲಿ ಬಂದಿಳಿದವು. ಪೂರ್ವ ಪಾಕಿಸ್ತಾನದ ಮೇಲೆ ಪಶ್ಚಿಮ ಪಾಕಿಸ್ತಾನ ಪೂರ್ಣ ಹಿಡಿತ ಸಾಧಿಸಲು ಯತ್ನಿಸಿತು. ಆಗ ನಡೆದ ಸೇನಾ ಸಂಘರ್ಷದಲ್ಲಿ ಮುಜೀಬುರ್ ರೆಹಮಾನ್ ಅವರ ಸರಕಾರಕ್ಕೆ ಭಾರತದ ಸೇನೆ ನೆರವಾಯಿತು. ಪೂರ್ವ ಪಾಕಿಸ್ತಾನ ಸರಕಾರದ ಪರವಾಗಿ ದೊಡ್ಡ ಯುದ್ಧವನ್ನೇ ನಡೆಸಿ ಪಶ್ಚಿಮ ಪಾಕಿಸ್ತಾನದ ಸೇನೆಯನ್ನು ಮಣಿಸಿ ಶರಣಾಗುವಂತೆ ಮಾಡಿತು. ಪರಿಣಾಮವಾಗಿ 1971ರ ವರ್ಷಾಂತ್ಯ ವೇಳೆಗೆ ಪೂರ್ವ ಪಾಕಿಸ್ತಾನ ಭೂಭಾಗವು 'ಬಾಂಗ್ಲಾದೇಶ' ಹೆಸರಿ ನೊಂದಿಗೆ ಸ್ವತಂತ್ರ ದೇಶವಾಯಿತು. 1972ರ ಜನವರಿಯಲ್ಲಿ ಸ್ವತಂತ್ರ ಬಾಂಗ್ಲಾದೇಶದಲ್ಲಿ ರಚನೆಯಾದಾಗ ಮುಜೀವುರ್ ರೆಹಮಾನ್ ಮೊದಲ ಸರಕಾರದ ಪ್ರಥಮ ಪ್ರಧಾನಿಯಾ ದರು. ಆದರೆ, ಎರಡೂವರೆ ವರ್ಷಗಳ ಆಡಳಿತವಷ್ಟೇ ಅವ ರಿಗೆ ಸಾಧ್ಯವಾಯಿತು. 1975ರ ಆಗಸ್ಟ್‌ನಲ್ಲಿ ಸೇನಾ ದಂಗೆಗೆ ಅವರ ಅಧಿಕಾರವಷ್ಟೇ ಅಲ್ಲ, ಜೀವವೇ ಕೊನೆಗೊಂಡಿತು.

ದಂಗೆ ಏಳುತ್ತಾರೆ: ಸಜೀಬ್

ಲಂಡನ್: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್

ಹಸೀನಾ ಅವರ ಪುತ್ರ ಸಜೀಬ್ ವಾಝೇದ್ ಜಾಯ್ ಪ್ರಸ್ತುತ ವಿದೇಶದಲ್ಲಿ ನೆಲೆಸಿದ್ದಾರೆ. ತಮ್ಮ ತಾಯಿ ಶೇಖ್ ಹಸೀನಾ ಅವರಿಗೆ ಬಾಂಗ್ಲಾ ನ್ಯಾಯಾ ಲಯ ಮರಣ ದಂಡನೆ ಶಿಕ್ಷೆ ವಿಧಿಸಿರುವುದಕ್ಕೆ ಬಾಂಗ್ಲಾದೇಶದ ಮಧ್ಯಂತರ ಸರಕಾರದ ವಿರುದ್ಧ ಕಿಡಿಕಾರಿದ್ದಾರೆ.

ಬಾಂಗ್ಲಾ ಸರಕಾರ ಸೇಡಿನಿಂದ ಇಂಥ ನಡೆ ಅನುಸರಿಸುತ್ತಿರುವುದು ಸರಿಯಲ್ಲ. ಇದನ್ನು ಬಾಂಗ್ಲಾ ಜನರು ಬಹಳವಾಗಿ ವಿರೋಧಿಸುತ್ತಾರೆ, ಬಾಂಗ್ಲಾದಲ್ಲಿ ಮತ್ತೆ ದಂಗೆ ನಡೆಯಲಿದೆ ಎಂದಿದ್ದಾರೆ. ನನ್ನ ತಾಯಿಗೆ ಬಾಂಗ್ಲಾ ಸರಕಾರ ಏನೂ ಮಾಡಲಾಗುವುದಿಲ್ಲ. ಆಕೆ ಭಾರತ ದೇಶದಲ್ಲಿ ಬಹಳ ಸುರಕ್ಷಿತವಾಗಿದ್ದಾರೆ. ಭಾರತ ಸರಕಾರವೂ ನನ್ನ ತಾಯಿ ಶೇಖ್ ಹಸೀನಾ ಅವರಿಗೆ ಪೂರ್ಣ ಭದ್ರತೆ, ಸುರಕ್ಷತೆ ಒದಗಿಸಿದೆ ಎಂದು ಸಜೀಬ್ ಹೇಳಿದ್ದಾರೆ. ಬಾಂಗ್ಲಾದೇಶದ ಮಧ್ಯಂತರ ಸರಕಾರ ಅವಾಮಿ ಲೀಗ್ ಪಕ್ಷವನ್ನು ನಿಷೇಧಿಸಿರುವುದು, ಮುಂಬ ರುವ ಚುನಾವಣೆಗೆ ಸ್ಪರ್ಧೆ ಮಾಡದಂತೆ ತಡೆದಿರುವುದು ಅಸಂವಿಧಾನಿಕ. ಅವಾಮಿ ಲೀಗ್ ಪಕ್ಷದ ಬೆಂಬಲಿಗರು, ಕಾರ್ಯಕರ್ತರು ದಂಗೆ ಏಳಲಿದ್ದಾರೆ ಎಂದು ಎಚ್ಚರಿಕೆ ನೀಡಿದ್ದಾರೆ.

ಬಾಂಗ್ಲಾಗೇ ಬಂದು ಅಧಿಕಾರಕ್ಕೇರಿದ ಶೇಖ್ ಹಸೀನಾ

ಆ ಬಳಿಕ ಪರಿಸ್ಥಿತಿ ಶಾಂತವಾದ ನಂತರ

ಶೇಖ್ ಹಸೀನಾ ವಾಝೇದ್ ಅವರು ಬಾಂಗ್ಲಾದೇಶಕ್ಕೆ ಮರಳಿ 1996ರಲ್ಲಿ ದೇಶದ ಪ್ರಧಾನಿಯಾದರು. 1996 ರಿಂದ 2001ರವರೆಗೆ ಆಡಳಿತ ನಡೆಸಿದರು. ನಂತರದ ಚುನಾವಣೆಗಳಲ್ಲಿ ಸೋತ 8 ವರ್ಷ ಅಧಿಕಾರದಿಂದ ದೂರವಾದರು. ಮತ್ತೆ 2009ರಿಂದ 2024ರವರೆಗೂ ಬಾಂಗ್ಲಾದೇಶದಲ್ಲಿ ಷೇಖ್ ಹಸೀನಾ ಅವರದ್ದೇ ನಿರಂತರ ಆಡಳಿತವಾಯಿತು. ಆದರೆ, 2024ರಲ್ಲಿ ಅಸಮಾನತೆ ವಿರುದ್ಧ ಹಾಗೂ ದೇಶದ ಸ್ವಾತಂತ್ರ್ಯ ಹೋರಾಟಗಾರ ಮಕ್ಕಳಿಗೆ ನೀಡಲಾಗಿರುವ ಮೀಸಲಾತಿ ರದ್ದುಗೊಳಿಸಬೇಕೆಂಬ ಬೇಡಿಕೆಯೊಂದಿಗೆ ಶುರುವಾದ ವಿದ್ಯಾರ್ಥಿ ದಂಗೆ ಕೊನೆಗೆ ಪ್ರಧಾನಿ ಶೇಖ್ ಹಸೀನಾ ಸರಕಾರವನ್ನೇ ಉರುಳುವಂತೆ ಮಾಡಿತು. ಪ್ರಧಾನಿ ಹುದ್ದೆ ತೊರೆದು ಜೀವ ಉಳಿದರೆ ಸಾಕು ಎನ್ನುವಂತೆ ಶೇಕ್ ಹಸೀನಾ ದೇಶ ತೊರೆಯುವಂತೆ ಮಾಡಿತು ಈ ವಿದ್ಯಾರ್ಥಿದಂಗೆ. 2024ರಲ್ಲಿ ಶೇಖ್ ಹಸೀನಾ ಜೀವ ಕಳೆದುಕೊಳ್ಳಬೇಕಿತ್ತು. ವಿದ್ಯಾರ್ಥಿ ದಂಗೆಯನ್ನು ನಿಯಂತ್ರಿಸಲು ಹೋಗದೇ ಸೇನೆಯೂ ಮೂಕ ಪ್ರೇಕ್ಷಕನಾಯಿತು.

ಹೊಸ ಅಧ್ಯಾಯ!

ಈಗ ಬಾಂಗ್ಲಾದೇಶದ ಇತಿಹಾಸ ಮತ್ತೊಂದು ಭಿನ್ನ ಅಧ್ಯಾಯ ಬರೆಯಲು ಸಜ್ಜಾಗಿದೆ. ದೇಶ ತೊರೆದರೂ ಶೇಖ್ ಹಸೀನಾ ಅವರ ಬೆನ್ನು ಬಿದ್ದಿರುವ ಈಗಿನ ಬಾಂಗ್ಲಾದೇಶದಲ್ಲಿನ ಮಧ್ಯಂತರ ಸರಕಾರ, ಷೇಖ್ ಹಸೀನಾ ವಿರುದ್ಧ ವಿದ್ಯಾರ್ಥಿಗಳ ದಂಗೆ ಸಮಯದಲ್ಲಿ ನೂರಾರು ಹೋರಾಟಗಾರರ ಮಾರಣ ಹೋಮ ನಡೆಸಿದ ಆರೋಪದಡಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಢಾಕಾ ಕೋರ್ಟ್ ಕೂಡಾ 20 ವರ್ಷ ದೇಶವನ್ನಾಳಿದ, ವಿದೇಶಕ್ಕೆ ಸಿದ್ಧ ಉಡುಪು ರಫ್ತು ಮೂಲಕ ಆರ್ಥಿಕವಾಗಿ ದೇಶವನ್ನು ಮೇಲಕ್ಕೇರಿಸಿದ ಸಮರ್ಥ ಪ್ರಧಾನಿ ಶೇಕ್ ಹಸೀನಾಗೆ ಹಠ ಹಿಡಿದು ಶಿಕ್ಷೆ ಕೊಡಿಸಿದೆ.

ರಾಜೀನಾಮೆ ಸಲ್ಲಿಕೆ, ನೂತನ ಸರಕಾರ ರಚನೆ ಹಕ್ಕು ಮಂಡನೆ

ಪಟನಾ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ಸೋಮ ವಾರ ಸಚಿವ ಸಂಪುಟ ಸಭೆ ಸೇರಿ ವಿಧಾನ ಸಭೆ ವಿಸರ್ಜನೆಗೆ ಅನುಮೋದನೆ ನೀಡಿದೆ. ನ.19ರಂದು ವಿಧಾನಸಭೆ ವಿಸರ್ಜನೆಯಾಗಲಿದೆ.

ನ.19ರಿಂದಲೇ ಜಾರಿಗೆ ಬರುವಂತೆ ಪ್ರಸ್ತುತ ವಿಧಾನಸಭೆಯನ್ನು ವಿಸರ್ಜಿಸಲು ಸಚಿವ ಸಂಪುಟ ನಿರ್ಧರಿಸಿದ್ದು, ರಾಜ್ಯ ಪಾಲರಿಗೆ ಪ್ರಸ್ತಾವನೆ ಸಲ್ಲಿಸಲಿದೆ ಎಂದು ಸಚಿವ ವಿಜಯ್ ಚೌಧರಿ ಸುದ್ದಿಗಾರರಿಗೆ ತಿಳಿಸಿದರು.

ಮುಖ್ಯಮಂತ್ರಿ ನಿತೀಶ್ ಕುಮಾರ್ ತಮ್ಮ ಸರಕಾರದ ಅಂತಿಮ ಸಂಪುಟ ಸಭೆ ನಂತರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರನ್ನು ರಾಜಭವನದಲ್ಲಿ ಭೇಟಿ ಮಾಡಿ ವಿಧಾನಸಭೆ ವಿಸರ್ಜಿಸಲು ಕೋರಿ ಪತ್ರ ಸಲ್ಲಿಸಿದರು. ರಾಜೀನಾಮೆ ಪತ್ರ ಸಲ್ಲಿಸಿದ ಬೆನ್ನಲ್ಲೇ ನಿತೀಶ್ ಕುಮಾರ್ ಅವರು ಹೊಸ ಸರಕಾರ ರಚಿಸಲು ಹಕ್ಕು ಮಂಡಿಸಿದರು. ಇದರೊಂದಿಗೆ ಬಿಹಾರ ದಲ್ಲಿ ಹೊಸ ಸರಕಾರ ರಚನೆ ಪ್ರಕ್ರಿಯೆ ವೇಗ ಪಡೆದುಕೊಂಡಿದೆ.

ನ.19ರಂದು ಎನ್‌ಡಿಎ ಮೈತ್ರಿಕೂಟದ ಶಾಸಕಾಂಗ ಪಕ್ಷದ ಸಭೆಯಲ್ಲಿ ಹೊಸ ಸಚಿವ ಸಂಪುಟದ ಅಂತಿಮ ರೂಪರೇಷೆ ಕುರಿತು ಚರ್ಚಿಸಲಾಗುತ್ತದೆ. ಅದೇ ದಿನ ಜೆಡಿಯು ಶಾಸಕಾಂಗ ಪಕ್ಷವೂ ಸಭೆ ಸೇರಲಿದೆ ಎಂದು ಜೆಡಿಯು ಮೂಲಗಳು ತಿಳಿಸಿವೆ.

ರಾಜ್ಯಪಾಲರ ಭೇಟಿ ಮಾಡಿದ ನಿತೀಶ್

ಪಟನಾ ರಾಜಭವನದಲ್ಲಿ ರಾಜ್ಯಪಾಲ ಆರಿಫ್ ಮೊಹಮ್ಮದ್‌ರನ್ನು ಸೋಮವಾರ ಭೇಟಿ ಮಾಡಿದ ಮುಖ್ಯಮಂತ್ರಿ ನಿತೀಶ್ ಕುಮಾರ್.

ಇಂಡಿಯ ಒಕ್ಕೂಟಕ್ಕೆ ಅಖಿಲೇಶ್ ನೇತೃತ್ವ

ದೆಹಲಿ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಕಂಡಿರುವುದ

ರಿಂದ ಅದು ಇಂಡಿಯ ಒಕ್ಕೂಟದ ನೇತೃತ್ವ ವಹಿಸುವ ವಿಚಾರ ದಲ್ಲಿ ಒಕ್ಕೂಟದೊಳಗೇ ಅಪಸ್ವರ ಕೇಳಿ ಬರಲಾರಂಭಿಸಿದೆ. ಎರಡು ಡಜನ್ ಪ್ರತಿಪಕ್ಷಗಳನ್ನು ಒಳ ಗೊಂಡಿರುವ 'ಇಂಡಿಯ' ಒಕ್ಕೂಟವನ್ನು ಮುನ್ನಡೆಸುವುದಕ್ಕೆ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಸಮರ್ಥರಾಗಿದ್ದಾರೆ. ಅಖಿಲೇಶ್ ಯಾದವ್ ಅವರೇ 26 ಪ್ರತಿಪಕ್ಷಗಳ 'ಇಂಡಿಯ' ಒಕ್ಕೂಟವನ್ನು ಮುನ್ನಡೆಸಬೇಕು ಎಂದು ಸಮಾಜವಾದಿ ಪಕ್ಷದ(ಎಸ್‌ಪಿ) ಲಖನೌ ಸೆಂಟ್ರಲ್ ಕ್ಷೇತ್ರದ ಶಾಸಕ ರವಿದಾಸ್ ಮೆಹ್ರೋತ್ರಾ, ಕನ್ನೌಜ್ ಸಂಸದ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ಮುಂಬರುವ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ಗೆದ್ದು ಸ್ವಂತ ಬಲದ ಮೇಲೆ ಸರಕಾರ ರಚಿಸಲು ಸಮಾಜವಾದಿ ಪಕ್ಷ ಸಮರ್ಥವಾಗಿದೆ ಎಂದೂ ಇಬ್ಬರೂ ಜನಪ್ರತಿನಿಧಿಗಳು ಸೋಮವಾರ ಹೇಳಿಕೆ ನೀಡಿದ್ದಾರೆ. ಆ ಮೂಲಕ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಬೆಂಬಲ ಇಲ್ಲದೆಯೂ ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬರಬಹುದಾಗಿದೆ ಎಂದು ಸೂಚ್ಯವಾಗಿ ತಿಳಿಸಿದ್ದಾರೆ. 2020ರಲ್ಲಿ ಬಿಹಾರ ವಿಧಾನಸಭೆ ಚುನಾ ವಣೆಯಲ್ಲಿ 19 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್ ಈ ಬಾರಿ ಕೇವಲ 6 ಕ್ಷೇತ್ರ ಗಳಲ್ಲಷ್ಟೇ ಜಯ ಗಳಿಸಿ ಕಳಪೆ ಸಾಧನೆ ತೋರಿದೆ. ಇನ್ನೊಂದೆಡೆ, 2024ರ ಲೋಕ ಸಭಾ ಚುನಾವಣೆಯಲ್ಲಿ 37 ಸ್ಥಾನಗಳನ್ನು ಗೆದ್ದಿರುವ ಸಮಾಜವಾದಿ ಪಕ್ಷ ಲೋಕಸಭೆ ಯಲ್ಲಿ ಕಾಂಗ್ರೆಸ್ ನಂತರ 2ನೇ ಅತಿದೊಡ್ಡ ಪ್ರತಿಪಕ್ಷವಾಗಿದೆ.

ವೈಟ್ ಕಾಲರ್ ಉಗ್ರ ಜಾಲ: ಡಾ.ಪ್ರಿಯಾಂಕಾ ವಿಚಾರಣೆ

ಶ್ರೀನಗರ: ದೆಹಲಿ ಕೆಂಪು ಕೋಟೆ ಮೆಟ್ರೊ

ನಿಲ್ದಾಣ ಬಳಿ ನ.10ರಂದು ಕಾರು ಬಾಂಬ್ ಸ್ಫೋಟ, ಫರೀದಾ ಬಾದ್‌ನ ಧವೂಜ್‌ನಲ್ಲಿ ಬಾಡಿಗೆ ಮನೆಯಲ್ಲಿ 2900 ಕಿಲೋ ಸ್ಫೋಟಕ ವಶ ಪ್ರಕರಣ ಗಳಲ್ಲಿ ಭಾಗಿಯಾಗಿ ರುವ ಕಾಶ್ಮೀರದ ನಾಲ್ವರು ವೈದ್ಯರಿಗೆ ಪರಿಚಿತರು, ಅವರಿಗೆ ಕೆಲವೊಮ್ಮೆ ಆರ್ಥಿಕ ಸಹಾಯ ಒದಗಿಸಿದ್ದರು ಎಂಬ ಆರೋಪದಡಿ, ಸದ್ಯ ಕಾಶ್ಮೀರದಲ್ಲಿ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹರಿಯಾಣ ಮೂಲದ ವೈದ್ಯೆ ಡಾ.ಪ್ರಿಯಾಂಕಾ ಶರ್ಮಾರನ್ನು ತನಿಖಾಧಿಕಾರಿಗಳು ಸೋಮವಾರ ಅನಂತನಾಗ್‌ನಲ್ಲಿ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ತಿಳಿದು ಬಂದಿದೆ.

ದಕ್ಷಿಣ ಕಾಶ್ಮೀರದ ಸರಕಾರಿ ವೈದ್ಯಕೀಯ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ.ಪ್ರಿಯಾಂಕಾ ಶರ್ಮಾಗೆ 'ವೈಟ್ ಕಾಲರ್ ಉಗ್ರ ಜಾಲ'ದ ಸಂಪರ್ಕವಿದೆ. ಡಾ. ಉಮರ್ ಉನ್‌ನಬಿ, ಡಾ.ಮುಜಮ್ಮಿಲ್, ಡಾ.ಆದಿಲ್ ಮತ್ತು ಡಾ.ಶಾಹೀನಾ ಸಯೀದ್ ಸಂಪರ್ಕವಿದೆ. ಅಲ್ಲದೇ, ಈ ವೈಟ್ ಕಾಲರ್ ಉಗ್ರರಿಗೆ ವಸತಿ ವ್ಯವಸ್ಥೆ, ಆರ್ಥಿಕ ಬೆಂಬಲ ಒದಗಿಸುತ್ತಿದ್ದ ಆರೋಪ ಈಕೆಯ ಮೇಲಿದೆ ಎನ್ನಲಾ ಗಿದೆ. ಆ ಹಿನ್ನೆಲೆಯಲ್ಲಿಯೇ ಜಮ್ಮು-ಕಾಶ್ಮೀರ ಪೊಲೀಸರ ತಂಡ ಡಾ.ಪ್ರಿಯಾಂಕಾ ಶರ್ಮಾರ ಅನಂತನಾಗ್ ಜಿಲ್ಲೆಯಲ್ಲಿನ ನಿವಾಸಕ್ಕೆ ಭಾನುವಾರ ತೆರಳಿದ ವಶಕ್ಕೆ ಪಡೆದು ಅಜ್ಞಾತ ಸ್ಥಳಕ್ಕೆ ಕರೆದೊಯ್ದು ವಿಚಾರಣೆ ಗೊಳಪಡಿಸಿದೆ. ಆಕೆಯ ಮೊಬೈಲ್ ಫೋನ್ ಮತ್ತು ಸಿಮ್ ಕಾರ್ಡ್ ಪೊಲೀಸ್ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಸೋದರನ ಪ್ರತಿಕ್ರಿಯೆ: ಸೋದರಿ ಪ್ರಿಯಾಂಕ ಪ್ರಸ್ತುತ ಅನಂತನಾಗ್‌ನ ಸರಕಾರಿ ವೈದ್ಯಕೀಯ ಕಾಲೇಜಲ್ಲಿ ಜನರಲ್ ಮೆಡಿಸಿನ್‌ನಲ್ಲಿ ಎಂಡಿ (ಸ್ನಾತಕೋತ್ತರ ಪದವಿ) ವ್ಯಾಸಂಗ ಮಾಡುತ್ತಿದ್ದಾಳೆ. ಜತೆಗೆ ವೈದ್ಯಕೀಯ ಅಧಿಕಾರಿಯಾಗಿ ಅಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಳೆ. ಭಾನುವಾರ ರಾತ್ರಿ ಆಕೆಯನ್ನು ಅನಂತನಾಗ್‌ನ ಮನೆಯಿಂದ ಜಮ್ಮು-ಕಾಶ್ಮೀರ ಪೊಲೀಸರು ವಿಚಾರಣೆಗೆ ಕರೆದೊಯ್ದಿದ್ದರು. ಸೋಮ ವಾರ ಸಂಜೆ ಬಿಡುಗಡೆ ಮಾಡಿದರು. 'ಎಂಬಿಬಿಎಸ್ ಎಲ್ಲಿ ಓದಿದ್ದು, ಈಗ ಏನು ಓದುತ್ತಿದ್ದಾರೆ ಮತ್ತು ಕುಟುಂಬದ ವಿವರ ನೀಡಿ' ಎಂದು ಕೇಳಿದ್ದಾರೆ ಎಂದು ಪ್ರಿಯಾಂಕಾರ ಸೋದರ ಭರತ್ ಭೂಷಣ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಮೀರ್ ರಶೀದ್ ಅಲಿ 10 ದಿನ ಎನ್‌ಐಎ ವಶಕ್ಕೆ

ದೆಹಲಿ: ದೆಹಲಿಯ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಟ್ರಾಫಿಕ್ ಸಿಗ್ನಲ್ ಬಳಿ ಡಾ.ಉಮರ್ ಉನ್‌ನಬಿ ಸ್ಫೋಟಿಸಿದ ಹುಂಡೈ ಐ 20 ಕಾರಿನ ಅಧಿಕೃತ ಮಾಲೀಕನಾದ, ಆರೋಪಿ ಅಮೀರ್ ರಶೀದ್ ಅಲಿಯನ್ನು ದೆಹಲಿ ನ್ಯಾಯಾಲಯ ಸೋಮವಾರ 10 ದಿನಗಳ ಎನ್‌ಐಎ ಕಸ್ಟಡಿಗೆ ಒಪ್ಪಿಸಿ ಆದೇಶ ಹೊರಡಿಸಿದೆ. ಪಟಿಯಾಲ ಹೌಸ್ ನ್ಯಾಯಾಲಯ ಸಂಕೀರ್ಣದಲ್ಲಿ ಬಿಗಿ ಭದ್ರತೆ ನಡುವೆ ಅಮೀರ್‌ನನ್ನು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಸೋಮವಾರ ಬೆಳಗ್ಗೆ ಹಾಜರುಪಡಿಸಲಾಯಿತು. 'ದೆಹಲಿ ನಗರ ಪೊಲೀಸ್ ಮತ್ತು ಕ್ಷಿಪ್ರ ಕಾರ್ಯ ಪಡೆಯನ್ನು ನ್ಯಾಯಾಲಯ ಸಂಕೀರ್ಣ ಮತ್ತು ಸುತ್ತಮುತ್ತ ನಿಯೋಜಿಸಲಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. ಮಾಧ್ಯಮದವರಿಗೆ ನ್ಯಾಯಾಲಯ ಕಲಾಪ ವೇಳೆ ಪ್ರವೇಶ ಅವಕಾಶ ನೀಡಿರಲಿಲ್ಲ.

ಹರಿಯಾಣ, ಉ.ಪ್ರ.ದಲ್ಲಿ ಕಾಶ್ಮೀರಿಗಳ ಮಾಹಿತಿ ಸಂಗ್ರಹ

ಫರೀದಾಬಾದ್: ಈ ಮಧ್ಯೆ ಹರಿಯಾಣದ ಫರೀದಾಬಾದ್‌ನಲ್ಲಿ ವೈದ್ಯಕೀಯ ವ್ಯಾಸಂಗ, ವ್ಯಾಪಾರ ನೆಪದಲ್ಲಿ ನೆಲೆಸಿರುವ ಜಮ್ಮು-ಕಾಶ್ಮೀರ ಮೂಲದವರನ್ನು ಎನ್‌ಐಎ, ಜಮ್ಮು-ಕಾಶ್ಮೀರ ಪೊಲೀಸ್, ಹರಿಯಾಣ ಪೊಲೀಸರ ಜಂಟಿ ತಂಡ ಪ್ರಶ್ನೆ ಮಾಡಿ ಮಾಹಿತಿ ಸಂಗ್ರಹಿಸುತ್ತಿದೆ. ಈವರೆಗೆ ಫರೀದಾಬಾದ್‌ನಲ್ಲಿರುವ ಜಮ್ಮು-ಕಾಶ್ಮೀರ ಮೂಲದವರಲ್ಲಿ 2000ಕ್ಕೂ ಅಧಿಕ ಜನರನ್ನು ಪ್ರಶ್ನಿಸಲಾಗಿದೆ.

ಫರಿದಾಬಾದ್‌ನಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಜಮ್ಮು -ಕಾಶ್ಮೀರದ ಪ್ರಜೆಗಳು, ವಿದ್ಯಾರ್ಥಿಗಳನ್ನು ವಿಚಾರಣೆ ನಡೆಸಲಾಗುತ್ತದೆ. ಈವರೆಗೆ 2,000 ನಾಗರಿಕರು ಮತ್ತು ವಿದ್ಯಾರ್ಥಿಗಳನ್ನು ಪ್ರಶ್ನಿಸಲಾಗಿದೆ. ವಿಚಾರಣೆ ಮುಂದುವರಿದಿದೆ ಎಂದು ತನಿಖಾ ತಂಡದ ಅಧಿಕಾರಿಗಳು ಸೋಮವಾರ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ಇನ್ನೊಂದೆಡೆ, ಉತ್ತರ ಪ್ರದೇಶ ಪೊಲೀಸರೂ ಜಮ್ಮು-ಕಾಶ್ಮೀರದಿಂದ ಬಂದು ಲಖನೌ ಸೇರಿದಂತೆ ವಿವಿಧ ನಗರಗಳಲ್ಲಿ ನೆಲೆಸಿರುವ ವರನ್ನು ಪ್ರಶ್ನೆ ಮಾಡುತ್ತಿದ್ದಾರೆ. ಸೋಮವಾರದವರೆಗೆ 200 ಜನರಿಂದ ಮಾಹಿತಿ ಪಡೆಯಲಾಗಿದೆ.

ದೆಹಲಿ ಸ್ಫೋಟ: 3 ವೈದ್ಯರು ಸೇರಿ ನಾಲ್ವರ ಬಿಡುಗಡೆ

ದೆಹಲಿ: ದೆಹಲಿಯಲ್ಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣ ಬಳಿ ನಡೆದ ಕಾರು ಬಾಂಬ್ ಸ್ಫೋಟ ಪ್ರಕರಣದಲ್ಲಿ ತನಿಖೆ ಗೆಂದು ವಶಕ್ಕೆ ಪಡೆಯಲಾಗಿದ್ದ ಮೂವರು ವೈದ್ಯರು ಮತ್ತು ಒಬ್ಬ ರಸಗೊಬ್ಬರ ವ್ಯಾಪಾರಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸೋಮವಾರ ಬಿಡುಗಡೆ ಮಾಡಿದೆ.

ದೆಹಲಿಯಲ್ಲಿ ಉಗ್ರ ವೈದ್ಯ ಡಾ.ಉಮರ್ ತನ್ನ ಐ 20 ಕಾರನ್ನು ಸ್ಫೋಟಿಸಿ ಆತ್ಮಾಹುತಿ ದಾಳಿ ನಡೆಸಿದ ಪ್ರಕರಣದಲ್ಲಿ ಈ ನಾಲ್ವರ ಪಾತ್ರ ಇಲ್ಲ ಎಂಬುದು ದೃಢಪಟ್ಟಿದ್ದರಿಂದ ಬಿಡುಗಡೆ ಮಾಡಲಾಗಿದೆ. ಡಾ.ರೆಹಾನ್, ಡಾ.ಮೊಹಮ್ಮದ್, ಡಾ. ಮುಸ್ತಕೀಮ್ ಮತ್ತು ರಸಗೊಬ್ಬರ ವ್ಯಾಪಾರಿ ದಿನೇಶ್ ಸಿಂಗ್ಲಾ ಬಿಡುಗಡೆಯಾದವರು ಎಂದು ಎನ್‌ಐಎ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಆದರೆ, ನಾಲ್ವರ ಮೇಲೆಯೂ ಎನ್‌ಐಎ ಇನ್ನಷ್ಟು ಕಾಲ ನಿಗಾ ಇಡಲಿದೆ ಎಂದು ಮೂಲಗಳು ತಿಳಿಸಿವೆ. ಭಯೋತ್ಪಾದಕ ಚಟುವಟಿಕೆಗಳ ಕಾರಸ್ಥಾನವೆನಿಸಿಕೊಂಡಿರುವ ಧವೂಜ್‌ನ ಅಲ್-ಫಲಾಹ್ ವಿಶ್ವವಿದ್ಯಾಲಯದೊಂದಿಗೆ ಸಂಬಂಧ ಹೊಂದಿರುವ ಕಾರಣಕ್ಕೆ ಮೂವರೂ ವೈದ್ಯರನ್ನು ವಶಕ್ಕೆ ಪಡೆಯ ಲಾಗಿತ್ತು. ದೆಹಲಿ ಕಾರು ಬಾಂಬ್ ಸ್ಫೋಟದ ರುವಾರಿ ಡಾ.ಉಮರ್ ಉನ್‌ನಬಿಗೆ ಅಮೋನಿಯಂ ನೈಟ್ರೇಟ್ ಒದಗಿ ಸಿದ್ದ ಕಾರಣಕ್ಕೆ ದಿನೇಶ್ ಸಿಂಗ್ಲಾರನ್ನು ಹರಿಯಾಣದ ನುಹ್‌ನಲ್ಲಿ ಬಂಧಿಸಲಾ ಗಿತ್ತು. ನಾಲ್ವರನ್ನೂ 3 ದಿನಗಳ ಕಾಲ ವಿಚಾರಣೆ ನಡೆಸಲಾಗಿತ್ತು. ಡಾ.ಉಮರ್ ಉನ್ ನಬಿ ಜತೆಗೆ ಈ ನಾಲ್ವರೂ ನಿಕಟ ಸಂಪರ್ಕದಲ್ಲಿದ್ದರು ಎಂಬುದಕ್ಕೆ ಯಾವುದೇ ದೃಢ ಪುರಾವೆ ಗಳು ಸಿಗದ ಕಾರಣ ಅವರನ್ನು ಬಿಡುಗಡೆ ಮಾಡಲಾಗಿದೆ. ನಾಲ್ವರ ಕುಟುಂಬಗಳೂ ಅವರ ಬಿಡುಗಡೆಯನ್ನು ದೃಢಪಡಿಸಿವೆ.

ಅಲ್‌ಫಲಾಹ್ ವಿವಿ ಅಧ್ಯಕ್ಷ ಸೋದರ ವಂಚಕ, ಬಂಧನ

ಮೋಹ್‌ವಾ: ದೆಹಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಗೇಟ್ 1ರ ಬಳಿ ಐ20 ಕಾರು

ಬಾಂಬ್ ಸ್ಫೋಟಿಸಿದ ಆತ್ಮಾಹುತಿ ಬಾಂಬರ್ ಡಾ.ಉಮರ್ ಸೇವೆ ಸಲ್ಲಿಸುತ್ತಿದ್ದ ಹರಿಯಾಣದ ಫರೀದಾಬಾದ್ ಜಿಲ್ಲೆ ಧವೂಜ್ ಗ್ರಾಮದಲ್ಲಿನ ಅಲ್ ಫಲಾಹ್ ವಿಶ್ವವಿದ್ಯಾಲಯವೂ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಯಿಂದ ತನಿಖೆ ಎದುರಿಸುತ್ತಿದೆ. ಇನ್ನೊಂದೆಡೆ, ಇದೇ ವಿವಿಯ ಅಧ್ಯಕ್ಷ ಜಾವೇದ್ ಸಿದ್ದಿಕಿಯ ಸೋದರ ಹಮೂದ್ ಅಹಮದ್ ಸಿದ್ದಿಕಿಯನ್ನು ಮಧ್ಯಪ್ರದೇಶ ಪೊಲೀಸರು ಮೋಹ್‌ವಾದಲ್ಲಿನ ಆರ್ಥಿಕ ವಂಚನೆ ಪ್ರಕರಣದಲ್ಲಿ ಹೈದರಾಬಾದ್‌ನಲ್ಲಿ ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಮಧ್ಯಪ್ರದೇಶದ ಮೋಹ್‌ವಾದಲ್ಲಿ 25 ವರ್ಷಗಳ ಹಿಂದೆ ದೊಡ್ಡ ಪ್ರಮಾಣದಲ್ಲಿ ಹಣ ವಂಚನೆ ಮಾಡಿದ ಆರೋಪದಡಿ ಹಮೂದ್ ಅಹ್ಮದ್ ಸಿದ್ದಿಕಿಯನ್ನು ಭಾನು ವಾರ ಹೈದರಾಬಾದ್‌ನಲ್ಲಿ ಬಂಧಿಸಲಾಗಿದೆ ಎಂದು ಮಧ್ಯ ಪ್ರದೇಶ ಪೊಲೀಸ್ ಅಧಿಕಾರಿ ಯೊಬ್ಬರು ಸೋಮವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 2000ನೇ ಇಸವಿಯಲ್ಲಿ ನಕಲಿ ಖಾಸಗಿ ಬ್ಯಾಂಕ್ ಹೆಸರಲ್ಲಿ ಠೇವಣಿ ದ್ವಿಗುಣ ಗೊಳಿಸುವ ಆಸೆ ಹುಟ್ಟಿಸಿ ನೂರಾರು ಜನರಿಂದ ಕೋಟ್ಯಂತರ ರು. ಸಂಗ್ರಹಿಸಿ ವಂಚಿಸಿದ ಹಮೂದ್ ಸಿದ್ದಿಕಿ, ಬಳಿಕ ಮೋಹ್‌ವಾದಿಂದ ಕಾಣೆಯಾಗಿದ್ದ. ಅವನಿ ಗಾಗಿ ಅಧಿಕಾರಿಗಳು ಎರಡೂವರೆ ದಶಕದಿಂದ ಹುಡುಕುತ್ತಿದ್ದರು. ಕಡೆಗೆ ವಂಚಕ ಸಿದ್ದಿಕಿ ಭಾನುವಾರ ಹೈದರಾಬಾದ್‌ನಲ್ಲಿ ಸೆರೆ ಸಿಕ್ಕ.

ಬಿಹಾರ: ಪ್ರತಿಪಕ್ಷ ನಾಯಕ ತೇಜಸ್ವಿ

ಪಟನಾ: ಬಿಹಾರ ವಿಧಾನಸಭೆಯಲ್ಲಿ ಅಗತ್ಯ ಶಾಸಕರ ಸಂಖ್ಯೆ ಇಲ್ಲದೇ ಇದ್ದರೂ

ಸದ್ಯಕ್ಕೆ 25 ಕ್ಷೇತ್ರಗಳಲ್ಲಿ ಜಯಿಸಿರುವ ರಾಷ್ಟ್ರೀಯ ಜನತಾ ದಳವೇ(ಆರ್‌ಜೆಡಿ) ಅತಿದೊಡ್ಡ ಪ್ರತಿಪಕ್ಷವಾಗಿರಲಿದೆ. ಆ ಪ್ರತಿಪಕ್ಷದ ನಾಯಕರಾಗಿ ರಾಘೋಪುರ ವಿಧಾನಸಭಾ ಕ್ಷೇತ್ರದ ಆರ್‌ಜೆಡಿ ಶಾಸಕ ತೇಜಸ್ವಿ ಯಾದವ್ ಅವರನ್ನು ಪಕ್ಷ ಸೋಮವಾರ ಅವಿರೋಧವಾಗಿ ಆಯ್ಕೆ ಮಾಡಿದೆ. ತೇಜಸ್ವಿ ಯಾದವ್ ಪಕ್ಷದ ನೂತನ ಶಾಸಕರ ಸಭೆ ಸೇರಿ ಪಕ್ಷದ ಭವಿಷ್ಯದ ಕ್ರಮಗಳ ಕುರಿತು ಚರ್ಚಿಸಲಿದ್ದಾರೆ. ಆರ್‌ಜೆಡಿ ಭವಿಷ್ಯದ ಕ್ರಮಗಳ ಕುರಿತು ನಿರ್ಧಾರ ಕೈಗೊಳ್ಳಲಿದ್ದಾರೆ. ಚುನಾವಣೆಯಲ್ಲಿ ಇಂಡಿಯಾ ಒಕ್ಕೂಟದ ಕಳಪೆ ಪ್ರದರ್ಶನದ ಬಗ್ಗೆಯೂ ಚರ್ಚೆಯಾಗಲಿದೆ ಎನ್ನಲಾಗಿದೆ.

ಖ್ಯಾತ ಬಹುಭಾಷಾ ನಟ ನಾಗಾರ್ಜುನ ಅಕ್ಕಿನೇನಿ ಕಳವಳ

ನನ್ನ ಕುಟುಂಬದ ಒಬ್ಬರು 2 ದಿನ ಡಿಜಿಟಲ್ ಅರೆಸ್ಟ್

ಹೈದರಾಬಾದ್: ಡಿಜಿಟಲ್ ಅರೆಸ್ಟ್, ಮೊಬೈಲ್ ಫೋನ್-ಸಿಸಿಟಿವಿ ಕ್ಯಾಮೆರಾ ಹ್ಯಾಕ್ ಮೂಲಕ ಸೈಬರ್ ವಂಚಕರು ವೃದ್ಧರು, ಹಣವಂತರನ್ನು ಗುರಿಯಾಗಿಸಿ ಸೈಬರ್ ದಾಳಿ ಮಾಡಿ ಭಾರೀ ದೊಡ್ಡ ಮೊತ್ತವನ್ನೇ ಲೂಟಿ ಮಾಡುತ್ತಿವೆ. ಈ ಜಾಲಕ್ಕೆ ಸಿಲುಕಿ ಮಾಜಿ ಪೊಲೀಸ್ ಅಧಿಕಾರಿಗಳು, ಹಿರಿಯ ರಾಜಕಾರಣಿಗಳು, ಸೆಲೆಬ್ರಿಟಿಗಳು ಕೂಡಾ ಸುಲಭವಾಗಿ ಬಲಿಪಶುಗಳಾಗಿ ದ್ದಾರೆ. ಈಗ ಹೊಸದಾಗಿ ಈ ಸಾಲಿಗೆ ಬಹುಭಾಷಾ ನಟ, ತೆಲುಗು ಚಿತ್ರ ನಿರ್ಮಾಪಕ ಅಕ್ಕಿನೇನಿ ನಾಗಾ ರ್ಜುನ ಅವರ ಕುಟುಂಬದ ಸದಸ್ಯರೊಬ್ಬರು ಸೇರ್ಪಡೆಯಾಗಿದ್ದಾರೆ.

'ಆ ಘಟನೆ ನನಗೆ ಈಗಲೂ ನೆನಪಿದೆ. ನನ್ನ ಕುಟುಂಬದ ಸದಸ್ಯರೊಬ್ಬರನ್ನು ಆರು ತಿಂಗಳ ಹಿಂದೆ 2 ದಿನಗಳ ಕಾಲ ಸೈಬರ್ ವಂಚಕರು 'ಡಿಜಿಟಲ್ ಅರೆಸ್ಟ್' ಮಾಡಿ ಗೋಳುಗುಟ್ಟಿಸಿದ್ದರು. ಪೊಲೀಸರು ಮಧ್ಯ ಪ್ರವೇಶಿಸಿದ ನಂತರ ದುಷ್ಕರ್ಮಿಗಳು ಬೇಗನೆ ಕಣ್ಮರೆಯಾದರು' ಎಂದು ನಟ ನಾಗಾರ್ಜುನ ಅಕ್ಕಿನೇನಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಬಹಿರಂಗ ಪಡಿಸಿದ್ದಾರೆ. ಹೈದರಾಬಾದ್ ನಗರದ ಪೊಲೀಸ್ ಆಯುಕ್ತ, ಕರ್ನಾಟಕದ ಹುಬ್ಬಳ್ಳಿ ಮೂಲದ ಹಿರಿಯ ಐಪಿಎಸ್ ಅಧಿಕಾರಿ ವಿ.ಸಿ.ಸಜ್ಜನರ್ ಮತ್ತು ಚಿತ್ರರಂಗದ ಹಲವು ಗಣ್ಯರ ಜತೆಗೂಡಿ ಸುದ್ದಿಗೋಷ್ಠಿ ನಡೆಸಿದ ನಟ ನಾಗಾರ್ಜುನ, ಈ ಸೈಬರ್ ವಂಚಕರು ಸಾಮಾಜಿಕ ಜಾಲ ತಾಣದಲ್ಲಿನ ನಮ್ಮ ನಡೆಗಳನ್ನು ನೋಡಿಯೇ ನಮ್ಮ ದೌರ್ಬಲ್ಯಗಳನ್ನು ಕಂಡುಹಿಡಿಯುತ್ತಾರೆ. ನಮ್ಮ ಮಾಹಿತಿಗಳನ್ನು ಜಾಲತಾಣಗಳ ಮೂಲಕ ಹೆಕ್ಕಿಕೊಳ್ಳುತ್ತಾರೆ. ಆ ಮೂಲಕ ಡಿಜಿಟಲ್ ಅರೆಸ್ಟ್, ಮೊಬೈಲ್ ಹ್ಯಾಕ್ ಮೂಲಕ ಸೈಬರ್ ದಾಳಿ ನಡೆಸುತ್ತಾರೆ. ಹಾಗಾಗಿ ಸೈಬರ್ ವಂಚಕರ ಮೋಸದ ಸಂದೇಶಗಳು, ವಂಚಕ ವೆಬ್‌ಸೈಟ್‌ಗಳ ಬಗ್ಗೆ ಜನರು ಎಚ್ಚರದಿಂದಿರಬೇಕು' ಎಂದೂ ಎಚ್ಚರಿಸಿದರು.

20 ಕೋಟಿ ರು. ಸುಲಿಗೆ 3 ಕೋಟಿ ರು. ವಾಪಸ್

ನಾಗಾರ್ಜುನ ಕುಟುಂಬ ಸದಸ್ಯರೊಬ್ಬರು ಡಿಜಿಟಲ್ ಅರೆಸ್ಟ್ ಆಗಿದ್ದಾಗ 20 ಕೋಟಿ ರು.ಗಳನ್ನು ಸೈಬರ್ ವಂಚಕರು ಅದಾಗಲೇ ಲಪಟಾಯಿಸಿದ್ದರು. ಪೊಲೀಸರು ಸಹಾಯಕ್ಕೆ ಮುಂದಾದ ಬಳಿಕ ಮತ್ತಷ್ಟು ಹಣ ವಂಚನೆಯಾಗುವುದು ತಪ್ಪಿತು. ಅಲ್ಲದೇ, 3 ಕೋಟಿ ರು.ಗಳಷ್ಟು ಮೊತ್ತವನ್ನು ಸೈಬರ್ ವಂಚಕರ ಬ್ಯಾಂಕ್ ಖಾತೆಗಳಿಂದ ಸಂತ್ರಸ್ತರ ಬ್ಯಾಂಕ್ ಖಾತೆಗೆ ವಾಪಸ್ ಬರುವಂತೆ ಮಾಡಲೂ ಸಾಧ್ಯವಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಆದರೆ, 6 ತಿಂಗಳ ಹಿಂದೆ ಜರುಗಿನ ಈ ಘಟನೆ ಬಗ್ಗೆ ನಾಗಾರ್ಜುನ ಅವರು ಲಿಖಿತ ದೂರು ದಾಖಲಿಸಿರಲಿಲ್ಲ. ಪೊಲೀಸರ ನೆರವು ಕೋರಿದ್ದರು. ಪೊಲೀಸ್ ಅಧಿಕಾರಿಗಳು ಸಹಾಯ ಹಸ್ತ ಚಾಚಿ ನಟನ ಕುಟುಂಬದ ಸದಸ್ಯರನ್ನು ಡಿಜಿಟಲ್ ಅರೆಸ್ಟ್‌ನಿಂದ ಕಾಪಾಡಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

₹ 3.37 ಕೋ. ಲೂಟಿ: ಸೈಬರ್‌ಗ್ಯಾಂಗ್ ಬಂಧನ

ನೈನಿತಾಲ್: ಸಾರ್ವಜನಿಕರ ಮೊಬೈಲ್ ಫೋನ್‌ಗಳನ್ನು ಹ್ಯಾಕ್

ಮಾಡಿ ಅದರಲ್ಲಿರುತ್ತಿದ್ದ ಬ್ಯಾಂಕ್ ಖಾತೆ ವಿವರಗಳನ್ನು ಸಂಗ್ರಹಿಸಿ ತಮ್ಮ ಖಾತೆಗೆ ಹಣ ವರ್ಗಾಯಿಸಿಕೊಳ್ಳುತ್ತಿದ್ದ ಅಂತಾರಾಜ್ಯ ಸೈಬರ್ ವಂಚಕರನ್ನು ಉತ್ತರಾಖಂಡ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಈ ಸೈಬರ್ ವಂಚಕರು, ಜನರ ಮೊಬೈಲ್ ಫೋನ್‌ಗಳಿಗೆ ಆಕರ್ಷಕ ಶೀರ್ಷಿಕೆಯೊಂದಿಗೆ ಮೋಸದ ಲಿಂಕ್‌ಗಳನ್ನು ಕಳುಹಿಸುತ್ತಿದ್ದರು. ಇಲ್ಲವೇ ಬ್ಯಾಂಕ್, ಆರ್‌ಬಿಐ ಹೆಸರಿನಲ್ಲಿ ಸಂದೇಶ ಗಳನ್ನು ರವಾನಿಸುತ್ತಿದ್ದರು. ಜನರು ಸಹಜ ಕುತೂಹಲ ಅಥವಾ ಬ್ಯಾಂಕ್ ಸಂದೇಶ ಎಂದು ಆ ಲಿಂಕ್ ಮೇಲೆ ಕ್ಲಿಕ್ ಮಾಡಿದರೆ ಆ ಫೋನ್‌ಗಳನ್ನು ಈ ಸೈಬರ್ ವಂಚಕರು ತಕ್ಷಣವೇ ಹ್ಯಾಕ್ ಮಾಡಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದ್ದರು. ಆ ಮೊಬೈಲ್ ಫೋನ್‌ನಲ್ಲಿ ಇರಬಹುದಾದ ಬ್ಯಾಂಕ್ ಖಾತೆಗಳ ವಿವರಗಳನ್ನು ಪಡೆದು ಕೊಂಡು ತಮ್ಮ ಖಾತೆಗೆ ಹಣ ವರ್ಗಾಯಿಸಿಕೊಳ್ಳುತ್ತಿದ್ದರು ಎಂದು ತನಿಖಾ ಧಿಕಾರಿಗಳು ತಿಳಿಸಿದ್ದಾರೆ.

ಇದೊಂದು ಅಂತಾರಾಜ್ಯ ಸೈಬರ್ ವಂಚಕರ ಜಾಲ. ರಾಜಸ್ಥಾನದ ಅಲ್ವಾರ್‌ನ ಶುಭಂ ಗುಪ್ತಾ, ಉತ್ತರ ಪ್ರದೇಶದ ಬುಲಂದ ಶಹರ್‌ನ ಪಿಯೂಷ್ ಗೋಯಲ್, ಉತ್ತರ ಪ್ರದೇಶದ ಗಾಜಿಯಾಬಾದ್‌ನ ರಿಷಭ್ ಕುಮಾರ್ ಮತ್ತು ಹರಿಯಾಣದ ಗುರು ಗ್ರಾಮ್‌ನ ಮೋಹಿತ್ ರಥಿ ಈ ಸೈಬರ್ ವಂಚನೆ ಜಾಲದ ಪ್ರಮುಖರು ಎಂದು ತನಿಖಾಧಿಕಾರಿ ಸೋಮವಾರ ಸುದಿ ಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ನಾಲ್ವರೂ ನೈನಿತಾಲ್ ಬಳಿ ಕಾರಿನಲ್ಲಿ ಸಂಚರಿಸುತ್ತಿದ್ದಾಗ ತಡೆದು, ವಶಕ್ಕೆ ಪಡೆದು ಪರಿಶೀಲನೆ ನಡೆಸಿದಾಗ ನಾಲ್ವರ ಬಳಿ 11 ಸ್ಮಾರ್ಟ್‌ಫೋನ್‌ಗಳು, 9 ಸಿಮ್ ಕಾರ್ಡ್ ಗಳು, ಹಲವು ಆಧಾರ್ ಮತ್ತು ಪ್ಯಾನ್ ಕಾರ್ಡ್‌ಗಳು, ಚೆಕ್‌ಬುಕ್‌ಗಳು, ಕೀ ಕೋಡ್‌ಗಳು, ಡೆಬಿಟ್/ಕ್ರೆಡಿಟ್ ಕಾರ್ಡ್ ಗಳು ಪತ್ತೆಯಾಗಿವೆ.

ಪ್ರಾಥಮಿಕ ತನಿಖೆ ಪ್ರಕಾರ ಈ ಸೈಬರ್ ವಂಚಕರು ಈವರೆಗೆ 3.37 ಕೋಟಿ ರು. ಲಪಟಾಯಿಸಿದ್ದಾರೆ ಎಂಬುದು ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಚಾಮರಾಜನಗರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿನಲ್ಲಿ ಪಿಯುಸಿ ಹೊರತುಪಡಿಸಿ ಉಳಿದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ-1ರ ಅಲೆಮಾರಿ, ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿವೇತನ ಹಾಗೂ ಅಲೆಮಾರಿ, ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ ಶುಲ್ಕಮರು ಪಾವತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ನವೆಂಬರ್25ರವರೆಗೆ ವಿಸ್ತರಿಸಲಾಗಿದೆ.

ಲೈಂಗಿಕ ಕಿರುಕುಳ: ಎಐಡಿಎಸ್‌ಒ ಖಂಡನೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿರುವ ಉಪನ್ಯಾಸಕನ ಕೃತ್ಯವನ್ನು ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ಖಂಡಿಸಿದೆ. ವಿದ್ಯಾರ್ಥಿನಿಗೆ ಪದೇಪದೇ ಲೈಂಗಿಕ ಕಿರುಕುಳ ನೀಡಿ, ಅಸಭ್ಯವಾಗಿ ವರ್ತಿಸಿ, ಯಾರಿಗಾದರೂ ಹೇಳಿದರೆ ಫೇಲ್ ಮಾಡುತ್ತೇನೆ ಎಂದು ಬೆದರಿಕೆ ಒಡ್ಡಿರುವ ಉಪನ್ಯಾಸಕನನ್ನು ಈ ಕೂಡಲೇ ಅಮಾನತುಗೊಳಿಸಿ, ನಿದರ್ಶನೀಯ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದೆ. ಈ ಘಟನೆಯು ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯ ಮತ್ತು ಅಧಿಕಾರದ ದುರುಪಯೋಗದ ಸಮಸ್ಯೆಯನ್ನು ಹೋಗಲಾಡಿಸುವ ತುರ್ತು ಅವಶ್ಯಕವನ್ನು ಎತ್ತಿ ತೋರಿಸುತ್ತದೆ. ಯುವ ಮನಸ್ಸುಗಳನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿರುವ ಪ್ರಾಧ್ಯಾಪಕರು ಇಂತಹ ಹೇಯ ಕೃತ್ಯಗಳಲ್ಲಿ ಭಾಗಿಯಾಗಿರುವುದು ನಿಜಕ್ಕೂ ಶೋಚನೀಯ. ಮುಂದೆಂದೂ ಶಿಕ್ಷಣ ಸಂಸ್ಥೆಗಳಲ್ಲಿ ಈ ರೀತಿಯ ಘಟನೆಗಳು ನಡೆಯದಂತೆ ಸರ್ಕಾರವೇ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಘಟನೆಯ ಬಗ್ಗೆ ತ್ವರಿತ, ನಿಷ್ಪಕ್ಷಪಾತ ಮತ್ತು ಸಂಪೂರ್ಣ ತನಿಖೆ ನಡೆಸಬೇಕು. ಆರೋಪಿ ಉಪನ್ಯಾಸಕನನ್ನು ತಕ್ಷಣವೇ ಅಮಾನತುಗೊಳಿಸಬೇಕು. ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯದಿಂದ ವಿದ್ಯಾರ್ಥಿಗಳನ್ನು ರಕ್ಷಿಸಲು ಶಿಕ್ಷಣ ಸಂಸ್ಥೆಗಳಲ್ಲಿ ಕಠಿಣ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದೆ.

ಇಂದು ಗುಂಡ್ಲುಪೇಟೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನವೆಂಬರ್18ರಂದು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಕಗ್ಗಳ, ಕೆಲಸಿಪುರ, ಲಕ್ಕೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912ಗೆ ಕರೆ ಮಾಡುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್‌ತಿಳಿಸಿದ್ದಾರೆ.

ಕಾಂಗ್ರೆಸ್ ಬೆಂಬಲಿತ 9 ನಿರ್ದೇಶಕರಿಗೆ ಗೆಲುವು

ಚನ್ನಪಟ್ಟಣ: ತಾಲೂಕಿನ ಬೇವೂರು ವಿವಿಧೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಹಕಾರ ಸಂಘದ 2025-30 ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗೆ ಭಾನುವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸಿಂಡಿಕೇಟ್ನ 9 ನಿರ್ದೇಶಕರು ಗೆಲುವು ಸಾಧಿಸಿದ್ದಾರೆ. ಸಂಘದ 12 ನಿರ್ದೇಶಕರ ಆಯ್ಕೆಗೆ ನಡೆಯಬೇಕಿರುವ ಚುನಾವಣೆಯಲ್ಲಿ ಎಸ್ಟಿ ಸಮುದಾಯದ ಸದಸ್ಯರು ಇಲ್ಲದ ಕಾರಣ ಸಂಘದಲ್ಲಿ ಉಳಿದ 11 ನಿರ್ದೇಶಕ ಸ್ಥಾನಕ್ಕೆ ಚುನಾವಣೆ ಘೋಷಣೆಯಾಗಿತ್ತು. ಮಹಿಳಾ ಮೀಸಲು ಕ್ಷೇತ್ರದ 2 ನಿರ್ದೇಶಕ ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರಿಂದ ಬಾಕಿ ಉಳಿದ 9 ನಿರ್ದೇಶಕ ಸ್ಥಾನದ ಆಯ್ಕೆಗೆ ಭಾನುವಾರ ಚುನಾವಣೆ ನಡೆದಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್ ಬೆಂಬಲಿತರು ಹಾಗೂ ಬಂಡಾಯದಿಂದ ಒಟ್ಟು 15 ಮಂದಿ ಅಭ್ಯರ್ಥಿಗಳು ಕಣದಲ್ಲಿ ಉಳಿದು ಚುನಾವಣೆ ಎದುರಿಸಿದ್ದು ಇದರಲ್ಲಿ ಕಾಂಗ್ರೆಸ್ ಬೆಂಬಲಿತ ಸಿಂಡಿಕೇಟ್ನ 9 ನಿರ್ದೇಶಕರು ಗೆಲುವು ಸಾಧಿಸುವ ಮೂಲಕ ಕಾಂಗ್ರೆಸ್ ಸಿಂಡಿಕೇಟ್ಗೆ ಬ್ಯಾಂಕ್ನ ಆಡಳಿತ ಮಂಡಳಿ ವಶವಾಗಿದೆ. ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ 5 ನಿರ್ದೇಶಕರು ಆಯ್ಕೆ : ಸಂಘದ ಸಾಲಗಾರರ ಸಾಮಾನ್ಯ ಕ್ಷೇತ್ರದ 5 ನಿರ್ದೇಶಕರ ಸ್ಥಾನಕ್ಕೆ ಒಟ್ಟು 7 ಮಂದಿ ಅಭ್ಯರ್ಥಿಗಳು ಕಣದಲ್ಲಿ ಸ್ಪರ್ಧೆ ಮಾಡಿದ್ದು ಇದರಲ್ಲಿ ಕಾಂಗ್ರೆಸ್ ಬೆಂಬಲಿತ ಸಿಂಡಿಕೇಟ್ನ ಅಭ್ಯರ್ಥಿಗಳಾದ ಬಿ.ಸಿ. ಯೋಗೀಶ್, ಬಿ. ಕೃಷ್ಣ, ದಯಾನಂದಸಾಗರ, ಬಿಎನ್‌ಎಸ್ ಕುಮಾರ್,ಬಿ. ಎಸ್. ರಾಜಶೇಖರ್ಸ್ವಾಮಿಅವರು ಜಯಗಳಿಸಿದ್ದಾರೆ. ಸಾಲಗಾರರಲ್ಲದ ಕ್ಷೇತ್ರದಿಂದ ಓರ್ವ ನಿರ್ದೇಶಕರ ಆಯ್ಕೆ : ಸಂಘದ ಸಾಲಗಾರರಲ್ಲದ ಕ್ಷೇತ್ರದ 1 ನಿರ್ದೇಶಕ ಸ್ಥಾನಕ್ಕೆ ಒಟ್ಟು 3 ನಾಮಪತ್ರ ಸಲ್ಲಿಕೆ ಮಾಡಿದ್ದು, ಅದರಂತೆ ನಾಗಣ್ಣ ಅವರು ಚುನಾವಣೆ ಗೆಲುವು ಸಾಧಿಸಿದ್ದಾರೆ. ಸಾಲಗಾರರ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಓರ್ವ ನಿರ್ದೇಶಕ ಆಯ್ಕೆ: ಸಂಘದ ಸಾಲಗಾರರ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದ 1 ನಿರ್ದೇಶಕ ಸ್ಥಾನಕ್ಕೆ ಬಿ.ಕೆ. ಅರ್ಜುನ, ಕೆ. ಅವರು ಆಯ್ಕೆಯಾಗಿದ್ದಾರೆ.

{ಸಿ.ಟಿ.ರವಿ} ವಿಧಾನ ಪರಿಷತ್ ಸದಸ್ಯ

ಪ್ರಧಾನಿ ಮತ್ತು ಮುಖ್ಯಮಂತ್ರಿ ಹುದ್ದೆ ಸಾಂವಿಧಾನಿಕವಾದದ್ದು. ಆದ್ದರಿಂದ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಿಎಂ ಸಿದ್ದರಾಮಯ್ಯ ಅವರ ಭೇಟಿ, ಮಾತುಕತೆಯನ್ನು ರಾಜಕೀಯ ದೃಷ್ಟಿಯಿಂದ ನೋಡೋಕಾಗಲ್ಲ.

ಅಭಿಷೇಕದ ಕ್ಷಣ ಕಣ್ತುಂಬಿಕೊಂಡ ಭಕ್ತರು | ಮಹಾಭಿಷೇಕಕ್ಕೆ ಶಿವರಾತ್ರಿ ದೇಶಿಕೇಂದ್ರ ಶ್ರೀಗಳಿಂದ ಚಾಲನೆ

ಬೆಟ್ಟದ ನಂದಿಗೆ ಮಹಾಮಜ್ಜನ

ಮೈಸೂರು: ಈ ವರ್ಷದ ಕಾರ್ತಿಕ ಮಾಸದ ಕೊನೆಯ ಸೋಮವಾರ ಹಿನ್ನೆಲೆ ಚಾಮುಂಡಿ ಬೆಟ್ಟದ ನಂದಿಯ ವಿಗ್ರಹಕ್ಕೆ ಮಹಾಭಿಷೇಕ ನೆರವೇರಿತು.

ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ಬೆಟ್ಟದ ಶ್ರೀನಂದಿಗೆ 20ನೇ ವರ್ಷದ ಮಹಾಭಿಷೇಕ, ಪೂಜಾ ಮಹೋತ್ಸವ ವಿಧಿವತ್ತಾಗಿ ನೆರವೇರಿಸಲಾಯಿತು.

ಮೂರು ಗಂಟೆಗೂ ಹೆಚ್ಚು ಕಾಲ ಬಗೆಯ ದ್ರವ್ಯಗಳ ಅಭಿಷೇಕ ನಡೆಯಿತು. ಮೊದಲಿಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ನಂದಿಗೆ ಅಭಿಷೇಕ ಮಾಡುವ ಮೂಲಕ ಮಹಾಭಿಷೇಕಕ್ಕೆ ಚಾಲನೆ ನೀಡಿದರು.

ನಂತರ ಶ್ರೀನಂದಿಗೆ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ, ಬಾಳೆಹಣ್ಣು, ದ್ರಾಕ್ಷಿ, ಬೇಲದಹಣ್ಣು, ಎಳನೀರು, ಅರಿಶಿಣ, ಕುಂಕುಮ, ಸಿಂಧೂರ, ರಕ್ತಚಂದನ ಹಾಗೂ ವಿವಿಧ 32 ಬಗೆಯ ದ್ರವ್ಯಗಳ ಅಭಿಷೇಕವನ್ನು ನಂದಿಗೆ ನೆರವೇರಿಸಲಾಯಿತು. ಬೆಳಗ್ಗೆಯಿಂದಲೇ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ಅಭಿಷೇಕಕ್ಕೆ ಬೇಕಾದ ಎಲ್ಲ ರೀತಿಯ ವಸ್ತುಗಳನ್ನು ಬಕೆಟ್ಗಳಲ್ಲಿ ಸಿದ್ಧಮಾಡಿಕೊಂಡಿಕೊಂಡು ಯಾವುದೇ ಅಡಚಣೆಯಿಲ್ಲದೆ ಅಭಿಷೇಕ ನೆರವೇರಿಸಿದರು.

ಇದೇ ವೇಳೆ ಸ್ಥಳದಲ್ಲಿ ಸೇರಿದ್ದ ನೂರಾರು ಮಂದಿ ಭಕ್ತರು ಶ್ರೀನಂದಿಯ ಅಭಿಷೇಕದ ಕ್ಷಣಗಳನ್ನು ಕಣ್ತುಂಬಿಕೊಳ್ಳುವ ಮೂಲಕ ಭಕ್ತಿಯ ಪರವಶದಲ್ಲಿ ಮಿಂದೆದ್ದರು.

ಅಭಿಷೇಕದ ವೇಳೆ ಒಂದು ಕಡೆ ಮಂತ್ರಘೋಷ ಮೊಳಗಿದರೆ ಮತ್ತೊಂದು ಕಡೆ ಭಕ್ತರಿಂದ ಶ್ರೀನಂದಿಗೆ, ಚಾಮುಂಡೇಶ್ವರಿಗೆ ಹಾಗೂ ಉತ್ತನಳ್ಳಿ ಮಾರಮ್ಮನಿಗೆ ಜೈಕಾರ ಘೋಷಗಳು ಕೇಳಿಸಿದವು.

ಇದೇ ವೇಳೆ ಅಭಿಷೇಕದಲ್ಲಿ ಭಾಗವಹಿಸಿದ್ದ ಭಕ್ತಿರಿಗೆ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರಸಾದ ವಿನಿಯೋಗ ಮಾಡಲಾಯಿತು.

ಟ್ರಸ್ಟ್ನ ಕಾರ್ಯದರ್ಶಿ ಎನ್. ಗೋವಿಂದ, ಪದಾಧಿಕಾರಿಗಳಾದ ಶಂಕರ್,ಮಹೇಶ್, ಸುಂದರ್‌ಶೆಟ್ಟಿ, ಶಿವಮೂರ್ತಿ,ಸತ್ಯನಾರಾಯಣ, ರಾಜಣ್ಣ ಸೇರಿದಂತೆ ಹಲವರು ಭಾಗವಹಿಸಿದ್ದರು. ಮೈಸೂರು ಅರಸರಾಗಿದ್ದ ವಚನ ಚಿಕ್ಕದೇವರಾಜ ಒಡೆಯರ್‌ಅವರ ಕಾಲದಲ್ಲಿ ಏಕಶಿಲೆಯಲ್ಲಿ ನಿರ್ಮಿಸಿರುವ ಬೃಹದಾಕಾರದ ನಂದಿಯ ವಿಗ್ರಹ ಮಳೆ, ಬಿಸಿಲು, ಚಳಿಯನ್ನು ಲೆಕ್ಕಿಸದೇ ಚಾಮುಂಡಿ ಬೆಟ್ಟದ ದಟ್ಟಾರಣ್ಯದಲ್ಲಿ ವಿರಾಜಮಾನವಾಗಿದೆ.

ನಂದಿಯ ವಿಗ್ರಹಕ್ಕೆ ಕಳೆದ 20 ವರ್ಷಗಳಿಂದ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ನ ಸದಸ್ಯರು ಮಹಾಭಿಷೇಕ ನೆರವೇರಿಸುತ್ತಾ ಬಂದಿದ್ದಾರೆ.

ನಂದಿಗೆ ಅಭಿಷೇಕ ಮಾಡುವ ಮೂಲಕ ಮಹಾಭಿಷೇಕಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಚಾಲನೆ ನೀಡಿದರು.

ನೂರಾರು ಭಕ್ತರಿಗೆ ಪ್ರಸಾದ ವಿನಿಯೋಗ

ಅಭಿಷೇಕದ ವೇಳೆ ಒಂದು ಕಡೆ ಮಂತ್ರಘೋಷ ಮೊಳಗಿದರೆ ಮತ್ತೊಂದು ಕಡೆ ಭಕ್ತರಿಂದ ಶ್ರೀನಂದಿಗೆ, ಚಾಮುಂಡೇಶ್ವರಿಗೆ ಹಾಗೂ ಉತ್ತನಳ್ಳಿ ಮಾರಮ್ಮನಿಗೆ ಜೈಕಾರ ಘೋಷಗಳು ಕೇಳಿಸಿದವು. ಇದೇ ವೇಳೆ ಅಭಿಷೇಕದಲ್ಲಿ ಭಾಗವಹಿಸಿದ್ದ ಭಕ್ತಿರಿಗೆ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರಸಾದ ವಿನಿಯೋಗ ಮಾಡಲಾಯಿತು.

ರಾಯಣ್ಣನ ದೇಶಭಕ್ತಿ ಮಾದರಿ

ಪಿರಿಯಾಪಟ್ಟಣ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ದೇಶ ಭಕ್ತಿ ಇತರರಿಗೆ ಮಾದರಿಯಾಗಿದೆ ಎಂದು ಅರಗು ಮತ್ತು ಪಾಲಿಶ್ ನಿಗಮದ ಅಧ್ಯಕ್ಷರಾದ ಎಚ್ .ಡಿ.ಗಣೇಶ್ ತಿಳಿಸಿದರು.

ತಾಲೂಕಿನ ಬಿಲ್ಲಹಳ್ಳಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಯುವಕರ ಸಂಘದ ವತಿಯಿಂದ ನೂತನವಾಗಿ ನಿರ್ಮಿಸಿರುವ ಕ್ರಾಂತಿ ವೀರ ಶ್ರೀ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದರು.

ದೇಶ ಭಕ್ತ ಸಂಗೊಳ್ಳಿ ರಾಯಣ್ಣರ ದೇಶ ಭಕ್ತಿಯ ಚಿಂತನೆ ಪ್ರತಿಯೊಬ್ಬರಲ್ಲಿಯೂ ಮೂಡಬೇಕು. ಸಮುದಾಯದ ನ್ಯಾಯಕ್ಕೆ ಜಾಗೃತಿ ಅನಿವಾರ್ಯವಾಗಿದೆ.ಭಕ್ತ ಕನಕದಾಸ, ಅಹಲ್ಯ ಭಾಯಿ ಒಲ್ವಕರ್ ,ಸಂಗೊಳ್ಳಿ ರಾಯಣ್ಣ ಸೇರಿದಂತೆ ಅನೇಕ ಮಹನೀಯರು ನಮ್ಮ ಸಮುದಾಯದಲ್ಲಿ ಜನಿಸಿ ದೇಶಕ್ಕೆ ಕೊಡುಗೆ ನೀಡಿದ್ದಾರೆ. ಇವರುಗಳು ನೀಡಿರುವ ಕೊಡುಗೆ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಲ್ಲ ಇಡೀ ಮಾನವ ಸಂಕುಲ ಇವರ ಆದರ್ಶ ಬೆಳೆಸಿಕೊಳ್ಳಬೇಕು ಎಂದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆ ಕೊಡುಗೆಯಾಗಿ ನೀಡಿದ ಸಂಗೊಳ್ಳಿ ರಾಯಣ್ಣ ಯುವಕ ಸಂಘದ ಸಂಸ್ಥಾಪಕ ಅಧ್ಯಕ್ಷ ರಾಜಶೇಖರ್‌ದೊಡ್ಡಣ್ಣ ಮಾತನಾಡಿ ಪ್ರತಿನಿತ್ಯ ಭಕ್ತ ಕನಕ ದಾಸರ ಕೀರ್ತನೆ ಹಾಡಬೇಕು. ಸಂಗೊಳ್ಳಿ ರಾಯಣ್ಣರು ಬಡವನಾಗಿ ಜನಿಸಿ ಶಿವಾಜಿ ಮಹಾರಾಜರಂತ್ತ ವೀರರ ಚರಿತ್ರೆ ಕೇಳುತ್ತ ಗರಡಿ ಮನೆಯಲ್ಲಿ ಬೆಳೆದವರು ಎಂದರು. ಉಪನ್ಯಾಸಕ ನಂಜುಂಡಸ್ವಾಮಿ, ಆಶ್ರಯ ಸಮಿತಿ ತಾಲ್ಲೂಕು ಅಧ್ಯಕ್ಷ ನಿತೀನ್ ವೆಂಕಟೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಸುನೀಲ್ ಕುಮಾರ್,ಶಿವಶಂಕರ ಹಿಟಗಳ್ಳಿ, ಗುರು ಮಲ್ಲೇಶ್, ,ಶಿಕ್ಷಕರ ಸಂಘದ ಅಧ್ಯಕ್ಷ ಮಧುರೇಶ್, ಮುಖಂಡರಾದ ರಮೇಶ್, ರೇಣುಕುಮಾರ್,ಮಹದೇವಪ್ಪ,ರುದ್ರಪ್ಪ, ಕಾಂತರಾಜ್, ಶ್ರೀಧರ್, ಚಂದ್ರಪ್ಪ, ಶಿವಕುಮಾರ್ ಹಾಜರಿದ್ದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಎಚ್.ಡಿ.ಗಣೇಶ್ ಅವರು ಅನಾವರಣಗೊಳಿಸಿದರು.

ಚಂದ್ರಶೇಖರ್, ಪ್ರತಾಪ್‌ಗೆ ಬಿರುದು ನೀಡಿ ಗೌರವ

ಕೆ ಆರ್‌ಪೇಟೆ: ಕಿಕ್ಕೇರಿ ಹೋಬಳಿ ಚೌಡೇನಹಳ್ಳಿ ಗ್ರಾಮದ ಯುವ ಮುಖಂಡರು ಹಾಗೂ ಕಲಾ ಪೋಷಕರಾದ ಚಂದ್ರಶೇಖರ್‌ಅವರಿಗೆ ಕಲಾರತ್ನ ಬಿರುದು ಹಾಗೂ ಪ್ರತಾಪ್ ಅವರಿಗೆ ಕಲಾ ಚತುರ ಬಿರುದನ್ನು ಸಮಾಜ ಸೇವಕ ಆರ್‌ಟಿ ಒ ಮಲ್ಲಿಕಾರ್ಜುನ್ ಪ್ರದಾನ ಮಾಡಿ ಗೌರವ ಅರ್ಪಿಸಿದರು.

ಪಟ್ಟಣದ ಶ್ರೀರಂಗ ಚಿತ್ರಮಂದಿರ ಆವರಣದಲ್ಲಿ ಡಾ.ರಾಜ್ ರಂಗ ಕಲಾ ವೇದಿಕೆ ವತಿಯಿಂದ 23 ದಿನಗಳ ನಡೆಯುತ್ತಿರುವ ಜಿಲ್ಲಾ ಮಟ್ಟದ ನಾಟಕೋತ್ಸವದಲ್ಲಿ ಸಿದ್ದಲಿಂಗೇಶ್ವರ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ ವತಿಯಿಂದ ಅನಿಲ್ ಶಿವಾಜಿ ದಕ್ಷ ನಿರ್ದೇಶನದಲ್ಲಿ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕದ ವೇದಿಕೆ ಕಾರ್ಯಕ್ರಮದಲ್ಲಿ ಚೌಡೇನಹಳ್ಳಿ ಗ್ರಾಮದ ಇಬ್ಬರು ಯುವ ಮುಖಂಡರಿಗೆ ಬಿರುದನ್ನು ನೀಡಿ ಗೌರವಿಸಲಾಯಿತು.

ಬಳಿಕ ಮಾತನಾಡಿದ ಆರ್‌ಟಿ ಓ ಮಲ್ಲಿಕಾರ್ಜುನ್ ಪೌರಾಣಿಕ ನಾಟಕಗಳಲ್ಲಿ ಇತ್ತೀಚಿನ ದಿನಗಳಲ್ಲಿ ಯುವಕರು ಹೆಚ್ಚಿನ ರೀತಿಯಲ್ಲಿ ಪಾತ್ರವನ್ನು ನಿರ್ವಹಿಸುತ್ತಿರುವುದನ್ನು ನೋಡಿದರೆ ಕಲೆಯನ್ನು ಮುಂದಿನ ಪೀಳಿಗೆಗಳು ರಕ್ಷಿಸಲು ಬದ್ದವಾಗಿವೆ ಎಂದು ಕಾಣಿಸುತ್ತವೆ. ಅದರಲ್ಲೂ ಡ್ರಾಮಾ ಮಾಸ್ಟರ್ ಗಳು ಸಹ ಯುವಕರು ಪಾಲ್ಗೊಳ್ಳುತ್ತಿರುವುದು ಸಂತಸದ ವಿಷಯವಾಗಿದೆ.ಕಲೆಯು ಉಳಿಯಬೇಕಾದರೆ ಪ್ರತಿಯೊಬ್ಬರೂ ಸಹ ಸಹಕಾರ ನೀಡಿದರೆ ಮಾತ್ರ ಉಳಿಸಲು ಸಾಧ್ಯವಾಗುತ್ತದೆ.ಧಾರವಾಹಿಗಳು ಹಾಗೂ ಸಿನಿಮಾಗಳು ಎಷ್ಟೇ ಪ್ರಭಾವ ಬೀರಿದರೂ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳು ಅತಿ ಹೆಚ್ಚು ಪ್ರದರ್ಶನ ಕಾಣುತ್ತವೆ.ನಮ್ಮನ್ನು ಆಳುವ ಸರಕಾರಗಳು ಗ್ರಾಮೀಣ ಪ್ರದೇಶಗಳ ಕಲಾವಿದರಿಗೆ ಆರ್ಥಿಕವಾಗಿ ಪ್ರೋತ್ಸಾಹ ನೀಡುವ ಕೆಲಸವನ್ನು ನೀಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಡಾ.ಪೂನಾ ಶಂಕರ್ ರಾವ್, ಡಾ.ರಾಜ್ ರಂಗ ಕಲಾ ವೇದಿಕೆ ಅಧ್ಯಕ್ಷರಾಗಿಮುದ್ದನಹಳ್ಳಿ ದೇವರಾಜು, ಸಂಘಟನಾ ಕಾರ್ಯದರ್ಶಿ ಹೊಸಹೊಳಲು ರಘು,ಜೈ ಭುವನೇಶ್ವರಿ ಕಲಾ ಸಂಘದ ಅಧ್ಯಕ್ಷ ಚಟ್ಟೇನಹಳ್ಳಿ ನಾಗರಾಜು, ಕೂಡಲಕುಪ್ಪೆ ದೇವರಾಜು, ಡ್ರಾಮಾ ಮಾಸ್ಟರ್‌ತಂದ್ರೆಕೊಪ್ಪಲು ಮಂಜುನಾಥ್, ಅನಿಲ್ ಶಿವಾಜಿ, ರಂಗನಾಥ್, ಕೃಷ್ಣಾಪುರ ಗಿರೀಶ್, ಸುರೇಶ್ ಹರಿಜನ್ ,ದೇವರಾಜು ಸೇರಿದಂತೆ ಇತರರು ಹಾಜರಿದ್ದರು.

ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕದ ವೇದಿಕೆ ಕಾರ್ಯಕ್ರಮದಲ್ಲಿ ಯುವ ಮುಖಂಡರಿಗೆ ಬಿರುದನ್ನು ನೀಡಿ ಗೌರವಿಸಲಾಯಿತು.

ಮಕ್ಕಳಿಗೆ ಆಧಾರ್ ನೋಂದಣಿಗೆ ಸೂಚನೆ

ಮಂಡ್ಯ: ಜಿಲ್ಲೆಯಲ್ಲಿ 4 ಸಾವಿರಕ್ಕೂ ಅಧಿಕ 6 ವರ್ಷದೊಳಗಿನ ಮಕ್ಕಳು ಆಧಾರ್‌ನಲ್ಲಿ ನೋಂದಣಿ ಮಾಡಿಸಿಕೊಂಡಿಲ್ಲ ಸದರಿ ಮಕ್ಕಳಿಗೆ ಆಧಾರ್‌ನೋಂದಣಿ ಮಾಡಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಪೋಷಣ್ ಅಭಿಯಾನ ಯೋಜನೆಯಡಿ ಒಗ್ಗೂಡಿಸುವಿಕೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 3-6 ವರ್ಷದೊಳಗಿನ 4 ಸಾವಿರಕ್ಕೂ ಹೆಚ್ಚಿನ ಮಕ್ಕಳು ಆಧಾರ್‌ನಲ್ಲಿ ನೋಂದಣಿ ಮಾಡಿಸಿಕೊಂಡಿಲ್ಲ ಅವರೆಲ್ಲರಿಗೂ ಒಂದು ತಿಂಗಳೊಳಗಾಗಿ ಆಧಾರ್ ಮಾಡಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಇರುವ ಅಂಗನವಾಡಿಗಳಿಗೆ ಆಧಾರ್‌ಸೇವಕರನ್ನು ಕರೆಸಿ ಅಲ್ಲಿಯೇ ಮಕ್ಕಳಿಗೆ ಆಧಾರ್ ಕಾರ್ಡ್ ಮಾಡಿಸಿ. ಮಕ್ಕಳು ಶಾಲೆಗೆ ಸೇರಿಸಲು ಆಧಾರ್ ಕಾರ್ಡ್ ಕಡ್ಡಾಯ ಹೀಗಾಗಿ ಅಧಿಕಾರಿಗಳು ವಿಶೇಷ ಆಸಕ್ತಿ ವಹಿಸಿ ಆಧಾರ್‌ಕಾರ್ಡ್ ಮಾಡಿಸಿ ಎಂದು ಹೇಳಿದರು.

ಎಲ್ಲಾ ಅಂಗನವಾಡಿಗಳಿಗೆ ಪೌಷ್ಟಿಕ ಆಹಾರಗಳು ಸರಿಯಾಗಿ ಪೂರೈಕೆ ಮಾಡಲಾಗುತ್ತಿದೆಯೇ ಪರಿಶೀಲಿಸಿ. ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಹೊಸ ಮೊಬೈಲ್ ಆಪ್ ಸಿದ್ದಪಡಿಸಲಾಗಿದೆ. ಅದರಲ್ಲಿ ಮಕ್ಕಳ ಹಾಜರಾತಿ ಹಾಗೂ ಮಕ್ಕಳಿಗೆ ನೀಡಿರುವ ಪೌಷ್ಟಿಕ ಆಹಾರ ಪದಾರ್ಥಗಳನ್ನು ಫೋಟೋ ಮೂಲಕ ಅಪ್ಲೋಡ್ ಮಾಡಬೇಕು ಎಂದು ಹೇಳಿದರು.

ಪೋಷಣ್ ಅಭಿಯಾನ ಯೋಜನೆಯಡಿ ಒಗ್ಗೂಡಿಸುವಿಕೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮಾತನಾಡಿದರು.

ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆ ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗೆ ಖಾಲಿ ಇದೆ. ಶ್ರೀಘ್ರವಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಮಕ್ಕಳಿಗೆ ನೀಡಲಾಗುವ ಪೌಷ್ಟಿಕ ಆಹಾರಗಳನ್ನು ಸರಿಯಾಗಿ ಪೂರೈಕೆ ಮಾಡಿ ಅವಧಿ ಮುಗಿದ ಪದಾರ್ಥಗಳನ್ನು ನೀಡಬೇಡಿ ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಧನುಷ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಆಶಾ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಲೋಕೇಶ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಭಾಷೆಯ ಮೂಲಕ ಸಂಸ್ಕೃತಿಯ ಸಂಚಾರ: ಡಾ.ಕೆ.ಮಾಲತಿ

ಮೈಸೂರು: ಭಾಷೆ ಮತ್ತು ಸಂಸ್ಕೃತಿಯು ತಲೆ ತಲೆಮಾರುಗಳಿಂದ ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾವಣೆಗೊಂಡು ಇಂದಿನ ಶ್ರೀಮಂತ ಸಂಸ್ಕೃತಿ ನಿರ್ಮಾಣವಾಗಿದ್ದು ಈ ರೀತಿ ನಮ್ಮ ಪೂರ್ವಿಕರ ಅಪಾರಜ್ಞಾನ ಜೀವನ ಕ್ರಮ ಸಂಸ್ಕೃತಿಯು ಉಳಿದು ಬೆಳೆಯಲು ನಮ್ಮಲ್ಲಿರುವ ಮಾತೃಭಾಷೆಯನ್ನು ಮಕ್ಕಳಿಗೆ ಎರವಲು ಮಾಡಿದಾಗ ಮಾತ್ರ ಸಮಾಜದ ಆಸ್ತಿಯಾಗಿ ಮಕ್ಕಳು ರೂಪುಗೊಳ್ಳುತ್ತಾರೆಂದು ಸಾಹಿತಿ ಡಾ.ಕೆ.ಮಾಲತಿ ಅಭಿಪ್ರಾಯಪಟ್ಟರು.

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಸಹಯೋಗದಲ್ಲಿ ಜಯನಗರದ

ನೇಗಿಲಯೋಗಿ ಮರುಳೇಶ್ವರ ಸೇವಾ ಭವನ ದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚಾರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಬಾಲ್ಯದಿಂದಲೇ ಕನ್ನಡವನ್ನು ಕಲಿಸುವ ನಿಟ್ಟಿನಲ್ಲಿ ಪೋಷಕರು ಚಿಂತನೆ ನಡೆಸೋಣ. ಯಾವುದೇ ವ್ಯಕ್ತಿ ತನ್ನ ಸಂಕಷ್ಟದ ಸಮಯದಲ್ಲಿದ್ದಾಗ ಮಾತ್ರ ಭಾಷೆಯೇ ಆತನಿಂದ ಹೊರಬರುತ್ತದೆ ಎಂದರು.

ಕನ್ನಡದೊಂದಿಗೆ ಇಂಗ್ಲಿಷ್ ಭಾಷೆಯನ್ನು ಮಕ್ಕಳಿಗೆ ಕಲಿಸೋಣ ಆದರೆ ನಮ್ಮ ಮಾತೃ ಭಾಷೆಯನ್ನು ಹೆಚ್ಚಾಗಿ ಬಳಸೋಣ. ನಮ್ಮ ಸಂಸ್ಕೃತಿ, ಪ್ರೀತಿ ಮೊದಲಾದ ಭಾವನೆಗಳು ವ್ಯಕ್ತ ಆಗುವುದು ನಮ್ಮ ಮಾತೃಭಾಷೆ ಕನ್ನಡದಿಂದಲೇ ಹೊರತು ಬೇರೆ ಯಾವುದೇ ಭಾಷೆಯಿಂದಲ್ಲ. ಮಕ್ಕಳ ದಿನಾಚರಣೆ ಹಾಗೂ ಕನ್ನಡ ರಾಜ್ಯೋತ್ಸವದ ನಿಮಿತ್ತ ಮಕ್ಕಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುವುದು ಸಂತೋಷದ ವಿಷಯವಾಗಿದ್ದು ಇಂತಹ ಸ್ಪರ್ಧೆ ಗಳ ಮೂಲಕ ಮಕ್ಕಳಲ್ಲಿ ನಾಡು ನುಡಿ, ಸಂಸ್ಕೃತಿಯ ಬಗ್ಗೆ ಮಕ್ಕಳಿಗೆ ಸ್ಫೂರ್ತಿಯ ಜೊತೆಗೆ ಭಾಷೆಯ ಬಗ್ಗೆ ನಾಡು ನುಡಿಯ ಬಗ್ಗೆ ಗೌರವ ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಕಾರ್ಯಕಾರ್ಯಕ್ರಮದಲ್ಲಿ ಭಾವಗೀತೆ ಸೀನಿಯರ್ ವಿಭಾಗದಲ್ಲಿ ರಾಜ ಎಸ್.ವಿಜಯನಂದ(ಪ್ರಥಮ), ಆರ್.ಸಾನ್ವಿ(ದ್ವಿತೀಯ) ಪುಣ್ಯ(ತೃತೀಯ), ಎನ್.ರಕ್ಷಾ ನಂದಿ(ಸಮಾಧಾನಕರ), ಜೂನಿಯರ್‌ವಿಭಾಗದಲ್ಲಿ ಎಸ್.ಅನುಷ್ಕ(ಪ್ರ), ಲಕ್ಷಣ(ದ್ವಿ), ಹಂಸಿನಿ ಎಂ. ವಸಿಷ್ಠ(ತೃ), ಪವನಶ್ರೀ(ಸ) ಪಡೆದರು.

ಚಿತ್ರಕಲಾ ಸ್ಪರ್ಧೆಯಲ್ಲಿ 12 ವರ್ಷ ದೊಳಗಿನ ವಿಭಾಗದಲ್ಲಿ ಮೌಲ್ಯ ಎಸ್ ಪ್ರಥಮ, ಗೋಕುಲ್ ಆರ್ಯನ್ ಬಿ ಪಿ ದ್ವಿತೀಯ ಮತ್ತು ಎನ್ ತನಿಷಾ ನಂದಿ ತೃತೀಯ ಹಾಗು 12 ರಿಂದ 15 ವರ್ಷ ಸ್ಪರ್ಧೆಯಲ್ಲಿ ಶಿರಿಷ ಉಡುಪ ಪ್ರಥಮ, ಜೀವಿಕ ದ್ವಿತೀಯ, ಅನೀಶ್ ಎಸ್ ತೃತೀಯ ಹಾಗು ಕುಶಾಲ್ ಆರ್‌ಸಮಾಧಾನಕರ ಬಹುಮಾನ ಪಡೆದರು.

ವೇಷಭೂಷಣ ಸ್ಪರ್ಧೆಯಲ್ಲಿ 5 ವರ್ಷದೊಳಗಿನ ವಿಭಾಗದಲ್ಲಿ ಅಲಕ್ಯ ದೀಪಕ್(ಪ್ರ), ಅನ್ವಿಕ(ದ್ವಿ), ಪ್ರತಿಕ್ ನೇಸರ(ತೃ), 9 ವರ್ಷದೊಳಗಿನ ವಿಭಾಗದಲ್ಲಿ ನಮ್ರತ(ಪ್ರ), ಅನನ್ಯ ದೀಪಕ್(ದ್ವಿ), ಮನಸ್ವಿ ಸಚ್ಚಿತ್ (ತೃ), ಪಿ. ಕುಶ್ವಿತ್(ಸ) ಪಡೆದುಕೊಂಡರು.

ರೈಲ್ವೇ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ ಬಿ. ಮಂಜೇಗೌಡ, ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಮುಖ್ಯ ಸಂಚಾಲಕಿ ಜೆ.ಶೋಭ, ಕನ್ನಡ ಉಪನ್ಯಾಸಕ ಡಾ.ನೀಗೂ ರಮೇಶ್, ಸಾಹಿತಿ ಶ್ಯಾಮೇಶ್ ಅತ್ತಿಗುಪ್ಪೆ, ಡಾ.ಮೀನಾ ಕುಮಾರಿ, ನೇಗಿಲಯೋಗಿ ಮುಖ್ಯಸ್ಥ ರವಿಕುಮಾರ್,ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ರಾಣಿ ಮಹೇಶ್, ವಿಜಯಲಕ್ಷ್ಮೀ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚಾರಣೆಯನ್ನು ಸಾಹಿತಿ ಡಾ.ಕೆ.ಮಾಲತಿ ಅವರು ಉದ್ಘಾಟಿಸಿದರು.

ಅಂಗನವಾಡಿಗಳ ಉನ್ನತೀಕರಣ

ಅಂಗನವಾಡಿ ಕೇಂದ್ರಗಳಿಗೆ ಶಾಸಕ ಕೆ.ಎಂ.ಉದಯ ಸ್ಮಾರ್ಟ್ ಎಲ್.ಇ.ಡಿ ಟಿ.ವಿ.ಗಳನ್ನು ವಿತರಿಸಿದರು.

ಮದ್ದೂರು: ತಾಲೂಕಿನಾದ್ಯಂತ ಶಿಥಿಲಗೊಂಡಿರುವ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಟ್ಟಡಗಳ ಉನ್ನತೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದು ಜತೆಗೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಬೇಕೆಂಬ ಉದ್ದೇಶದಿಂದ ಮೂಲ ಸೌಲಭ್ಯಕ್ಕೆ ಅಗತ್ಯ ಕ್ರಮ ವಹಿಸಿರುವುದಾಗಿ ಶಾಸಕ ಕೆ.ಎಂ.ಉದಯ ತಿಳಿಸಿದರು.

ಪಟ್ಟಣದ ಡಾಣ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಆಡಳಿತ ಆಯೋಜಿಸಿದ್ದ ಸಕ್ಷಮ್ ಅಂಗನವಾಡಿ ಕೇಂದ್ರಗಳಿಗೆ ಸ್ಮಾರ್ಟ್ ಎಲ್.ಇ.ಡಿ ಟಿ.ವಿ. ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ತಾಲೂಕಿನಲ್ಲಿ ಸುಮಾರು 408 ಅಂಗನವಾಡಿ ಕೇಂದ್ರಗಳಿದ್ದು ಕೆಲವು ಬಾಡಿಗೆ ಕಟ್ಟಡದಲ್ಲಿ ದುರಸ್ತಿ ಹಂತದಲ್ಲಿ ಹಾಗೂ ಶಿಥಿಲಾವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದ್ದು ಈ ಸಂಬಂಧ ಈಗಾಗಲೇ ಇಲಾಖಾ ಸಚಿವರೊಟ್ಟಿಗೆ ಚರ್ಚಿಸಿ ಹಂತ ಹಂತವಾಗಿ ಅನುದಾನ ಬಿಡುಗಡೆಗೊಳಿಸುವ ಭರವಸೆ ನೀಡಿದ್ದು ಅಂಗನವಾಡಿ ಕೇಂದ್ರಗಳ ಉನ್ನತೀಕರಣಕ್ಕೆ ಹೆಚ್ಚಿನ ಒತ್ತು ನೀಡಿರುವುದಾಗಿ ತಿಳಿಸಿದರು.

ಕೇಂದ್ರ ಮತ್ತು ರಾಜ್ಯ ಸರಕಾರವು ಪೋಷಣ್ ಅಭಿಯಾನವನ್ನು ಜಾರಿಗೆ ತಂದಿದ್ದು ಗರ್ಭಿಣಿ, ಬಾಣಂತಿಯರು ಹಾಗೂ ಮಕ್ಕಳಿಗೆ ಪೌಷ್ಠಿಕ ಅಂಶ ಆಹಾರವನ್ನು ಪೂರೈಕೆ ಮಾಡಲು ಮುಂದಾಗಿದ್ದು ಜತೆಗೆ ಅಪೌಷ್ಠಿಕತೆಯಿಂದ ಮುಕ್ತರನ್ನಾಗಿಸುವುದೇ ಅಭಿಯಾನದ ಮೂಲ ಉದ್ದೇಶವಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಪ್ರತಿ ಅಂಗನವಾಡಿ ಕೇಂದ್ರಗಳಿಗೆ ಆಧುನಿಕ ಮೂಲ ಸೌಲಭ್ಯ, ತಾಂತ್ರಿಕತೆಯ ಸ್ಪರ್ಶ,ಪೌಷ್ಠಿಕಾಂಶಯುಕ್ತ ಆಹಾರ ವಿತರಣೆ ಮತ್ತು ಮೂರರಿಂದ ಆರು ವರ್ಷದ ಮಕ್ಕಳಿಗೆ ಪ್ರಾಯಪೂರ್ವ ರಕ್ಷಣೆ ಮತ್ತು ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರಗಳನ್ನು ಸಕ್ಷಮ್ ಅಂಗನವಾಡಿ ಮತ್ತು ಮಿಷನ್ ಪೋಷಣ್ ಎಂದು ಘೋಷಿಸಲಾಗಿದೆ ಎಂದರು.

ಈ ವೇಳೆ ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಚಲುವರಾಜು, ಬಿ.ಇ.ಒ. ಅರುಣ್ಕುಮಾರ್ ,ತಾ.ಪಂ. ಸಂಯೋಜನಾಧಿಕಾರಿ ಸುರೇಶ್, ಸಿ.ಡಿ.ಪಿ.ಓ ಅರುಣ್ಕುಮಾರ್,ಆರೋಗ್ಯಾಧಿಕಾರಿ ಡಾ. ರವಿಶಂಕರ್,ಎ.ಸಿ.ಡಿ.ಪಿ.ಓ ಆರ್.ಪುಷ್ಪ, ಮೇಲ್ವಿಚಾರಕಿ ಸುಜಾತ, ಭಾಗ್ಯ, ರಾಜೇಶ್ವರಿ, ಸುನೀತಾ, ಜಯಲಕ್ಷ್ಮೀ ಉಮಾ ಇತರರಿದ್ದರು.

ನ.20ಕ್ಕೆ ಚಾಮರಾಜನಗರಕ್ಕೆ ಸಿಎಂ ಸಿದ್ದರಾಮಯ್ಯ ಆಗಮನ

ಚಾಮರಾಜನಗರ: ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ ಇದೇ ನವೆಂಬರ್20ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್‌ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಸಮಾರಂಭ ಉದ್ಘಾಟಿಸಲು ಆಗಮಿಸುತ್ತಿದ್ದು, ಇದಕ್ಕಾಗಿ ಸಕಲ ಸಿದ್ದತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಪಶುಸಂಗೋಪನೆ, ರೇಷ್ಮೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭಕ್ಕಾಗಿ ಮುಖ್ಯಮಂತ್ರಿಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭವನ್ನು ನವೆಂಬರ್20ರಂದು ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದಾರೆ. ಬಹುಮುಖ್ಯವಾದ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಧುರೀಣರು, ಸದಸ್ಯರು, ಸಾರ್ವಜನಿಕರು ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಯಾವುದೇ ಲೋಪ, ಕೊರತೆಗೆ ಅವಕಾಶವಾಗದಂತೆ ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜನೆ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.

ಗಣ್ಯರು, ಸಾರ್ವಜನಿಕರು ಸೇರಿದಂತೆ ಎಲ್ಲರಿಗೂ ಸೂಕ್ತ ಆಸನಗಳ ವ್ಯವಸ್ಥೆಯಾಗಬೇಕು. ಆಕರ್ಷಕ ವೇದಿಕೆ, ಅಲಂಕಾರ, ಭದ್ರತೆ, ವಾಹನಗಳ ನಿಲುಗಡೆ, ಸ್ವಚ್ಛತೆ, ಮುಖ್ಯಮಂತ್ರಿಗಳು, ಗಣ್ಯರನ್ನು ಸ್ವಾಗತಿಸಲು ಕಲಾತಂಡಗಳ ನಿಯೋಜನೆ ಸೇರಿದಂತೆ ಪ್ರತಿಯೊಂದು ಕಾರ್ಯವನ್ನು ಜವಾಬ್ದಾರಿಯುತವಾಗಿ ಅಧಿಕಾರಿಗಳು ನಿರ್ವಹಿಸಬೇಕು ಎಂದರು.

ಹೆಚ್ಚಿನ ಜನರು ಕಾರ್ಯಕ್ರಮಕ್ಕೆ ಬರಲಿರುವ ಹಿನ್ನೆಲೆಯಲ್ಲಿ ಉಪಹಾರ, ಕುಡಿಯುವ ನೀರು ಪೂರೈಕೆ ಸಮರ್ಪಕವಾಗಿರಬೇಕು. ನೆರಳಿನ ವ್ಯವಸ್ಥೆ, ವಾಹನಗಳ ಸಂಚಾರ, ಎಲ್.ಇ.ಡಿಗಳ ಅಳವಡಿಕೆ ಮಾಡಬೇಕು. ಅಗತ್ಯವಿರುವ ವಾಹನಗಳನ್ನು ನಿಯೋಜನೆ ಮಾಡಬೇಕು. ಶಿಷ್ಟಾಚಾರ ಪಾಲನೆಯಾಗಬೇಕು. ಎಲ್ಲರಿಗೂ ಆಹ್ವಾನ ಪತ್ರಿಕೆಗಳನ್ನು ಖುದ್ದು ತಲುಪಿಸಬೇಕು ಎಂದು ಸಚಿವರು ತಿಳಿಸಿದರು.

ಕಾರ್ಯಕ್ರಮದ ಆಯೋಜನೆಗಾಗಿ ರಚಿಸಲಾಗಿರುವ ವಿವಿಧ ಸಮಿತಿಗಳ ಅಧಿಕಾರಿಗಳು ತಮಗೆ ವಹಿಸಲಾಗಿರುವ ಜವಾಬ್ದಾರಿಯನ್ನು ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ನಿರ್ವಹಿಸಬೇಕು. ಉದಾಸೀನ ಮಾಡದೇ ಸಮನ್ವಯದಿಂದ ಮುತುವರ್ಜಿ ವಹಿಸಿ ಎಲ್ಲ ವ್ಯವಸ್ಥೆಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಶಾಸಕರು, ಗಣ್ಯರು, ಅಧಿಕಾರಿಗಳೊಂದಿಗೆ ಸಮಾರಂಭ ನಡೆಯಲಿರುವ ಡಾ. ಬಿ.ಆರ್. ಅಂಬೇಡ್ಕರ್‌ಕ್ರೀಡಾಂಗಣಕ್ಕೆ ಭೇಟಿ ನೀಡಿ ಸಿದ್ದತೆಗಳನ್ನು ಪರಿಶೀಲಿಸಿದರು. ವೇದಿಕೆ, ಸಭಿಕರ ಆಸನಗಳು, ಗಣ್ಯರ ಆಗಮನದ ಮಾರ್ಗ ಇನ್ನಿತರ ವ್ಯವಸ್ಥೆಗಳನ್ನು ವ್ಯಾಪಕವಾಗಿ ವೀಕ್ಷಿಸಿ, ಅಗತ್ಯ ಸೂಚನೆಗಳನ್ನು ನೀಡಿದರು.

ಎಂ.ಎಸ್.ಐ.ಎಲ್. ಅಧ್ಯಕ್ಷ ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಹೆಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್. ವಿ. ಚಂದ್ರು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ರಾಜ್ಯ ಸಹಕಾರ ಸಂಘಗಳ ನಿಬಂಧಕ ಟಿ. ಹೆಚ್.ಎಂ. ಕುಮಾರ್,ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಎಂ. ನಂಜುಂಡಸ್ವಾಮಿ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್. ನಂಜುಂಡಪ್ರಸಾದ್, ಚಾಮುಲ್ ನಿರ್ದೇಶಕರಾದ ಉದ್ದನೂರು ಪ್ರಸಾದ್, ಸದಾಶಿವಮೂರ್ತಿ,ಸಾಹುಲ್ ಅಹಮದ್, ನಾಗೇಂದ್ರ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ನ ಆಡಳಿತಾಧಿಕಾರಿ ಕೆ.ಎಂ ಆಶಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಆರ್.ಜೆ. ಕಾಂತರಾಜು, ಕಾರ್ಯಕ್ರಮದ ನೋಡಲ್ ಅಧಿಕಾರಿ ಹೆಚ್. ಬಾಲಶೇಖರ್,ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿರ್ದೇಶಕರಾದ ಸಿ. ಪ್ರಸಾದ್ ರೆಡ್ಡಿ, ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕ ಜಿ.ಸಿ. ಜ್ಯೋತಿ ಅರಸ್, ಚಾಮುಲ್ ವ್ಯವಸ್ಥಾಪಕ ನಿರ್ದೇಶಕರಾದ ಕೆ. ರಾಜ್ ಕುಮಾರ್,ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಸುರೇಶ್, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಸಚಿವ ಕೆ. ವೆಂಕಟೇಶ್ ಅವರು ಮಾತನಾಡಿದರು.

ಬಾಂಗ್ಲಾ ದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರಿಗೆ 'ಮಾನವೀಯತೆಯ ವಿರುದ್ಧದ ಅಪರಾಧ'ಗಳಿಗಾಗಿ ಢಾಕಾ ನ್ಯಾಯಾಲಯವು ಮರಣದಂಡನೆ ಶಿಕ್ಷೆಯನ್ನು ಪ್ರಕಟಿಸಿದೆ. ಇದರ ಬೆನ್ನಿಗೇ ಹಸೀನಾ ಅವರನ್ನು ತನಗೊಪ್ಪಿಸುವಂತೆ ಬಾಂಗ್ಲಾದೇಶ ಭಾರತಕ್ಕೆ ತಾಕೀತು ಮಾಡಿದೆ. ಭಾರತಕ್ಕಿದು ಇಕ್ಕಟ್ಟಿನ ಪರಿಸ್ಥಿತಿ. ಪ್ರಧಾನಿಯಾಗಿದ್ದಾಗ ಭಾರತದ ಜತೆ ಸೌಹಾರ್ದ ಸಂಬಂಧಕ್ಕೆ ಸಹಕರಿಸಿದ್ದ ಹಸೀನಾ ಅವರನ್ನು ಬಾಂಗ್ಲಾ ಕೈಗೆ ಒಪ್ಪಿಸಿದರೆ ಕಟುಕರ ಕೈಗೆ ಕುರಿಯನ್ನು ಕೊಟ್ಟಂತೆ. ಹಸ್ತಾಂತರ ಮಾಡದೇ ಹೋದರೆ ಈಗಾಗಲೇ ಹದಗೆಟ್ಟಿರುವ ಉಭಯ ರಾಷ್ಟ್ರಗಳ ಸಂಬಂಧ ಮತ್ತಷ್ಟು ವಿಷಮಿಸಬಹುದು. ಭಾರತಕ್ಕಿದು ಅತ್ತ ದರಿ,ಇತ್ತ ಹುಲಿ ಸನ್ನಿವೇಶ. ಈ ಬೆಳವಣಿಗೆಯ ಬಗ್ಗೆ ಒಂದಷ್ಟು ಮಾಹಿತಿಗಳು ಇಲ್ಲಿವೆ.

ಹಸೀನಾಗೆ ಗಲ್ಲು, ಕುಣಿಕೆ ಭಾರತಕ್ಕೆ!

ಮರಣದಂಡನೆಗೆ ಕಾರಣ ಏನು ?

ಮಾಜಿ ಪ್ರಧಾನಿ ಶೇಖ್ ಹಸೀನಾ 2024ರ ವಿದ್ಯಾರ್ಥಿ ದಂಗೆಯ ಸಮಯದಲ್ಲಿ, ಡ್ರೋನ್, ಹೆಲಿಕಾಪ್ಟರ್ ಮತ್ತು ಮಾರಕ ಶಸ್ತ್ರಾಸ್ತ್ರಗಳನ್ನು ಬಳಸಿ ಪ್ರತಿಭಟನಾಕಾರರ ಹತ್ಯೆಗೆ ಆದೇಶ ನೀಡಿದ್ದಾರೆ ಎನ್ನುವುದು ಪ್ರಮುಖ ಆರೋಪ. ಪ್ರತಿಭಟನೆಗಳ ಸಮಯದಲ್ಲಿ ನಡೆದ ಕೊಲೆಗಳು ಮತ್ತು ದೌರ್ಜನ್ಯಗಳ ತಡೆಗೆ ಹಸೀನಾ ಯಾವುದೇ ಕ್ರಮ ಕೈಗೊಂಡಿಲ್ಲ ಎನ್ನುವುದು ಎರಡನೇ ಆರೋಪ. ಹಸೀನಾ ಅವರ ಪದಚ್ಯುತಿ ಮತ್ತು ದೇಶಭ್ರಷ್ಟತೆಗೆ ಕಾರಣವಾದ ಈ ಹಿಂಸಾತ್ಮಕ ಪ್ರಕರಣದಲ್ಲಿ 1,400 ಜನರು ಸಾವನ್ನಪ್ಪಿದ್ದಾರೆ ಮತ್ತು ಸಾವಿರಾರು ಜನರು ಗಾಯಗೊಂಡಿದ್ದಾರೆ ಎಂದು ಅಂದಾಜಿಸಲಾಗಿದೆ. ಮುಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶದ ಮಧ್ಯಂತರ ಸರಕಾರವು ಈ ಸಾವಿಗೆ ಹಸೀನಾ ಅವರೇ ಕಾರಣ ಎಂದು ದೋಷಾರೋಪದಲ್ಲಿ ತಿಳಿಸಿದೆ.

ನೆರೆ ದೇಶದಲ್ಲಿ ನರಮೇಧ ಹೊಸದೇನಲ್ಲ



ನೆರೆಯ ಪಾಕಿಸ್ತಾನದಂತೆ ಬಾಂಗ್ಲಾದಲ್ಲೂ ರಾಜಕೀಯ ಹತ್ಯೆ, ಕ್ಷಿಪ್ರ ಕ್ರಾಂತಿ ಹೊಸದೇನಲ್ಲ. ಬಾಂಗ್ಲಾ ದೇಶದ ಜನಕ, ಮೊದಲ ಅಧ್ಯಕ್ಷ, ಶೇಖ್ ಹಸೀನಾ ಅವರ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರನ್ನು 1975ರ ಆಗಸ್ಟ್ 15ರಂದು ಅವರ ಕುಟುಂಬದ ಬಹುತೇಕ ಸದಸ್ಯರೊಂದಿಗೆ ಹತ್ಯೆ ಮಾಡಲಾಯಿತು. ಇದರ ಬೆನ್ನಿಗೇ 1975ರ ನವೆಂಬರ್ 3ರಂದು ಢಾಕಾ ಕೇಂದ್ರ ಕಾರಾಗೃಹ ದಲ್ಲಿ ಮುಜಿಬುರ್ ಅವರ ಜತೆಗೆ ನಿಂತ ನಾಯಕರನ್ನು ಸಾಮೂಹಿಕವಾಗಿ ಹತ್ಯೆ ಮಾಡಲಾಯಿತು. 1981 ಮೇ 30ರಂದು ಚಿತ್ತಗಾಂಗ್‌ನಲ್ಲಿ ನಡೆದ ಮತ್ತೊಂದು ಸೇನಾ ದಂಗೆಯಲ್ಲಿ ಅಧ್ಯಕ್ಷ ಜಿಯಾವುರ್ ರೆಹಮಾನ್ ಕೊಲೆಯಾಗಿದ್ದರು. ಶೇಖ್ ಹಸೀನಾ ಸರಕಾರವೇ ಸ್ಥಾಪಿಸಿದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ 1971 ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಾಂಗ್ಲಾ ವಿರುದ್ಧ ನಿಂತ ಆರೋಪದಲ್ಲಿ ಜಮಾತೆ ಇಸ್ಲಾಮಿ ನಾಯಕರಾದ ಮತಿಯುರ್ ರೆಹಮಾನ್ ನಿಜಾಮಿ, ಅಬ್ದುಲ್ ಕ್ವಾದರ್ ಮೊಲ್ಲಾ ಅವರನ್ನು ನೇಣುಗಂಬಕ್ಕೇರಿಸಿತ್ತು.

ಹಸೀನಾ ಭಾರತಕ್ಕೆ ಓಡಿ ಬಂದಿದ್ದೇಕೆ ?

ಶೇಖ್ ಹಸೀನಾ ಅವರು ಕಳೆದ 15 ವರ್ಷಗಳಿಂದ ಬಾಂಗ್ಲಾದೇಶದ ಪ್ರಧಾನಿಯಾಗಿದ್ದರು. 2024ರ ಜುಲೈ-ಆಗಸ್ಟ್ ತಿಂಗಳುಗಳಲ್ಲಿ, ದೇಶದಲ್ಲಿ ಸರಕಾರಿ ಉದ್ಯೋಗಗಳ ಮೇಲಿನ ಮೀಸಲಾತಿಯನ್ನು ವಿರೋಧಿಸಿ ವಿದ್ಯಾರ್ಥಿ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಭುಗಿಲೆದ್ದಿತ್ತು. ಅಂತಿಮವಾಗಿ ಈ ಪ್ರತಿಭಟನೆಯು ರಾಜಕೀಯ ಅರಾಜಕತೆಗೆ ಕಾರಣವಾಗಿತ್ತು. ಪ್ರತಿಭಟನಾಕಾರರು ಅಧ್ಯಕ್ಷರ ಭವನಕ್ಕೆ ನುಗ್ಗಿ ದಾಂಧಲೆ ಎಬ್ಬಿಸಿದ್ದರು. ಕೊನೆಯ ಕ್ಷಣದಲ್ಲಿ ಹಸೀನಾ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ (ಆಗಸ್ಟ್ 5, 2024) ಜೀವ ಉಳಿಸಿಕೊಳ್ಳಲು ಹೆಲಿಕಾಪ್ಟರ್ ಮೂಲಕ ಭಾರತಕ್ಕೆ ಓಡಿ ಬಂದಿದ್ದರು.

ಹಸೀನಾ ಮೇಲೆ ಸಿಟ್ಟೇಕೆ ?

ತಮ್ಮ ಸರಕಾರದ ಪದಚ್ಯುತಿಯಲ್ಲಿ ಅಮೆರಿಕದ ಕೈವಾಡವಿದೆ ಎಂದು ಹಸೀನಾ ಆರೋಪಿಸಿದ್ದರು. ಬಾಂಗ್ಲಾದಲ್ಲಿ ಅಮೆರಿಕ ಸೇನಾ ನೆಲೆಗೆ ಅವಕಾಶ ನಿರಾಕರಿಸಿದ್ದಕ್ಕಾಗಿ ಟ್ರಂಪ್ ಸರಕಾರ ವಿದ್ಯಾರ್ಥಿಗಳ ದಂಗೆಗೆ ಕುಮ್ಮಕ್ಕು ನೀಡಿ ತಮ್ಮ ಸರಕಾರದ ಪತನಕ್ಕೆ ಕಾರಣರಾದರೆಂದು ಹಸೀನಾ ಮಾಧ್ಯಮ ಸಂದರ್ಶನದಲ್ಲಿ ದೂರಿದ್ದರು. ಇದಕ್ಕೆ ಪುಷ್ಟಿ ನೀಡುವಂತೆ ಬಾಂಗ್ಲಾದಲ್ಲಿ ಅಮೆರಿಕ ಸರಕಾರಕ್ಕೆ ನಿಕಟವರ್ತಿಯಾಗಿರುವ ನೊಬೆಲ್ ಪ್ರಶಸ್ತಿ ವಿಜೇತ ಮುಹಮ್ಮದ್ ಯೂನುಸ್ ನೇತೃತ್ವದಲ್ಲಿ ಮಧ್ಯಂತರ ಸರಕಾರ ಅಧಿಕಾರ ರಚನೆಯಾಗಿತ್ತು. ಇದರ ಬೆನ್ನಿಗೇ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷದ ಚಟುವಟಿಕೆಗಳಿಗೆ ಸರಕಾರ ನಿಷೇಧ ಹೇರಿತ್ತು. ಭವಿಷ್ಯದಲ್ಲಿ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧ ಹೇರಿತ್ತು.

ರಾಜಕೀಯ ಒತ್ತಾಸೆಯೇನು ?

ಶೇಖ್ ಹಸೀನಾಗೆ ಗಲ್ಲು ಶಿಕ್ಷೆ ವಿಧಿಸಿ ನೀಡಲಾದ ತೀರ್ಪು ರಾಜಕೀಯ ಪ್ರೇರಿತ ಎನ್ನುವುದು ಎಲ್ಲೆಡೆ ಕೇಳಿ ಬರುತ್ತಿರುವ ಮಾತು. ಹಸೀನಾ ಅವರ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ತೀರ್ಪು ನೀಡಲಾಗಿದೆ. ನ್ಯಾಯಮಂಡಳಿಯ ತೀರ್ಪು ಪಕ್ಷಪಾತದಿಂದ ಕೂಡಿದೆ ಮತ್ತು ರಾಜಕೀಯ ಪ್ರೇರಿತವಾಗಿದೆ ಎಂದು ಹಸೀನಾ ಹೇಳಿದ್ದಾರೆ. ಮುಹಮ್ಮದ್ ಯೂನುಸ್ ನೇತೃತ್ವದ ಸರಕಾರ ತಮ್ಮ ರಾಜಕೀಯ ಪ್ರತಿಸ್ಪರ್ಧಿಯಾದ ಹಸೀನಾ ಅವರನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಮತ್ತು ಮುಂಬರುವ ಚುನಾವಣೆಗಳಲ್ಲಿ ಅವಾಮಿ ಲೀಗ್ ಅನ್ನು ರಾಜಕೀಯ ಶಕ್ತಿಯಾಗಿ ಅಳಿಸಿಹಾಕಲು ಈ ವಿಚಾರಣೆಯನ್ನು ಬಳಸಲಾಗಿದೆ ಎನ್ನುವುದು ಕೇಳಿ ಬರುತ್ತಿರುವ ಮಾತು. ಹಸೀನಾ ವಿರುದ್ಧ ದೇಶದ್ರೋಹದ ಆರೋಪ ಹೊರಿಸಿ ವಿಚಾರಣೆ ಆರಂಭಿಸಲಾಗಿತ್ತು. ಬಾಂಗ್ಲಾದೇಶ ಹುಟ್ಟಿನಿಂದಲೂ ಆರಂಭ ವಾದ ರಾಜಕೀಯ ವೈರತ್ವ ಈಗಲೂ ಮುಂದುವರಿದಿದೆ.



ಮೇಲ್ಮನವಿಗೆ ಅವಕಾಶ ಇದೆಯೇ

1971ರ ಯುದ್ಧಾಪರಾಧಕ್ಕೆ ಸಂಬಂಧಿಸಿದ ವಿಚಾರಣೆಗಾಗಿ ಹಸೀನಾ ಸರಕಾರವೇ ಸ್ಥಾಪಿಸಿದ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಕಾಯಿದೆಯಡಿ ಹಸೀನಾ ಅವರಿಗೆ ಶಿಕ್ಷೆ ನೀಡಲಾಗಿದೆ. ಈ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಬೇಕಾದರೆ ಹಸೀನಾ ಮೊದಲು ಬಾಂಗ್ಲಾದೇಶಕ್ಕೆ ತೆರಳಿ ಅಧಿಕಾರಿಗಳ ಮುಂದೆ ಶರಣಾಗಬೇಕು. ಇದು ಅಸಂಭವ ಎನ್ನಲಾಗಿದೆ. ಹಸೀನಾ ಜತೆ ಆಗಿನ ಗೃಹ ಸಚಿವ ಅಸಾದುಜ್ಜಮಾನ್ ಖಾನ್ ಕಮಲ್ ಅವರಿಗೂ ಮರಣದಂಡನೆ ಶಿಕ್ಷೆ ವಿಧಿಸಲಾಗಿದೆ. ಆಗಿನ ಪೊಲೀಸ್ ಮಹಾನಿರೀಕ್ಷಕರಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ಭಾರತ ಗಡಿಪಾರು ಮಾಡುವುದೇ?

ಸದ್ಯದ ರಾಜಕೀಯ ಮತ್ತು ಕಾನೂನು ಪರಿಸ್ಥಿತಿಗಳನ್ನು ಗಮನಿಸಿದರೆ, ಭಾರತವು ಶೇಖ್ ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಗಡಿಪಾರು ಮಾಡುವ ಸಾಧ್ಯತೆಗಳು ಬಹಳ ಕಡಿಮೆ ಇವೆ. ಈ ವಿಷಯದಲ್ಲಿ ಭಾರತವು ತೆಗೆದುಕೊಳ್ಳುವ ನಿರ್ಧಾರವು ಕೇವಲ ಕಾನೂನಿನ ಮೇಲಲ್ಲದೆ, ಪ್ರಾದೇಶಿಕ ಭದ್ರತೆ ಮತ್ತು ದೀರ್ಘಕಾಲೀನ ರಾಜತಾಂತ್ರಿಕ ಹಿತಾಸಕ್ತಿಗಳನ್ನು ಅವಲಂಬಿಸಿದೆ. ಭಾರತದ ಗಡಿಪಾರು ಕಾನೂನು ಪ್ರಕಾರ ಮರಣದಂಡನೆ ಶಿಕ್ಷೆ ಎದುರಿಸುತ್ತಿರುವವರನ್ನು ಕಳುಹಿಸುವ ಮೊದಲು, ಅವರ ಶಿಕ್ಷೆಯನ್ನು ಜೀವಾವಧಿಗೆ ಇಳಿಸಲು ಇಲ್ಲವೇ ಮರಣದಂಡನೆಯನ್ನು ಜಾರಿಗೊಳಿಸುವುದಿಲ್ಲ ಎಂಬ ಖಾತರಿಯನ್ನು ಪಡೆದುಕೊಳ್ಳಬೇಕಾಗಿದೆ.

ಗಡಿಪಾರು ಒಪ್ಪಂದಗಳು ಸಾಮಾನ್ಯವಾಗಿ ರಾಜಕೀಯ ಅಪರಾಧಗಳನ್ನು ಗಡಿಪಾರಿನ ವ್ಯಾಪ್ತಿಯಿಂದ ಹೊರಗಿಡುತ್ತವೆ. ಹಸೀನಾ ಮೇಲಿನ ಆರೋಪಗಳು ಗಂಭೀರವಾಗಿದ್ದರೂ, ಭಾರತ ಇದನ್ನು ರಾಜಕೀಯ ಸ್ವರೂಪದ ಅಪರಾಧ ಎಂದು ಪರಿಗಣಿಸುವ ಸಾಧ್ಯತೆ ಇದೆ. ಭಾರತವು ಹಸೀನಾ ಅವರಿಗೆ ಭಾರತದಲ್ಲಿ ರಾಜಕೀಯ ಆಶ್ರಯ ನೀಡಲು ನಿರ್ಧರಿಸಿದರೆ ಅವರನ್ನು ಗಡಿಪಾರು ಮಾಡಲು ಸಾಧ್ಯವಾಗುವುದಿಲ್ಲ. ಸದ್ಯದ ಮಟ್ಟಿಗೆ, ಭಾರತವು ಹಸೀನಾ ರಕ್ಷಣೆ ನೀಡುತ್ತಲೇ ಬಾಂಗ್ಲಾದೇಶದ ಮಧ್ಯಂತರ ಸರಕಾರದೊಂದಿಗೆ ರಾಜತಾಂತ್ರಿಕವಾಗಿ ಪರಿಸ್ಥಿತಿಯನ್ನು ನಿಭಾಯಿಸುವ ಸಾಧ್ಯತೆಗಳು ಹೆಚ್ಚು.

ಸಂಬಂಧಕ್ಕೆ ಧಕ್ಕೆ ಆಗಬಹುದೇ?

ಇಡೀ ಬೆಳವಣಿಗೆಯು ಭಾರತ-ಬಾಂಗ್ಲಾದೇಶ ಸಂಬಂಧಗಳ ಮೇಲೆ ಗಮನಾರ್ಹ ಪರಿಣಾಮ ಬೀರುವ ಸಾಧ್ಯತೆ ಇದೆ. ಹಸೀನಾ ಅವರನ್ನು ಗಡಿಪಾರು ಮಾಡಲು ನಿರಾಕರಿಸಿದರೆ, ಈಗಾಗಲೇ ಪಾಕ್ ಪರ ವಾಲಿರುವ ಬಾಂಗ್ಲಾ ಮಧ್ಯಂತರ ಸರಕಾರ ಇದನ್ನೇ ನೆಪವಾಗಿಟ್ಟುಕೊಂಡು ಭಾರತ ವಿರೋಧಿ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡಬಹುದು. ಭಯೋತ್ಪಾದನೆ ಮತ್ತು ಗಡಿ ನುಸುಳುವಿಕೆ ವಿರುದ್ಧದ ಕಾರ್ಯಾಚರಣೆಯಲ್ಲಿ ಅಲ್ಲಿನ ಸರಕಾರ ಸಹಕರಿಸದೇ ಹೋದರೆ ಈಶಾನ್ಯ ಭಾರತದ ಭದ್ರತೆಗೆ ಸವಾಲು ಎದುರಾಗಬಹುದು.

ಮುಂದೇನಾಗಬಹುದು ?

ಭಾರತವು ಅವರಿಗೆ ರಾಜಕೀಯ ಆಶ್ರಯವನ್ನು ಮುಂದುವರಿಸುವುದರಿಂದ, ಅವರ ಗಡಿಪಾರು ಕುರಿತು ತಕ್ಷಣಕ್ಕೆ ಯಾವುದೇ ನಿರ್ಧಾರ ಹೊರಬೀಳುವ ಸಾಧ್ಯತೆ ಕಡಿಮೆ. ಭಾರತವು ಬಾಂಗ್ಲಾದೇಶದ ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಪಿನವರೆಗೆ ಕಾಯುವ ಸಾಧ್ಯತೆ ಇದೆ. ಹಸೀನಾ ಅವರ ಪರ ವಕೀಲರು (ಅವರ ಪರವಾಗಿ) ಬಾಂಗ್ಲಾದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ಸಾಧ್ಯತೆ ಇದೆ. ಬಾಂಗ್ಲಾದೇಶದ ಮುಂದಿನ ಚುನಾವಣೆಯಲ್ಲಿ ಹಸೀನಾ ಅವರ ಅವಾಮಿ ಲೀಗ್ ಪಕ್ಷ ಸ್ಪರ್ಧಿಸದ ಕಾರಣ ಭಾರತ ಪರ ಸರಕಾರ ರಚನೆಯಾಗುವ ಅವಕಾಶ ಕಡಿಮೆ. ಒಂದು ವೇಳೆ ಪ್ರಬಲ ವಿರೋಧ ಪಕ್ಷ ರಚನೆಯಾದರೆ ಹಸೀನಾ ವಿರುದ್ಧದ ಶಿಕ್ಷೆಗೆ ತಡೆ ಬೀಳುವ ನಿರೀಕ್ಷೆ ಇದೆ.

ಅಂಜನಾದ್ರಿಯಲ್ಲಿ ಸಕಲ ಸಿದ್ಧತೆಗೆ ತಂಗಡಗಿ ಸೂಚನೆ | ಡಿ.2, 3ರಂದು ಕಾರ್ಯಕ್ರಮ

ಹನುಮಮಾಲಾ ವಿಸರ್ಜನೆಗೆ ಲಕ್ಷಾಂತರ ಜನರ ನಿರೀಕ್ಷೆ

ಕೊಪ್ಪಳ: ಜಿಲ್ಲೆಯ ಅಂಜನಾದ್ರಿ ಬೆಟ್ಟದಲ್ಲಿ ಡಿ.2 ಮತ್ತು ಡಿ.3ರಂದು ನಡೆಯಲಿರುವ ಹನುಮಮಾಲಾ ವಿಸರ್ಜನೆಗೆ ಲಕ್ಷಾಂತರ ಮಂದಿ ಆಗಮಿಸುವ ಹಿನ್ನೆಲೆಯಲ್ಲಿ ಅಗತ್ಯ ಮೂಲ ಸೌಲಭ್ಯ, ಹಾಗೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಅಚ್ಚುಕಟ್ಟಿನ ಕ್ರಮವಹಿಸುವಂತೆ ಜಿಲ್ಲಾಡಳಿತಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್. ಎಸ್.ತಂಗಡಗಿ ಸೂಚಿಸಿದರು.

ಸಿಇಒ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಎರಡ್ಮೂರು ದಿನ ಸ್ಥಳದಲ್ಲಿಯೇ ಮೊಕ್ಕಾಂ ಹೂಡಬೇಕು. ಇನ್ನು ಜಿಲ್ಲೆಯ ಏಳು ತಹಸೀಲ್ದಾರ್‌ಗಳು ಪೂರ್ವ ಸಿದ್ಧತೆಯಿಂದ ಹಿಡಿದು ಕಾರ್ಯಕ್ರಮ ಪೂರ್ಣಗೊಳ್ಳುವವರೆಗೆ ಗಂಗಾವತಿಯಲ್ಲಿಯೇ ಇದ್ದು, ಕೆಲಸ ಮಾಡಬೇಕು.

-ಶಿವರಾಜ ತಂಡಗಿ, ಸಚಿವ

ಗಂಗಾವತಿ ಮುನ್ಸಿಪಾಲಿಟಿ ಸಭಾಂಗಣದಲ್ಲಿ ಸೋಮವಾರ ಈ ಸಂಬಂಧ ಅಧಿಕಾರಿಗಳ ಜತೆ ಶಿವರಾಜ ತಂಗಡಗಿ ಸಭೆ ನಡೆಸಿದರು. ರಾಜ್ಯದ ನಾನಾ ಜಿಲ್ಲೆಗಳ ಭಕ್ತರು ಹನುಮಮಾಲೆ ಧರಿಸಿ ತಿಂಗಳವರೆಗೆ ಕಠಿಣ ವ್ರತ ಕೈಗೊಂಡು ಮಾಲೆಯ ವಿಸರ್ಜನೆಗಾಗಿ ಅಂಜನಾದ್ರಿ ಬೆಟ್ಟಕ್ಕೆ ಆಗಮಿಸಲಿದ್ದಾರೆ. ಇಡೀ ಗಂಗಾವತಿಯಲ್ಲಿ ಪೊಲೀಸರು ಹದ್ದಿನ ಕಣ್ಣಿಡಬೇಕು. ಅಂಜನಾದ್ರಿ ಸಂಪರ್ಕಿಸುವ ಕಾರಟಗಿ, ಕನಕಗಿರಿ, ಕೊಪ್ಪಳ, ಹೊಸಪೇಟೆ ರಸ್ತೆ ಸೇರಿದಂತೆ ಹಲವೆಡೆ ಚೆಕ್‌ಪೋಸ್ಟ್ ನಿರ್ಮಾಣ ಮಾಡಬೇಕು. ಇಡೀ ತಾಲೂಕಿನಲ್ಲಿ ಪೊಲೀಸರು ನಿರಂತರವಾಗಿ ಗಸ್ತು ತಿರುಗಬೇಕು. ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದರೆ ಮುಲಾಜಿಲ್ಲದೆ, ವಶಕ್ಕೆ ಪಡೆಯಿರಿ ಎಂದು ತಾಕೀತು ಮಾಡಿದರು.

ವಾಹನ ಪಾರ್ಕಿಂಗ್ ನಿರ್ವಹಣಾ ಸಮಿತಿ, ಆಹಾರ ಪರಿಶೀಲನಾ ಸಮಿತಿ, ವಿದ್ಯುತ್ ದೀಪಗಳ ಅಲಂಕಾರ, ಸಹಾಯವಾಣಿ, ರಸ್ತೆ ನಿರ್ಮಾಣ, ಅರಣ್ಯ ಸಮಿತಿ ಸೇರಿದಂತೆ ಈಗಾಗಲೇ 20 ಸಮಿತಿಗಳನ್ನು ರಚಿಸಲಾಗಿದ್ದು, ಒಂದು ಸುತ್ತಿನ ಸಭೆಯನ್ನು ಕೂಡ ನಡೆಸಿದ್ದಾರೆ ಎಂದು ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ ಅವರು ಇದೇ ವೇಳೆ ಸಚಿವರ ಗಮನಕ್ಕೆ ತಂದರು.

ಟ್ರಾಫಿಕ್ ತಡೆಗೆ ಸರಕಾರಿ ಬಸ್ ವ್ಯವಸ್ಥೆ: ಅಂಜನಾದ್ರಿಗೆ ಆಗಮಿಸುವ ಭಕ್ತಾದಿಗಳನ್ನು ಕರೆ ತರುವ ಖಾಸಗಿ ಸಾರಿಗೆ ಹಾಗೂ ಖಾಸಗಿ ವಾಹನಗಳನ್ನು ಸ್ವಲ್ಪ ಹಿಂದೆಯೇ ನಿಲ್ಲಿಸಿ, ಅಲ್ಲಿಂದ ಸರಕಾರಿ ಮಿನಿ ಬಸ್‌ಗಳಲ್ಲಿ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಿ. ಇದರಿಂದ ಅನಗತ್ಯ ವಾಹನದಟ್ಟಣೆ ತಡೆಗಟ್ಟಬಹುದು ಎಂದು ಸಚಿವರು ಸಲಹೆ ನೀಡಿದರು. ಸಭೆಯಲ್ಲಿ ಸಂಸದ ರಾಜಶೇಖರ್ ಹಿಟ್ನಾಳ್, ಶಾಸಕ ಜನಾರ್ದನ್ ರೆಡ್ಡಿ, ನಗರಸಭೆ ಅಧ್ಯಕ್ಷೆ ಹೀರಾ ನಾಗರಾಜ್ ಸಿಂಗ್, ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್ ಉಪಸ್ಥಿತರಿದ್ದರು.

ಅಂಜನಾದ್ರಿ ಹನುಮಮಾಲಾ ವಿಸರ್ಜನೆ ಸಮೀಪಿಸುತ್ತಿರುವ ಹಿನ್ನೆಲೆ ಗಂಗಾವತಿಯಲ್ಲಿ ಸಚಿವ ಶಿವರಾಜ ತಂಗಡಗಿ ಅಧಿಕಾರಿಗಳ ಸಭೆ ನಡೆಸಿದರು. ಶಾಸಕ ಜನಾರ್ದನ ರೆಡ್ಡಿ ಇದ್ದರು.

ಆಹಾರ ಸಿದ್ಧಪಡಿಸುವ ಸ್ಥಳದಲ್ಲಿ ಸಿಸಿ ಕ್ಯಾಮೆರಾ

ಆಹಾರ ಮತ್ತು ಪ್ರಸಾದ ಸಿದ್ಧಪಡಿಸುವ ಸಮಿತಿ ಸೇರಿದಂತೆ ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಸಿಸಿ ಕ್ಯಾಮೆರಾ ನಿರ್ವಹಣೆಗೆ ಒಂದು ತಂಡವನ್ನೇ ನಿಯೋಜಿಸಿ. ಇನ್ನು ಭಕ್ತರು ಬೆಟ್ಟ ಹತ್ತುವಾಗ ಮಾರ್ಗ ಮಧ್ಯೆ ಕೂಡ ವೈದ್ಯರ ತಂಡ ಸರ್ವ ಸನ್ನದ್ಧರಿರಬೇಕು. ಯಾರಿಗಾದರೂ ಆರೋಗ್ಯದಲ್ಲಿ ತೊಂದರೆ ಆದರೆ ಅಲ್ಲಿಯೇ ಚಿಕಿತ್ಸೆ ನೀಡಬೇಕು ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಬೆಟ್ಟದಲ್ಲಿ ಸ್ವಚ್ಛತೆ ಕಾಪಾಡಲು ಮನವಿ

ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳು ಶುಚಿತ್ವ ಕಾಪಾಡಬೇಕು. ಮೆಟ್ಟಿಲುಗಳನ್ನು ಹತ್ತುವ ವೇಳೆ ಅಥವಾ ಬೆಟ್ಟದ ಮೇಲ್ಭಾಗದಲ್ಲಿ ತಂಬಾಕು ಉಗುಳಬಾರದು. ಇನ್ನು ಸ್ನಾನಘಟ್ಟ ಬಳಿ ಸ್ನಾನ ಮಾಡಿದ ಬಳಿಕ ಅಲ್ಲಿಯೇ ಬಟ್ಟೆ, ಸಾಬೂನು ಇನ್ನಿತರ ವಸ್ತುಗಳನ್ನು ಎಸೆಯಬಾರದು, ನದಿಯ ಸ್ವಚ್ಛತೆ ಕಾಪಾಡಬೇಕು ಎಂದು ಸಚಿವರು ಭಕ್ತಾದಿಗಳಲ್ಲಿ ವಿನಂತಿ ಮಾಡಿದರು.

ಸಿರಿ ಕೆಫೆ-ಸಿರಿ ಮಳಿಗೆ ಉದ್ಘಾಟನೆ | ಅಭಿವೃದ್ಧಿ ಕಾರ್ಯಗಳಿಗೆ ಸಂಸದರ ನಿಧಿ ಬಳಕೆ

ನಾನಾ ಕಾಮಗಾರಿಗೆ ಡಾ.ವೀರೇಂದ್ರ ಹೆಗ್ಗಡೆ ಶಿಲಾನ್ಯಾಸ

ಬೆಳ್ತಂಗಡಿ: ತಾಲೂಕಿನ ಕೆಲವು ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ನಿರ್ಮಾಣಕ್ಕೆ ರಾಜ್ಯಸಭಾ ನಿಧಿಯನ್ನು ಬಳಸಲಾಗಿದೆ. ಗ್ರಾಮಾಭಿವೃದ್ಧಿ ಯೋಜನೆಯಿಂದ ಸಾವಿರಾರು ಕುಟುಂಬಗಳಿಗೆ ಬೆಳಕು ಬಂದರೆ, ಸಿರಿ ಸಂಸ್ಥೆಯಿಂದ ಸಾವಿರಾರು ಮಂದಿಗೆ ಉದ್ಯೋಗ ದೊರಕಿದೆ ಎಂದು ಡಾ. ರಾಜ್ಯಸಭಾ ಸಂಸದ, ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಬೆಳ್ತಂಗಡಿ ನಗರದ ಕೆಇಬಿ-ರೆಂಕೆದಗುತ್ತು-ಮಲ್ಲೊಟ್ಟು ಸಂಪರ್ಕಿಸುವ ರಸ್ತೆಯ ಅಗಲೀಕರಣ-ಡಾಂಬರೀಕರಣ ಮತ್ತು ಒಳಚರಂಡಿ ನಿರ್ಮಾಣಕ್ಕೆ 2 ಕೋಟಿ ರು.ವೆಚ್ಚದಲ್ಲಿ ಕೈಗೊಂಡಿರುವ ಕಾಮಗಾ ರಿಗೆ ಶಿಲಾನ್ಯಾಸ, ಸಿರಿ ಕೆಫೆ ಮಳಿಗೆ ಉದ್ಘಾಟಿಸಿ ಅವರು ಮಾತನಾಡಿದರು. ಇಲ್ಲಿನ ಶಾಸಕರ, ಪಟ್ಟಣ ಪಂಚಾಯಿತಿ ಅಧ್ಯಕ್ಷರ , ಸದಸ್ಯರ ಬೇಡಿಕೆಯಂತೆ ಜನರ ಅನುಕೂಲಕ್ಕಾಗಿ ಈ ರಸ್ತೆಗೆ 2 ಕೋಟಿ ರು. ಅನುದಾನ ನೀಡಲಾಗಿದೆ ಎಂದರು.

ಶಾಸಕ ಹರೀಶ್ ಪೂಂಜ ಅವರು ಮಾತನಾಡಿ, ಡಾ.ಹೆಗ್ಗಡೆಯವರು ತಮ್ಮ ರಾಜ್ಯಸಭಾ ನಿಧಿಯಡಿ ಬೆಳ್ತಂಗಡಿ ಅಯ್ಯಪ್ಪ ಮಂದಿರ ಬಳಿಯಿಂದ ಹುಣ್ಸೆಕಟ್ಟೆ ವರೆಗಿನ ರಸ್ತೆ ಅಭಿವೃದ್ಧಿಗೆ 2 ಕೋಟಿ ರು. ನೀಡುವ ಮೂಲಕ ಉಪ್ಪಿನಂಗಡಿ- ಬೆಳ್ತಂಗಡಿ ರಾಜ್ಯ ಹೆದ್ದಾರಿಯಲ್ಲಿ ಗುರುವಾಯನಕರೆಯಲ್ಲಿ ಟ್ರಾಫಿಕ್ ಸಮಸ್ಯೆ ಬಂದಾಗ ಈ ಸಂಪರ್ಕ ರಸ್ತೆ ಸಾವಿರಾರು ಜನರಿಗೆ ಅನುಕೂಲವಾಗಿದೆ.

ಕಾರ್ಯಕ್ರಮದಲ್ಲಿ ಉದ್ಯಮಿ ಶಶಿಧರ ಶೆಟ್ಟಿ ಬರೋಡ, ಬೆಳ್ತಂಗಡಿ ಪ.ಪಂ.ಅಧ್ಯಕ್ಷ ಜಯಾನಂದ ಗೌಡ, ಉಪಾಧ್ಯಕ್ಷೆ ಗೌರಿ, ಸ್ಥಾಯಿ ಸಮಿತಿ ಅಧ್ಯಕ್ಷ ಶರತ್ ಕುಮಾರ್ ಶೆಟ್ಟಿ, ಧ.ಗ್ರಾ. ಯೋಜನೆ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಎಸ್. ಎಸ್., ಸಿರಿ ಸಂಸ್ಥೆ ಟ್ರಸ್ಟಿ ರಾಜೇಶ್ ಪೈ ಉಜಿರೆ, ಪ.ಪಂ. ಮುಖ್ಯಾಧಿಕಾರಿ ರಾಜೇಶ್, ಸಿರಿ ಸಂಸ್ಥೆ ಸಿಇಒ ಪ್ರಸನ್ನ, ಹೆಗ್ಗಡೆಯವರ ಆಪ್ತ ಕಾರ್ಯದರ್ಶಿ ವೀರು ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಆರಂಭವಾದ ಸಿರಿ ಕೆಫೆ ಮಳಿಗೆ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ಚಾಲನೆ ನೀಡಿದರು.

ಹೈನುಗಾರಿಕೆಗೆ 10 ಕೋಟಿ ರು. ಬಳಕೆ

ರಾಜ್ಯಸಭಾ ಪ್ರದೇಶಾಭಿವೃದ್ಧಿ ನಿಧಿಯಿಂದ ಬೀದರ್ ಜಿಲ್ಲೆಗೆ ಹೈನುಗಾರಿಕೆಗೆ 10 ಕೋಟಿ ರು. ಬಳಕೆ ಮಾಡಿದ್ದು ಇದರಿಂದ ನಿತ್ಯ 18 ಸಾವಿರ ಲೀಟರ್ ಉತ್ಪತ್ತಿಯಾಗುತ್ತಿದ್ದ ಹಾಲು ಪ್ರಸ್ತುತ ಒಂದು ಲಕ್ಷದ ನಲುವತ್ತು ಸಾವಿರ ಲೀಟರ್ ಹಾಲು ಉತ್ಪತ್ತಿಯಾಗುತ್ತಿದೆ. ಇದರಿಂದ ಜನರ ಜೀವನ ಮಟ್ಟ ಸುಧಾರಣೆಯಾಗಿದೆ. ಮುಂದೆಯೂ ಇನ್ನಷ್ಟು ಉತ್ಪನ್ನಗಳನ್ನು ತಯಾರಿಸಿ ಮೂರು ಸಾವಿರಕ್ಕೂ ಅಧಿಕ ಮಂದಿಗೆ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದು ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ವಿಶ್ವವಾಣಿ ಬಳಗದ ಪತ್ರಕರ್ತ ದೀಕ್ಷಿತ್ ನಾಯರ್ ರಚಿತ ಕೃತಿ
ಎಸ್.ಎಲ್.ಭೈರಪ್ಪರ ಬದುಕಿನ ಅಪರೂಪದ ಪ್ರಸಂಗಗಳ ದಾಖಲು

ಒಂದು ವರ್ಷದ ಮಗುವಿನಿಂದ ಎತ್ತರೆತ್ತರ ಭೈರಪ್ಪ ಪುಸ್ತಕ ಬಿಡುಗಡೆ

ಬೆಂಗಳೂರು: ವೀರಲೋಕ ಸಂಸ್ಥೆಯು ಜಯನಗರದ ಶಾಲಿನಿ ಮೈದಾನದಲ್ಲಿ ಆಯೋಜಿಸಿದ್ದ ಮೂರು ದಿನಗಳ ಪುಸ್ತಕ ಸಂತೆಯ ಕೊನೆಯ ದಿನ ಲೇಖಕ ದೀಕ್ಷಿತ್ ನಾಯರ್ ಅವರ 'ಎತ್ತರೆತ್ತರ ಭೈರಪ್ಪ ' ಕೃತಿ ಬಿಡುಗಡೆಯಾಯಿತು. ಒಂದು ವರ್ಷದ ಮಗುವಿನ ಕೈಯಲ್ಲಿ ಪುಸ್ತಕ ಬಿಡುಗಡೆ ಮಾಡಿಸಿದ್ದು ಓದುಗರ ಗಮನಸೆಳೆಯಿತು.

ಕೃತಿ ಬಿಡುಗಡೆ ನಂತರ ಮಾತನಾಡಿದ ಲೇಖಕ ದೀಕ್ಷಿತ್ ನಾಯರ್ ಅವರು 'ಎತ್ತರೆತ್ತರ ಭೈರಪ್ಪ ಇದು ಅತ್ಯಂತ ಮಹತ್ವದ ಕೃತಿ. ವಿಶ್ವಮಾನ್ಯ ಸಾಹಿತಿ ಎಸ್.ಎಲ್.ಭೈರಪ್ಪನವರ ಬದುಕಿನ ಅಪರೂಪದ ಪ್ರಸಂಗಗಳನ್ನು ದಾಖಲಿಸಿದ್ದೇನೆ.

ಬಹುತೇಕರಿಗೆ ಸಾಹಿತಿಯಾಗಷ್ಟೇ ಗೊತ್ತಿದ್ದ ಭೈರಪ್ಪನವರ ವಿಶೇಷ ವ್ಯಕ್ತಿತ್ವದ ಪರಿಚಯವನ್ನು ಈ ಕೃತಿ ಮಾಡಿಕೊಡಲಿದೆ.

ಮುಂದಿನ ಮೂರ್ನಾಲ್ಕು ತಲೆಮಾರುಗಳಿಗೆ ಭೈರಪ್ಪನ ವರು ತಲುಪಲಿ ಎಂಬ ಉದ್ದೇಶದಿಂದ ಒಂದು ವರ್ಷದ ಮಗುವಿನ ಬಳಿ ಪುಸ್ತಕ ಬಿಡುಗಡೆ ಮಾಡಿಸಿದ್ದೇವೆ. ಇದು ವಿಶೇಷ ಮತ್ತು ಹೊಸ ಪ್ರಯೋಗ ಎಂದರು.

ಈ ಸಂದರ್ಭದಲ್ಲಿ ಸ್ನೇಹ ಬುಕ್‌ಹೌಸ್‌ನ ಪ್ರಕಾಶಕ, ಪುಸ್ತಕ ಮಾರಾಟಗಾರ ಮತ್ತು ವಿತರಕರಾದ ಕೆ.ಬಿ.ಪರಶಿವಪ್ಪ, ಯತೀಶ ಎಸ್, ಮಂಜುನಾಥ್ ಸಿ.ಬಿ, ಜಯಶ್ರೀ ಉಪಸ್ಥಿತರಿದ್ದರು

ಪುಸ್ತಕ ಸಂತೆಯ ಕೊನೆಯ ದಿನ ಲೇಖಕ ದೀಕ್ಷಿತ್ ನಾಯರ್ ಅವರ 'ಎತ್ತರೆತ್ತರ ಭೈರಪ್ಪ ' ಕೃತಿಯನ್ನು ಒಂದು ವರ್ಷದ ಮಗುವಿನ ಕೈಯಲ್ಲಿ ಬಿಡುಗಡೆ ಮಾಡಿಸಲಾಯಿತು.

ಬೂದಿಗುಂಡಿ ಮನೆಗಳಿಗೆ ನುಗ್ಗಿರುವ ಕೋಡಿ ಬಿದ್ದ ನೀರು | ಶಾಶ್ವತ ಪರಿಹಾರ ಕಲ್ಪಿಸಲು ಆಗ್ರಹ

ಕೋಡಿಬಿದ್ದ ದ್ವಾರ ಸಮುದ್ರ; ಸ್ಥಳೀಯರ ಪರದಾಟ

ಹಾಸನ: ಬೇಲೂರು ತಾಲೂಕಿನ ಹಳೇಬೀಡು ಗ್ರಾಮದ ಬೃಹದಾಕಾರದ ದ್ವಾರ ಸಮುದ್ರ ಕೆರೆ ತುಂಬಿ ಕೋಡಿ ಹರಿದಾಗಲೆಲ್ಲಾ ಅನತಿ ದೂರದಲ್ಲಿರುವ ಬೂದಿಗುಂಡಿ ಬಡಾವಣೆಯಲ್ಲಿರುವ ನೂರಾರು ಬಡ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕುತ್ತಿವೆ. ಕೆರೆ ಕೋಡಿ ನೀರು ರಭಸವಾಗಿ ಹರಿಯುತ್ತಿರುವುದರಿಂದ ಮನೆಗಳಿಗೆ ನೀರು ನುಗ್ಗುತ್ತಿದೆ.

ಮನೆಗಳಿಗೆ ಹಾವು, ಏಡಿ, ಕಪ್ಪೆಗಳು ಬರುತ್ತಿದ್ದು ಇಲ್ಲಿನ ನಿವಾಸಿಗಳು ನರಕಯಾತನೆ ಅನುಭವಿಸುತ್ತಿದ್ದಾರೆ. ಕೋಡಿ ದುರಸ್ತಿ ಮಾಡುವಂತೆ ಅಥವಾ ಮನೆಗಳನ್ನು ಬೇರೆಡೆಗೆ ಸ್ಥಳಾಂತರ ಮಾಡುವಂತೆ ಹಲವು ಬಾರಿ ಸಂಬಂಧಪಟ್ಟ ಇಲಾಖೆಗೆ ಮನವಿ ಸಲ್ಲಿಸಲಾಗಿದೆ. ಇದುವರೆಗೂ ಅಧಿಕಾರಿಗಳು ಇತ್ತ ಗಮನಹರಿಸಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಬಾರಿ ಮಳೆಗೆ ನೂರಾರು ಎಕರೆ ಪ್ರದೇಶದಲ್ಲಿರುವ ದ್ವಾರಸಮುದ್ರ ಕೆರೆ ತುಂಬಿ ಕೋಡಿ ಬಿದ್ದಾಗಲೆಲ್ಲಾ ಕೋಡಿ ನೀರು ಹರಿಯುವ ಅಕ್ಕಪಕ್ಕದ ಮನೆಗಳಿಗೆ ನೀರು ನುಗ್ಗಿತ್ತಿದೆ. 2012 ರಲ್ಲಿ ಧಾರಾಕಾರ ಮಳೆಯಿಂದ ಕೆರೆ ಕೋಡಿ ಬಿದ್ದು ಪ್ರವಾಹವೇ ಸೃಷ್ಟಿಯಾಗಿತ್ತು. ಅದೃಷ್ಟವಶಾತ್ ಸ್ಥಳೀಯರ ನೆರವಿನಿಂದ ಮನೆಗಳಲ್ಲಿ ವಾಸಿಸುತ್ತಿದ್ದು ನೂರಾರು ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದರು. ಮನೆಯಲ್ಲಿದ್ದ ವಸ್ತುಗಳೆಲ್ಲಾ ನೀರಿನಲ್ಲಿ ಮುಳುಗಿ ಅಪಾರ ನಷ್ಟ ಅನುಭವಿಸಿದ್ದು ಎಲ್ಲರನ್ನೂ ಗಂಜಿ ಕೇಂದ್ರಕ್ಕೆ ಸ್ಥಳಾಂತರಿಸಿ, ನಿರಾಶ್ರಿತರಿಗೆ ಶಾಶ್ವತ ಸೂರು ಕಲ್ಪಿಸುವ ಭರವಸೆಯನ್ನು ಅಂದಿನ ಸರಕಾರ ಹಾಗೂ ಜನಪ್ರತಿನಿಧಿಗಳು ನೀಡಿದ್ದರು.

ಐತಿಹಾಸಿಕ ದ್ವಾರಸಮುದ್ರ ಕೆರೆ ಭರ್ತಿಯಾದರೆ ಸಾವಿರಾರು ಎಕರೆ ಪ್ರದೇಶಕ್ಕೆ ನೀರು ಕಲ್ಪಿಸುತ್ತಿತ್ತು. ಇದೀಗ ಎತ್ತಿನಹೊಳೆ ಯೋಜನೆ ಮೂಲಕ ನೀರು ಹರಿಸಿ ದ್ವಾರಸಮುದ್ರ ಕೆರೆ ಭರ್ತಿಯಾಗುತ್ತಿದ್ದು ಕೆರೆ ಕೋಡಿಯಿಂದ ಹರಿಯುವ ನೀರು ನೂರಾರು ಬಡ ಕುಟುಂಬಗಳಿಗೆ ಕಂಟಕವಾಗಿದೆ. ಇನ್ನಾದರೂ ಸರ್ಕಾರ ಇತ್ತ ಗಮನಹರಿಸಿ ಸುದೀರ್ಘ ಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿಯಬೇಕಿದೆ. ಬದಲಾವಣೆ ವಿಚಾರದ ಬಗ್ಗೆ ಡಿಸೆಂಬರ್ ಮುಗಿಯುವವರೆಗೂ ಏನೂ ಮಾತನಾಡುವುದಿಲ್ಲ, ಜನವರಿ 1 ರಂದೇ ಮಾತನಾಡುತ್ತೇನೆ ಎನ್ನುವ ಮೂಲಕ ಚನ್ನಗಿರಿ ಶಾಸಕ ಬಸವರಾಜ್ ವಿ.ಶಿವಗಂಗಾ ನಾಯಕತ್ವದ ಬದಲಾವಣೆ ಬಗ್ಗೆ ಪರೋಕ್ಷ ಸೂಚನೆ ನೀಡಿದರು.

ಹಕ್ಕು ಪತ್ರ ವಿತರಿಸಲು ಗ್ರಾಮಸ್ಥರ ಒತ್ತಾಯ

ಒಂಟಿತಮ್ಮನಹಳ್ಳಿ ಗುಡ್ಡದಲ್ಲಿ ನಿರಾಶ್ರಿತರಿಗೆ ನಿವೇಶನ ಒದಗಿಸುವ ಕಾರ್ಯಕ್ಕೆ ಚಾಲನೆ ಕೂಡ ನೀಡಲಾಗಿತ್ತು. ಆದಾದ ಬಳಿಕ ಸರಕಾರ ಹಾಗೂ ಜನಪ್ರತಿನಿಧಿಗಳು ಬದಲಾಗಿದ್ದು ಕೊಟ್ಟ ಭರವಸೆ ಈಡೇರದ ಕಾರಣ ಎಲ್ಲಾ ಬಡ ಕುಟುಂಬಗಳು ಹಳೇಯ ಸ್ಥಳಕ್ಕೆ ವಾಪಾಸ್ ಬಂದು ನೆಲೆಸಿದ್ದಾರೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ದ್ವಾರ ಸಮುದ್ರ ಕೆರೆಗೆ ಎತ್ತಿನಹೊಳೆ ಯೋಜನೆ ಮೂಲಕ ನೀರು ಹರಿಸುತ್ತಿದ್ದು ಕೆರೆ ಕೋಡಿ ಬಿದ್ದು ಬಾರಿ ಪ್ರಮಾಣದಲ್ಲಿ ನೀರು ಹರಿಯುತ್ತಿದ್ದು ಬೂದಿಗುಂಡಿ ನಿವಾಸಿಗಳಿಗೆ ಮತ್ತದೆ ಸಮಸ್ಯೆ ಎದುರಾಗಿದೆ. ಸದ್ಯ ವಾಸವಿರುವ ಮನೆಗಳಿಗೆ ಹಕ್ಕುಪತ್ರ ನೀಡುತ್ತಿಲ್ಲ. ಈಗಾಗಲೇ ಗುರುತು ಮಾಡಿರುವ ಜಾಗದಲ್ಲಿ ಸಮತಟ್ಟು ಮಾಡಿ ನಿವೇಶನ ನೀಡಲು ಹಣವಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ಕೆರೆ ಕೋಡಿಗೆ ಕಾಲುವೆ ನಿರ್ಮಿಸಿ ಅದರ ಅಕ್ಕಪಕ್ಕದಲ್ಲಿರುವ ಮನೆಗಳಿಗೆ ಯಾವುದೇ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಬೇಕು ಹಾಗೂ ಇದೇ ಜಾಗದಲ್ಲಿ ವಾಸಿಸುತ್ತಿರುವವರಿಗೆ ಹಕ್ಕುಪತ್ರ ವಿತರಿಸಬೇಕು. ಇಲವಾದಲ್ಲಿ ನಿರಾಶ್ರಿತರಿಗೆ ಗುರುತು ಮಾಡಿರುವ ಜಾಗದಲ್ಲಾದರೂ ನಿವೇಶನ ನೀಡಬೇಕೆಂದು ಒಕ್ಕೊರಲಿನಿಂದ ಜನರು ಒತ್ತಾಯಿಸಿದ್ದಾರೆ.

ಜಾಗತೀಕರಣಕ್ಕೆ ಸೊಪ್ಪು ಹಾಕುವುದೇ ಕನ್ನಡದ ಸೆಳೆತ?

• ಲಕ್ಷ್ಮೀಕಾಂತ್ ಎಲ್.ವಿ., ತುಮಕೂರು

21ನೇ ಶತಮಾನವು ಗಡಿಗಳಿಲ್ಲದ ಲೋಕದ ಪರಿಕಲ್ಪನೆಯನ್ನು ಸಾಕಾರಗೊಳಿಸಿದೆ. ಮಾಹಿತಿ ತಂತ್ರಜ್ಞಾನ, ಸುಲಭ ಸಂಚಾರ ಮತ್ತು ಬೃಹತ್ ಬಹುರಾಷ್ಟ್ರೀಯ ಕಂಪನಿಗಳ ಪ್ರಭಾವದಿಂದಾಗಿ ಜಗತ್ತು ಒಂದು ಸಣ್ಣ ಗ್ರಾಮವಾಗಿ ಮಾರ್ಪಟ್ಟಿದೆ. ಈ ಜಾಗತೀಕರಣದ ಪ್ರಕ್ರಿಯೆಯು ಆರ್ಥಿಕತೆ, ರಾಜಕೀಯ ಮತ್ತು ತಂತ್ರಜ್ಞಾನದ ಸ್ವರೂಪವನ್ನು ಬದಲಿಸಿದಷ್ಟೇ ಆಳವಾಗಿ, ಸ್ಥಳೀಯ ಸಂಸ್ಕೃತಿಗಳ ಮೇಲೆ, ಅದರಲ್ಲೂ ವಿಶೇಷವಾಗಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಬೀರಿದ ಪರಿಣಾಮಗಳು ಸಂಕೀರ್ಣ ಮತ್ತು ಬಹುಆಯಾಮದವು.

ಕನ್ನಡವು ಕೇವಲ ಒಂದು ಸಂವಹನ ಮಾಧ್ಯಮವಲ್ಲ; ಅದು ಸಾವಿರಾರು ವರ್ಷಗಳ ಇತಿಹಾಸ, ವಿಶಿಷ್ಟ ಪರಂಪರೆ, ಕಲೆ, ಸಾಹಿತ್ಯ, ಜನಪದ ಮತ್ತು ಜೀವನ ವಿಧಾನವನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಒಂದು ಸಾಂಸ್ಕೃತಿಕ ಅಸ್ಮಿತೆ. ಆದರೆ, ಜಾಗತೀಕರಣದ ವೇಗದಲ್ಲಿ, ವಿಶೇಷವಾಗಿ ಯುವಪೀಳಿಗೆಯ ಪಾಲಿಗೆ, ಇಂಗ್ಲಿಷ್ ಭಾಷೆಯು ಜ್ಞಾನ ಮತ್ತು ಅವಕಾಶದ ಹೆಬ್ಬಾಗಿಲಾಗಿ ಗೋಚರಿಸುತ್ತಿದೆ. ಶಿಕ್ಷಣ, ಉದ್ಯೋಗ ಮತ್ತು ಅಂತಾರಾಷ್ಟ್ರೀಯ ಮಾಧ್ಯಮದ ಪ್ರಭಾವದಿಂದಾಗಿ ಕನ್ನಡದ ಬಳಕೆ ದಿನೇ ದಿನೇ ಸಂಕುಚಿತಗೊಳ್ಳುತ್ತಿದೆಯೇ ಎಂಬ ಆತಂಕ ಸದ್ಯದ ವಾಸ್ತವ.

- **ನಗರೀಕರಣದ ಪ್ರವಾಹ ಮತ್ತು ಭಾಷಾಮಿಶ್ರಣ:** ಕರ್ನಾಟಕದ ಪ್ರಮುಖ ನಗರಗಳು, ವಿಶೇಷವಾಗಿ ಬೆಂಗಳೂರು, ಜಾಗತಿಕ ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಿ ಬೆಳೆದಿದೆ. ಈ ನಗರೀಕರಣವು ದೇಶದ ಮೂಲೆ ಮೂಲೆಗಳಿಂದ ಮತ್ತು ಹೊರರಾಷ್ಟ್ರಗಳಿಂದ ವಲಸಿಗರನ್ನು ಆಕರ್ಷಿಸಿದೆ. ಈ ಬಹು ಸಂಸ್ಕೃತಿಯ ಸಮ್ಮಿಲನವು ಒಂದು ಕಡೆ ಹೊಸ ಸೃಜನಶೀಲತೆಗೆ ಕಾರಣವಾದರೆ, ಇನ್ನೊಂದು ಕಡೆ ಕನ್ನಡವು ನಗರ ಪ್ರದೇಶಗಳಲ್ಲಿ ಸಂವಹನದ ಪಟ್ಟದಿಂದ ದೂರ ಸರಿಯುವಂತೆ ಮಾಡಿದೆ.

ವರ್ತಮಾನದ ಕನ್ನಡವು ತನ್ನ ಶುದ್ಧ ರೂಪವನ್ನು ಕಳೆದುಕೊಳ್ಳುತ್ತಾ, ಆಂಗ್ಲ ಪದಗಳು, ಹಿಂದಿ ಪದಗಳು ಮತ್ತು ಇತರೆ ಪ್ರಾದೇಶಿಕ ಭಾಷೆಗಳ ಪ್ರಭಾವಕ್ಕೆ ಒಳಗಾಗುತ್ತಿದೆ. ವಿಶೇಷವಾಗಿ ಸಾಮಾಜಿಕ ಮಾಧ್ಯಮ ಮತ್ತು ಆನ್‌ಲೈನ್ ವೇದಿಕೆಗಳಲ್ಲಿ 'ಕಂಗ್ಲಿಷ್' ಅಥವಾ ಮಿಶ್ರ ಭಾಷೆಯ ಬಳಕೆಯೇ ಹೆಚ್ಚು ಪ್ರಚಲಿತವಾಗಿದೆ. ಇದು ಸಹಜವಾದ ಭಾಷಾವಿಕಾಸದ ಭಾಗವೇ ಅಥವಾ ಸಾಂಸ್ಕೃತಿಕ ಕನ್ನಡದ ಸತ್ವವನ್ನು ಕುಂದಿಸುತ್ತಿದೆಯೇ ಎಂಬ ಚರ್ಚೆ ಇಂದಿಗೂ ಪ್ರಸ್ತುತವಾಗಿದೆ. ಕವಿ ಕೆ.ಎಸ್. ನಿಸಾರ್ ಅಹಮದ್ ಹೇಳಿದಂತೆ, ಯಾವುದೇ ಒಂದು ಭಾಷೆ ಬದುಕಬೇಕಾದರೆ, ಅದು ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಬಳಕೆಯಾಗಬೇಕು. ಕನ್ನಡವು ಆರ್ಥಿಕ ಬದುಕಿನ ಕೇಂದ್ರದಿಂದ ದೂರ ಸರಿಯುತ್ತಿದ್ದಂತೆ, ಅದರ ಸಾಂಸ್ಕೃತಿಕ ಬೇರುಗಳೂ ಸಡಿಲಗೊಳ್ಳುತ್ತಿವೆ.

- **ಆಂತರಿಕ ಸವಾಲುಗಳು ಮತ್ತು ಸಾಮರ್ಥ್ಯಗಳು:** ಒಂದು ಕಾಲದಲ್ಲಿ ಕನ್ನಡ ಸಾಹಿತ್ಯ, ರಂಗಭೂಮಿ ಮತ್ತು ಚಲನಚಿತ್ರಗಳು ಸಾಂಸ್ಕೃತಿಕ ಕನ್ನಡವನ್ನು ಕಟ್ಟುವ ಪ್ರಬಲ ಮಾಧ್ಯಮಗಳಾಗಿದ್ದವು. ಡಾ. ರಾಜ್‌ಕುಮಾರ್ ಯುಗದ ಚಲನಚಿತ್ರಗಳು ಕನ್ನಡದ ಮೌಲ್ಯಗಳು, ಕುಟುಂಬ ಸಂಬಂಧಗಳು ಮತ್ತು ಗ್ರಾಮೀಣ ಬದುಕನ್ನು ಬಿಂಬಿಸುತ್ತಿದ್ದವು. ಆದರೆ, ಜಾಗತೀಕರಣದ ಪ್ರಭಾವದಿಂದಾಗಿ ಇಂದು ಕನ್ನಡ ಚಿತ್ರರಂಗವು ಸಹ ಪಶ್ಚಿಮದ ಮತ್ತು ದಕ್ಷಿಣದ ಇತರ ಭಾಷೆಗಳ ಮಾರುಕಟ್ಟೆ ತಂತ್ರಗಳಿಗೆ ಹಾಗೂ ಮನರಂಜನಾ ಸೂತ್ರಗಳಿಗೆ ತನ್ನನ್ನು ತಾನು ಒಪ್ಪಿಸಿಕೊಳ್ಳುತ್ತಿದೆ. 'ಪ್ಯಾನ್ ಇಂಡಿಯಾ'ದ ಪರಿಕಲ್ಪನೆಯಲ್ಲಿ, ಕನ್ನಡದ ಸ್ಥಳೀಯ ಕಥನಗಳು ಮತ್ತು ವಿಶಿಷ್ಟ ಶೈಲಿಗಳು ಮಾಯವಾಗಿ, ಆಕರ್ಷಕ ನಿರ್ಮಾಣ ಮತ್ತು ಬೃಹತ್ ಪ್ರಚಾರಕ್ಕೆ ಹೆಚ್ಚು ಒತ್ತುನೀಡಲಾಗುತ್ತಿದೆ.

ಇದೇ ಸಮಯದಲ್ಲಿ, ಯುಟ್ಯೂಬ್, ಒಟಿಟಿ ವೇದಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳು ಕನ್ನಡದ ಯುವ ಸೃಷ್ಟಿಕರ್ತರಿಗೆ ಹೊಸ ದಾರಿಯನ್ನು ತೆರೆದಿವೆ. ಬೃಹತ್ ಬಂಡವಾಳವಿಲ್ಲದೆ ಸ್ಥಳೀಯ ಪ್ರತಿಭೆಗಳು ತಮ್ಮ ವಿಶಿಷ್ಟ ಶೈಲಿಯ ಕನ್ನಡದಲ್ಲಿ ಕವನ, ಹಾಡು, ವಿಡಂಬನೆ ಮತ್ತು ಮಾಹಿತಿಪೂರ್ಣ ವಿಷಯಗಳನ್ನು ಪ್ರಕಟಿಸುತ್ತಿದ್ದಾರೆ. ಈ ಡಿಜಿಟಲ್ ಲೋಕವು ಸಾಂಸ್ಕೃತಿಕ ಕನ್ನಡಕ್ಕೆ ಒಂದು ಹೊಸ ವೇದಿಕೆಯನ್ನು ಕಲ್ಪಿಸಿದೆ; ಇಲ್ಲಿ ಕನ್ನಡವು ಶಾಸ್ತ್ರೀಯ ರೂಪದಿಂದ ಹೊರಬಂದು, ಹೆಚ್ಚು ಮಾತನಾಡುವ ಮತ್ತು ಜೀವಂತ ರೂಪದಲ್ಲಿ ಮರುಹುಟ್ಟು ಪಡೆಯುತ್ತಿದೆ.

- **ಸಾಹಿತ್ಯ ಮತ್ತು ಪರಂಪರೆಯ ಹೊಸ ಓದು:** ಕನ್ನಡ ಸಾಹಿತ್ಯವು ಸದಾಕಾಲಕ್ಕೂ ಪ್ರಗತಿಪರ ಚಿಂತನೆ ಮತ್ತು ವಾಸ್ತವದ ಪ್ರತಿಫಲನಕ್ಕೆ ಹೆಸರುವಾಸಿಯಾಗಿದೆ. ಜಾಗತೀಕರಣದ ಸಂದರ್ಭದಲ್ಲಿ, ದಲಿತ ಮತ್ತು ಬಂಡಾಯ ಸಾಹಿತ್ಯದ ನಂತರ, ಈಗ ನವ್ಯೋತ್ತರ ಚಿಂತನೆ ಮತ್ತು ಉತ್ತರ ಕರ್ನಾಟಕದ ವಿಶಿಷ್ಟ ಪ್ರಾದೇಶಿಕ ನೆಲೆಗಳು ಜಾಗತಿಕ ಮಾನವೀಯ ಮೌಲ್ಯಗಳೊಂದಿಗೆ ಬೆರೆಯುತ್ತಿವೆ. ಕನ್ನಡದ ಲೇಖಕರು ಇಂದು ಸ್ಥಳೀಯ ಸಂಕಷ್ಟಗಳನ್ನು ಜಾಗತಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಿದ್ದಾರೆ. ಉದಾಹರಣೆಗೆ, ಮಾಹಿತಿ ತಂತ್ರಜ್ಞಾನದ ಕಂಪನಿಗಳಲ್ಲಿ ಕೆಲಸ ಮಾಡುವವರ ಮಾನಸಿಕ ತೊಳಲಾಟ, ಜಮೀನು ಕಳೆದುಕೊಂಡ ರೈತರ ಬದುಕು ಮತ್ತು ಆಧುನಿಕ ಸಂಬಂಧಗಳ ಜಟಿಲತೆಗಳು ಹೊಸ ಸಾಹಿತ್ಯದ ವಸ್ತುಗಳಾಗಿವೆ.

ಡಾ. ಯು.ಆರ್. ಅನಂತಮೂರ್ತಿ ಅವರು ಹೇಳಿದಂತೆ, ಸಂಸ್ಕೃತಿ ಎಂದರೆ ಇತಿಹಾಸದ ಒಂದು ಭಾರವನ್ನು ಹೊತ್ತುಕೊಂಡಿರುವುದು. ಈ ಭಾರವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವಲ್ಲಿ ಶಿಕ್ಷಣ ಕ್ಷೇತ್ರ ವಿಫಲವಾಗುತ್ತಿದೆಯೇ ಎಂಬುದು ಗಂಭೀರ ಪ್ರಶ್ನೆ. ಸರಕಾರಿ ಶಾಲೆಗಳು ಮತ್ತು ಕನ್ನಡ ಮಾಧ್ಯಮ ಶಾಲೆಗಳು ದುರ್ಬಲಗೊಳ್ಳುತ್ತಿರುವುದು, ಕನ್ನಡಕ್ಕೆ ಸಿಗಬೇಕಾದ ಸಾಮಾಜಿಕ ಪ್ರತಿಷ್ಠೆಯನ್ನು ಕುಗ್ಗಿಸಿದೆ. ಕನ್ನಡ ಮಾಧ್ಯಮದಲ್ಲಿ ಕಲಿತರೂ ಜಾಗತಿಕ ಮಟ್ಟದಲ್ಲಿ ಯಶಸ್ಸು ಪಡೆಯಲು ಸಾಧ್ಯ ಎಂಬ ಆಶಾವಾದವನ್ನು ಮೂಡಿಸಬೇಕಿದೆ.

> **ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಂಗಳಂ ಕೇಳುತಂ...**

- **ಅಸ್ಮಿತೆಯ ರಕ್ಷಣೆ ಮತ್ತು ಜಾಗತಿಕ ಸಮನ್ವಯ:** ಸಾಂಸ್ಕೃತಿಕ ಕನ್ನಡವನ್ನು ಉಳಿಸಿ, ಬೆಳೆಸುವಲ್ಲಿ ಮುಖ್ಯವಾದ ದಾರಿ ಎಂದರೆ ಜಾಗತೀಕರಣದ ಅಸ್ತ್ರಗಳನ್ನೇ ಕನ್ನಡದ ರಕ್ಷಣೆಗಾಗಿ ಬಳಸಿಕೊಳ್ಳುವುದು.

1. ಗೂಗಲ್, ಮೈಕ್ರೋಸಾಫ್ಟ್‌ನಂಥ ದೊಡ್ಡ ಕಂಪನಿಗಳು ಕನ್ನಡ ಭಾಷೆಗೆ ಹೆಚ್ಚಿನ ಮಹತ್ವ ನೀಡಬೇಕಿದೆ. ಉತ್ತಮ ಕನ್ನಡ ಫಾಂಟ್‌ಗಳು, ಸುಧಾರಿತ ಯಂತ್ರಾನುವಾದ (Machine Translation), ಧ್ವನಿ ಗುರುತಿಸುವಿಕೆ (Voice Recognition) ಮತ್ತು ಕನ್ನಡಕ್ಕೆಂದೇ ಮೀಸಲಾದ ಕೃತಕ ಬುದ್ಧಿಮತ್ತೆಯ (ಎಐ) ತಂತ್ರಜ್ಞಾನಗಳು ಕನ್ನಡವನ್ನು ಜ್ಞಾನ ಮತ್ತು ವ್ಯಾಪಾರದ ಭಾಷೆಯಾಗಿ ಬೆಳೆಸಲು ಅತ್ಯಗತ್ಯ.

2. ಬೆಂಗಳೂರು ಮತ್ತು ಮೈಸೂರಿನಂಥ ನಗರಗಳಲ್ಲಿ ಕನ್ನಡ ಕಲಿಯಲು ಬಯಸುವ ಅನ್ಯಭಾಷಿಕ ವಲಸಿಗರಿಗಾಗಿ ಸುಲಭ ಮತ್ತು ಆಕರ್ಷಕ ಕಾರ್ಯಾಗಾರಗಳನ್ನು ಆಯೋಜಿಸಬೇಕು. ಕನ್ನಡವನ್ನು ಕಲಿಯುವುದರಿಂದ ಉದ್ಯೋಗ ಮತ್ತು ಸಾಮಾಜಿಕ ವಲಯದಲ್ಲಿ ಲಾಭವಾಗುತ್ತದೆ ಎಂಬ ಸಂದೇಶವನ್ನು ಪರಿಣಾಮಕಾರಿಯಾಗಿ ತಲುಪಿಸಬೇಕು.

3. ಆಡಳಿತ, ವೈದ್ಯಕೀಯ, ಕಾನೂನು ಮತ್ತು ತಂತ್ರಜ್ಞಾನದಂಥ ಪ್ರಮುಖ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಯನ್ನು ಕಡ್ಡಾಯಗೊಳಿಸುವ ನೀತಿಗಳು ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು. ನಾಮಫಲಕಗಳು, ಸರಕಾರಿ ಅಧಿಸೂಚನೆಗಳು ಮತ್ತು ಗ್ರಾಹಕ ಸೇವೆಗಳಲ್ಲಿ ಕನ್ನಡಕ್ಕೆ ಪ್ರಥಮ ಪ್ರಾಶಸ್ತ್ಯ ಸಿಗಬೇಕು.

- **ಸಮನ್ವಯದ ಸೂತ್ರ: ಜಾಗತಿಕತೆಯ ಆಲಿಂಗನ** ಸಾಂಸ್ಕೃತಿಕ ಕನ್ನಡದ ಉಳಿವಿಗೆ ಹಳೆಯ ಸಂಪ್ರದಾಯಗಳನ್ನು ಬಲವಂತವಾಗಿ ಹೇರುವುದಕ್ಕಿಂತ, ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಅದನ್ನು ಹೊಂದಾಣಿಕೆ ಮಾಡುವುದು ಜಾಣತನ. ಅಂದರೆ, ಕನ್ನಡವು ಜಾಗತಿಕ ಸಂಸ್ಕೃತಿಯ ಭಾಗವಾಗಲು ಹಿಂಜರಿಯಬಾರದು.
- ಇಂಗ್ಲಿಷ್ ಭಾಷೆಯ ಜ್ಞಾನಕ್ಕೆ ಮಹತ್ವ ನೀಡುತ್ತಲೇ, ಮಾತೃಭಾಷೆ ಕನ್ನಡದ ಪ್ರಭುತ್ವವನ್ನು ಎತ್ತಿಹಿಡಿಯುವ ಸಮನ್ವಯದ ಮಾದರಿ ಬೇಕು. ಮಕ್ಕಳು ಶಾಲೆಗಳಲ್ಲಿ ಜಾಗತಿಕ ಜ್ಞಾನವನ್ನು ಇಂಗ್ಲಿಷ್‌ನಲ್ಲಿ ಪಡೆದರೂ, ಮನೆಯಲ್ಲಿ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಬಳಸುವ ವಾತಾವರಣವನ್ನು ನಿರ್ಮಿಸಬೇಕು.
- ಹೊರದೇಶಗಳಲ್ಲಿ ನೆಲೆಸಿರುವ ಲಕ್ಷಾಂತರ ಕನ್ನಡಿಗರು ಕನ್ನಡದ ಸಾಂಸ್ಕೃತಿಕ ರಾಯಭಾರಿಗಳಾಗಬೇಕು. ಅವರು ಜಾಗತಿಕ ವೇದಿಕೆಗಳಲ್ಲಿ ಕನ್ನಡ ಸಾಹಿತ್ಯ, ಕಲೆ ಮತ್ತು ಚಲನಚಿತ್ರಗಳನ್ನು ಪ್ರದರ್ಶಿಸುವ ಮೂಲಕ ಕನ್ನಡದ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಬಹುದು.
- ಕುವೆಂಪು ಅವರ 'ವಿಶ್ವ ಮಾನವ' ಪರಿಕಲ್ಪನೆಯಂತೆ, ಕನ್ನಡವು ಸೀಮಿತ ಪ್ರಾದೇಶಿಕ ಚೌಕಟ್ಟಿನಿಂದ ಹೊರ ಬಂದು, ಜಾಗತಿಕ ಮೌಲ್ಯಗಳಾದ ಸಮಾನತೆ, ಸಹಬಾಳ್ವೆ ಮತ್ತು ಪ್ರಕೃತಿ ಪ್ರೀತಿಯನ್ನು ತನ್ನ ಕಥನಗಳ ಮೂಲಕ ಜಗತ್ತಿಗೆ ಹಂಚಬೇಕು. ಕನ್ನಡದ ಕಲೆ, ಸಂಗೀತ ಮತ್ತು ಯಕ್ಷಗಾನದಂಥ ಪರಂಪರೆಗಳನ್ನು ಆಧುನಿಕ ಆಕರ್ಷಣೆಯೊಂದಿಗೆ ಪ್ರಸ್ತುತಪಡಿಸಬೇಕು.

ಜಾಗತೀಕರಣವು ಕನ್ನಡಕ್ಕೆ ಬೆದರಿಕೆಯಷ್ಟೇ ಅಲ್ಲ, ಹೊಸ ಅವಕಾಶವೂ ಹೌದು. ಸಾಂಸ್ಕೃತಿಕ ಕನ್ನಡವು ಕೇವಲ ಒಂದು ವಸ್ತುಸಂಗ್ರಹಾಲಯದ ಪ್ರದರ್ಶನವಾಗದೆ, ಸದಾ ಬದಲಾಗು ತ್ತಿರುವ ಬದುಕಿನ ಪ್ರವಾಹದಲ್ಲಿ ಬೆರೆಯುವ ಜೀವಂತ ನದಿಯಂತಿರಬೇಕು. ನಾವು ಕನ್ನಡವನ್ನು ಒಂದು ಆರ್ಥಿಕ ಮತ್ತು ವೈಜ್ಞಾನಿಕ ಶಕ್ತಿಯಾಗಿ ಪರಿವರ್ತಿಸಿದಾಗ ಮಾತ್ರ ಅದು ಈ ಜಾಗತಿಕ ಸ್ಪರ್ಧೆಯಲ್ಲಿ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಮತ್ತು ಹೊಸ ಸೃಷ್ಟಿಗೆ ಕಾರಣವಾಗಲು ಸಾಧ್ಯ. ಕನ್ನಡದ ಅಸ್ಮಿತೆಯ ಸೆಳೆತ ಮತ್ತು ಜಾಗತಿಕ ಸಮನ್ವಯದ ಸಾಧ್ಯತೆಗಳ ನಡುವಿನ ಈ ಪಯಣ ನಿರಂತರವಾದದ್ದು ಮತ್ತು ಅದರ ಫಲಿತಾಂಶ ಇಂದಿನ ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿಯನ್ನು ಅವಲಂಬಿಸಿರುತ್ತದೆ.

ಕರ್ತವ್ಯದ ಹಿರಿಮೆ

• ಮಾಯಾ ಬಾಲಚಂದ್ರ

ಪುರಾತತ್ವ ಶಾಸ್ತ್ರಜ್ಞರು, ಜ್ವಾಲಾಮುಖಿಗಳಿಂದ ನಿರ್ಮಿತವಾಗಿದ್ದ ಗುಡ್ಡವನ್ನು ಅಗೆದು, ಉತ್ಖನನ ನಡೆಸುತ್ತಿದ್ದರು. ಆಳಕ್ಕಿಳಿದಂತೆ ಪ್ರಾಚೀನ ವೈಭವ ಸಾರುವ ಒಂದು ಭವ್ಯ ನಗರ ತೆರೆದುಕೊಂಡಿತು. 2250 ವರ್ಷಗಳ ಹಿಂದೆ ರೋಮ್ ಸಾಮ್ರಾಜ್ಯದ ಪಾಂಪೇ ನಗರವನ್ನು ಆಪೋಶನ ತೆಗೆದುಕೊಂಡ ಜ್ವಾಲಾಮುಖಿಯ ದಿಬ್ಬವನ್ನು ಅವರು ಅಗೆದಿದ್ದರು. ಅತ್ಯಂತ ಪ್ರಬಲವಾದ ಜ್ವಾಲಾಮುಖಿಯದು. ಆ ಜ್ವಾಲಾಮುಖಿಯ ತೀವ್ರತೆ, ಅದರಿಂದ ಉಂಟಾದ ಪರಿಣಾಮಗಳು ಎಲ್ಲವೂ ಕೇವಲ ಪಠ್ಯವಾಗಿ ಇತಿಹಾಸದಲ್ಲಿ ಉಳಿದುಬಿಟ್ಟಿತ್ತು. ಆಗ ಕಣ್ಮರೆಯಾದ ನಗರ, ಸಂಪೂರ್ಣ ನಾಶವಾಗಿದೆ ಎಂದೇ ಎಲ್ಲರ ನಂಬಿಕೆಯಾಗಿತ್ತು. ಭಗ್ನಾವಶೇಷಗಳ ನಗರ, ಭೂಮಿಯ ಒಳಭಾಗದಲ್ಲಿದೆ ಎಂಬ ಕಲ್ಪನೆ ಸಹ ಜನರಲ್ಲಿರಲಿಲ್ಲ.

ಇಡೀ ನಗರ ಭೂಗತವಾದಾಗ ಕೆಲವರು ರಕ್ಷಿಸಲ್ಪಟ್ಟರು. ಹಾಗೆ ಉಳಿದವರು ದಾಖಲಿಸಿದ್ದ ಸ್ಮೃತಿಗಳು ಇನ್ನೂ ಸುರಕ್ಷಿತವಾಗಿಯೇ ಇದ್ದವು. ಅವುಗಳಲ್ಲಿ ಹೀಗೆ ನಮೂದಿಸಲಾಗಿತ್ತು: ''ಭೂಕಂಪದ ಮೊದಲ ಕಂಪನ ತಿಳಿಯುತ್ತಲೇ ಜನ ದಿಕ್ಕೆಟ್ಟು ಓಡತೊಡಗಿದರು. ಕೆಲವರು ನಾಶವಾದರು. ಕೆಲವರು ಬದುಕುಳಿದರು. ಓಡುತ್ತಿದ್ದ ಕೆಲವರು ರಾಜದ್ವಾರದಲ್ಲಿ ದಂಡವನ್ನು ಹಿಡಿದು ನಿಂತ ದ್ವಾರಪಾಲಕನಿಗೆ ಕಿರುಚಿ ಹೇಳಿದರು 'ನಿನ್ನ ಪ್ರಾಣವನ್ನು ಉಳಿಸಿಕೊಳ್ಳಲು ಓಡು' ಎಂದು. ಆದರೆ ಆ ಸಿಪಾಯಿ ಉತ್ತರಿಸಿದನು- 'ನನ್ನ ಕರ್ತವ್ಯ ನನ್ನನ್ನು ಇಲ್ಲಿಂದ ಅಲುಗಲು ಬಿಡುತ್ತಿಲ್ಲ' ಎಂದು. ಅವನು ಅಲ್ಲೇ ದೃಢವಾಗಿ ನಿಂತುಬಿಟ್ಟ. ಇಡೀ ನಗರದೊಂದಿಗೆ ಅವನು ಭೂಗರ್ಭದಲ್ಲಿ ಸೇರಿಕೊಂಡನು''. ಉತ್ಖನನ ನಡೆಸುತ್ತಿದ್ದ ತಂಡ ರಾಜದ್ವಾರವನ್ನು ತಲುಪಿದಾಗ, ಅಲ್ಲಿ ದಂಡವನ್ನು ಹಿಡಿದ ಅಸ್ಥಿಪಂಜರವೊಂದು ಹಾಗೆಯೇ ನಿಂತಿರುವುದನ್ನು ಕಂಡು, ಅವರೆಲ್ಲರೂ ಮೂಕವಿಸ್ಮಿತರಾದರು. ಆ ದ್ವಾರಪಾಲಕ ಎಲ್ಲರಂತೆ ಓಡಿಹೋಗಿ ತನ್ನ ಪ್ರಾಣ ಉಳಿಸಿಕೊಳ್ಳಬಹುದಿತ್ತು. ಅಂಥ ಕೋಲಾಹಲದಲ್ಲೂ ಸ್ಥಿರತೆ ಕಳೆದುಕೊಳ್ಳದೆ ಸ್ಥೈರ್ಯ ಮೆರೆದಿದ್ದ ಆತ. ಜನರೆಲ್ಲ ದಿಕ್ಕಾಪಾಲಾಗಿ ಓಡುತ್ತಿದ್ದರೂ, ತನ್ನನ್ನು ಓಡಲು ಪ್ರೇರೇಪಿಸಿದರೂ ಕದಲದ ದೃಢತೆ ಆತನದ್ದಾಗಿತ್ತು. ತಾನು ಪಾರಾಗಿ ರಕ್ಷಿಸಿಕೊಂಡರೂ, ಯಾರೂ ತನ್ನನ್ನು ಪ್ರಶ್ನಿಸಲಾಗದ ಸಂದರ್ಭ ಅದಾಗಿತ್ತು. ಆದರೂ ಆತನ ಕರ್ತವ್ಯಪ್ರಜ್ಞೆ ಆತನನ್ನು ಸ್ವಲ್ಪವೂ ವಿಚಲಿತನಾಗಲು ಬಿಟ್ಟಿರಲಿಲ್ಲ. ಆತನ ಆತ್ಮಸಾಕ್ಷಿ ಆತನನ್ನು ಕರ್ತವ್ಯ ವಿಮುಖನಾಗಿ ಓಡಿಹೋಗದಂತೆ ತಡೆದಿತ್ತು. ರೋಮ್ ನಗರ ಆ ಸಿಪಾಯಿಗೆ ಶ್ರದ್ಧಾಂಜಲಿ ಅರ್ಪಿಸಿ ಸ್ಮರಿಸಿತು. ಸಾವಿರಾರು ವರ್ಷಗಳ ನಂತರವೂ, ಅಸ್ಥಿಪಂಜರದ ರೂಪದಲ್ಲಿ, ದಂಡವನ್ನು ಹಿಡಿದು ನಿಂತು, ದರ್ಶಿಸುವವರಿಗೆ 'ಹೆದರಿದಿರಿ, ನಿಮ್ಮ ಕರ್ತವ್ಯಮಾರ್ಗದಲ್ಲಿ ದೃಢವಾಗಿ ನಿಲ್ಲಿರಿ. ಮಾನವನ ಹಿರಿಮೆ ಅದರಲ್ಲಿಯೇ ಇದೆ' ಎಂಬ ಸಂದೇಶವನ್ನು ಆತ ಸಾರುತ್ತಿದ್ದಾನೆ.

ಹನಿಕಥೆಗಳು

• ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಈ ಥರ ಇದ್ದರೆ ಸಾಕು!

ಮದುವೆಯಾಗಲು ಹುಡುಗಿಯನ್ನು ಹುಡುಕಿ ಹುಡುಕಿ ಬೇಸತ್ತಿದ್ದ ಮದನ್, ಬ್ರೋಕರ್ ಭೀಷ್ಮಾಚಾರ್ಯರ ಬಳಿ ಬಂದು ಅಲವತ್ತುಗೊಂಡ. ಅವರು 'ಹುಡುಗಿ ಹೇಗಿರಬೇಕು?' ಎಂದು ಕೇಳಿದ್ದಕ್ಕೆ, ಪಕ್ಕದಲ್ಲಿಯೇ ಹಾದುಹೋದ ಅವರ ಮಗಳನ್ನು ತೋರಿಸಿ, 'ಹೀಗಿದ್ದರೆ ಸಾಕು' ಎಂದು ಹೇಳಿ ವೈಮುರಿಯೆ ಒದೆ ತಿಂದ!

ಒಂದು ಕೊಂಡರೆ ಮತ್ತೊಂದು ಉಚಿತ!

'ಬೈ ಒನ್, ಗೆಟ್ ಒನ್ ಫ್ರೀ' ಗಿಫ್ಟ್ ಅಂಗಡಿಯಲ್ಲಿ ಸಾಕಷ್ಟು ದುಡಿದ ದಂಡಪಾಣಿಗೆ ಮದುವೆಯಾದ ಮರುವರ್ಷವೇ ಭಗವಂತ ಒಂದಕ್ಕೆ ಒಂದು ಉಚಿತ ಮಾದರಿಯಲ್ಲಿ ಅವಳಿ ಜವಳಿ ಮಕ್ಕಳನ್ನು ಗಿಫ್ಟ್ ನೀಡಿದ್ದ!

ವನ್ಯಜೀವಿ ಸಂರಕ್ಷಣೆ

ರಾಷ್ಟ್ರೀಯ ವನ್ಯಜೀವಿ ಸಂರಕ್ಷಣಾ ದಿನದಂದು ವೇದಿಕೆಯಲ್ಲಿ ಭರ್ಜರಿ ಭಾಷಣ ಬಿಗಿದು ಮನೆಯ ಹಾದಿ ಹಿಡಿದು ಹೊರಟ ಭದ್ರಾಚಲಂರವರು, ತಮ್ಮ ಕಾರಿಗೆ ಅಡ್ಡವಾಗಿ ಬಂದು ಅಪ್ಪಚ್ಚಿಯಾದ ಜಿಂಕೆಯ ಮರಿಯನ್ನು ಕಂಡರೂ ಕಾಣದಂತೆ ವೇಗವಾಗಿ ಮನೆಯ ಕಡೆಗೆ ಧಾವಿಸಿದರು.

ಕುಟುಂಬ ಸಮೇತ

ಕಡುಜಿಪುಣ ರಾಜಶೇಖರ ಶೆಟ್ಟಿ ತನ್ನ ಗೆಳೆಯನ ಮಗನ ಮದುವೆಗೆ 3 ಕ್ಯಾರಿಯರ್ ಸಮೇತ ಆಗಮಿಸಿದ. ಅಚ್ಚರಿಯಿಂದ ಸ್ವಾಗತಿಸಿದ ಗೆಳೆಯನಿಗೆ, 'ಕುಟುಂಬ ಸಮೇತ ಬನ್ನಿ ಎಂದು ಲಗ್ನಪತ್ರಿಕೆಯಲ್ಲಿ ಹಾಕಿಸಿದ್ದಿ.... ಅವರೆಲ್ಲಾ ಇಂದು ತುಂಬಾ ಬಿಜಿ. ಅದಕ್ಕೇ ಅವರೆಲ್ಲರ ಪಾಲಿನ ಊಟವನ್ನು ಈ ಕ್ಯಾರಿಯರ್‌ಗೆ ತುಂಬಿಸಿ ಕೊಟ್ಟುಬಿಡು...' ಎಂದ!

ಮೋಡದ ಮರೆಯ ಬೆಳಕು

• ಸುಮನಾ ರಮಾನಂದ, ಕೊಯ್ಮತ್ತೂರು

ರವಿಕಿರಣವದು ತಿಣುಕಾಡಿದೆ
ಮೋಡದ ಮರೆಯಿಂದ ಹೊರಬರಲು।
ಬೆಳಕದು ಬಂಧನ ಬಿಡಿಸಿ ಬಂದಿದೆ,
ಭುವಿಯ ಜೀವರಾಶಿಯ ಕಾಯಲು॥

ಪ್ರತಿಭೆಯು ಪ್ರಭೆಯಂತೆ ಹೊಳೆಯಲು
ಅಹಮ್ಮಿನ ಮೋಡ ಸರಿಯಬೇಕು।
ಟೀಕಿಸುವವರ ಬಿರುನುಡಿಯ
ಎದುರಿಸಲು
ತಾಳ್ಮೆಯ ಗೋಡೆಯನೊಮ್ಮೆ
ಮುರಿಯಬೇಕು॥

ಬೆಳ್ಳಿಯ ಕಿರಣವು ಬೆಳ್ಮುಗಿಲ
ಮೋಡದಿಂದ ಜಾರಿ ಧರೆ ಬೆಳಗುವಂತೆ।
ಮಾತಿನ ಸಿಹಿ ಮೌನದ ಕಹಿಯ ಮೀರಿ
ಮನದೊಳಗೆ ಲಹರಿ ಮಿಂಚುವಂತೆ॥

ಕಾನನದ ಹಸಿರು ಚಿಗುರಲು
ಹೊಂಗಿರಣದ ಬೆಳಕು ಬೇಕು।
ಬೆಳ್ಳಿಮೋಡದಂಚಲಿ ದಿನಪ
ನಗುತಿರಲು..
ಜೀವಸಂಕುಲವದು ನಿತ್ಯ ಬೆಳೆಯಬೇಕು॥

ಮಗಳು ಮಾತ್ರವೇ ಇರುವ ಮನೆ

ಪ್ರೀತಿಯ ವಂಶವೃಕ್ಷ, ಆಶೀರ್ವಾದದ ಪೂರ್ಣತೆ

• ಕೃತಿಕ ಎಚ್.ಎಸ್, ಬೆಂಗಳೂರು

ಇಂದಿನ ಸಮಾಜವು ಹಳೆಯ ಪೂರ್ವಗ್ರಹಗಳನ್ನು ಮರೆತು ನಿಧಾನವಾಗಿ ಹೊಸ ಚಿಂತನೆಗಳನ್ನು ಸ್ವೀಕರಿಸುತ್ತಿದೆ. ಈ ಪಯಣದಲ್ಲಿ, ಮಗು ಹುಟ್ಟಿದೆಯಾ? ಎಂಬ ಪ್ರಶ್ನೆಯ ಹಿಂದೆ 'ಮಗನಾ, ಮಗಳಾ?' ಎಂಬ ಕುತೂಹಲ ಯಾವಾಗಲೂ ಇರುತ್ತಿತ್ತು. ಒಂದು ಕಾಲದಲ್ಲಿ 'ಮಗನಿದ್ದರೆ ಮಾತ್ರ ಮನೆ ಪರಿಪೂರ್ಣ' ಎಂಬ ಭಾವನೆ ಆಳಿತ್ತು. ವಂಶದ ಮುಂದುವರಿಕೆಯನ್ನು ಮಗನ ಉಪಸ್ಥಿತಿಯಿಂದ ಅಳೆಯಲಾಗುತ್ತಿತ್ತು. ಆದರೆ ಈ ಮಾತುಗಳು ಪುರುಷ ಪ್ರಧಾನ ಮನೋಭಾವದ ಪ್ರತಿಫಲವೇ ಹೊರತು ಅದೇ ಅಂತಿಮ ವಾಸ್ತವ ಅಲ್ಲವೇ ಅಲ್ಲ. ಈಗ ಕಾಲ ಬದಲಾಗಿದೆ. ಇಂದಿನ ಪೀಳಿಗೆಯು ಆ ಚಿಂತನೆಯನ್ನು ಸರಿಸಿ, 'ಹೆಣ್ಣುಮಕ್ಕಳು ಕೂಡಿರುವ ಮನೆಗಳು ಪರಿಪೂರ್ಣ' ಎಂದು ಮರುವ್ಯಾಖ್ಯಾನಿಸಿವೆ. ಈಗ ವಾಸ್ತವವು ಮರುಜಾಗೃತಿಯ ಹಾದಿಯಲ್ಲಿ ನಡೆಯುತ್ತಿವೆ.

ಮಗಳನ್ನು ಮಾತ್ರ ಹೊಂದಿರುವ ಪೋಷಕರನ್ನು, ವ್ಯಂಗ್ಯ ಮನೋಭಾವದ ಕೆಲ ಜನರು ಇಂದಿಗೂ ಪ್ರಶ್ನಿಸುತ್ತಾರೆ- 'ಮಗನಿದ್ದರೆ ಮನೆ ಉಳಿಯುತ್ತದೆ, ವಿಧಿವಿಧಾನ ನಡೆಯುತ್ತದೆ ಅಲ್ವಾ? ಮನೆಯ ಹೆಸರನ್ನು ಮುಂದುವರಿಸುವವರು ಯಾರು? ಆಸ್ತಿ ಯಾರಿಗೆ ಕೊಡುತ್ತೀರಿ? ಕೊಟ್ಟರೆ ಅಳಿಯನೇ ಉಪಯೋಗ ಮಾಡ್ತಾನೆ ಅಲ್ವಾ, ಮಗಳು ಏನು ಮಾಡುತ್ತಾಳೆ?' ಎಂದು. ಈ ಮಾತುಗಳು ಹಾಸ್ಯವಾಗಿ ಕೇಳಿಸಬಹುದು, ಆದರೆ ಅವುಗಳ ಹಿಂದೆ ಶತಮಾನಗಳ ಲಿಂಗಪಕ್ಷಪಾತದ ನೆರಳು ಅಡಗಿದೆ. ಅವು ಹಿಂದಿನ ಶತಮಾನಗಳಿಂದ ಬಂದ ಪುರುಷ ಪ್ರಧಾನ ಮನೋಭಾವದ ಪ್ರತಿಫಲಗಳು. ಆದರೆ ಸಮಾಜವು ಒಂದು ವಿಷಯವನ್ನು ಮರೆಯುವುದೇನೆಂದರೆ, ಮನೆತನದ ಆಸ್ತಿಯನ್ನೂ, ಗೌರವವನ್ನೂ ಕಾಪಾಡುವ ಸಾಮರ್ಥ್ಯ ಮನೆ ಮಗಳಿಗೂ ಸಮಾನವಾಗಿದೆ. ಅಳಿಯನು ಆ ಆಸ್ತಿಯನ್ನು ಉಪಯೋಗಿಸಿದರೆ, ಆ ಮನೆಯ ಮಗಳು ಸಹ ಉಪಯೋಗಿಸುತ್ತಾಳೆ ಅಲ್ವಾ? ಅಂದರೆ, ಆ ಮನೆಯ ಭಾಗ ಆಕೆ ಕೂಡ! ಆಕೆ ಕೂಡಾ ಆ ಮನೆಯ ಮಾಲಕಿ, ಆ ಸಂಸ್ಕೃತಿಯ ಪಾಲಕಿ!

ಮನೆಯನ್ನು ನಡೆಸಲು, ಪ್ರೀತಿ ಹಂಚಲು ಲಿಂಗ ಬೇಕಿಲ್ಲ, ಹೃದಯವಿದ್ದರೆ ಸಾಕು! 'ಶಕ್ತಿ, ಬುದ್ಧಿ ಮತ್ತು ಯಶಸ್ಸು ಲಿಂಗದಿಂದ ನಿರ್ಧಾರವಾಗುವುದಿಲ್ಲ' ಎಂಬುದನ್ನು ಈಗಿನ ಹೆಣ್ಣುಮಕ್ಕಳು ಸಾಬೀತುಪಡಿಸುತ್ತಿದ್ದಾರೆ. ಹಲವು ಕಂಪನಿಗಳ ಮುಖ್ಯಸ್ಥೆಯರಾಗಿ, ಎಂಜಿನಿಯರುಗಳಾಗಿ, ಸಾಹಿತಿಗಳಾಗಿ, ಶಿಕ್ಷಕಿಯರಾಗಿ, ವೈದ್ಯೆಯರಾಗಿ, ಉದ್ಯಮಿಗಳಾಗಿ, ಕಲೆಯ ಪಾತ್ರಧಾರಿಗಳಾಗಿ ಮನೆಯನ್ನು ನಡೆಸುತ್ತಾ ಸಮಾಜವನ್ನೂ ಮುನ್ನಡೆಸುತ್ತ, ಹೆಣ್ಣು ಮತ್ತು ಗಂಡು ಸಮ ಎಂದು ಸಾರಿದ್ದಾರೆ. ಹೆಣ್ಣು ತನ್ನ ಜೀವನದ ಎರಡೂ ಮುಖಗಳಲ್ಲಿ ಸಮತೋಲನ ಸಾಧಿಸಿದ್ದಾಳೆ. ವೃತ್ತಿಜೀವನದ ಕಠಿಣತೆಗೂ, ಕುಟುಂಬದ ಸೌಮ್ಯತೆಗೂ ಸಮಾನ ಗೌರವ ನೀಡುತ್ತಿದ್ದಾಳೆ.

ಒಂದು ಕಾಲಕ್ಕೆ 'ಪುರುಷರಿಗಷ್ಟೇ ಮೀಸಲು' ಎಂದು ಹೇಳಲ್ಪಟ್ಟ ಸಂಸ್ಕಾರಗಳನ್ನೂ ಇಂದಿನ ಮನೆ ಮಗಳು ಧೈರ್ಯದಿಂದ ಮುನ್ನಡೆಸುತ್ತಾಳೆ. ಮಗನೇ ಪಿತೃಶ್ರಾದ್ಧ ಮಾಡಬೇಕು, ಚಿತೆಗೆ ಬೆಂಕಿ ಹಚ್ಚಬೇಕು ಎಂಬ ನಂಬಿಕೆಗಳು ನಿಧಾನವಾಗಿ ಕರಗುತ್ತಿವೆ. ಅನೇಕ ಹೆಣ್ಣುಮಕ್ಕಳು ತಮ್ಮ ಪೋಷಕರ ಅಂತಿಮ ವಿಧಿಯನ್ನು ಗೌರವದಿಂದ ನೆರವೇರಿಸಿ, ಧೈರ್ಯದಿಂದ ನಿಭಾಯಿಸಿದ್ದಾರೆ. ಮಗಳು ಕೇವಲ ಮನೆಯ ಮಗಳಾಗಿ ಇಲ್ಲ, ತನ್ನ ತಂದೆಗೆ ಸಹಾಯಹಸ್ತ ಚಾಚುವ ಮಗನಾಗಿ, ಅಮ್ಮನ ಪ್ರೀತಿಯ ಸಹಪಾಠಿಯಾಗಿ, ತನ್ನ ಸಹೋದರಿಯರಿಗೆ ಮಾದರಿಯೇ ಆಗಿದ್ದಾಳೆ. ಹೌದು, ಪ್ರೀತಿಗೆ ಮತ್ತು ಕರ್ತವ್ಯಕ್ಕೆ ಲಿಂಗವಿಲ್ಲ ಎಂಬುದನ್ನು ಆಕೆ ಸಾಬೀತುಪಡಿಸಿದ್ದಾಳೆ.

ಹೆಣ್ಣುಮಕ್ಕಳು ತಮ್ಮ ತಂದೆಯ ಹೆಸರನ್ನಷ್ಟೇ ಮುಂದುವರಿಸುವವರಲ್ಲ, ತಾಯಿಯ ಶಕ್ತಿಯನ್ನೂ, ಸಂಸ್ಕೃತಿಯನ್ನೂ ಹೊತ್ತು ನಡೆಯುವವರು. ಗಂಡು ದಿಕ್ಕು ಇಲ್ಲದ ಮನೆ ಎಂದು ಹೇಳುವವರ ತೂಕವಿಲ್ಲದ ಮಾತಿಗೆ ಕಿವಿಗೊಡದೆ, ಮನೆ ಮತ್ತು ಕೆಲಸ ಎರಡನ್ನೂ ಸಮತೋಲನದಿಂದ ನಡೆಸುವ ಮಹಿಳೆಯರಿಗೆ ನಮಸ್ಕಾರ. ಹೆಣ್ಣುಮಕ್ಕಳ ಜತೆಗೆ ನಿಂತಿರುವ ಹೊಸ ಪೀಳಿಗೆಯ ಪುರುಷರಿಗೂ ಗೌರವ ಕೊಡಲೇಬೇಕು. ತಂದೆ, ಸಹೋದರರು, ಪತಿ, ಗೆಳೆಯ ಎಲ್ಲರೂ ಹೊಸ ಚಿಂತನೆಗೆ ಪಾತ್ರರು. ಅಡುಗೆ ಮನೆಯಲ್ಲಿ ಸಹಾಯ ಮಾಡುವ, ಮಕ್ಕಳ ಪೋಷಣೆಯಲ್ಲಿ ಪಾಲ್ಗೊಳ್ಳುವ, ಮಹಿಳೆಯರ ವೃತ್ತಿಜೀವನದಲ್ಲಿ ಬೆಂಬಲ ನೀಡುತ್ತಿರುವ ಎಲ್ಲ ಪುರುಷರು ಮನೆ ಮಗಳ ಜತೆ ನಿಲ್ಲುವ ಶಕ್ತಿಯಾಗಿದ್ದಾರೆ. ಇವರು ನಿಜವಾದ ಬದಲಾವಣೆಯ ಧ್ವಜಧಾರಿಗಳು. ಬಲ ಅಂದರೆ ಆಳುವ ಶಕ್ತಿಯಲ್ಲ, ಜತೆಯಾಗಿ ನಿಲ್ಲುವ ಶಕ್ತಿ. ಇದಕ್ಕೆ ಪಾರ್ಶ್ವವಾಗಿ, ಹೊಸ ಪೀಳಿಗೆಯ ಪುರುಷರೂ ಪ್ರಶಂಸೆಗೆ ಪಾತ್ರರು. ಇಂದಿನ ಯುವಕರು ಸಮಾನತೆಯನ್ನು ಕೇವಲ ಘೋಷಣೆ ಎಂದು ಅಲ್ಲ, ಜೀವನಶೈಲಿಯನ್ನಾಗಿ ಸ್ವೀಕರಿಸಿದ್ದಾರೆ.

ಹೆಣ್ಣು ಮಗಳು ಮಾತ್ರವಿರುವ ಮನೆ ಅಪೂರ್ಣವಲ್ಲ, ಅದು ದೈವದ ಪೂರ್ಣತೆಯ ಆಶೀರ್ವಾದವಾಗಿದೆ. ಅಲ್ಲಿ ಪ್ರೀತಿ, ಧೈರ್ಯ ಮತ್ತು ಮಾನವೀಯತೆ ಎಂಬ ಮೂರು ಸ್ತಂಭಗಳು ನೆಲೆಸಿವೆ. ಇಂದಿನ ಪೋಷಕರು ತಮ್ಮ ಮಗಳಿಗೆ ನೀಡುವ ಸಮಜೀವನ ಮುಂದಿನ ಪೀಳಿಗೆಗೆ ಹೆಮ್ಮೆಯ ದಾರಿದೀಪವಾಗಿದೆ. ಲೋಕ ನೆನಪಿಡಲಿ- ಹೆಣ್ಣುಮಕ್ಕಳ ಮನೆ ಬೆಳಕಿನ ಮನೆ! ಅಲ್ಲಿ ವಂಶವೃಕ್ಷಕ್ಕಿಂತಲೂ ನಗು, ಪ್ರೀತಿ ಮತ್ತು ಗೌರವದ ಪರಂಪರೆ ಬೆಳೆದಿರುತ್ತದೆ. ಆಸ್ತಿಗಿಂತ ಆತ್ಮೀಯತೆಯ ಮೌಲ್ಯ ಹೆಚ್ಚಾಗಿರುತ್ತದೆ. ಆಕೆ ಮನೆಯನ್ನು ನಡೆಸುತ್ತಾಳೆ, ಉಳಿಸುತ್ತಾಳೆ ಹಾಗೂ ಬಲಪಡಿಸುತ್ತಾಳೆ. ಜೀವನದಲ್ಲಿ ಸೋತರೂ ಗೆದ್ದರೂ, ಜನರ ಮಾತುಗಳಿಗೆ ಕಿವಿಗೊಡದೆ ತನ್ನ ಬೆನ್ನೆಲುಬಾಗಿ ನಿಂತ ಪೋಷಕರಿಗೆ ಹೆಮ್ಮೆಯಾಗುತ್ತಾಳೆ. ತನ್ನ ಹೆಜ್ಜೆಗಳಲ್ಲಿ ನವಭಾರತದ ಗುರುತನ್ನು ಮೂಡಿಸುತ್ತಾಳೆ....

ಕಾಡುಜನಾಂಗದ ಮುಗ್ಧ ಬಾಲಕನ ಹಂಚಿ ತಿನ್ನುವ ಗುಣ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV
Special
ಯೂಟ್ಯೂಬ್
ಚಾನೆಲ್‌ನಲ್ಲಿ

ಡಾ. ಬಾಲಸುಬ್ರಹ್ಮಣ್ಯ ಅವರದು ಬಹಳ ದೊಡ್ಡ ಹೆಸರು ಮತ್ತು ತೂಕದ ವ್ಯಕ್ತಿತ್ವ. ವೃತ್ತಿಯಿಂದ ವೈದ್ಯರಾಗಿದ್ದರೂ, ಪ್ರವೃತ್ತಿಯಿಂದ ಸಮಾಜಸೇವಕರಾಗಿ ಹೆಗ್ಗಡದೇವನಕೋಟೆಯ ಆಚೆ ಇರುವ ಹೊಸಹಳ್ಳಿಯಲ್ಲಿ ತಮ್ಮ ವೈದ್ಯ ಸ್ನೇಹಿತರನ್ನು ಸೇರಿಸಿಕೊಂಡು, ಅಲ್ಲಿಯ ಗಿರಿಜನರಾದ ಕಾಡು ಕುರುಬ ಹಾಗೂ ಜೇನು ಕುರುಬರಿಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಿದ್ದಾರೆ. ನಂತರ ಅವರಿಗಾಗಿ ಒಂದು ಶಾಲೆಯನ್ನು ಕೂಡ ತೆರೆದರು. ಈಗ ನೂರಾರು ಗಿರಿಜನ ಮಕ್ಕಳು ಆ ಶಾಲೆಯಲ್ಲಿ ಓದುತ್ತಿದ್ದಾರೆ.

ಕಾಡಿನಲ್ಲಿರುವ ಈ ಮಕ್ಕಳಿಗೆ ಯಾವ ಸಂಸ್ಕೃತಿಯ ಅರಿವೂ ಇಲ್ಲ, ಇವರು ಅನಾಗರಿಕರು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ; ಆದರೆ ಅದು ಯಾವಾಗಲೂ ನಿಜವಾಗಿರುವುದಿಲ್ಲ. ವಾಸ್ತವ ಬೇರೆಯೇ ಇರುತ್ತದೆ. ಡಾ. ಬಾಲಸುಬ್ರಹ್ಮಣ್ಯಂರವರೇ ಹೇಳಿದ ಒಂದು ಘಟನೆ ಹೀಗಿದೆ:

ಅಲ್ಲಿಯ ಗಿರಿಜನ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಊಟಕ್ಕೆ ಪ್ರತಿದಿನ ರಾಗಿ ಮುದ್ದೆಯನ್ನು ಕೊಡುತ್ತಾರೆ. ಊಟ ಬಡಿಸುವುದು ಅಲ್ಲಿನ ವಿದ್ಯಾರ್ಥಿಗಳೇ. ಒಬ್ಬೊಬ್ಬ ವಿದ್ಯಾರ್ಥಿಗಳಿಗೂ ಒಂದೊಂದು ಕೆಲಸದ ಜವಾಬ್ದಾರಿ ಕೊಟ್ಟಿರುತ್ತಾರೆ. ಆ ಜವಾಬ್ದಾರಿಯನ್ನು ಮಕ್ಕಳು ಹೇಗೆ ನಿಭಾಯಿಸುತ್ತಾರೆ ಎಂಬುದನ್ನು ನೋಡುವುದೇ ಖುಷಿ ಕೊಡುತ್ತದೆ.

ಒಂದು ದಿನ ಒಬ್ಬ ಹುಡುಗನಿಗೆ ರಾಗಿಮುದ್ದೆಯನ್ನು ಮಾಡಿ ಬಡಿಸುವ ಜವಾಬ್ದಾರಿ ಬಿದ್ದಿತ್ತು. ಅವನ ತರಗತಿಯಲ್ಲಿ ಸುಮಾರು ಇಪ್ಪತ್ತೆಂಟು ಜನ ವಿದ್ಯಾರ್ಥಿಗಳಿದ್ದರು. ಆಗ ಆ ಹುಡುಗ ಎಲ್ಲಾ ರಾಗಿ ಹಿಟ್ಟನ್ನು ಸೇರಿಸಿ ಇಪ್ಪತ್ತೆಂಟು ಸಾಧಾರಣ ಗಾತ್ರದ ಉಂಡೆಗಳನ್ನು ಮಾಡಿ ಜೋಡಿಸಿಟ್ಟ. ಅದರಲ್ಲಿ ಒಂದು ಉಂಡೆಯನ್ನು ಮಾತ್ರ ತೆಗೆದುಕೊಂಡು ಅದರಲ್ಲಿ ಎರಡು ಭಾಗ ಮಾಡಿಟ್ಟ. ಅಂದರೆ ಒಟ್ಟು ಇಪ್ಪತ್ತೊಂಬತ್ತು ಮುದ್ದೆಗಳಾಗಿದ್ದವು. ಇಪ್ಪತ್ತೇಳು ಮುದ್ದೆಗಳು ಒಂದೇ ಗಾತ್ರದವು, ಇನ್ನೆರಡು ಮುದ್ದೆಗಳು ಮಾತ್ರ ಚಿಕ್ಕವುಗಳಾಗಿದ್ದವು.

ಯಾವುದೋ ಕಾರಣಕ್ಕಾಗಿ ಡಾಕ್ಟರ್ ಬಾಲು ಅವರು ಅಡುಗೆ ಮನೆಯೊಳಗೆ ಬಂದರು. ಅಲ್ಲಿ ಆ ಹುಡುಗ ತಟ್ಟೆಯಲ್ಲಿ ರಾಗಿ ಮುದ್ದೆಯನ್ನು ಜೋಡಿಸಿಟ್ಟುಕೊಂಡು ನಿಂತಿದ್ದನ್ನು ನೋಡಿದರು. ಎರಡು ಮುದ್ದೆಗಳು ಮಾತ್ರ ಸಣ್ಣಗಿದ್ದುದ್ದನ್ನು ಅವರು ಗಮನಿಸಿ, ''ಯಾಕಪ್ಪಾ, ಎಷ್ಟು ಹುಡುಗರಿದ್ದಾರೆ? ಎಷ್ಟು ಮುದ್ದೆ ಮಾಡಿದ್ದೀಯಾ?'' ಎಂದು ಕೇಳಿದರು.

ಹುಡುಗ, ''ಇಪ್ಪತ್ತೆಂಟು ಜನ ಇದ್ದಾರೆ ಸರ್'' ಎಂದ.

''ಹಾಗಾದರೆ ಇಪ್ಪತ್ತೊಂಬತ್ತು ಮುದ್ದೆ ಇದೆಯಲ್ಲಾ?'' ಎಂದು ಕೇಳಿದರು ಡಾ. ಬಾಲು.

ಆಗ ಆ ಹುಡುಗ, ''ಅದೂ ಸರ್, ಊಟದ ಹೊತ್ತಿಗೆ ನನ್ನ ತಂಗಿ ಇಲ್ಲಿಗೆ ಬರ್ತಾಳೆ; ಅವಳಿಗಾಗಿ ನನ್ನ ಮುದ್ದೆಯಲ್ಲಿ ಅರ್ಧ ಮಾಡಿ ಇನ್ನೊಂದು ಮುದ್ದೆ ಮಾಡಿದ್ದೀನಿ'' ಎಂದು ಹೇಳಿದ.

''ಅಯ್ಯೋ ದಡ್ಡ, ಒಟ್ಟು ಹಿಟ್ಟಿನಲ್ಲೇ ಇಪ್ಪತ್ತೊಂಬತ್ತು ಮುದ್ದೆ ಮಾಡಿದ್ದರೆ ಆಗುತ್ತಿರಲಿಲ್ಲವೇ? ಅದರಲ್ಲೇಕೆ ಅರ್ಧ ಮಾಡಿದೆ?'' ಎಂದರು ಡಾ. ಬಾಲು.

ಆಗ ಆ ಹುಡುಗ ''ಹಾಗೆ ಮಾಡಿದರೆ, ಬೇರೆ ಎಲ್ಲರಿಗೂ ಸ್ವಲ್ಪ ಕಡಿಮೆಯಾಗುತ್ತಿತ್ತು. ಅವಳು ನನ್ನ ತಂಗಿ, ನನ್ನ ಪಾಲಿನಲ್ಲಿ ಮಾತ್ರ ಅವಳಿಗೆ ಕೊಡುವುದು ಸರಿಯಲ್ಲವೇ ಸರ್?'' ಎಂದ. ಆ ಹುಡುಗನ ಮಾತನ್ನು ಕೇಳಿ, ಡಾ. ಬಾಲುರವರ ಕಣ್ಣುಗಳಲ್ಲಿ ನೀರು ಹರಿಯಿತು. ಅವನ ಪ್ರಾಮಾಣಿಕತೆಗೆ ಭೇಷ್ ಎಂದು ಹೇಳಿ ಅವನ ಬೆನ್ನು ತಟ್ಟಿದರು.

ಯಾವುದಾದರೂ ಸಮಾರಂಭಗಳಲ್ಲಿ ಅಥವಾ ಕಚೇರಿಗಳಲ್ಲಿ ಏನಾದರೂ ಉಚಿತವಾಗಿ ಸಿಗುತ್ತದೆ ಎಂದರೆ ನಮ್ಮದಷ್ಟನ್ನ ತೆಗೆದುಕೊಳ್ಳುವುದರ ಜತೆಗೆ ಮನೆಯವರಿಗಾಗಿ ಕೂಡ ಅನಾಯಾಸವಾಗಿ ಒಂದಿಷ್ಟು ಹಿಡಿದುಕೊಂಡು ಬಂದಿರುತ್ತೇವೆ. ಅದಕ್ಕೆ ನಿಜವಾಗಲೂ ನಾವು ಅರ್ಹರೋ ಅಲ್ಲವೋ ಎನ್ನುವುದನ್ನು ಕೂಡ ಯೋಚಿಸುವುದಿಲ್ಲ. 'ಜಗತ್ತಿನದೆಲ್ಲ ಒಳ್ಳೆಯದು ನನಗೆ ಮತ್ತು ನನ್ನ ಮನೆಯವರಿಗೆ ಬೇಕು' ಎಂದು ಯೋಚಿಸುವ ವಿದ್ಯಾವಂತರಾದ ನಮ್ಮ ಸಣ್ಣತನವನ್ನ ಮೇಲಿನ ಕಥೆ ಅದೆಷ್ಟು ಚೆನ್ನಾಗಿ ತೋರಿಸಿಬಿಡುತ್ತದೆ ಅಲ್ಲವೇ? ಇನ್ನಾದರೂ 'ಎಲ್ಲವೂ ನಮಗೇ ಬೇಕು' ಎನ್ನುವ ಅತಿಯಾಸೆಯನ್ನ ಬಿಟ್ಟು ಪ್ರಾಮಾಣಿಕವಾಗಿ ಬದುಕುವ ಪ್ರಯತ್ನ ಮಾಡೋಣ....

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		■	2	3		4	■	5
	■	6	■		■		■	
	■	7			■		■	
8	9		■	■	10		11	
■		■	12			■		■
13		14		■	■	15		16
	■		■	17			■	
	■		■		■		■	
	■	18				■	19	

ಎಡದಿಂದ ಬಲಕ್ಕೆ

1. ಅಪೇಕ್ಷೆಗೆ ಮತ್ತೊಂದು ಹೆಸರು (2)
2. ಮನಸ್ಸು ಬಿಚ್ಚಿ ಮಾತನಾಡದಿರುವಿಕೆ (4)
7. ರಾತ್ರಿ, ಇರುಳು (3)
8. ಕಪ್ಪು ಕೂದಲಿನೊಂದಿಗೆ ಬಂದಿರುವ ಭಲ್ಲೂಕ (3)
10. ಕೈಯೊಂದಿಗೆ ಬಂದಿದೆ ಕೆಂಪು ಕಣಗಿಲೆ (4)
12. ಕೆಲಸಕ್ಕೆ ಸಿಕ್ಕ ಕೂಲಿ (3)
13. ಗಣಗಳ ಒಡೆಯನಾದ ವಿನಾಯಕ (4)
15. ಅಷ್ಟ ಸರ್ಪಗಳಲ್ಲಿ ಒಂದು (3)
17. ಕತ್ತರಿಸುವ ಸಾಧನ (3)
18. ಮನೆಯ ಒಡೆಯ (4)
19. ಹಾರಿ ಬಂದಾಗ ಸಿಕ್ಕಿದ ಹಾದಿ (2)

ಮೇಲಿಂದ ಕೆಳಕ್ಕೆ

1. ನೆಲ್ಲಿಕಾಯಿ ಗಿಡ ಮತ್ತದರ ಕಾಯಿ (4)
3. ಸಂಶಯಕ್ಕೆ ಇನ್ನೊಂದು ಹೆಸರಿದು (3)
4. ಕೈಜೋಡಿಸಿ ಮಾಡಿದ ವಂದನೆ (4)
5. ಮರದ ನಡುವೆ ಸಿಲುಕಿದ ಮೋಹ (4)
6. ಗಡಿಯಲ್ಲಿದೆ ವ್ಯಾಯಾಮಶಾಲೆ (3)
9. ಮಣ ಭಾರದ ವಲ್ಲಭ (3)
10. ಕಪ್ಪು ಎನ್ನುವ ಆನೆ (2)
11. ನೋಡು ಅಥವಾ ನಿರೀಕ್ಷಿಸು (3)
12. ಎರಡಕ್ಷರದ ಚಿತ್ತ (2)
13. ಸಮಯ ತಿಳಿಸುವ ಯಂತ್ರ (4)
14. ಗೆಲುವನ್ನು ಕಟ್ಟಿಕೊಂಡರೂ ಇದು ಸೋಲು (4)
15. ನೀರಿನಲ್ಲಿ ಹುಟ್ಟಿದುದು (3)
16. ಅಸಮಾಧಾನಕ್ಕೆ ಕಾರಣವಾದ ಕಿರುಕುಳ (4)
17. ಅಳೆಯುವ ಸಾಧನ ತಲೆಕೆಳಗಾಗಿದೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಆಸೆ 2.ಬಿಗುಮಾನ 7.ರಜನಿ 8.ಕರಡಿ 10.ಕರವೀರ 12.ಮಜೂರಿ 13.ಗಣಪತಿ 15.ವಾಸುಕಿ 17.ಕತ್ತರಿ 18.ಯಜಮಾನ 19.ದಾರಿ

ಮೇಲಿಂದ ಕೆಳಕ್ಕೆ
1.ಆಮಲಕ 3.ಗುಮಾನಿ 4.ನಮಸ್ಕಾರ 5.ಮಮಕಾರ 6.ಗರಡಿ 9.ರಮಣ 10.ಕರಿ 11.ವೀಕ್ಷಿಸು 12.ಮತಿ 13.ಗಡಿಯಾರ 14.ಪರಾಜಯ 15.ವಾರಿಜ 16.ಕಿರಿಕಿರಿ 17.ಕಪಮಾ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಟೆಸ್ಟ್ ಚಾಂಪಿಯನ್‌ಶಿಪ್: ಜಡೇಜಾ ವಿಶ್ವದಾಖಲೆ

ಕೋಲ್ಕತಾ: ಟೀಮ್ ಇಂಡಿಯಾದ ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜಾ ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ವಿಶ್ವ ದಾಖಲೆಯೊಂದನ್ನು ನಿರ್ಮಿಸಿದ್ದಾರೆ. ಈಡನ್ ಗಾರ್ಡನ್ಸ್‌ನಲ್ಲಿ ಎರಡನೇ ಇನ್ನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಮತ್ತು ಪಂದ್ಯದಲ್ಲಿ ಒಟ್ಟು 45 ರನ್‌ಗಳನ್ನು ಗಳಿಸುವ ಮೂಲಕ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದರು. ಇದೇ ವೇಳೆ ಡಬ್ಲ್ಯುಟಿಸಿ ಇತಿಹಾಸದಲ್ಲಿ 2000 ಕ್ಕೂ ಹೆಚ್ಚು ರನ್ ಗಳಿಸಿ 150 ವಿಕೆಟ್‌ಗಳನ್ನು ಪಡೆದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಆಗಸ್ಟ್ 2019ರಲ್ಲಿ ಡಬ್ಲ್ಯುಟಿಸಿ ಆರಂಭವಾದಾಗಿನಿಂದ ಕೇವಲ 16 ಬೌಲರ್‌ಗಳು ಮಾತ್ರ 100 ಅಥವಾ ಅದಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ ಮತ್ತು ಕೆಲವೇ ಕೆಲವು ಬ್ಯಾಟರ್‌ಗಳು 1000 ಅಥವಾ ಅದಕ್ಕಿಂತ ಹೆಚ್ಚು ರನ್‌ಗಳನ್ನು ಗಳಿಸಿದ್ದಾರೆ. ಜಡೇಜ ಹೊರತುಪಡಿಸಿ ಪ್ಯಾಟ್ ಕಮ್ಮಿನ್ಸ್ ಮತ್ತು ಆರ್. ಅಶ್ವಿನ್ ಡಬ್ಲ್ಯುಟಿಸಿಯಲ್ಲಿ 100ಕ್ಕೂ ಹೆಚ್ಚು ವಿಕೆಟ್‌ಗಳು ಮತ್ತು 1000 ರನ್‌ಗಳನ್ನು ಪಡೆದ ಆಟಗಾರರಾಗಿದ್ದಾರೆ. ಆದಾಗ್ಯೂ, ಅವರಲ್ಲಿ ಯಾರೂ ಪಂದ್ಯಾವಳಿಯಲ್ಲಿ 2000ಕ್ಕಿಂತ ಹೆಚ್ಚು ರನ್‌ಗಳನ್ನು ಗಳಿಸಿಲ್ಲ.

ಕೆಎಸ್‌ಸಿಎ ಚುನಾವಣೆ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಚುನಾವಣೆ ಮುಂದೂಡಿಕೆಯಾಗಿದೆ. ಚುನಾವಣೆ ಸ್ಪರ್ಧೆಗೆ ಅಭ್ಯರ್ಥಿಗಳ ಅರ್ಹತೆ ಬಗ್ಗೆ ಗೊಂದಲ ಉಂಟಾಗಿತ್ತು, ಹೀಗಾಗಿ ಡಿಸೆಂಬರ್ 30ಕ್ಕೆ ಚುನಾವಣೆಯನ್ನು ಮುಂದೂಡಿ ಚುನಾವಣಾ ಅಧಿಕಾರಿ ತೀರ್ಮಾನ ತೆಗೆದುಕೊಂಡಿದ್ದಾರೆ. ಅಭ್ಯರ್ಥಿಗಳ ಅರ್ಹತೆ ಬಗ್ಗೆ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿದೆ. ಗೊಂದಲ ಬಗೆಹರಿಸಿಕೊಂಡು ಚುನಾವಣೆ ಮಾಡಿ ಎಂಬ ಸೂಚನೆಯನ್ನು ಚುನಾವಣಾಧಿಕಾರಿ ನೀಡಿದ್ದಾರೆ. ನವೆಂಬರ್ 30ರಂದು ಕೆಎಸ್‌ಸಿಎ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಹಾಗೂ ಉಳಿದ ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಹಿರಿಯ ಪತ್ರಕರ್ತ ಕೆ.ಎನ್. ಶಾಂತಕುಮಾರ್ ಹಾಗೂ ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಸ್ಪರ್ಧಿಸಿದ್ದರು. ಬ್ರಿಜೇಶ್ ಪಟೇಲ್ ಬಣದಿಂದ ಕೆ.ಎನ್. ಶಾಂತಕುಮಾರ್ ಸ್ಪರ್ಧೆ ಮಾಡಿದ್ದರೆ, ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಅವರ ಬೆಂಬಲದಿಂದ ವೆಂಕಿ ಸ್ಪರ್ಧಿಸಿದ್ದರು



ಸ್ಮರಣ್ ಅಜೇಯ ದ್ವಿಶತಕ | ಕರ್ನಾಟಕ 8 ವಿಕೆಟ್‌ಗೆ 547 ರನ್ಸ್ ಡಿಕ್ಲೇರ್ | ಚಂಡೀಗಢ 4 ವಿಕೆಟ್‌ಗೆ 72 ರನ್

ರಣಜಿ: ಕರ್ನಾಟಕ ಸುಸ್ಥಿತಿಯಲ್ಲಿ

ಹುಬ್ಬಳ್ಳಿ: ಸ್ಮರಣ್ ರವಿಚಂದ್ರನ್ ಅವರ ಅಜೇಯ ದ್ವಿಶತಕ ಮತ್ತು ಇತರ ಬ್ಯಾಟರ್‌ಗಳ ಸಮಯೋಚಿತ ಪ್ರದರ್ಶನದಿಂದಾಗಿ ಕರ್ನಾಟಕವು ಇಲ್ಲಿ ನಡೆಯುತ್ತಿರುವ ರಣಜಿ ಕ್ರಿಕೆಟ್‌ನಲ್ಲಿ ಎರಡನೇ ದಿನವಾದ ಸೋಮವಾರ ಚಂಡೀಗಢದ ವಿರುದ್ಧ 8 ವಿಕೆಟ್ ನಷ್ಟಕ್ಕೆ 547 ರನ್ ದಾಖಲಿಸಿ ತನ್ನ ಮೊದಲ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಬಳಿಕ ಮೊದಲ ಇನ್ನಿಂಗ್ಸ್ ಆರಂಭಿಸಿದ ಚಂಡೀಗಢ ದಿನದಾಂತ್ಯಕ್ಕೆ ಕೇವಲ 72 ರನ್‌ಗೆ 4 ವಿಕೆಟ್ ಕಳೆದುಕೊಂಡಿದೆ.

5 ವಿಕೆಟ್‌ಗೆ 298 ರನ್‌ಗಳಿಂದ ಸೋಮವಾರ ಆಟ ಮುಂದುವರಿಸಿದ ಕರ್ನಾಟಕ ತಂಡದ ಸ್ಮರಣ್ ರವಿಚಂದ್ರನ್-ಶ್ರೇಯಸ್ ಗೋಪಾಲ್ ಜೋಡಿ ಭರ್ಜರಿ ಆಟವನ್ನೇ ಪ್ರದರ್ಶಿಸಿತು. 6ನೇ ವಿಕೆಟ್‌ಗೆ ಈ ಜೋಡಿ 141 ರನ್ ಕಲೆ ಹಾಕುವ ಮೂಲಕ ಚಂಡೀಗಢ ಬೌಲರ್‌ಗಳನ್ನು ಹಿಗ್ಗಾಮುಗ್ಗಾ ಬೆಂಡೆತ್ತಿದರು.

38 ರನ್‌ಗಳಿಂದ ಆಟ ಮುಂದುವರಿಸಿದ ಶ್ರೇಯಸ್ ಗೋಪಾಲ್ ತಮ್ಮ ವೈಯಕ್ತಿಕ ಇನ್ನಿಂಗ್ಸ್ ಅನ್ನು 62 ರನ್‌ಗಳ ವರೆಗೂ ಕೊಂಡೊಯ್ದರು. 147 ಬಾಲ್‌ಗಳನ್ನು ಎದುರಿಸಿದ ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿಗಳಿದ್ದವು. ವಿಷು ಕಾಶ್ಯಪ್ ಅವರು ಹೆಣೆದ ಎಲ್‌ಬಿಡಬ್ಲ್ಯು ಬಲೆಯ ಮೂಲಕ ಶ್ರೇಯಸ್ ಗೋಪಾಲ್ ತಮ್ಮ ವಿಕೆಟ್ ಕಳೆದುಕೊಂಡರು.

ಆ ಬಳಿಕ ಕ್ರೀಸ್‌ಗೆ ಬಂದ ವಿದ್ಯಾಧರ್ ಪಾಟೀಲ್ ಜತೆ ಸ್ಮರಣ್ ರವಿಚಂದ್ರನ್ ಇನ್ನಿಂಗ್ಸ್ ಮುಂದುವರಿಸಿದರು. ಪಾಟೀಲ್ ಅವರು ಕರ್ನಾಟಕ ತಂಡದ ಮೊತ್ತ 427 ರನ್ ಆದಾಗ ಔಟ್ ಆದರು. 51 ಬಾಲ್‌ಗಳನ್ನು ಎದುರಿಸಿದ ಅವರು 30 ರನ್‌ಗಳನ್ನು ಗಳಿಸಿ ಜಗ್ಜಿತ್ ಸಿಂಗ್ ಬೌಲಿಂಗ್‌ನಲ್ಲಿ ಬೌಲ್ಡ್ ಔಟ್ ಆಗುವ ಮೂಲಕ ವಿಕೆಟ್ ಒಪ್ಪಿಸಿದರು.

ಆದರೆ ಬಳಿಕ ಕ್ರೀಸ್‌ಗೆ ಬಂದ ಶಿಖರ್ ಶೆಟ್ಟಿ ಅವರು ಸ್ಮರಣ್ ರವಿಚಂದ್ರನ್ ಅವರ ಜತೆ ಉತ್ತಮ ಜತೆಯಾಟ ಆಡಿದರು. 122 ಬಾಲ್‌ಗಳನ್ನು ಎದುರಿಸಿದ ಶಿಖರ್ ಶೆಟ್ಟಿ 7 ಬೌಂಡರಿ ಒಳಗೊಂಡ ಅರ್ಧ ಶತಕ (59 ರನ್) ಬಾರಿಸಿ ವಿಷು ಕಾಶ್ಯಪ್ ಬೌಲಿಂಗ್‌ನಲ್ಲಿ ಕಾಟ್ ಆ್ಯಂಡ್ ಬೌಲ್ಡ್ ಆಗುವ ಮೂಲಕ ತಮ್ಮ ವಿಕೆಟ್ ಕಳೆದುಕೊಂಡರು. ಒಂದೆಡೆ ಬಂಡೆಯಂತೆ ಬ್ಯಾಟ್ ಮಾಡಿದ ಸ್ಮರಣ್ ರವಿಚಂದ್ರನ್ ಈ ಮಧ್ಯೆ ತಮ್ಮ ದ್ವಿಶತಕವನ್ನೂ ಪೂರೈಸಿದರು. 362 ಬಾಲ್‌ಗಳನ್ನು ಎದುರಿಸಿದ ಅವರು 227 ರನ್ ಗಳಿಸಿ ಅಜೇಯರಾದರೆ, ಮೊಹ್ಸಿನ್ ಖಾನ್ 3 ಬಾಲ್‌ಗಳಲ್ಲಿ 5 ರನ್ ಗಳಿಸಿ ಅಜೇಯರಾಗುಳಿದರು. ಕರ್ನಾಟಕ ತಂಡವು ಒಟ್ಟು 160 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 547 ರನ್ ಗಳಿಸಿದ್ದ ಸಂದರ್ಭದಲ್ಲಿ ತನ್ನ ಮೊದಲ ಇನ್ನಿಂಗ್ಸ್ ಅನ್ನು ಡಿಕ್ಲೇರ್ ಮಾಡಿಕೊಂಡಿತು.

ಚಂಡೀಗಢ ತಂಡದ ಪರವಾಗಿ ಜಗ್ಜಿತ್ ಸಿಂಗ್, ವಿಷು ಕಶ್ಯಪ್, ನಿಶುಂಕ್ ಬಿರ್ಲಾ ತಲಾ ಎರಡು ವಿಕೆಟ್ ಪಡೆದರೆ, ರಾಜ್ ಅಂಗದ್ ಬಾವ ಮತ್ತು ತರನ್ಪ್ರೀತ್ ಸಿಂಗ್ ತಲಾ ಒಂದು ವಿಕೆಟ್ ಪಡೆದರು.

ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿದ ಚಂಡೀಗಢ ತಂಡ ಸೋಮವಾರದ ಆಟದ ಅಂತ್ಯಕ್ಕೆ 4 ವಿಕೆಟ್ ನಷ್ಟಕ್ಕೆ 72 ರನ್ ಗಳಿಸಿ ತೀವ್ರ ಕುಸಿತ ಕಂಡಿತು. ಮೊದಲ ವಿಕೆಟ್‌ಗೆ ಶಿವಂ ಭಾಂಬ್ರಿ ಮತ್ತು ಅರ್ಜುನ್ ಆಜಾದ್ ಜೋಡಿ 41 ರನ್ ಸಂಪಾದಿಸಿತು. ಆಜಾದ್ 32 ರನ್ ಗಳಿಸಿದರೆ, ಭಾಂಬ್ರಿ 16 ರನ್ ಗಳಿಸಿದರು. ಆ ಬಳಿಕ ಬಂದ ವಿಷು ಕಾಶ್ಯಪ್ ಕೇವಲ 5 ರನ್ ಗಳಿಸಲಷ್ಟೇ ಶಕ್ತರಾದರು. ನಾಯಕ ಮನನ್ ವೋಹ್ರಾ 14 ರನ್ ಗಳಿಸಿ ತಮ್ಮ ವಿಕೆಟ್ ಅನ್ನು ಮಂಗಳವಾರಕ್ಕೆ ಕಾಯ್ದುಕೊಂಡಿದ್ದಾರೆ.

ಕರ್ನಾಟಕ ಪರ ಶ್ರೇಯಸ್ ಗೋಪಾಲ್ 18 ರನ್ ನೀಡಿ 3 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರೆ, ಉಳಿದೊಂದು ವಿಕೆಟ್ ಮೊಹ್ಸಿನ್ ಖಾನ್ ಪಾಲಾಯಿತು.

2ನೇ ಟೆಸ್ಟ್‌ನಲ್ಲಿ ಗಿಲ್ ಸ್ಥಾನ ತುಂಬಲು ಭಾರೀ ಪೈಪೋಟಿ

ಸಾಯಿ ಸುದರ್ಶನ್‌ಗೆ ಅವಕಾಶ ಸಾಧ್ಯತೆ

ಗುವಾಹಟಿ: ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ವೇಳೆ ಕುತ್ತಿಗೆ ಗಾಯದ ಚಿಕಿತ್ಸೆಗೆ ಒಳಗಾಗಿದ್ದ ಭಾರತ ಟೆಸ್ಟ್ ತಂಡದ ನಾಯಕ ಶುಭ್‌ಮನ್ ಗಿಲ್ ಅವರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರೂ, ಇನ್ನೂ ಸಂಪೂರ್ಣವಾಗಿ ಗುಣಮುಖರಾಗಿಲ್ಲ. ಹೀಗಾಗಿ ಈ ಶನಿವಾರದಿಂದ ಗುವಾಹಟಿಯಲ್ಲಿ ಪ್ರಾರಂಭವಾಗಲಿರುವ ಎರಡನೇ ಟೆಸ್ಟ್ ಪಂದ್ಯಕ್ಕೆ ಅವರ ಲಭ್ಯತೆ ಅನಿಶ್ಚಿತವಾಗಿದೆ. ಗಿಲ್ ಸ್ಥಾನಕ್ಕೆ ಬದಲಿ ಆಟಗಾರನಾಗಿ ಆಯ್ಕೆಯಾಗಲು ಐವರು ಆಟಗಾರರ ಮಧ್ಯೆ ತೀವ್ರ ಪೈಪೋಟಿ ಕಾಣಿಸಿಕೊಂಡಿದೆ.

ಭಾರತ ತಂಡವು ಬುಧವಾರ ಗುವಾಹಟಿಗೆ ಪ್ರಯಾಣ ಬೆಳೆಸಲಿದೆ. ಆದರೆ ಕುತ್ತಿಗೆ ನೋವಿನಿಂದ ಚೇತರಿಸಿಕೊಳ್ಳುತ್ತಿರುವುದರಿಂದ ವಿಮಾನದಲ್ಲಿ ಪ್ರಯಾಣಿಸುವುದು ಬೇಡವೆಂದು ವೈದ್ಯರು ಸಲಹೆ ನೀಡಿರುವ ಕಾರಣಕ್ಕೆ ಗಿಲ್ ತಂಡದೊಂದಿಗೆ ಪ್ರಯಾಣಿಸುವ ಸಾಧ್ಯತೆ ಇಲ್ಲ ಎಂದು ಸುದ್ದಿಮೂಲಗಳು ತಿಳಿಸಿವೆ.

ಅವರು ಇನ್ನೂ ವೈದ್ಯಕೀಯ ನಿಗಾದಲ್ಲಿದ್ದು, ವೈದ್ಯರ ತಂಡ ಶೀಘ್ರದಲ್ಲೇ ಮತ್ತೊಂದು ಸುತ್ತಿನ ತಪಾಸಣೆ ನಡೆಸಲಿದೆ ಎಂದು ಟೀಮ್ ಇಂಡಿಯಾದ ಮುಖ್ಯ ಕೋಚ್ ಗೌತಮ್ ಗಂಭೀರ್ ಮೊದಲ ಪಂದ್ಯದ ಬಳಿಕ ತಿಳಿಸಿದ್ದರು. ಅವರ ಅನುಪಸ್ಥಿತಿಯಲ್ಲಿ ಉಪ ನಾಯಕ ರಿಷಭ್ ಪಂತ್ ಭಾರತ ತಂಡವನ್ನು 2ನೇ ಟೆಸ್ಟ್‌ನಲ್ಲಿ ಮುನ್ನಡೆಸಲಿದ್ದಾರೆ.

ಗಿಲ್ ಸ್ಥಾನಕ್ಕೆ ಬದಲಿ ಆಟಗಾರರ ರೇಸ್‌ನಲ್ಲಿ ಕನ್ನಡಿಗರಾದ ಕರುಣ್ ನಾಯರ್, ದೇವದತ್ತ ಪಡಿಕ್ಕಲ್, ಸರ್ಫರಾಜ್ ಖಾನ್, ಸಾಯಿ ಸುದರ್ಶನ್ ಮತ್ತು ನಾರಾಯಣ್ ಜಗದೀಶನ್ ಮುಂಚೂಣಿಯಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯದ ಪ್ರದರ್ಶನದ ನಿಟ್ಟಿನಲ್ಲಿ ಸಾಯಿ ಸುದರ್ಶನ್‌ಗೆ ಅವಕಾಶ ಸಿಗುವ ಸಾಧ್ಯತೆ ಅಧಿಕ. ಅವರು ಭಾರತ ಪರ ತಮ್ಮ ಕೊನೆಯ ಟೆಸ್ಟ್ ಪಂದ್ಯದಲ್ಲಿ 87 ಮತ್ತು 39 ರನ್ ಗಳಿಸಿದ್ದರು. ಹೀಗಿದ್ದರೂ ಅವರನ್ನು ತಂಡದಿಂದ ಕೈಬಿಟ್ಟ ವಿಚಾರಕ್ಕೆ ಹಲವು ಮಾಜಿ ಆಟಗಾರರು ಆಯ್ಕೆ ಸಮಿತಿ ಮತ್ತು ಕೋಚ್ ಗಂಭೀರ್ ವಿರುದ್ಧ ಬಹಿರಂಗವಾಗಿಯೇ ಆಕ್ರೋಶ ವ್ಯಕ್ತಪಡಿಸಿದ್ದರು. ಹಾಗಾಗಿ ಗಿಲ್ ಸ್ಥಾನಕ್ಕೆ ಎರಡನೇ ಟೆಸ್ಟ್‌ನಲ್ಲಿ ಸಾಯಿ ಸುದರ್ಶನ್ ಆಯ್ಕೆಗೆ ಹೆಚ್ಚಿನ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಚೆಸ್ ವಿಶ್ವಕಪ್: ಪೆಂಟಾಲ ಹರಿಕೃಷ್ಣ ಸವಾಲು ಅಂತ್ಯ

ಪಣಜಿ: ಭಾರತದ ಅನುಭವಿ ಗ್ರಾಂಡ್ ಮಾಸ್ಟರ್ ಪೆಂಟಾಲ ಹರಿಕೃಷ್ಣ ಅವರು ಐದನೇ ಸುತ್ತಿನ ಟೈಬ್ರೇಕರ್‌ನಲ್ಲಿ ಮೆಕ್ಸಿಕೊದ ಹೊಸೆ ಎಡ್ಡಾರ್ಡೋ ಮಾರ್ಟನೆಝ್ ಅಲ್ಕಂತಾರ ಅವರಿಗೆ ಮಣಿದರು. ಇದರೊಂದಿಗೆ ಈ ಸಲದ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಎರಡನೆ ಶ್ರೇಯಾಂಕದ ಅರ್ಜುನ್ ಎರಿಗೇಸಿ ಅವರು ಭಾರತದ ಏಕೈಕ ಭರವಸೆಯಾಗಿ ಉಳಿದಿದ್ದಾರೆ. ಪರು ಸಂಜಾತ ಮೆಕ್ಸಿಕೊದ 26 ವರ್ಷ ವಯಸ್ಸಿನ ಮಾರ್ಟನೆಝ್ ಅಲ್ಕಂತಾರ ಅವರು ಭಾನುವಾರ ನಡೆದ ಟೈಬ್ರೇಕರಿನಲ್ಲಿ 39 ವರ್ಷ ವಯಸ್ಸಿನ ಹರಿಕೃಷ್ಣ ಅವರನ್ನು 3.5–2.5ರಿಂದ ಸೋಲಿಸಿ ಎಂಟರ ಘಟ್ಟ ತಲುಪಿದರು. ಅವರಿಬ್ಬರ ನಡುವಣ ಕ್ಲಾಸಿಕಲ್ ಸುತ್ತು 1–1 ಸಮಬಲ ಆಗಿತ್ತು, ಮೊದಲ ಸೆಟ್ ಟೈಬ್ರೇಕರ್‌ನ ಎರಡೂ ಆಟಗಳು ಡ್ರಾ ಆದವು. ಎರಡನೇ ಸೆಟ್‌ನ ಮೊದಲ ಆಟದಲ್ಲಿ ಅಲ್ಕಂತಾರ ಜಯಗಳಿಸಿದರಲ್ಲದೇ, ಮರು ಆಟ ಡ್ರಾ ಮಾಡಿಕೊಂಡು ಅತಿಥೇಯ ಆಟಗಾರನ ಸವಾಲು ಕೊನೆಗೊಳಿಸಿದರು.

ಅರ್ಜುನ್ ಎರಿಗೇಸಿ ಶನಿವಾರ ಮುಗಿದ ಕ್ಲಾಸಿಕಲ್ ಸುತ್ತಿನಲ್ಲೇ ಅಮೆರಿಕದ ಲೆವೋನ್ ಅರೋನಿಯನ್ ಅವರನ್ನು 1.5–0.5ರಿಂದ ಸೋಲಿಸಿದ್ದರು. ಇನ್ನೊಂದು ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಅವರು 3–1ರಿಂದ ರಷ್ಯಾದ ಡೇನಿಯಲ್ ದುಬೋವ್ ಅವರನ್ನು ಸೋಲಿಸಿದರು. ಶಂಕ್ಲಾಂಡ್ ಟೈಬ್ರೇಕರ್‌ನ ಎರಡೂ ಆಟಗಳನ್ನು ಗೆದ್ದರು.

ಟ್ವೀಟ್ ಮೂಲಕ ಉದ್ಧಟತನ ತೋರಿದ ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥ ಮೊಹ್ಸಿನ್ ನಖ್ವಿ

ಪಾಕ್ ವಿರುದ್ಧ ಭಾರತ ಎ ತಂಡಕ್ಕೆ ಸೋಲು

ದೋಹಾ: ಭಾನುವಾರ ನಡೆದಿದ್ದ ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ಟಿ20 ಟೂರ್ನಿಯಲ್ಲಿ ಭಾರತ-ಎ ತಂಡ ಬದ್ಧ ವೈರಿ ಪಾಕಿಸ್ತಾನ ವಿರುದ್ಧ 8 ವಿಕೆಟ್ ಅಂತರದ ಸೋಲು ಕಂಡಿತ್ತು. ಪಾಕ್ ತಂಡದ ಗೆಲುವಿನ ಬೆನ್ನಲ್ಲೇ ಏಷ್ಯನ್ ಕ್ರಿಕೆಟ್ ಕೌನ್ಸಿಲ್(ಎಸಿಸಿ) ಮುಖ್ಯಸ್ಥ, ಪಾಕಿಸ್ತಾನದ ಸಚಿವರೂ ಆಗಿರುವ ಮೊಹ್ಸಿನ್ ನಖ್ವಿ ಭಾರತಕ್ಕೆ ಅವಮಾನ ಮಾಡುವ ಉದ್ದೇಶದಿಂದಲೇ ಟ್ವೀಟ್ ಮಾಡುವ ಮೂಲಕ ತಮ್ಮ ಉದ್ಧಟನ ಮುಂದುವರಿಸಿದ್ದಾರೆ.

'ಪಾಕಿಸ್ತಾನ ಮತ್ತು ಮಂಡಳಿಗೆ ಎಂತಹ ಹೆಮ್ಮೆಯ ಕ್ಷಣ! ನಮ್ಮ ಪಾಕಿಸ್ತಾನ ಶಾಹೀನ್ಸ್ ತಂಡವು ಭಾರತ-ಎ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿ, 13.2 ಓವರ್‌ಗಳಲ್ಲಿ ಗುರಿಯನ್ನು ತಲುಪಿತು. ದೋಹಾದಲ್ಲಿ ನಡೆದ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ ಟೂರ್ನಮೆಂಟ್‌ನಲ್ಲಿ ಪ್ರಬಲ, ನಿರ್ಭೀತ ಮತ್ತು ಮರೆಯಲಾಗದ ಪ್ರದರ್ಶನ. ನಮ್ಮ ಯುವ ಆಟಗಾರರಿಂದ ಅದ್ಭುತ ಕ್ರಿಕೆಟ್-ಪಾಕಿಸ್ತಾನದ ಭವಿಷ್ಯವು ಉಜ್ವಲವಾಗಿ ಹೊಳೆಯುತ್ತಿದೆ. ರಾಷ್ಟ್ರಕ್ಕೆ ಅಭಿನಂದನೆಗಳು!' ಎಂದು ನಖ್ವಿ ಎಕ್ಸ್‌ನಲ್ಲಿ ಬರೆದಿದ್ದಾರೆ.

ಇತ್ತೀಚೆಗೆ ನಡೆದಿದ್ದ ಸೀನಿಯರ್ ತಂಡದ ಏಷ್ಯಾಕಪ್ ಫೈನಲ್‌ನಲ್ಲಿ ನಡೆದ ಟ್ರೋಫಿ ಹಸ್ತಾಂತರ ಹೈಡ್ರಾಮದಿಂದ ನಖ್ವಿ ಜಾಗತಿಕ ಮಟ್ಟದಲ್ಲಿ ಟೀಕೆಗೆ ಒಳಗಾಗಿದ್ದರು. ಫೈನಲ್ ಪಂದ್ಯದಲ್ಲಿ ಭಾರತ ತಂಡ ಪಾಕಿಸ್ತಾನವನ್ನು ಮಣಿಸಿದ ಬಳಿಕ ಭಾರತ ತಂಡ ನಖ್ವಿ ಕೈಯಿಂದ ಟ್ರೋಫಿ ಸ್ವೀಕರಿಸಲು ನಿರಾಕರಿಸಿತ್ತು. ಆದರೆ ಟ್ರೋಫಿ ತನ್ನಿಂದಲೇ ಸ್ವೀಕರಿಸಬೇಕು ಎಂದು ಪಟ್ಟು ಹಿಡಿದು ಹೋಟೆಲ್‌ಗೆ ತೆರಳಿದ್ದರು, ಇದುವರೆಗೂ ಭಾರತಕ್ಕೆ ಟ್ರೋಫಿ ನೀಡಿಲ್ಲ. ಈ ಬಗ್ಗೆ ಕೆಲ ದಿನಗಳ ಹಿಂದೆ ನಡೆದಿದ್ದ ಐಸಿಸಿ ಸಭೆಯಲ್ಲೂ ನಖ್ವಿ ವಿರುದ್ಧ ಟೀಕೆಗಳು ಕೇಳಿ ಬಂದಿತ್ತು.

ಭಾನುವಾರ ನಡೆದಿದ್ದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ-ಎ ತಂಡವು ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗಿಯೂ ಆ ಬಳಿಕ ದಯನೀಯ ಬ್ಯಾಟಿಂಗ್ ವೈಫಲ್ಯ ಅನುಭವಿಸಿತ್ತು. 19 ಓವರ್‌ಗೆ ಕೇವಲ 136 ರನ್ ಗಳಿಸಿ ಸರ್ವಪತನ ಕಂಡಿತು. ಗುರಿ ಬೆನ್ನತ್ತಿದ ಪಾಕಿಸ್ತಾನ ಮಾಝ್ ಸಾದಖತ್ ಅವರ ಅಜೇಯ ಅರ್ಧಶತಕದ (79) ನೆರವಿನಿಂದ ಇನ್ನೂ 8 ವಿಕೆಟ್ ಬಾಕಿ ಇರುವಂತೆಯೇ ಸುಲಭ ಗೆಲುವು ದಾಖಲಿಸುವಲ್ಲಿ ಯಶಸ್ವಿಯಾಯಿತು.

ಕಂಗ್ರಾಜುಲೇಷನ್ಸ್ ಬ್ರದರ್ ತೆರೆಗೆ ರೆಡಿ

ಈಗಿನ ಯುವ ಸಮೂಹಕ್ಕೆ ಹೇಳಿ ಮಾಡಿಸಿದ ಕಥೆಯನ್ನು ಒಳಗೊಂಡ ಸಿನಿಮಾ ಕಂಗ್ರಾಜುಲೇಷನ್ಸ್ ಬ್ರದರ್. ಕಾಲೇಜು ಯುವಕ-ಯುವತಿಯರೆಲ್ಲ ಬಂದು ಸಿನಿಮಾ ನೋಡಿದರೆ ನಮ್ಮ ಶ್ರಮ ಸಾರ್ಥಕ. ಅವರು ಸಿನಿಮಾ ನೋಡಿದರೆ ಫ್ಯಾಮಿಲಿಯನ್ನೂ ಕರೆದುಕೊಂಡು ಬರುತ್ತಾರೆ ಎಂಬ ನಂಬಿಕೆಯಿದೆ. ಈಗಿನ ಟ್ರೆಂಡ್‌ಗೆ ತಕ್ಕಂತೆ ಸಿನಿಮಾ ಮೂಡಿಬಂದಿದೆ ಎಂಬ ಖುಷಿಯಿದೆ ಎನ್ನುತ್ತಾರೆ ಚಿತ್ರಕ್ಕೆ ಕಥೆ ಬರೆದ ಹರಿ ಸಂತೋಷ್ ಆಶಯವಾಗಿದೆ.

ರಕ್ಷಿತ್ ನಾಗ್ ನಾಯಕನಾಗಿ ನಟಿಸಿದ್ದು, ಸಂಜನಾ ದಾಸ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಪ್ರತಾಪ್ ಗಂಧರ್ವ ಈ ಚಿತ್ರವನ್ನು ನಿರ್ದೇಶಿಸಿದ್ದು, ಪ್ರಶಾಂತ್ ಕಲ್ಲೂರು ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ಅಲೆಮಾರಿ, ಡಾರ್ಲಿಂಗ್ ಮುಂತಾದ ಸಿನಿಮಾಗಳನ್ನು ನಿರ್ದೇಶನ ಮಾಡಿರುವ ಹರಿ ಸಂತೋಷ್ ಕಂಗ್ರಾಜುಲೇಷನ್ಸ್ ಬ್ರದರ್ ಚಿತ್ರದ ಕ್ರಿಯೇಟಿವ್ ಹೆಡ್ ಆಗಿ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿದ್ದು ಸಖತ್ ಸದ್ದು ಮಾಡುತ್ತಿವೆ. ಸಿನಿಮಾ ಕೂಡ ಪ್ರೇಕ್ಷಕರಿಗೆ ಮೆಚ್ಚುಗೆಯಾಗಲಿದೆ ಎಂಬ ನಂಬಿಕೆ ಚಿತ್ರತಂಡಕ್ಕಿದೆ. ಹೀಗಾಗಿ ಚಿತ್ರತಂಡ ಕಾಲೇಜು ವಿದ್ಯಾರ್ಥಿಗಳನ್ನು ಭೇಟಿ ಮಾಡಲೆಂದೇ ಬೀದರ್‌ನಿಂದ ಚಾಮರಾಜನಗರದವರೆಗೆ ಪ್ರಯಾಣ ಬೆಳೆಸಿ ಈ ಚಿತ್ರದ ಬಗ್ಗೆ ಪ್ರಚಾರ ಮಾಡಿಬಂದಿದೆ. ಇನ್ನೇನಿದ್ದರೂ ಪ್ರೇಕ್ಷಕರು ಚಿತ್ರಮಂದಿರಗಳತ್ತ ಧಾವಿಸಬೇಕಷ್ಟೇ. ಇದೇ ವಾರ ಕಂಗ್ರಾಜುಲೇಷನ್ಸ್ ಬ್ರದರ್ ತೆರೆಗೆ ಬರಲಿದೆ.

ಟಾಲಿವುಡ್‌ಗೆ ರಾಶಾ

ಒಂದು ಕಾಲದಲ್ಲಿ ಬಾಲಿವುಡು ಸ್ಟಾರ್ ಆಗಿ ಗುರುತಿಸಿಕೊಂಡಿದ್ದ ರವೀನಾ ಟಂಡನ್ ಪುತ್ರಿ ರಾಶಾ ಥಡಾನಿ ಟಾಲಿವುಡ್‌ಗೆ ಎಂಟ್ರಿಕೊಡುತ್ತಿದ್ದಾರೆ. ಸೂಪರ್ ಸ್ಟಾರ್ ಮಹೇಶ್ ಬಾಬು ಅವರ ಸೋದರಳಿಯ ಜಯ ಕೃಷ್ಣ ಘಟ್ಟಮನೇನಿ ಜತೆಯಾಗಿ ನಟಿಸುತ್ತಿದ್ದಾರೆ. ಅಜಯ್ ಭೂಪತಿ ನಿರ್ದೇಶನದಲ್ಲಿ ಈ ಚಿತ್ರ ಸೆಟ್ಟೇರಿದ್ದು, ಅದ್ದೂರಿಯಾಗಿ ಮೂಡಿಬರುತ್ತಿದೆ. ಈ ಕುರಿತಂತೆ ರಶಾ ಸೋಷಿಯಲ್ ಮಿಡಿಯಾದಲ್ಲಿ ಸಂತಸ ಹಂಚಿಕೊಂಡಿದ್ದಾರೆ. ಈ ಸಿನಿಮಾ ಸದ್ಯ ಎಬಿ4 ಶಿರ್ಷಿಕೆಯಲ್ಲಿ ಸೆಟ್ಟೇರಿದೆ.

ರಾಶಾ ಥಡಾನಿ ಆಜಾದ್ ಸಿನಿಮಾ ಮೂಲಕ ಸಿನಿಮಾರಂಗಕ್ಕೆ ಪ್ರವೇಶಿಸಿದರು. ವೈರಲ್ ಉಯಿ ಅಮ್ಮ ಹಾಡಿನಲ್ಲಿ ಹೆಜ್ಜೆ ಹಾಕಿ ಪ್ರಸಿದ್ಧಿ ಪಡೆದರು. ಈಗ ತೆಲುಗು ಚಿತ್ರರಂಗಕ್ಕೂ ಪ್ರವೇಶಿಸಿದ್ದಾರೆ. ತೆಲುಗು ಚಿತ್ರರಂಗದ ಅತ್ಯಂತ ರೋಮಾಂಚಕಾರಿ ಹೊಸ ಯುಗದ ಪ್ರೇಮಕಥೆಗಳಲ್ಲಿ ಒಂದಾಗಿರುವ ಈ ಚಿತ್ರದ ಶೀರ್ಷಿಕೆ ಶೀಘ್ರದಲ್ಲಿಯೇ ಘೋಷಣೆಯಾಗಲಿದೆ. ಈ ವರ್ಷದ ಆರಂಭದಲ್ಲಿ, ರಶಾ ಥಡಾನಿ ಅಭಿಷೇಕ್ ಕಪೂರ್ ಅವರ ಆಜಾದ್ ಚಿತ್ರದೊಂದಿಗೆ ಅಜಯ್ ದೇವಗನ್ ಮತ್ತು ಅವರ ಸೋದರಳಿಯ ಆಮನ್ ದೇವಗನ್ ಅವರೊಂದಿಗೆ ನಟಿಸುವ ಮೂಲಕ ನಟನೆಗೆ ಪಾದಾರ್ಪಣೆ ಮಾಡಿದರು. ತಮ್ಮ ಮುಂದಿನ ಚಿತ್ರ ಲೈಕೆ ಲೈಕಾ ಚಿತ್ರೀಕರಣದಲ್ಲಿಯೂ ಬ್ಯುಸಿಯಾಗಿದ್ದಾರೆ. ಮುಂಜ್ಯಾ ಖ್ಯಾತಿಯ ಅಭಯ್ ವರ್ಮ ಅವರೊಂದಿಗೆ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ನಡುವೆಯೇ ಟಾಲಿವುಡ್‌ಗೂ ಎಂಟ್ರಿಕೊಟ್ಟಿದ್ದಾರೆ. ರಾಶಾ ಭಾರತೀಯ ಚಿತ್ರರಂಗದಲ್ಲಿ ಭರವಸೆ ಮೂಡಿಸಿದ್ದಾರೆ.

ಚಮೇಲಿ ಜತೆ ಹೆಜ್ಜೆ ಹಾಕಿದ ಸೃಜನ್

ನಟ ಸೃಜನ್ ಲೋಕೇಶ್ ನಿರ್ದೇಶನ ಮಾಡಿ, ನಟಿಸುತ್ತಿರುವ ಜಿಎಸ್‌ಟಿ ಇದೇ ತಿಂಗಳು ತೆರೆಗೆ ಬರಲಿದೆ. ನಟನಾಗಿ, ನಿರ್ಮಾಪಕನಾಗಿ ಇದುವರೆಗೆ ಹಲವು ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಈಗ ಸೃಜನ್‌ಗೆ ನಿರ್ದೇಶಕನಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ.

ಇತ್ತೀಚೆಗಷ್ಟೇ ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಲಾಗಿದ್ದು, ಅದಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕ ಬೆನ್ನಲ್ಲೇ ಇದೀಗ ಚಮೇಲಿ ಚಲ್.. ಎಂಬ ಹಾಡು ಬಿಡುಗಡೆಯಾಗಿದೆ. ಸೃಜನ್ ಲೋಕೇಶ್ ಜತೆ ಸಂಹಿತಾ ವಿನ್ಯಾ ಹೆಜ್ಜೆ ಹಾಕಿರುವುದು ಈ ಹಾಡಿನ ವಿಶೇಷ. ತಬಲ ನಾಣಿ ಸಹ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ವಿಜಯ್ ಈಶ್ವರ್ ಸಾಹಿತ್ಯವಿರುವ ಈ ಹಾಡಿಗೆ ಚಂದನ್ ಶೆಟ್ಟಿ ಸಂಗೀತ ಸಂಯೋಜಿಸಿದ್ದು, ಹಾಡಿಗೂ ದನಿಯಾಗಿದ್ದಾರೆ. ಇವರೊಟ್ಟಿಗೆ ಅನಿತಾ ಸಾರಾ ಮಹೇಶ್ ಕೂಡ ದನಿಗೂಡಿಸಿದ್ದಾರೆ.

ಸೃಜನ್‌ರ ತಂದೆ ಸುಬ್ಬಯ್ಯ ನಾಯ್ಡು ಕನ್ನಡ ಚಿತ್ರರಂಗದ ದಿಗ್ಗಜರಲ್ಲಿ ಒಬ್ಬರು. ಅವರ ಪುತ್ರ ಲೋಕೇಶ್ ಸಹ ಕನ್ನಡ ಚಿತ್ರರಂಗದ ಅಗ್ರಗಣ್ಯ ನಟರು, ನಿರ್ದೇಶಕರು. ಇದೀಗ ಸೃಜನ್ ಕೂಡಾ ಪರಂಪರೆ ಮುಂದುವರಿಸುವ ನಿಟ್ಟಿನಲ್ಲಿ ನಿರ್ದೇಶನ ಪೂರ್ಣಗೊಳಿಸಿದ್ದಾರೆ. ಸೃಜನ್ ಪುತ್ರ ಸುಕೃತ್ ಕೂಡಾ ಜಿಎಸ್‌ಟಿ ಸಿನಿಮಾದಲ್ಲಿ ಬಾಲನಟನಾಗಿ ಕಾಣಿಸಿಕೊಂಡಿದ್ದಾರೆ.

ಸಂದೇಶ, ಬೋಧನೆ ಆ ಥರದ್ದೇನು ನಮ್ಮ ಸಿನಿಮಾದಲಿಲ್ಲ. ನಗಿಸುವುದಷ್ಟೇ ನಮ್ಮ ಧರ್ಮ. ಜಿಎಸ್‌ಟಿ ನೋಡಿದ ಪ್ರೇಕ್ಷಕ ನಕ್ಕು ಖುಷಿಪಟ್ಟು ಆಚೆ ಬರುತ್ತಾನೆ ಎಂದು ಸೃಜನ್ ಹೇಳಿದರು. ಜಿಎಸ್‌ಟಿ ಎಂದರೆ ಘೋಸ್ಟ್ ಇನ್ ಟ್ರಬಲ್ ಎನ್ನುತ್ತಾರೆ ಸೃಜನ್. ಭೂತಗಳು ಕಷ್ಟ ಕೊಡುವುದನ್ನು ಕೇಳಿದ್ದೀರಿ. ಇಲ್ಲಿ ದೆವ್ವಗಳೇ ಸಂಕಷ್ಟಕ್ಕೆ ಸಿಲುಕಿ ನಾಯಕನ ಮೊರೆ ಹೋಗುತ್ತವೆಯಂತೆ. ನಾಯಕಿಯಾಗಿ ರಜಿನಿ ಭಾರದ್ವಾಜ್, ಗಿರಿಜಾ ಲೋಕೇಶ್, ಅಶೋಕ್ ಸೇರಿದಂತೆ ಹಲವು ತಾರಾಗಣದಲ್ಲಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಹಲವು ಹಿಟ್ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಸಂದೇಶ್ ಕಂಬೈನ್ಸ್ ಈ ಚಿತ್ರವನ್ನು ನಿರ್ಮಾಣ ಮಾಡಿದೆ.

ಟ್ರೆಂಡಿಂಗ್‌ನಲ್ಲಿ ಡೆವಿಲ್ ಸಾಂಗ್

ದರ್ಶನ್ ನಟಿಸಿರುವ ದಿ ಡೆವಿಲ್ ಆರಂಭದಿಂದಲೂ ಸದ್ದು ಮಾಡುತ್ತಿದೆ. ಈ ಸಿನಿಮಾದ ಟೀಸರ್ ಮಿಲಿಯನ್‌ಗಟ್ಟಲೇ ವೀಕ್ಷಣೆ ಕಂಡಿದೆ. ಈಗ ಸಿನಿಮಾದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ಈಗಾಗಲೇ ಬಿಡುಗಡೆಯಾಗಿರುವ ಇದ್ರೆ ನೆಮ್ದಿಯಾಗಿರ್ಬೇಕ್... ಹಾಗೂ ಒಂದೇ ಒಂದು ಸಲ... ಹಾಡುಗಳಿಗೆ ಸಂಗೀತ ಪ್ರಿಯರು ತಲೆದೂಗಿದ್ದಾರೆ. ಈಗ ಅಲೊಹೋಮೋರ ದಿ ಟ್ರೂ ಎಂಪೆರರ್... ಎಂಬ ಹಾಡು ಬಿಡುಗಡೆಯಾಗಿದೆ. ಹಿಂದಿನ ಎರಡೂ ಹಾಡುಗಳಿಗಿಂತ ಇದು ವಿಭಿನ್ನವಾಗಿದ್ದು, ಈ ಹಾಡಿನಲ್ಲಿ ದರ್ಶನ್ ಸಖತ್ ಸ್ಟೈಲಿಶ್ ಆಗಿ ಹೆಜ್ಜೆ ಕಾಣಿಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ದರ್ಶನ್ ಜೋಡಿಯಾಗಿ ರಚನಾ ರೈ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ತುಳಸಿ, ಅಚ್ಯುತ್‌ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭರಾಜ್ ಮುಂತಾದವರು ಈ ಚಿತ್ರದ ತಾರಾಗಣದಲ್ಲಿದ್ದಾರೆ.

ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದು, ಅನಿರುದ್ಧ್ ಶಾಸ್ತ್ರಿ ಸಾಹಿತ್ಯ ಬರೆದು ಹಾಡಿದ್ದಾರೆ. ಸಂತು ನೃತ್ಯ ಮಾಡಿರುವ ಈ ಹಾಡು ಸಖತ್ ಸದ್ದು ಮಾಡುತ್ತಿದೆ. ಸಖತ್ ಟ್ರೆಂಡ್ ಸೃಷ್ಟಿಸಿದೆ. ಜೈ ಮಾತಾ ಕಂಬೈನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು, ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಸುಧಾಕರ್. ಎಸ್.ರಾಜ್ ಛಾಯಾಗ್ರಹಣವಿರುವ ದಿ ಡೆವಿಲ್ ಚಿತ್ರಕ್ಕೆ ಹರೀಶ್ ಕೊಮ್ಮೆ ಸಂಕಲನ, ಮೋಹನ್ ಬಿ ಕೆರೆ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಸಾಹಸ ನಿರ್ದೇಶನವಿದೆ. ಕಾಂತರಾಜ್ ಎಸ್.ಎಸ್ ಸಂಭಾಷಣೆ ಹಾಗೂ ಚೇತನ್, ತಶ್ವಿನಿ ವಸ್ತ್ರ ವಿನ್ಯಾಸ ಈ ಚಿತ್ರಕ್ಕಿದೆ. ಡಿಸೆಂಬರ್ 12 ರಂದು ಡೆವಿಲ್ ವಿಶ್ವಾದ್ಯಂತ ದರ್ಶನ ಕೊಡಲಿದೆ.

...continued from previous page.

BID/OFFER PROGRAMME:
ANCHOR INVESTOR BIDDING DATE OPENED AND CLOSED ON: MONDAY, NOVEMBER 10, 2025
BID/OFFER OPENED ON: TUESDAY, NOVEMBER 11, 2025
BID/ OFFER CLOSED ON: THURSDAY, NOVEMBER 13, 2025

This was an Offer in terms of Rule 19(2)(b) of the Securities Contracts (Regulation) Rules, 1957, as amended ("**SCRR**") read with Regulation 31 of the SEBI ICDR Regulations. This Offer was made through the Book Building Process in compliance with Regulation 6(2) of the SEBI ICDR Regulations wherein in terms of Regulation 32 of the SEBI ICDR Regulations, not less than 75% of the Offer was available for allocation on a proportionate basis to Qualified Institutional Buyers ("**QIBs**", and such portion, the "**QIB Portion**") provided that our Company in consultation with the BRLMs, allocated 60% of the QIB Portion to Anchor Investors on a discretionary basis in accordance with the SEBI ICDR Regulations ("**Anchor Investor Portion**"), of which at least one-third was reserved for domestic Mutual Funds, subject to valid Bids being received from domestic Mutual Funds at or above the Anchor Investor Allocation Price. Further, 5% of the Net QIB Portion was made available for allocation on a proportionate basis to Mutual Funds only and the remainder of the Net QIB Portion was made available for allocation on a proportionate basis to all QIBs (other than Anchor Investors) including Mutual Funds, subject to valid Bids having been received at or above the Offer Price. Further, not more than 15% of the Offer was made available for allocation to NIBs out of which (a) one-third of such portion was reserved for Bidders with application size of more than ₹0.20 million and ₹1.00 million; and (b) two-third of such portion was reserved for Bidders with application size of more than ₹1.00 million provided that the unsubscribed portion in either of such sub-categories was allocated to Bidders in other sub-category of the NIBs in accordance with SEBI ICDR Regulations and not more than 10% of the Offer was available for allocation to Retail Individual Bidders ("**RIB**") in accordance with the SEBI ICDR Regulations, subject to valid Bids having been received from them at or above the Offer Price. All Bidders (except Anchor Investors) were required to mandatorily utilise the Application Supported by Blocked Amount ("**ASBA**") process by providing details of their respective ASBA accounts (and UPI ID in case of UPI Bidders using the UPI Mechanism), (in which case the corresponding Bid Amounts was blocked by the SCSBs or under the UPI Mechanism, as applicable to participate in the Offer. Anchor Investors were not permitted to participate in the Anchor Investor Portion of the Offer through the ASBA process. For details, see "*Offer Procedure*" on page 447 of the Prospectus.

The bidding for Anchor Investors opened and closed on Monday, November 10, 2025. The company received 55 Anchor Investor Application Forms from 39 Anchor Investors for 61,981,665 Equity Shares. The Anchor investor price was finalized at ₹ 217 per Equity Share. A total of 60,138,249 Equity Shares were allocated under the Anchor Investor Portion aggregating to ₹ 13,050,000,033/-.

The Offer received 174,827 applications for 136,962,033 Equity Shares (prior to rejections) resulting in 1.02 subscription. The details of the applications received in the Offer from various categories are as under: (before rejections):

Sl. No.	Category	No. of Applications received*	No. of Equity Shares applied	No. of Equity Shares reserved as per Prospectus	No. of times Subscribed	Amount (₹)
A	Retail Individual Investors	170,946	15,444,132	13,364,055	1.16	3,349,909,635.00
B	Non-Institutional Investors - More than ₹0.20 million Up to ₹1.00 million	3,361	3,660,657	6,682,028	0.55	792,911,430.00
C	Non-Institutional Investors - Above ₹ 1.00 million	430	2,714,943	13,364,054	0.20	588,964,266.00
D	QIBs (excluding Anchors Investors)	35	53,160,636	40,092,166	1.33	11,535,858,012.00
E	Anchor Investors	55	61,981,665	60,138,249	1.03	13,450,021,305.00
	Total	**174,827**	**136,962,033**	**133,640,552**	**1.02**	**29,717,664,648.00**

** This excludes 1,858 applications for 162,288 Equity Shares aggregating to ₹ 35,219,394/- from Retail Individual & HNI Individuals which were not in bid book but which were banked.*

Final Demand

A summary of the final demand as per BSE and NSE as on the Bid/Offer Closing Date and as at different Bid prices is as under:

Sr. No.	Bid Price (₹)	No. of Equity Shares	% to Total	Cumulative Total	Cumulative % of Total
1	206	364,596	0.42	364,596	0.42
2	207	49,404	0.06	414,000	0.47
3	208	37,605	0.04	451,605	0.52
4	209	12,627	0.01	464,232	0.53
5	210	112,953	0.13	577,185	0.66
6	211	19,044	0.02	596,229	0.68
7	212	27,600	0.03	623,829	0.71
8	213	13,455	0.02	637,284	0.73
9	214	6,831	0.01	644,115	0.74
10	215	53,613	0.06	697,728	0.80
11	216	34,845	0.04	732,573	0.84
12	217	64,259,355	73.39	64,991,928	74.22
	CUTOFF	22,571,901	25.78	87,563,829	100.00
TOTAL		**87,563,829**	**100.00**		

The Basis of Allotment was finalized in consultation with the Designated Stock Exchange, being NSE on November 14, 2025

A. Allotment to Retail Individual Investors (After Rejections) (including ASBA Applications)

The Basis of Allotment to the Retail Individual Investors, who have bid at the Cut-Off Price or at the Offer Price of ₹ 217 per Equity Share, was finalized in consultation with the NSE. This category has been subscribed to the extent of 0.98755 times. The total number of Equity Shares Allotted in Retail Portion is 14,833,482 Equity Shares to 164,550 successful Retail Individual Investors. The category-wise details of the Basis of Allotment are as under:

Sr. No.	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	69	145,767	88.59	10,057,923	67.81	69	1 : 1	10,057,923
2	138	10,386	6.31	1,433,268	9.66	138	1 : 1	1,433,268
3	207	3,233	1.96	669,231	4.51	207	1 : 1	669,231
4	276	1,239	0.75	341,964	2.31	276	1 : 1	341,964
5	345	979	0.59	337,755	2.28	345	1 : 1	337,755
6	414	490	0.30	202,860	1.37	414	1 : 1	202,860
7	483	570	0.35	275,310	1.86	483	1 : 1	275,310
8	552	171	0.10	94,392	0.64	552	1 : 1	94,392
9	621	71	0.04	44,091	0.30	621	1 : 1	44,091
10	690	414	0.25	285,660	1.93	690	1 : 1	285,660
11	759	54	0.03	40,986	0.28	759	1 : 1	40,986
12	828	70	0.04	57,960	0.39	828	1 : 1	57,960
13	897	1,106	0.67	992,082	6.69	897	1 : 1	992,082
	TOTAL	**164,550**	**100.00**	**14,833,482**	**100.00**			**14,833,482**

Note 1*: Includes spilled over of 1,656,372 Equity Shares from NIB Above 10 Lakhs Category.*
Note 2*: Unsubscribed portion of 186,945 Equity shares have been spilled over to QIB Category.*

B. Allotment to Non-Institutional Investors (More than ₹0.20 million Up to ₹1.00 million) (After Rejections) (including ASBA Applications)

The Basis of Allotment to the Non-Institutional Investors (more than ₹0.20 million Up to ₹1.00 million), who have bid at the Offer Price of ₹ 217 per Equity Share or above, was finalized in consultation with NSE. This category has been subscribed to the extent of 0.52226 times. The total number of Equity Shares allotted in this category is 3,489,744 Equity Shares to 3,212 successful applicants. The category-wise details of the Basis of Allotment are as under:

Sr. No.	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	966	2,743	85.40	2,649,738	75.93	966	1 : 1	2,649,738
2	1,035	104	3.24	107,640	3.08	1,035	1 : 1	107,640
3	1,104	26	0.81	28,704	0.82	1,104	1 : 1	28,704
4	1,173	21	0.65	24,633	0.71	1,173	1 : 1	24,633
5	1,242	12	0.37	14,904	0.43	1,242	1 : 1	14,904
6	1,311	2	0.06	2,622	0.08	1,311	1 : 1	2,622
7	1,380	39	1.21	53,820	1.54	1,380	1 : 1	53,820
8	1,449	15	0.47	21,735	0.62	1,449	1 : 1	21,735
9	1,518	5	0.16	7,590	0.22	1,518	1 : 1	7,590
10	1,587	5	0.16	7,935	0.23	1,587	1 : 1	7,935
11	1,656	5	0.16	8,280	0.24	1,656	1 : 1	8,280
12	1,725	18	0.56	31,050	0.89	1,725	1 : 1	31,050
13	1,794	5	0.16	8,970	0.26	1,794	1 : 1	8,970
14	1,863	12	0.37	22,356	0.64	1,863	1 : 1	22,356
15	1,932	24	0.75	46,368	1.33	1,932	1 : 1	46,368
16	2,001	10	0.31	20,010	0.57	2,001	1 : 1	20,010
17	2,070	20	0.62	41,400	1.19	2,070	1 : 1	41,400
18	2,139	3	0.09	6,417	0.18	2,139	1 : 1	6,417
19	2,208	2	0.06	4,416	0.13	2,208	1 : 1	4,416
20	2,277	81	2.52	184,437	5.29	2,277	1 : 1	184,437
21	2,346	11	0.34	25,806	0.74	2,346	1 : 1	25,806
22	2,415	2	0.06	4,830	0.14	2,415	1 : 1	4,830
23	2,484	4	0.12	9,936	0.28	2,484	1 : 1	9,936
24	2,553	3	0.09	7,659	0.22	2,553	1 : 1	7,659
25	2,622	1	0.03	2,622	0.08	2,622	1 : 1	2,622
26	2,691	1	0.03	2,691	0.08	2,691	1 : 1	2,691
27	2,760	2	0.06	5,520	0.16	2,760	1 : 1	5,520
28	2,898	5	0.16	14,490	0.42	2,898	1 : 1	14,490
29	3,036	2	0.06	6,072	0.17	3,036	1 : 1	6,072
30	3,105	1	0.03	3,105	0.09	3,105	1 : 1	3,105
31	3,243	2	0.06	6,486	0.19	3,243	1 : 1	6,486
32	3,312	1	0.03	3,312	0.09	3,312	1 : 1	3,312
33	3,450	3	0.09	10,350	0.30	3,450	1 : 1	10,350
34	3,657	1	0.03	3,657	0.10	3,657	1 : 1	3,657
35	3,795	1	0.03	3,795	0.11	3,795	1 : 1	3,795
36	4,002	2	0.06	8,004	0.23	4,002	1 : 1	8,004
37	4,140	7	0.22	28,980	0.83	4,140	1 : 1	28,980
38	4,347	3	0.09	13,041	0.37	4,347	1 : 1	13,041
39	4,485	1	0.03	4,485	0.13	4,485	1 : 1	4,485
40	4,554	7	0.22	31,878	0.91	4,554	1 : 1	31,878
	Total	**3,212**	**100.00**	**3,489,744**	**100.00**			**3,489,744**

Note*: Unsubscribed portion of 3,192,284 Equity shares have been spilled over to NIB Above 10 Lakhs Category.*

C. Allotment to Non-Institutional Investors (more than ₹1.00 million) (After Rejections) (including ASBA Applications)

The Basis of Allotment to the Non-Institutional Investors (more than ₹1.00 million), who have bid at the Offer Price of ₹ 217 per Equity Share or above, was finalized in consultation with NSE. This category has been subscribed to the extent of 0.14962 times. The total number of Equity Shares allotted in this category is 2,477,169 Equity Shares to 379 successful applicants. The category-wise details of the Basis of Allotment are as under:

Sr. No.	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	4,623	299	78.89	1,382,277	55.80	4,623	1 : 1	1,382,277
2	4,692	16	4.22	75,072	3.03	4,692	1 : 1	75,072
3	4,761	8	2.11	38,088	1.54	4,761	1 : 1	38,088
4	4,830	6	1.58	28,980	1.17	4,830	1 : 1	28,980
5	4,899	2	0.53	9,798	0.40	4,899	1 : 1	9,798
6	4,968	2	0.53	9,936	0.40	4,968	1 : 1	9,936
7	5,037	2	0.53	10,074	0.41	5,037	1 : 1	10,074
8	5,175	1	0.26	5,175	0.21	5,175	1 : 1	5,175
9	5,520	7	1.85	38,640	1.56	5,520	1 : 1	38,640
10	6,003	1	0.26	6,003	0.24	6,003	1 : 1	6,003
11	6,831	1	0.26	6,831	0.28	6,831	1 : 1	6,831
12	6,900	12	3.17	82,800	3.34	6,900	1 : 1	82,800
13	6,969	1	0.26	6,969	0.28	6,969	1 : 1	6,969
14	7,038	1	0.26	7,038	0.28	7,038	1 : 1	7,038
15	9,177	2	0.53	18,354	0.74	9,177	1 : 1	18,354
16	9,453	1	0.26	9,453	0.38	9,453	1 : 1	9,453
17	9,936	1	0.26	9,936	0.40	9,936	1 : 1	9,936
18	11,247	1	0.26	11,247	0.45	11,247	1 : 1	11,247
19	11,454	1	0.26	11,454	0.46	11,454	1 : 1	11,454
20	13,455	3	0.79	40,365	1.63	13,455	1 : 1	40,365
21	13,800	1	0.26	13,800	0.56	13,800	1 : 1	13,800
22	20,217	1	0.26	20,217	0.82	20,217	1 : 1	20,217
23	22,977	1	0.26	22,977	0.93	22,977	1 : 1	22,977
24	27,669	1	0.26	27,669	1.12	27,669	1 : 1	27,669
25	31,050	1	0.26	31,050	1.25	31,050	1 : 1	31,050
26	46,023	3	0.79	138,069	5.57	46,023	1 : 1	138,069
27	46,230	1	0.26	46,230	1.87	46,230	1 : 1	46,230
28	92,115	1	0.26	92,115	3.72	92,115	1 : 1	92,115
29	276,552	1	0.26	276,552	11.16	276,552	1 : 1	276,552
	Total	**379**	**100.00**	**2,477,169**	**100.00**			**2,477,169**

Note 1*: Includes spilled over of 3,192,284 Equity Shares from NIB Above 2 Lakhs and upto 10 Lakhs Category.*
Note 2*: Unsubscribed portion of 14,079,169 Equity shares have been spilled over to QIB & Retail Categories in the ratio of 75:10.*

D. Allotment to QIB portion (After Rejections)

Allotment to QIBs, who have Bid at the Offer Price of ₹ 217 per Equity Share or above, has been done on a proportionate basis in consultation with the NSE. This category has been subscribed to the extent of 1.00870 times of QIB Portion. As per the SEBI Regulations, Mutual Funds were Allotted 5% of the Equity Shares of QIB Portion available i.e., 2,635,096 Equity Shares (i.e. Includes spilled over of 630,487 Equity Shares from NIB Above 10 Lakhs & Retail Categories) and other QIBs and unsatisfied demand of Mutual Funds were Allotted the remaining available Equity Shares i.e., 50,066,812 Equity Shares (i.e. Includes spilled over of 11,979,255 Equity Shares from NIB Above 10 Lakhs & Retail Categories) on a proportionate basis. The total number of Equity Shares Allotted in the QIB Portion is 52,701,908 Equity Shares (i.e. Includes spilled over of 12,609,742 Equity Shares from NIB Above 10 Lakhs & Retail Categories) which were allotted to 35 successful QIB Investors. The category-wise details of the Basis of Allotment are as under:

Category	FI'S/BANK'S	MF'S	IC'S	NBFC'S	AIF	FPC/FII	Others	TOTAL
QIB	45,605	16,188,660	7,680,536	-	-	27,286,991	1,500,116	**52,701,908**

E. Allotment to Anchor Investors

The Company, in consultation with the BRLMs, have allocated 60,138,249 Equity Shares to 39 Anchor Investors (through 55 Applications) at the Anchor Investor Offer Price of ₹ 217 per Equity Share in accordance with the SEBI Regulations. This represents 60% of the QIB Portion.

Category	FI'S/BANK'S	MF'S	IC'S	NBFC'S	AIF	FPC/FII	OTHERS	TOTAL
ANCHOR	-	29,953,590	7,603,593		7,142,673	15,438,393	-	**60,138,249**

The Company on November 14, 2025 has taken on record the Basis of Allotment of Equity Shares approved by the Designated Stock Exchange, being NSE and has allotted the Equity Shares to various successful Bidders. The Allotment Advice-cum-Intimations and/or notices have been dispatched to the address of the investors as registered with the depositories. Further, the instructions to the Self Certified Syndicate Banks for unblocking of funds, transfer to Public Offer Account have been issued on November 14, 2025 and payment to non-Syndicate brokers have been issued on November 15, 2025. In case the same is not received within ten days, investors may contact the Registrar to the Offer at the address given below. The Equity Shares Allotted to the successful Allottees have been uploaded on November 17, 2025 for credit into the respective beneficiary accounts subject to validation of the account details with the depositories concerned. The Company has filed the Listing application with BSE and NSE on November 17, 2025. The Company has received listing and trading approval from BSE and NSE and the trading will commence on or about Tuesday, November 18, 2025.

Note: All capitalised terms used and not specifically defined herein shall have the same meaning as ascribed to them in the Prospectus.

INVESTORS PLEASE NOTE

The details of the allotment made will be hosted on the website of the Registrar to the Offer, KFin Technologies Limited at www.kfintech.com

All future correspondence in this regard may kindly be addressed to the Registrar to the Offer quoting full name of the First/sole Bidder, Bid cum Application Form number, Bidder DP ID, Client ID, PAN, date of submission of Bid-cum-Application Form, address of the Bidder, number of Equity Shares applied for, the name and address of the Designated Intermediary where the Bid cum Application Form was submitted by the Bidder and a copy of the Acknowledgment Slip received from the Designated Intermediary at the address given below:

KFINTECH
EXPERIENCE TRANSFORMATION

KFin Technologies Limited
Selenium, Tower-B, Plot No. 31 & 32, Financial District
Nanakramguda, Serilingampally, Rangareddi
Hyderabad, Telangana - 500 032, India
Tel: + 91 40 6716 2222/ 1800 309 4001
E-mail: emmvee.ipo@kfintech.com
Website: www.kfintech.com
Investor Grievance E-mail: einward.ris@kfintech.com
Contact Person: M. Murali Krishna
SEBI registration no.: INR000000221

For **EMMVEE PHOTOVOLTAIC POWER LIMITED**
On behalf of the Board of Directors
Sd/-
Shailesha Barve
Company Secretary and Compliance Officer

Place: Bengaluru, Karnataka
Date: November 17, 2025

THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE EQUITY SHARES ON LISTING OR THE BUSINESS PROSPECTS OF EMMVEE PHOTOVOLTAIC POWER LIMITED.

EMMVEE PHOTOVOLTAIC POWER LIMITED has filed the Prospectus with RoC and the Stock Exchanges on November 14, 2025. The Prospectus is available on the website of SEBI at www.sebi.gov.in, and is available on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.emmveepv.com and the websites of the BRLMs, i.e., JM Financial Limited, IIFL Capital Services Limited *(formerly known as IIFL Securities Limited)*, Jefferies India Private Limited and Kotak Mahindra Capital Company Limited at www.jmfl.com, www.iiflcapital.com, www.jefferies.com and https://investmentbank.kotak.com, respectively. Please note that investment in equity shares involves a high degree of risk and for details relating to such risk, see "*Risk Factors*" beginning on page 31 of the Prospectus.

The Equity Shares offered in the Offer have not been and will not be registered under the U.S. Securities Act of 1933, as amended (the "**U.S. Securities Act**") or any state securities laws in the United States and, unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares have been offered and sold (i) within the United States only to persons reasonably believed to be "qualified institutional buyers" (as defined in Rule 144A under the U.S. Securities Act and referred to in the Prospectus as "**U.S. QIBs**") pursuant to the private placement exemption set out in Section 4(a) of the U.S. Securities Act, and (ii) outside the United States in offshore transactions as defined in and in reliance on Regulation S under the U.S. Securities Act and the applicable laws of the jurisdiction where those offers and sales have been made. The Equity Shares have not been and will not be registered, listed or otherwise qualified in any other jurisdiction outside India and may not be offered or sold, and Bids may not be made by persons in any such jurisdiction, except in compliance with the applicable laws of such jurisdiction. There will be no public offering in the United States.

Adfactors 642/25

ಜಾತಿ ಗಣತಿ: ಸುಳ್ಳು ಸುದ್ದಿ ಹರಡಿದವರ ವಿರುದ್ಧ ಕೇಸ್

ಬೆಂಗಳೂರು: ರಾಜ್ಯಾದ್ಯಂತ ತೀವ್ರ ಕುತೂಹಲ ಕೆರಳಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿರುವಾಗಲೇ, ಅದರ ವರದಿಯೆಂದು ಹೇಳಿಕೊಂಡು ಸುಳ್ಳು ಅಂಕಿ-ಅಂಶಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟು ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಪೊಲೀಸರಿಗೆ ದೂರು ನೀಡಿದೆ.

ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ ಅವರು ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ಈ ಸಂಬಂಧ ಅಧಿಕೃತ ದೂರು ಸಲ್ಲಿಸಿದ್ದಾರೆ. ಎಂಜಿನಿಯರ್ಸ್ ಮತ್ತು ಡಾಕ್ಟರ್ಸ್ ಎಂಬ ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ 'ಶಿವ' ಎಂಬ ವ್ಯಕ್ತಿಯು, 2025ರ ಕರ್ನಾಟಕ ರಾಜ್ಯದ ಜಾತಿಗಣತಿ ವರದಿ ಎಂಬ ಶೀರ್ಷಿಕೆಯಡಿ ವಿವಿಧ ಜಾತಿಗಳ ಜನಸಂಖ್ಯೆಯೆಂದು ಹೇಳಲಾದ ಪಟ್ಟಿಯೊಂದನ್ನು ಹಂಚಿಕೊಂಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ನಕಲಿ ಪಟ್ಟಿಯಲ್ಲಿ ಲಿಂಗಾಯತರು 65 ಲಕ್ಷ, ಒಕ್ಕಲಿಗರು 60 ಲಕ್ಷ, ಕುರುಬರು 45 ಲಕ್ಷ, ಮುಸ್ಲಿಮರು 60 ಲಕ್ಷ, ಪರಿಶಿಷ್ಟ ಪಂಗಡ-40.45 ಲಕ್ಷ ಎಂಬಂತಹ ಸುಳ್ಳು ಅಂಕಿ-ಅಂಶಗಳನ್ನು ನೀಡಲಾಗಿದೆ.

ಜನಪ್ರತಿನಿಧಿಗಳ ತಯಾರಿಗೆ ಕೋರ್ಸ್ ಆರಂಭಿಸಲು ಚಿಂತನೆ

ಬೆಂಗಳೂರು: ರಾಜ್ಯದಲ್ಲಿ ಉತ್ತಮ ಜನಪ್ರತಿನಿಧಿಗಳನ್ನು ರೂಪಿಸಲು ವಿಧಾನಸಭೆ ಸಚಿವಾಲಯದಿಂದ ಒಂದು ವರ್ಷದ ತರಬೇತಿ ಕೋರ್ಸ್ ಆರಂಭಿಸಲು ಚಿಂತನೆ ನಡೆಸಲಾಗಿದೆ ಎಂದು ಸ್ಪೀಕರ್ ಯು.ಟಿ. ಖಾದರ್ ತಿಳಿಸಿದ್ದಾರೆ.

ಸುಳ್ಳು ಸುದ್ದಿಗಳ ನಡುವೆ ಮಾಧ್ಯಮಗಳ ವಿಶ್ವಾಸಾರ್ಹತೆಯ ರಕ್ಷಣೆ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪತ್ರಿಕೋದ್ಯಮ ಕೋರ್ಸ್ ಮುಗಿಸಿದವರು ಪತ್ರಕರ್ತರಾಗುತ್ತಾರೆ. ಕಾನೂನು ಓದಿದವರು ವಕೀಲರಾಗುತ್ತಾರೆ. ಅದೇ ರೀತಿ ಯಾವುದೇ ಪದವಿ ಮುಗಿಸಿದವರಿಗೆ ಒಂದು ವರ್ಷ ತರಬೇತಿ ನೀಡಿ ಉತ್ತಮ ನಾಯಕತ್ವ ರೂಪಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಈ ತರಬೇತಿ ಕಾರ್ಯಕ್ರಮದಲ್ಲಿ 6 ತಿಂಗಳು ಥಿಯರಿ ಮತ್ತು 6 ತಿಂಗಳು ಪ್ರಾಯೋಗಿಕ ಕಾರ್ಯಕ್ರಮ ನೀಡಲು ಆಲೋಚನೆ ಮಾಡಲಾಗಿದೆ. ಎಲ್ಲರ ವೈಯಕ್ತಿಕ ಸಲಹೆಗಳನ್ನು ನಾನು ಮುಕ್ತವಾಗಿ ಸ್ವೀಕರಿಸುತ್ತೇನೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಂಸದೀಯ ಮೌಲ್ಯಗಳನ್ನು ಎತ್ತಿಹಿಡಿಯಬೇಕಾಗಿದೆ. ಮುಂದಿನ ಅಧಿವೇಶನದ ವೇಳೆಗೆ ರಾಜ್ಯದ ವಿವಿಧ ಜಿಲ್ಲೆಗಳ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸ ಮಾಡುತ್ತಿರುವ 150 ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಸದನವನ್ನು ಸಂಪೂರ್ಣವಾಗಿ ವೀಕ್ಷಿಸಲು ಅನುಕೂಲವಾಗುವಂತೆ ಅವಕಾಶ ಮಾಡಿಕೊಡುವ ಬಗ್ಗೆ ಚಿಂತನೆ ನಡೆಸಲಾಗಿದೆ. ಇಡೀ ಅಧಿವೇಶನದಲ್ಲಿ ಪಾಲ್ಗೊಳ್ಳಲು ಅವಕಾಶ ಕೊಡುವ ಮೂಲಕ ಪತ್ರಕರ್ತರಿಗೆ ತರಬೇತಿ ನೀಡಲಾಗುವುದು ಎಂದರು.

ಸಮಾಚಾರ ಸಣ್ಣದಲ್ಲ

ಟೆಸ್ಟ್ ಚಾಂಪಿಯನ್‌ಶಿಪ್: ಜಡೇಜಾ ವಿಶ್ವದಾಖಲೆ

ಕೋಲ್ಕತಾ: ಟೀಮ್ ಇಂಡಿಯಾದ ಅನುಭವಿ ಆಲ್ ರೌಂಡರ್ ರವೀಂದ್ರ ಜಡೇಜಾ ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ವಿಶ್ವ ದಾಖಲೆಯೊಂದನ್ನು ನಿರ್ಮಿಸಿದ್ದಾರೆ. ಈಡನ್ ಗಾರ್ಡನ್ಸ್‌ನಲ್ಲಿ ಎರಡನೇ ಇನ್ನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಮತ್ತು ಪಂದ್ಯದಲ್ಲಿ ಒಟ್ಟು 45 ರನ್‌ಗಳನ್ನು ಗಳಿಸುವ ಮೂಲಕ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದರು. ಇದೇ ವೇಳೆ ಡಬ್ಲ್ಯೂಟಿಸಿ ಇತಿಹಾಸದಲ್ಲಿ 2000 ಕ್ಕೂ ಹೆಚ್ಚು ರನ್ ಗಳಿಸಿ 150 ವಿಕೆಟ್‌ಗಳನ್ನು ಪಡೆದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಆಗಸ್ಟ್ 2019ರಲ್ಲಿ ಡಬ್ಲ್ಯೂಟಿಸಿ ಆರಂಭವಾದಾಗಿನಿಂದ ಕೇವಲ 16 ಬೌಲರ್‌ಗಳು ಮಾತ್ರ 100 ಅಥವಾ ಅದಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ ಮತ್ತು ಕೆಲವೇ ಕೆಲವು ಬ್ಯಾಟರ್‌ಗಳು 1000 ಅಥವಾ ಅದಕ್ಕಿಂತ ಹೆಚ್ಚು ರನ್‌ಗಳನ್ನು ಗಳಿಸಿದ್ದಾರೆ. ಜಡೇಜ ಹೊರತುಪಡಿಸಿ ಪ್ಯಾಟ್ ಕಮ್ಮಿನ್ಸ್ ಮತ್ತು ಆರ್. ಅಶ್ವಿನ್ ಡಬ್ಲ್ಯೂಟಿಸಿಯಲ್ಲಿ 100ಕ್ಕೂ ಹೆಚ್ಚು ವಿಕೆಟ್‌ಗಳು ಮತ್ತು 1000 ರನ್‌ಗಳನ್ನು ಪಡೆದ ಆಟಗಾರರಾಗಿದ್ದಾರೆ. ಆದಾಗ್ಯೂ, ಅವರಲ್ಲಿ ಯಾರೂ ಪಂದ್ಯಾವಳಿಯಲ್ಲಿ 2000ಕ್ಕಿಂತ ಹೆಚ್ಚು ರನ್‌ಗಳನ್ನು ಗಳಿಸಿಲ್ಲ.

ಕೆಎಸ್‌ಸಿಎ ಚುನಾವಣೆ ಮುಂದೂಡಿಕೆ



ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಚುನಾವಣೆ ಮುಂದೂಡಿಕೆಯಾಗಿದೆ. ಚುನಾವಣೆ ಸ್ಪರ್ಧೆಗೆ ಅಭ್ಯರ್ಥಿಗಳ ಅರ್ಹತೆ ಬಗ್ಗೆ ಗೊಂದಲ ಉಂಟಾಗಿತ್ತು, ಹೀಗಾಗಿ ಡಿಸೆಂಬರ್ 30ಕ್ಕೆ ಚುನಾವಣೆಯನ್ನು ಮುಂದೂಡಿ ಚುನಾವಣಾ ಅಧಿಕಾರಿ ತೀರ್ಮಾನ ತೆಗೆದುಕೊಂಡಿದ್ದಾರೆ. ಅಭ್ಯರ್ಥಿಗಳ ಅರ್ಹತೆ ಬಗ್ಗೆ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿದೆ. ಗೊಂದಲ ಬಗೆಹರಿಸಿಕೊಂಡು ಚುನಾವಣೆ ಮಾಡಿ ಎಂಬ ಸೂಚನೆಯನ್ನು ಚುನಾವಣಾಧಿಕಾರಿ ನೀಡಿದ್ದಾರೆ. ನವೆಂಬರ್ 30ರಂದು ಕೆಎಸ್‌ಸಿಎ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಹಾಗೂ ಉಳಿದ ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಹಿರಿಯ ಪತ್ರಕರ್ತ ಕೆ.ಎನ್. ಶಾಂತಕುಮಾರ್ ಹಾಗೂ ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಸ್ಪರ್ಧಿಸಿದ್ದರು. ಬ್ರಿಜೇಶ್ ಪಟೇಲ್ ಬಣದಿಂದ ಕೆ.ಎನ್. ಶಾಂತಕುಮಾರ್ ಸ್ಪರ್ಧೆ ಮಾಡಿದ್ದರೆ, ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಅವರ ಬೆಂಬಲದಿಂದ ವೆಂಕಿ ಸ್ಪರ್ಧಿಸಿದ್ದರು

ಸ್ಮರಣ್ ಅಜೇಯ ದ್ವಿಶತಕ | ಕರ್ನಾಟಕ 8 ವಿಕೆಟ್‌ಗೆ 547 ರನ್ಸ್ ಡಿಕ್ಲೇರ್ | ಚಂಡೀಗಢ 4 ವಿಕೆಟ್‌ಗೆ 72 ರನ್

ರಣಜಿ: ಕರ್ನಾಟಕ ಸುಸ್ಥಿತಿಯಲ್ಲಿ

ಹುಬ್ಬಳ್ಳಿ: ಸ್ಮರಣ್ ರವಿಚಂದ್ರನ್ ಅವರ ಅಜೇಯ ದ್ವಿಶತಕ ಮತ್ತು ಇತರ ಬ್ಯಾಟರ್‌ಗಳ ಸಮಯೋಚಿತ ಪ್ರದರ್ಶನದಿಂದಾಗಿ ಕರ್ನಾಟಕವು ಇಲ್ಲಿ ನಡೆಯುತ್ತಿರುವ ರಣಜಿ ಕ್ರಿಕೆಟ್‌ನಲ್ಲಿ ಎರಡನೇ ದಿನವಾದ ಸೋಮವಾರ ಚಂಡೀಗಢದ ವಿರುದ್ಧ 8 ವಿಕೆಟ್ ನಷ್ಟಕ್ಕೆ 547 ರನ್ ದಾಖಲಿಸಿ ತನ್ನ ಮೊದಲ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಬಳಿಕ ಮೊದಲ ಇನ್ನಿಂಗ್ಸ್ ಆರಂಭಿಸಿದ ಚಂಡೀಗಢ ದಿನದಾಂತ್ಯಕ್ಕೆ ಕೇವಲ 72 ರನ್‌ಗೆ 4 ವಿಕೆಟ್ ಕಳೆದುಕೊಂಡಿದೆ.

5 ವಿಕೆಟ್‌ಗೆ 298 ರನ್‌ಗಳಿಂದ ಸೋಮವಾರ ಆಟ ಮುಂದುವರಿಸಿದ ಕರ್ನಾಟಕ ತಂಡದ ಸ್ಮರಣ್ ರವಿಚಂದ್ರನ್ -ಶ್ರೇಯಸ್ ಗೋಪಾಲ್ ಜೋಡಿ ಭರ್ಜರಿ ಆಟವನ್ನೇ ಪ್ರದರ್ಶಿಸಿತು. 6ನೇ ವಿಕೆಟ್‌ಗೆ ಈ ಜೋಡಿ 141 ರನ್ ಕಲೆ ಹಾಕುವ ಮೂಲಕ ಚಂಡೀಗಢ ಬೌಲರ್‌ಗಳನ್ನು ಹಿಗ್ಗಾ ಮುಗ್ಗಾ ಬೆಂಡೆತ್ತಿದರು.

38 ರನ್‌ಗಳಿಂದ ಆಟ ಮುಂದುವರಿಸಿದ ಶ್ರೇಯಸ್ ಗೋಪಾಲ್ ತಮ್ಮ ವೈಯಕ್ತಿಕ ಇನ್ನಿಂಗ್ಸ್ ಅನ್ನು 62 ರನ್‌ಗಳ ವರೆಗೂ ಕೊಂಡೊಯ್ದರು. 147 ಬಾಲ್‌ಗಳನ್ನು ಎದುರಿಸಿದ ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿಗಳಿದ್ದವು. ವಿಷು ಕಾಶ್ಯಪ್ ಅವರು ಹೆಣೆದ ಎಲ್‌ಬಿಡಬ್ಲ್ಯೂ ಬಲೆಯ ಮೂಲಕ ಶ್ರೇಯಸ್ ಗೋಪಾಲ್ ತಮ್ಮ ವಿಕೆಟ್ ಕಳೆದುಕೊಂಡರು.

ಆ ಬಳಿಕ ಕ್ರೀಸ್‌ಗೆ ಬಂದ ವಿದ್ಯಾಧರ್ ಪಾಟೀಲ್ ಜತೆ ಸ್ಮರಣ್ ರವಿಚಂದ್ರನ್ ಇನ್ನಿಂಗ್ಸ್ ಮುಂದುವರಿಸಿದರು. ಪಾಟೀಲ್ ಅವರು ಕರ್ನಾಟಕ ತಂಡದ ಮೊತ್ತ 427 ರನ್ ಆದಾಗ ಔಟ್ ಆದರು. 51 ಬಾಲ್‌ಗಳನ್ನು ಎದುರಿಸಿದ ಅವರು 30 ರನ್‌ಗಳನ್ನು ಗಳಿಸಿ ಜಗ್ಜಿತ್ ಸಿಂಗ್ ಬೌಲಿಂಗ್‌ನಲ್ಲಿ ಬೌಲ್ಡ್ ಔಟ್ ಆಗುವ ಮೂಲಕ ವಿಕೆಟ್ ಒಪ್ಪಿಸಿದರು.

ಆದರೆ ಬಳಿಕ ಕ್ರೀಸ್‌ಗೆ ಬಂದ ಶಿಖರ್ ಶೆಟ್ಟಿ ಅವರು ಸ್ಮರಣ್ ರವಿಚಂದ್ರನ್ ಅವರ ಜತೆ ಉತ್ತಮ ಜತೆಯಾಟ ಆಡಿದರು. 122 ಬಾಲ್‌ಗಳನ್ನು ಎದುರಿಸಿದ ಶಿಖರ್ ಶೆಟ್ಟಿ 7 ಬೌಂಡರಿ ಒಳಗೊಂಡ ಅರ್ಧ ಶತಕ (59 ರನ್) ಬಾರಿಸಿ ವಿಷು ಕಾಶ್ಯಪ್ ಬೌಲಿಂಗ್‌ನಲ್ಲಿ ಕಾಟ್ ಆ್ಯಂಡ್ ಬೌಲ್ಡ್ ಆಗುವ ಮೂಲಕ ತಮ್ಮ ವಿಕೆಟ್ ಕಳೆದುಕೊಂಡರು. ಒಂದೆಡೆ ಬಂಡೆಯಂತೆ ಬ್ಯಾಟ್ ಮಾಡಿದ ಸ್ಮರಣ್ ರವಿಚಂದ್ರನ್ ಈ ಮಧ್ಯೆ ತಮ್ಮ ದ್ವಿಶತಕವನ್ನೂ ಪೂರೈಸಿದರು. 362 ಬಾಲ್‌ಗಳನ್ನು ಎದುರಿಸಿದ ಅವರು 227 ರನ್ ಗಳಿಸಿ ಅಜೇಯರಾದರೆ, ಮೊಹ್ಸಿನ್ ಖಾನ್ 3 ಬಾಲ್‌ಗಳಲ್ಲಿ 5 ರನ್ ಗಳಿಸಿ ಅಜೇಯರಾಗುಳಿದರು. ಕರ್ನಾಟಕ ತಂಡವು ಒಟ್ಟು 160 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 547 ರನ್ ಗಳಿಸಿದ್ದ ಸಂದರ್ಭದಲ್ಲಿ ತನ್ನ ಮೊದಲ ಇನ್ನಿಂಗ್ಸ್ ಅನ್ನು ಡಿಕ್ಲೇರ್ ಮಾಡಿಕೊಂಡಿತು.

ಚಂಡೀಗಢ ತಂಡದ ಪರವಾಗಿ ಜಗ್ಜಿತ್ ಸಿಂಗ್, ವಿಷು ಕಶ್ಯಪ್, ನಿಶುಂಕ್ ಬಿರ್ಲಾ ತಲಾ ಎರಡು ವಿಕೆಟ್ ಪಡೆದರೆ, ರಾಜ್ ಅಂಗದ್ ಬಾವ ಮತ್ತು ತರನ್ಪ್ರೀತ್ ಸಿಂಗ್ ತಲಾ ಒಂದು ವಿಕೆಟ್ ಪಡೆದರು.

ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿದ ಚಂಡೀಗಢ ತಂಡ ಸೋಮವಾರದ ಆಟದ ಅಂತ್ಯಕ್ಕೆ 4 ವಿಕೆಟ್ ನಷ್ಟಕ್ಕೆ 72 ರನ್ ಗಳಿಸಿ ತೀವ್ರ ಕುಸಿತ ಕಂಡಿತು. ಮೊದಲ ವಿಕೆಟ್‌ಗೆ ಶಿವಂ ಭಾಂಬ್ರಿ ಮತ್ತು ಅರ್ಜುನ್ ಆಜಾದ್ ಜೋಡಿ 41 ರನ್ ಸಂಪಾದಿಸಿತು. ಆಜಾದ್ 32 ರನ್ ಗಳಿಸಿದರೆ, ಭಾಂಬ್ರಿ 16 ರನ್ ಗಳಿಸಿದರು. ಆ ಬಳಿಕ ಬಂದ ವಿಷು ಕಾಶ್ಯಪ್ ಕೇವಲ 5 ರನ್ ಗಳಿಸಲಷ್ಟೇ ಶಕ್ತರಾದರು. ನಾಯಕ ಮನನ್ ವೋಹ್ರಾ 14 ರನ್ ಗಳಿಸಿ ತಮ್ಮ ವಿಕೆಟ್ ಅನ್ನು ಮಂಗಳವಾರಕ್ಕೆ ಕಾಯ್ದುಕೊಂಡಿದ್ದಾರೆ.

ಕರ್ನಾಟಕ ಪರ ಶ್ರೇಯಸ್ ಗೋಪಾಲ್ 18 ರನ್ ನೀಡಿ 3 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರೆ, ಉಳಿದೊಂದು ವಿಕೆಟ್ ಮೊಹ್ಸಿನ್ ಖಾನ್ ಪಾಲಾಯಿತು.

2ನೇ ಟೆಸ್ಟ್‌ನಲ್ಲಿ ಗಿಲ್ ಸ್ಥಾನ ತುಂಬಲು ಭಾರೀ ಪೈಪೋಟಿ

ಸಾಯಿ ಸುದರ್ಶನ್‌ಗೆ ಅವಕಾಶ ಸಾಧ್ಯತೆ

ಗುವಾಹಟಿ: ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ವೇಳೆ ಕುತ್ತಿಗೆ ಗಾಯದ ಚಿಕಿತ್ಸೆಗೆ ಒಳಗಾಗಿದ್ದ ಭಾರತ ಟೆಸ್ಟ್ ತಂಡದ ನಾಯಕ ಶುಭ್‌ಮನ್ ಗಿಲ್ ಅವರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರೂ, ಇನ್ನೂ ಸಂಪೂರ್ಣವಾಗಿ ಗುಣಮುಖರಾಗಿಲ್ಲ. ಹೀಗಾಗಿ ಈ ಶನಿವಾರದಿಂದ ಗುವಾಹಟಿಯಲ್ಲಿ ಪ್ರಾರಂಭವಾಗಲಿರುವ ಎರಡನೇ ಟೆಸ್ಟ್ ಪಂದ್ಯಕ್ಕೆ ಅವರ ಲಭ್ಯತೆ ಅನಿಶ್ಚಿತವಾಗಿದೆ. ಗಿಲ್ ಸ್ಥಾನಕ್ಕೆ ಬದಲಿ ಆಟಗಾರನಾಗಿ ಆಯ್ಕೆಯಾಗಲು ಐವರು ಆಟಗಾರರ ಮಧ್ಯೆ ತೀವ್ರ ಪೈಪೋಟಿ ಕಾಣಿಸಿಕೊಂಡಿದೆ.

ಭಾರತ ತಂಡವು ಬುಧವಾರ ಗುವಾಹಟಿಗೆ ಪ್ರಯಾಣ ಬೆಳೆಸಲಿದೆ. ಆದರೆ ಕುತ್ತಿಗೆ ನೋವಿನಿಂದ ಚೇತರಿಸಿಕೊಳ್ಳುತ್ತಿರುವುದರಿಂದ ವಿಮಾನದಲ್ಲಿ ಪ್ರಯಾಣಿಸುವುದು ಬೇಡ ವೆಂದು ವೈದ್ಯರು ಸಲಹೆ ನೀಡಿರುವ ಕಾರಣಕ್ಕೆ ಗಿಲ್ ತಂಡದೊಂದಿಗೆ ಪ್ರಯಾಣಿಸುವ ಸಾಧ್ಯತೆ ಇಲ್ಲ ಎಂದು ಸುದ್ದಿಮೂಲಗಳು ತಿಳಿಸಿವೆ.

ಅವರು ಇನ್ನೂ ವೈದ್ಯಕೀಯ ನಿಗಾದಲ್ಲಿದ್ದು, ವೈದ್ಯರ ತಂಡ ಶೀಘ್ರದಲ್ಲೇ ಮತ್ತೊಂದು ಸುತ್ತಿನ ತಪಾಸಣೆ ನಡೆಸಲಿದೆ ಎಂದು ಟೀಮ್ ಇಂಡಿಯಾದ ಮುಖ್ಯ ಕೋಚ್ ಗೌತಮ್ ಗಂಭೀರ್ ಮೊದಲ ಪಂದ್ಯದ ಬಳಿಕ ತಿಳಿಸಿದ್ದರು. ಅವರ ಅನುಪಸ್ಥಿತಿಯಲ್ಲಿ ಉಪ ನಾಯಕ ರಿಷಭ್ ಪಂತ್ ಭಾರತ ತಂಡವನ್ನು 2ನೇ ಟೆಸ್ಟ್‌ನಲ್ಲಿ ಮುನ್ನಡೆಸಲಿದ್ದಾರೆ.

ಗಿಲ್ ಸ್ಥಾನಕ್ಕೆ ಬದಲಿ ಆಟಗಾರರ ರೇಸ್‌ನಲ್ಲಿ ಕನ್ನಡಿಗರಾದ ಕರುಣ್ ನಾಯರ್, ದೇವದತ್ತ ಪಡಿಕ್ಕಲ್, ಸರ್ಫರಾಜ್ ಖಾನ್, ಸಾಯಿ ಸುದರ್ಶನ್ ಮತ್ತು ನಾರಾಯಣ್ ಜಗದೀಶನ್ ಮುಂಚೂಣಿಯಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯದ ಪ್ರದರ್ಶನದ ನಿಟ್ಟಿನಲ್ಲಿ ಸಾಯಿ ಸುದರ್ಶನ್‌ಗೆ ಅವಕಾಶ ಸಿಗುವ ಸಾಧ್ಯತೆ ಅಧಿಕ. ಅವರು ಭಾರತ ಪರ ತಮ್ಮ ಕೊನೆಯ ಟೆಸ್ಟ್ ಪಂದ್ಯದಲ್ಲಿ 87 ಮತ್ತು 39 ರನ್ ಗಳಿಸಿದ್ದರು. ಹೀಗಿದ್ದರೂ ಅವರನ್ನು ತಂಡದಿಂದ ಕೈಬಿಟ್ಟ ವಿಚಾರಕ್ಕೆ ಹಲವು ಮಾಜಿ ಆಟಗಾರರು ಆಯ್ಕೆ ಸಮಿತಿ ಮತ್ತು ಕೋಚ್ ಗಂಭೀರ್ ವಿರುದ್ಧ ಬಹಿರಂಗವಾಗಿಯೇ ಆಕ್ರೋಶ ವ್ಯಕ್ತಪಡಿಸಿದ್ದರು. ಹಾಗಾಗಿ ಗಿಲ್ ಸ್ಥಾನಕ್ಕೆ ಎರಡನೇ ಟೆಸ್ಟ್‌ನಲ್ಲಿ ಸಾಯಿ ಸುದರ್ಶನ್ ಆಯ್ಕೆಗೆ ಹೆಚ್ಚಿನ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಚೆಸ್ ವಿಶ್ವಕಪ್: ಪೆಂಟಾಲ ಹರಿಕೃಷ್ಣ ಸವಾಲು ಅಂತ್ಯ

ಪಣಜಿ: ಭಾರತದ ಅನುಭವಿ ಗ್ರಾಂಡ್ ಮಾಸ್ಟರ್ ಪೆಂಟಾಲ ಹರಿಕೃಷ್ಣ ಅವರು ಐದನೇ ಸುತ್ತಿನ ಟೈಬ್ರೇಕರ್‌ನಲ್ಲಿ ಮೆಕ್ಸಿಕೊದ ಹೊಸೆ ಎಡ್ಡರ್ಡೋ ಮಾರ್ಟನೆಝ್ ಅಲ್ಕಂತಾರ ಅವರಿಗೆ ಮಣಿದರು. ಇದರೊಂದಿಗೆ ಈ ಸಲದ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಎರಡನೆ ಶ್ರೇಯಾಂಕದ ಅರ್ಜುನ್ ಎರಿಗೇಸಿ ಅವರು ಭಾರತದ ಏಕೈಕ ಭರವಸೆಯಾಗಿ ಉಳಿದಿದ್ದಾರೆ. ಪರು ಸಂಜಾತ ಮೆಕ್ಸಿಕೊದ 26 ವರ್ಷ ವಯಸ್ಸಿನ ಮಾರ್ಟನೆಝ್ ಅಲ್ಕಂತಾರ ಅವರು ಭಾನುವಾರ ನಡೆದ ಟೈಬ್ರೇಕರಿನಲ್ಲಿ 39 ವರ್ಷ ವಯಸ್ಸಿನ ಹರಿಕೃಷ್ಣ ಅವರನ್ನು 3.5-2.5ರಿಂದ ಸೋಲಿಸಿ ಎಂಟರ ಘಟ್ಟ ತಲುಪಿದರು. ಅವರಿಬ್ಬರ ನಡುವಣ ಕ್ಲಾಸಿಕಲ್ ಸುತ್ತು 1-1 ಸಮಬಲ ಆಗಿತ್ತು, ಮೊದಲ ಸೆಟ್ ಟೈಬ್ರೇಕರ್‌ನ ಎರಡೂ ಆಟಗಳು ಡ್ರಾ ಆದವು. ಎರಡನೇ ಸೆಟ್‌ನ ಮೊದಲ ಆಟದಲ್ಲಿ ಅಲ್ಕಂತಾರ ಜಯಗಳಿಸಿದರಲ್ಲದೇ, ಮರು ಆಟ ಡ್ರಾ ಮಾಡಿಕೊಂಡು ಅತಿಥೇಯ ಆಟಗಾರನ ಸವಾಲು ಕೊನೆಗೊಳಿಸಿದರು.

ಅರ್ಜುನ್ ಎರಿಗೇಸಿ ಶನಿವಾರ ಮುಗಿದ ಕ್ಲಾಸಿಕಲ್ ಸುತ್ತಿನಲ್ಲೇ ಅಮೆರಿಕದ ಲೆವೋನ್ ಅರೋನಿಯನ್ ಅವರನ್ನು 1.5-0.5ರಿಂದ ಸೋಲಿಸಿದ್ದರು. ಇನ್ನೊಂದು ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಅವರು 3-1ರಿಂದ ರಷ್ಯಾದ ಡೇನಿಯಲ್ ದುಬೋವ್ ಅವರನ್ನು ಸೋಲಿಸಿದರು. ಶಂಕ್ಲಾಂಡ್ ಟೈಬ್ರೇಕರ್‌ನ ಎರಡೂ ಆಟಗಳನ್ನು ಗೆದ್ದರು.

ಟ್ವೀಟ್ ಮೂಲಕ ಉದ್ಧಟತನ ತೋರಿದ ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥ ಮೊಹ್ಸಿನ್ ನಖ್ವಿ

ಪಾಕ್ ವಿರುದ್ಧ ಭಾರತ ಎ ತಂಡಕ್ಕೆ ಸೋಲು

ದೋಹಾ: ಭಾನುವಾರ ನಡೆದಿದ್ದ ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ಟಿ20 ಟೂರ್ನಿಯಲ್ಲಿ ಭಾರತ-ಎ ತಂಡ ಬದ್ಧ ವೈರಿ ಪಾಕಿಸ್ತಾನ ವಿರುದ್ಧ 8 ವಿಕೆಟ್ ಅಂತರದ ಸೋಲು ಕಂಡಿತ್ತು. ಪಾಕ್ ತಂಡದ ಗೆಲುವಿನ ಬೆನ್ನಲ್ಲೇ ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥ, ಪಾಕಿಸ್ತಾನದ ಸಚಿವರೂ ಆಗಿರುವ ಮೊಹ್ಸಿನ್ ನಖ್ವಿ ಭಾರತಕ್ಕೆ ಅವಮಾನ ಮಾಡುವ ಉದ್ದೇಶದಿಂದಲೇ ಟ್ವೀಟ್ ಮಾಡುವ ಮೂಲಕ ತಮ್ಮ ಉದ್ಧಟನ ಮುಂದುವರಿಸಿದ್ದಾರೆ.

'ಪಾಕಿಸ್ತಾನ ಮತ್ತು ಮಂಡಳಿಗೆ ಎಂತಹ ಹೆಮ್ಮೆಯ ಕ್ಷಣ! ನಮ್ಮ ಪಾಕಿಸ್ತಾನ ಶಾಹೀನ್ಸ್ ತಂಡವು ಭಾರತ-ಎ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿ, 13.2 ಓವರ್‌ಗಳಲ್ಲಿ ಗುರಿಯನ್ನು ತಲುಪಿತು. ದೋಹಾದಲ್ಲಿ ನಡೆದ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ ಟೂರ್ನಮೆಂಟ್‌ನಲ್ಲಿ ಪ್ರಬಲ, ನಿರ್ಭೀತ ಮತ್ತು ಮರೆಯಲಾಗದ ಪ್ರದರ್ಶನ. ನಮ್ಮ ಯುವ ಆಟಗಾರರಿಂದ ಅದ್ಭುತ ಕ್ರಿಕೆಟ್ -ಪಾಕಿಸ್ತಾನದ ಭವಿಷ್ಯವು ಉಜ್ವಲವಾಗಿ ಹೊಳೆಯುತ್ತಿದೆ. ರಾಷ್ಟ್ರಕ್ಕೆ ಅಭಿನಂದನೆಗಳು!' ಎಂದು ನಖ್ವಿ ಎಕ್ಸ್‌ನಲ್ಲಿ ಬರೆದಿದ್ದಾರೆ.

ಇತ್ತೀಚೆಗೆ ನಡೆದಿದ್ದ ಸೀನಿಯರ್ ತಂಡದ ಏಷ್ಯಾಕಪ್ ಫೈನಲ್‌ನಲ್ಲಿ ನಡೆದ ಟ್ರೋಫಿ ಹಸ್ತಾಂತರ ಹೈಡ್ರಾಮದಿಂದ ನಖ್ವಿ ಜಾಗತಿಕ ಮಟ್ಟದಲ್ಲಿ ಟೀಕೆಗೆ ಒಳಗಾಗಿದ್ದರು. ಫೈನಲ್ ಪಂದ್ಯದಲ್ಲಿ ಭಾರತ ತಂಡ ಪಾಕಿಸ್ತಾನವನ್ನು ಮಣಿಸಿದ ಬಳಿಕ ಭಾರತ ತಂಡ ನಖ್ವಿ ಕೈಯಿಂದ ಟ್ರೋಫಿ ಸ್ವೀಕರಿಸಲು ನಿರಾಕರಿಸಿತ್ತು. ಆದರೆ ಟ್ರೋಫಿ ತನ್ನಿಂದಲೇ ಸ್ವೀಕರಿಸಬೇಕು ಎಂದು ಪಟ್ಟು ಹಿಡಿದು ಹೋಟೆಲ್‌ಗೆ ತೆರಳಿದ್ದರು, ಇದುವರೆಗೂ ಭಾರತಕ್ಕೆ ಟ್ರೋಫಿ ನೀಡಿಲ್ಲ. ಈ ಬಗ್ಗೆ ಕೆಲ ದಿನಗಳ ಹಿಂದೆ ನಡೆದಿದ್ದ ಐಸಿಸಿ ಸಭೆಯಲ್ಲೂ ನಖ್ವಿ ವಿರುದ್ಧ ಟೀಕೆಗಳು ಕೇಳಿ ಬಂದಿತ್ತು.

ಭಾನುವಾರ ನಡೆದಿದ್ದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ-ಎ ತಂಡವು ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗಿಯೂ ಆ ಬಳಿಕ ದಯನೀಯ ಬ್ಯಾಟಿಂಗ್ ವೈಫಲ್ಯ ಅನುಭವಿಸಿತ್ತು. 19 ಓವರ್‌ಗೆ ಕೇವಲ 136 ರನ್ ಗಳಿಸಿ ಸರ್ವಪತನ ಕಂಡಿತು. ಗುರಿ ಬೆನ್ನತ್ತಿದ ಪಾಕಿಸ್ತಾನ ಮಾಝ್ ಸಾಧಖತ್ ಅವರ ಅಜೇಯ ಅರ್ಧಶತಕದ (79) ನೆರವಿನಿಂದ ಇನ್ನೂ 8 ವಿಕೆಟ್ ಬಾಕಿ ಇರುವಂತೆಯೇ ಸುಲಭ ಗೆಲುವು ದಾಖಲಿಸುವಲ್ಲಿ ಯಶಸ್ವಿಯಾಯಿತು.

ಕಂಗ್ರಾಜುಲೇಷನ್ಸ್ ಬ್ರದರ್ ತೆರೆಗೆ ರೆಡಿ

ಈಗಿನ ಯುವ ಸಮೂಹಕ್ಕೆ ಹೇಳಿ ಮಾಡಿಸಿದ ಕಥೆಯನ್ನು ಒಳಗೊಂಡ ಸಿನಿಮಾ ಕಂಗ್ರಾಜುಲೇಷನ್ಸ್ ಬ್ರದರ್. ಕಾಲೇಜು ಯುವಕ-ಯುವತಿಯರೆಲ್ಲ ಬಂದು ಸಿನಿಮಾ ನೋಡಿದರೆ ನಮ್ಮ ಶ್ರಮ ಸಾರ್ಥಕ. ಅವರು ಸಿನಿಮಾ ನೋಡಿದರೆ ಫ್ಯಾಮಿಲಿಯನ್ನೂ ಕರೆದುಕೊಂಡು ಬರುತ್ತಾರೆ ಎಂಬ ನಂಬಿಕೆಯಿದೆ. ಈಗಿನ ಟ್ರೆಂಡ್‌ಗೆ ತಕ್ಕಂತೆ ಸಿನಿಮಾ ಮೂಡಿಬಂದಿದೆ ಎಂಬ ಖುಷಿಯಿದೆ ಎನ್ನುತ್ತಾರೆ ಚಿತ್ರಕ್ಕೆ ಕಥೆ ಬರೆದ ಹರಿ ಸಂತೋಷ್ ಆಶಯವಾಗಿದೆ.

ರಕ್ಷಿತ್ ನಾಗ್ ನಾಯಕನಾಗಿ ನಟಿಸಿದ್ದು, ಸಂಜನಾ ದಾಸ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಪ್ರತಾಪ್ ಗಂಧರ್ವ ಈ ಚಿತ್ರವನ್ನು ನಿರ್ದೇಶಿಸಿದ್ದು, ಪ್ರಶಾಂತ್ ಕಲ್ಲೂರು ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ಅಲೆಮಾರಿ, ಡಾರ್ಲಿಂಗ್ ಮುಂತಾದ ಸಿನಿಮಾಗಳನ್ನು ನಿರ್ದೇಶನ ಮಾಡಿರುವ ಹರಿ ಸಂತೋಷ್ ಕಂಗ್ರಾಜುಲೇಷನ್ಸ್ ಬ್ರದರ್ ಚಿತ್ರದ ಕ್ರಿಯೇಟಿವ್ ಹೆಡ್ ಆಗಿ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿದ್ದು ಸಖತ್ ಸದ್ದು ಮಾಡುತ್ತಿವೆ. ಸಿನಿಮಾ ಕೂಡ ಪ್ರೇಕ್ಷಕರಿಗೆ ಮೆಚ್ಚುಗೆಯಾಗಲಿದೆ ಎಂಬ ನಂಬಿಕೆ ಚಿತ್ರತಂಡಕ್ಕಿದೆ. ಹೀಗಾಗಿ ಚಿತ್ರತಂಡ ಕಾಲೇಜು ವಿದ್ಯಾರ್ಥಿಗಳನ್ನು ಭೇಟಿ

ಮಾಡಲೆಂದೇ ಬೀದರ್‌ನಿಂದ ಚಾಮರಾಜನಗರದವರೆಗೆ ಪ್ರಯಾಣ ಬೆಳೆಸಿ ಈ ಚಿತ್ರದ ಬಗ್ಗೆ ಪ್ರಚಾರ ಮಾಡಿಬಂದಿದೆ. ಇನ್ನೇನಿದ್ದರೂ ಪ್ರೇಕ್ಷಕರು ಚಿತ್ರಮಂದಿರಗಳತ್ತ ಧಾವಿಸಬೇಕಷ್ಟೇ. ಇದೇ ವಾರ ಕಂಗ್ರಾಜುಲೇಷನ್ಸ್ ಬ್ರದರ್ ತೆರೆಗೆ ಬರಲಿದೆ.

ಟಾಲಿವುಡ್‌ಗೆ ರಾಶಾ

ಒಂದು ಕಾಲದಲ್ಲಿ ಬಾಲಿವುಡು ಸ್ಟಾರ್‌ಯಾಗಿ ಗುರುತಿಸಿಕೊಂಡಿದ್ದ ರವೀನಾ ಟಂಡನ್ ಪುತ್ರಿ ರಾಶಾ ಥಡಾನಿ ಟಾಲಿವುಡ್‌ಗೆ ಎಂಟ್ರಿಕೊಡುತ್ತಿದ್ದಾರೆ. ಸೂಪರ್ ಸ್ಟಾರ್ ಮಹೇಶ್ ಬಾಬು ಅವರ ಸೋದರಳಿಯ ಜಯ ಕೃಷ್ಣ ಘಟ್ಟಮನೇನಿ ಜತೆಯಾಗಿ ನಟಿಸುತ್ತಿದ್ದಾರೆ. ಅಜಯ್ ಭೂಪತಿ ನಿರ್ದೇಶನದಲ್ಲಿ ಈ ಚಿತ್ರ ಸೆಟ್ಟೇರಿದ್ದು, ಅದ್ಧೂರಿಯಾಗಿ ಮೂಡಿಬರುತ್ತಿದೆ. ಈ ಕುರಿತಂತೆ ರಶಾ ಸೋಷಿಯಲ್ ಮಿಡಿಯಾದಲ್ಲಿ ಸಂತಸ ಹಂಚಿಕೊಂಡಿದ್ದಾರೆ. ಈ ಸಿನಿಮಾ ಸದ್ಯ ಎಬಿ4 ಶಿರ್ಷಿಕೆಯಲ್ಲಿ ಸೆಟ್ಟೇರಿದೆ.

ರಾಶಾ ಥಡಾನಿ ಆಜಾದ್ ಸಿನಿಮಾ ಮೂಲಕ ಸಿನಿಮಾರಂಗಕ್ಕೆ ಪ್ರವೇಶಿಸಿದರು. ವೈರಲ್ ಉಯಿ ಅಮ್ಮ ಹಾಡಿನಲ್ಲಿ ಹೆಜ್ಜೆ ಹಾಕಿ ಪ್ರಸಿದ್ಧಿ ಪಡೆದರು. ಈಗ ತೆಲುಗು ಚಿತ್ರರಂಗಕ್ಕೂ ಪ್ರವೇಶಿಸಿದ್ದಾರೆ. ತೆಲುಗು ಚಿತ್ರರಂಗದ ಅತ್ಯಂತ ರೋಮಾಂಚಕಾರಿ ಹೊಸ ಯುಗದ ಪ್ರೇಮಕಥೆಗಳಲ್ಲಿ ಒಂದಾಗಿರುವ ಈ ಚಿತ್ರದ ಶೀರ್ಷಿಕೆ ಶೀಘ್ರದಲ್ಲಿಯೇ ಘೋಷಣೆಯಾಗಲಿದೆ. ಈ ವರ್ಷದ ಆರಂಭದಲ್ಲಿ, ರಶಾ ಥಡಾನಿ ಅಭಿಷೇಕ್ ಕಪೂರ್ ಅವರ ಆಜಾದ್ ಚಿತ್ರದೊಂದಿಗೆ ಅಜಯ್ ದೇವಗನ್ ಮತ್ತು ಅವರ ಸೋದರಳಿಯ ಆಮನ್ ದೇವಗನ್ ಅವರೊಂದಿಗೆ ನಟಿಸುವ ಮೂಲಕ ನಟನೆಗೆ ಪಾದಾರ್ಪಣೆ ಮಾಡಿದರು. ತಮ್ಮ ಮುಂದಿನ

ಚಿತ್ರ ಲೈಕೆ ಲೈಕಾ ಚಿತ್ರೀಕರಣ ದಲ್ಲಿಯೂ ಬ್ಯುಸಿಯಾಗಿದ್ದಾರೆ. ಮುಂಜ್ಯಾ ಖ್ಯಾತಿಯ ಅಭಯ್ ವರ್ಮ ಅವರೊಂದಿಗೆ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ನಡುವೆಯೇ ಟಾಲಿವುಡ್‌ಗೂ ಎಂಟ್ರಿಕೊಟ್ಟಿದ್ದಾರೆ. ರಾಶಾ ಭಾರತೀಯ ಚಿತ್ರರಂಗದಲ್ಲಿ ಭರವಸೆ ಮೂಡಿಸಿದ್ದಾರೆ.

ಚಮೇಲಿ ಜತೆ ಹೆಜ್ಜೆ ಹಾಕಿದ ಸೃಜನ್

ನಟ ಸೃಜನ್ ಲೋಕೇಶ್ ನಿರ್ದೇಶನ ಮಾಡಿ, ನಟಿಸುತ್ತಿರುವ ಜಿಎಸ್‌ಟಿ ಇದೇ ತಿಂಗಳು ತೆರೆಗೆ ಬರಲಿದೆ. ನಟನಾಗಿ, ನಿರ್ಮಾಪಕನಾಗಿ ಇದುವರೆಗೆ ಹಲವು ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಈಗ ಸೃಜನ್‌ಗೆ ನಿರ್ದೇಶಕನಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ.

ಇತ್ತೀಚೆಗಷ್ಟೇ ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಲಾಗಿದ್ದು, ಅದಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕ ಬೆನ್ನಲ್ಲೇ ಇದೀಗ ಚಮೇಲಿ ಚಲ್.. ಎಂಬ ಹಾಡು ಬಿಡುಗಡೆಯಾಗಿದೆ. ಸೃಜನ್ ಲೋಕೇಶ್ ಜತೆ ಸಂಹಿತಾ ವಿನ್ಯಾ ಹೆಜ್ಜೆ ಹಾಕಿರುವುದು ಈ ಹಾಡಿನ ವಿಶೇಷ. ತಬಲ ನಾಣಿ ಸಹ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ವಿಜಯ್ ಈಶ್ವರ್ ಸಾಹಿತ್ಯವಿರುವ ಈ ಹಾಡಿಗೆ ಚಂದನ್ ಶೆಟ್ಟಿ ಸಂಗೀತ ಸಂಯೋಜಿಸಿದ್ದು, ಹಾಡಿಗೂ ದನಿಯಾಗಿದ್ದಾರೆ. ಇವರೊಟ್ಟಿಗೆ ಅನಿತಾ ಸಾರಾ ಮಹೇಶ್ ಕೂಡ ದನಿಗೂಡಿಸಿದ್ದಾರೆ.

ಸೃಜನ್‌ರ ತಂದೆ ಸುಬ್ಬಯ್ಯ ನಾಯ್ಡು ಕನ್ನಡ ಚಿತ್ರರಂಗದ ದಿಗ್ಗಜರಲ್ಲಿ ಒಬ್ಬರು. ಅವರ ಪುತ್ರ

ಲೋಕೇಶ್ ಸಹ ಕನ್ನಡ ಚಿತ್ರರಂಗದ ಅಗ್ರಗಣ್ಯ ನಟರು, ನಿರ್ದೇಶಕರು. ಇದೀಗ ಸೃಜನ್ ಕೂಡಾ ಪರಂಪರೆ ಮುಂದುವರಿಸುವ ನಿಟ್ಟಿನಲ್ಲಿ ನಿರ್ದೇಶನ ಪೂರ್ಣಗೊಳಿಸಿದ್ದಾರೆ. ಸೃಜನ್ ಪುತ್ರ ಸುಕೃತ್ ಕೂಡಾ ಜಿಎಸ್‌ಟಿ ಸಿನಿಮಾದಲ್ಲಿ ಬಾಲನಟನಾಗಿ ಕಾಣಿಸಿಕೊಂಡಿದ್ದಾರೆ.

ಸಂದೇಶ, ಬೋಧನೆ ಆ ಥರದ್ದೇನು ನಮ್ಮ ಸಿನಿಮಾದಲಿಲ್ಲ. ನಗಿಸುವುದಷ್ಟೇ ನಮ್ಮ ಧರ್ಮ. ಜಿಎಸ್‌ಟಿ ನೋಡಿದ ಪ್ರೇಕ್ಷಕ ನಕ್ಕು ಖುಷಿಪಟ್ಟು ಆಚೆ ಬರುತ್ತಾನೆ ಎಂದು ಸೃಜನ್ ಹೇಳಿದರು. ಜಿಎಸ್‌ಟಿ ಎಂದರೆ ಘೋಸ್ಟ್ ಇನ್ ಟ್ರಬಲ್ ಎನ್ನುತ್ತಾರೆ ಸೃಜನ್. ಭೂತಗಳು ಕಷ್ಟ ಕೊಡುವುದನ್ನು ಕೇಳಿದ್ದೀರಿ. ಇಲ್ಲಿ ದೆವ್ವಗಳೇ ಸಂಕಷ್ಟಕ್ಕೆ ಸಿಲುಕಿ ನಾಯಕನ ಮೊರೆ ಹೋಗುತ್ತವೆಯಂತೆ. ನಾಯಕಿಯಾಗಿ ರಜಿನಿ ಭಾರದ್ವಾಜ್, ಗಿರಿಜಾ ಲೋಕೇಶ್, ಅಶೋಕ್ ಸೇರಿದಂತೆ ಹಲವು ತಾರಾಗಣದಲ್ಲಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಹಲವು ಹಿಟ್ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಸಂದೇಶ್ ಕಂಬೈನ್ಸ್ ಈ ಚಿತ್ರವನ್ನು ನಿರ್ಮಾಣ ಮಾಡಿದೆ.

ಟ್ರೆಂಡಿಂಗ್‌ನಲ್ಲಿ ಡೆವಿಲ್ ಸಾಂಗ್

ದರ್ಶನ್ ನಟಿಸಿರುವ ದಿ ಡೆವಿಲ್ ಆರಂಭದಿಂದಲೂ ಸದ್ದು ಮಾಡುತ್ತಿದೆ. ಈ ಸಿನಿಮಾದ ಟೀಸರ್ ಮಿಲಿಯನ್‌ಗಟ್ಟಲೇ ವೀಕ್ಷಣೆ ಕಡಿದೆ. ಈಗ ಸಿನಿಮಾದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ಈಗಾಗಲೇ ಬಿಡುಗಡೆಯಾಗಿರುವ ಇದ್ರೆ, ನೆಮ್ದಿಯಾಗಿರ್ಬೇಕ್... ಹಾಗೂ ಒಂದೇ ಒಂದು ಸಲ... ಹಾಡುಗಳಿಗೆ ಸಂಗೀತ ಪ್ರಿಯರು ತಲೆದೂಗಿದ್ದಾರೆ. ಈಗ ಅಲೊಹೋಮೋರ ದಿ ಟ್ರೂ ಎಂಪೆರರ್... ಎಂಬ ಹಾಡು ಬಿಡುಗಡೆಯಾಗಿದೆ. ಹಿಂದಿನ ಎರಡೂ ಹಾಡುಗಳಿಗಿಂತ ಇದು ವಿಭಿನ್ನವಾಗಿದ್ದು, ಈ ಹಾಡಿನಲ್ಲಿ ದರ್ಶನ್ ಸಖತ್ ಸ್ಟೈಲಿಶ್ ಆಗಿ ಹೆಜ್ಜೆ ಕಾಣಿಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ದರ್ಶನ್ ಜೋಡಿಯಾಗಿ ರಚನಾ ರೈ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ತುಳಸಿ, ಅಚ್ಯುತ್‌ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭರಾಜ್ ಮುಂತಾದವರು ಈ ಚಿತ್ರದ ತಾರಾಗಣದಲ್ಲಿದ್ದಾರೆ.

ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದು, ಅನಿರುದ್ಧ್ ಶಾಸ್ತ್ರಿ ಸಾಹಿತ್ಯ ಬರೆದು ಹಾಡಿದ್ದಾರೆ. ಸಂತು ನೃತ್ಯ ಮಾಡಿರುವ ಈ ಹಾಡು ಸಖತ್ ಸದ್ದು ಮಾಡುತ್ತಿದೆ. ಸಖತ್ ಟ್ರೆಂಡ್ ಸೃಷ್ಟಿಸಿದೆ. ಜೈ ಮಾತಾ ಕಂಬೈನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು, ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಸುಧಾಕರ್. ಎಸ್.ರಾಜ್ ಛಾಯಾಗ್ರಹಣವಿರುವ ದಿ ಡೆವಿಲ್ ಚಿತ್ರಕ್ಕೆ ಹರೀಶ್ ಕೊಮ್ಮೆ ಸಂಕಲನ, ಮೋಹನ್ ಬಿ ಕೆರೆ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಸಾಹಸ ನಿರ್ದೇಶನವಿದೆ. ಕಾಂತರಾಜ್ ಎಸ್.ಎಸ್ ಸಂಭಾಷಣೆ ಹಾಗೂ ಚೇತನ್, ತಶ್ವಿನಿ ವಸ್ತ್ರ ವಿನ್ಯಾಸ ಈ ಚಿತ್ರಕ್ಕಿದೆ. ಡಿಸೆಂಬರ್ 12 ರಂದು ಡೆವಿಲ್ ವಿಶ್ವಾದ್ಯಂತ ದರ್ಶನ ಕೊಡಲಿದೆ.